prajavani.net prajavani
ಗುರುವಾರ, ಮಾರ್ಚ್ 26, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 84 | ಪುಟ 18
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮಣಿಕಂಠಗೆ ಚಿನ್ನ 'ಡಬಲ್'
ಕರ್ನಾಟಕದ ಮಣಿಕಂಠ ಅವರು ರಾಯಪುರದಲ್ಲಿ ಬುಧವಾರ ಆರಂಭವಾದ ಖೇಲೊ ಇಂಡಿಯಾ ಆದಿವಾಸಿ ಕ್ರೀಡಾಕೂಟದಲ್ಲಿ ಚಿನ್ನ 'ಡಬಲ್' ಸಾಧನೆ ಮಾಡಿದರು

ಇಂದಿನ ಸಂಚಿಕೆ ಜೊತೆ ನಾಲ್ಕು ಪುಟಗಳ ವಿಶೇಷ ಪುರವಣಿ ಇದೆ

ಸೆನ್ಸೆಕ್ಸ್ 75,273 | ನಿಫ್ಟಿ 23,306 | $/₹ 93.96 | ಚಿನ್ನ (Std. 10g) ₹1,51,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,49,800 (ಬೆಂಗಳೂರು)

ಕದನ ವಿರಾಮ: ಹೆಚ್ಚಿದ ಅನಿಶ್ಚಿತತೆ

ಯುದ್ಧ ನಿಲ್ಲಿಸಲು 15 ಅಂಶಗಳ ಯೋಜನೆ ಮುಂದಿಟ್ಟ ಟ್ರಂಪ್

'ನಾಲ್ಕು ವಾರ ಪೂರೈಸಿರುವ ಪಶ್ಚಿಮ ಏಷ್ಯಾ ಸಂಘರ್ಷವನ್ನು ಕೊನೆಗಾಣಿಸಲು ಅಮೆರಿಕವು ಇರಾನ್ ಜತೆಗೆ ಒಪ್ಪಂದಕ್ಕೆ ಮಾತುಕತೆ ನಡೆಸುತ್ತಿದೆ' ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಆದರೆ, 'ಅಮೆರಿಕದೊಂದಿಗೆ ಹಿಂದೆಯೂ ಯಾವುದೇ ಒಪ್ಪಂದ ಮಾಡಿಕೊಂಡಿಲ್ಲ, ಮುಂದೆಯೂ ಇರುವುದಿಲ್ಲ, ಇದುವರೆಗೆ ಯಾವುದೇ ಮಾತುಕತೆ ನಡೆದೇ ಇಲ್ಲ' ಎಂದು ಇರಾನ್ ಸ್ಪಷ್ಟಪಡಿಸಿದೆ. ಈ ನಡುವೆ ಅಮೆರಿಕ–ಇರಾನ್ ನಡುವೆ ಮಧ್ಯಸ್ಥಿಕೆದಾರನಾಗಿ ಪಾಕ್ ಹೆಸರು ಕೇಳಿಬರುತ್ತಿದೆ. ಇರಾನ್ ವಿರುದ್ಧದ ದಾಳಿ ತೀವ್ರಗೊಳಿಸಿರುವ ಇಸ್ರೇಲ್‌ಗೆ, ಕದನ ವಿರಾಮ ಕುರಿತ ಟ್ರಂಪ್ ಹೇಳಿಕೆಗಳು ಅಚ್ಚರಿ ಮೂಡಿಸಿವೆ.

ವಿಮಾನವಾಹಕ ನೌಕೆ ಮೇಲೆ ದಾಳಿ

ಟೆಹರಾನ್ (ಎಎಫ್‌ಪಿ): ಅಮೆರಿಕದ ವಿಮಾನ ವಾಹಕ ನೌಕೆಯ ಮೇಲೆ ಬುಧವಾರ ಕ್ರೂಸ್ ಕ್ಷಿಪಣಿಗಳ ಮೂಲಕ ಭಾರಿ ದಾಳಿ ನಡೆಸಿರುವುದಾಗಿ ಇರಾನ್ ಹೇಳಿದೆ.

ಯುದ್ಧ ಕೊನೆಗೊಳಿಸಲು ಅನೌಪಚಾರಿಕ ರಾಜತಾಂತ್ರಿಕ ಪ್ರಯತ್ನಗಳು ನಡೆಯುತ್ತಿರುವ ಸಂದರ್ಭದಲ್ಲೇ, ಇರಾನ್ ದಾಳಿ ನಡೆದಿದೆ.

'ಅಮೆರಿಕದ ಅಬ್ರಹಾಂ ಲಿಂಕನ್ ವಿಮಾನ ವಾಹಕ ನೌಕೆಯ ಮೇಲಿನ ದಾಳಿ ಎಷ್ಟು ಪ್ರಬಲವಾಗಿತ್ತು ಎಂದರೆ, ಶತ್ರುಪಡೆ ನೌಕೆಯ ಪಥವನ್ನೇ ಬದಲಿಸಿತು' ಎಂದು ಇರಾನ್‌ನ ಸೇನೆ ಹೇಳಿದೆ.

ಇರಾನ್‌ನ ಇಸ್ಫಹಾನ್‌ನಲ್ಲಿರುವ ಜಲಾಂತರ್ಗಾಮಿ ನೌಕೆ ತಯಾರಿಕೆ ಘಟಕದ ಮೇಲೆ ದಾಳಿ ನಡೆಸಿರುವುದಾಗಿ ಇಸ್ರೇಲ್ ಹೇಳಿದೆ. ▶10

ಮಾತುಕತೆ ಮಧ್ಯಸ್ಥಿಕೆಗೆ ಮುಂದಾದ ಪಾಕಿಸ್ತಾನ

ದುಬೈ (ಎಪಿ): ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸುವ ನಿಟ್ಟಿನಲ್ಲಿ, ಇರಾನ್ ಮತ್ತು ಅಮೆರಿಕ ನಡುವೆ ಪಾಕಿಸ್ತಾನ ಮಧ್ಯಸ್ಥಿಕೆಗೆ ಮುಂದಾಗಿದೆ ಎಂದು ಮೂಲಗಳು ಹೇಳಿವೆ. ಆದರೆ, ಪಾಕ್ ಮಧ್ಯಸ್ಥಿಕೆಯನ್ನು ಶ್ವೇತಭವನ ಖಚಿತ ಪಡಿಸಿಲ್ಲ. ಇರಾನ್ ಕೂಡ ಕದನ ವಿರಾಮಕ್ಕೆ ಸಂಬಂಧಿಸಿದ ರಾಜತಾಂತ್ರಿಕ ಪ್ರಯತ್ನವನ್ನು ತಳ್ಳಿಹಾಕಿದೆ.

'ಅಮೆರಿಕವು ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಮುಂದಿಟ್ಟಿರುವ 15 ಅಂಶಗಳ ಯೋಜನೆಯನ್ನು ಇರಾನ್ ಸ್ವೀಕರಿಸಿದೆ' ಎಂದು ಪಾಕ್ ಅಧಿಕಾರಿಯೊಬ್ಬರು ಇಸ್ಲಾಮಾಬಾದ್‌ನಲ್ಲಿ ಬುಧವಾರ ಹೇಳಿದ್ದಾರೆ. ಆದರೆ, ಇಂಥದ್ದೊಂದು ಪ್ರಸ್ತಾವದ ಕುರಿತು ಇರಾನ್ ಅಧಿಕೃತವಾಗಿ ಹೇಳಿಲ್ಲ.

'ಸಾರ್ವಜನಿಕವಾಗಿ ಮಾತನಾಡಲು ಅಧಿಕಾರವಿಲ್ಲದ ಕಾರಣ ತಮ್ಮ ಹೆಸರು ಬಹಿರಂಗಪಡಿಸಬಾರದು' ಎಂಬ ಷರತ್ತಿನೊಂದಿಗೆ ಅಧಿಕಾರಿ 15 ಅಂಶಗಳ ಒಪ್ಪಂದದ ಮಾಹಿತಿ ನೀಡಿರುವುದಾಗಿ ಸುದ್ದಿಸಂಸ್ಥೆ ವರದಿ ಮಾಡಿದೆ. ▶10

ಒಪ್ಪಂದದ ಪ್ರಸ್ತಾವ ತಿರಸ್ಕರಿಸಿದ ಇರಾನ್

ದುಬೈ (ಎಪಿ): ಅಮೆರಿಕದ ಕದನ ವಿರಾಮ ಒಪ್ಪಂದದ ಪ್ರಸ್ತಾವವನ್ನು ತಿರಸ್ಕರಿಸಿರುವ ಇರಾನ್, ಇಸ್ರೇಲ್ ಮತ್ತು ಪಶ್ಚಿಮ ಏಷ್ಯಾ ದೇಶಗಳ ಮೇಲೆ ಬುಧವಾರ ಭಾರಿ ದಾಳಿ ನಡೆಸಿದೆ.

'ಅಮೆರಿಕದ ಒಪ್ಪಂದದ ಪ್ರಸ್ತಾವವನ್ನು ಇರಾನ್ ತಿರಸ್ಕರಿಸಿದೆ. ಯುದ್ಧವನ್ನು ಯಾವಾಗ ಕೊನೆಗೊಳಿಸಬೇಕು ಎನ್ನುವುದನ್ನು ಇರಾನ್ ನಿರ್ಧರಿಸಲಿದೆ. ಅಮೆರಿಕದ ಪ್ರಸ್ತಾವಕ್ಕೆ ಬದಲಾಗಿ ಪ್ರತಿ ಒಪ್ಪಂದದ ಪ್ರಸ್ತಾವವನ್ನು ಸಿದ್ಧಪಡಿಸಿದೆ' ಎಂದು ಅಲ್ಲಿನ ಸರ್ಕಾರಿ ಸುದ್ದಿ ವಾಹಿನಿ ಪ್ರೆಸ್ ಟಿವಿ ವರದಿ ಮಾಡಿದೆ.

'ಇರಾನ್ ತನ್ನ ಕ್ಷಿಪಣಿ ಯೋಜನೆಗಳ ಬಗ್ಗೆ ಚರ್ಚಿಸುವುದಿಲ್ಲ, ಹೊರ್ಮುಜ್ ಜಲಸಂಧಿಯ ಮೇಲಿನ ನಿಯಂತ್ರಣದ ಬಗ್ಗೆ ಮಾತುಕತೆ ನಡೆಸಲು ಬಯಸುವುದಿಲ್ಲ' ಎಂದು ಪ್ರೆಸ್ ಟಿವಿ ವರದಿ ಹೇಳಿದೆ. ▶10

ಪಾಕ್‌ನಂತೆ ನಮ್ಮದು ದಲ್ಲಾಳಿ ದೇಶವಲ್ಲ: ಭಾರತ

ನವದೆಹಲಿ (ಪಿಟಿಐ): 'ನಮ್ಮದು ಪಾಕಿಸ್ತಾನದಂತೆ ದಲ್ಲಾಳಿ ಕೆಲಸ ಮಾಡುವ ದೇಶವಲ್ಲ...'

–ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷ ಶಮನ ಮಾಡುವ ಪ್ರಯತ್ನದ ಭಾಗವಾಗಿ ಪಾಕಿಸ್ತಾನ ಮಧ್ಯಸ್ಥಿಕೆ ವಹಿಸುತ್ತಿದೆ ಎನ್ನಲಾದ ವಿಚಾರಕ್ಕೆ ಸಂಬಂಧಿಸಿ ವಿರೋಧ ಪಕ್ಷಗಳನ್ನು ಉದ್ದೇಶಿಸಿ ಕೇಂದ್ರ ಸರ್ಕಾರ ಬುಧವಾರ ನೀಡಿರುವ ಉತ್ತರ ಇದು. ಪಶ್ಚಿಮ ಏಷ್ಯಾ ಸಂಘರ್ಷ ಕುರಿತು ಚರ್ಚಿಸುವ ಸಲುವಾಗಿ ಸಂಸತ್ ಭವನ ಸಂಕೀರ್ಣದಲ್ಲಿ ಆಯೋಜಿಸಿದ್ದ ಸರ್ವಪಕ್ಷಗಳ ಸಭೆಯಲ್ಲಿ ವಿದೇಶಾಂಗ ಸಚಿವ ಎಸ್.ಜೈಶಂಕರ್ ಈ ಮಾತು ಹೇಳಿದ್ದಾರೆ ಎಂದು ಮೂಲಗಳು ಹೇಳಿವೆ.

'ಅಮೆರಿಕ–ಇಸ್ರೇಲ್ ಹಾಗೂ ಇರಾನ್ ನಡುವಿನ ಯುದ್ಧ ನಿಲ್ಲಿಸಲು ತಾನು ಮಧ್ಯಸ್ಥಿಕೆ ವಹಿಸಲು ಯತ್ನಿಸುತ್ತಿರುವುದಾಗಿ ಪಾಕಿಸ್ತಾನ ಹೇಳುತ್ತಿದ್ದು, ಇದು ಹೊಸ ವಿಚಾರ ಅಲ್ಲ. ಪಾಕಿಸ್ತಾನವನ್ನು ಅಮೆರಿಕ 1981ರಿಂದಲೂ ತನ್ನ ಉದ್ದೇಶ ಸಾಧನೆಗೆ 'ಬಳಕೆ' ಮಾಡುತ್ತಿದೆ ಎಂಬುದಾಗಿ ಜೈಶಂಕರ್ ಹೇಳಿದರು' ಎಂದು ಇವೇ ಮೂಲಗಳು ತಿಳಿಸಿವೆ. ▶10

ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಮಾರಾಟ ಕಂಪನಿಗಳ ಸ್ಪಷ್ಟನೆ

ಎಲ್‌ಪಿಜಿ, ಇಂಧನ ಕೊರತೆ ಇಲ್ಲ

ನವದೆಹಲಿ (ಪಿಟಿಐ): ದೇಶದಲ್ಲಿ ಪೆಟ್ರೋಲ್, ಡೀಸೆಲ್ ಹಾಗೂ ಎಲ್‌ಪಿಜಿ ಕೊರತೆ ಇಲ್ಲ ಎಂದು ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಬುಧವಾರ ಸ್ಪಷ್ಟಪಡಿಸಿವೆ.

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಊಹಾಪೋಹಗಳನ್ನು ಜನ ನಂಬಬಾರದು, ಭೀತಿಗೆ ಒಳಗಾಗಿ ಇಂಧನ ಖರೀದಿಗೆ ಮುಗಿಬೀಳಬಾರದು ಎಂದು ಮನವಿ ಮಾಡಿವೆ.

'ದೇಶದಲ್ಲಿ ಪೆಟ್ರೋಲ್, ಡೀಸೆಲ್ ಕೊರತೆ ಇಲ್ಲ' ಎಂದು ಹೇಳಿರುವ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) ತನ್ನ ಬಂಕ್‌ಗಳಲ್ಲಿ ಅಗತ್ಯ ದಾಸ್ತಾನು ಇದೆ, ಪೂರ್ಣ ಪ್ರಮಾಣದಲ್ಲಿ ಅವು ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದೆ.

ಕೆಲವು ಪ್ರದೇಶಗಳಲ್ಲಿ ಇಂಧನ ಕೊರತೆ ಇದೆ ಎಂಬ ವರದಿಗಳು ಆಧಾರವಿಲ್ಲದವು ಎಂದು ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಹೇಳಿದೆ. ದೇಶದಲ್ಲಿ ಎಲ್ಲಿಯೂ ಇಂಧನ ಕೊರತೆ ಇಲ್ಲ ಎಂದು ಸ್ಪಷ್ಟಪಡಿಸಿದೆ.

ಇಂಧನ ಪೂರೈಕೆ ವ್ಯವಸ್ಥೆಯಲ್ಲಿ ಅಡಚಣೆ ಉಂಟಾಗಿಲ್ಲ ಎಂದು ಕಂಪನಿ ತಿಳಿಸಿದೆ. ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) ಕೂಡ ಇದೇ ಮಾತು ಹೇಳಿದೆ.

ಪಿಎನ್‌ಜಿ ಪಡೆಯದಿದ್ದರೆ ಎಲ್‌ಪಿಜಿ ಬಂದ್

ನವದೆಹಲಿ (ಪಿಟಿಐ): ಕೊಳವೆ ಮೂಲಕ ನೈಸರ್ಗಿಕ ಅನಿಲ (ಪಿಎನ್‌ಜಿ) ಪೂರೈಸುವ ಸೌಲಭ್ಯ ಇರುವ ಕಡೆಗಳಲ್ಲಿ ಅದನ್ನು ಪಡೆದುಕೊಳ್ಳದೆ ಇರುವವರಿಗೆ ಎಲ್‌ಪಿಜಿ ಪೂರೈಕೆಯನ್ನು ಸ್ಥಗಿತಗೊಳಿಸಲಾಗುತ್ತದೆ ಎಂದು ಕೇಂದ್ರ ಸರ್ಕಾರ ಬುಧವಾರ ಹೇಳಿದೆ.

ಪಿಎನ್‌ಜಿ ಜಾಲವನ್ನು ಹೆಚ್ಚುಮಾಡಿ, ಎಲ್‌ಪಿಜಿ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಈ ಹೊಸ ಆದೇಶವನ್ನು ಹೊರಡಿಸಲಾಗಿದೆ. ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣದಿಂದಾಗಿ ಭಾರತಕ್ಕೆ ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯ ಆಗಿದೆ. ಹೀಗಾಗಿ ಮನೆಗಳು ಹಾಗೂ ವಾಣಿಜ್ಯ ಘಟಕಗಳು ಪಿಎನ್‌ಜಿ ಸಂಪರ್ಕ ಪಡೆದುಕೊಳ್ಳುವಂತೆ ಮಾಡಲು ಕೇಂದ್ರ ಸರ್ಕಾರವು ಮುಂದಡಿ ಇರಿಸಿದೆ. ಪಿಎನ್‌ಜಿ ದೇಶೀಯವಾಗಿಯೂ ಲಭ್ಯವಿದೆ, ಇದನ್ನು ಬೇರೆ ಬೇರೆ ಕಡೆಗಳಿಂದ ತರಿಸಿಕೊಳ್ಳಲಾಗುತ್ತಿದೆ ಕೂಡ. ▶10

ಹೊಸ ಮತ್ತು ಹೆಚ್ಚುವರಿ ಸಂಪರ್ಕ ತಾತ್ಕಾಲಿಕ ಸ್ಥಗಿತ

ಬೆಂಗಳೂರು: ಹೊಸ ಮತ್ತು ಹೆಚ್ಚುವರಿ ಎಲ್‌ಪಿಜಿ ಸಿಲಿಂಡರ್‌ಗಳ ಸಂಪರ್ಕವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಅಖಿಲ ಭಾರತ ಎಲ್‌ಪಿಜಿ ವಿತರಕರ ಒಕ್ಕೂಟ ತಿಳಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ರಾಧಾಕೃಷ್ಣ, ಕಾರ್ಯದರ್ಶಿ ಎಲ್.ಜಿ. ಕುಮಾರ್, 'ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದ ಎಲ್‌ಪಿಜಿ ಲಭ್ಯತೆಯ ಕುರಿತು ಸಾರ್ವಜನಿಕರಲ್ಲಿ ಆತಂಕ ಮತ್ತು ಊಹಾಪೋಹಗಳು ಹೆಚ್ಚುತ್ತಿವೆ. ಗ್ರಾಹಕರು ಆತಂಕದಿಂದ ಎಲ್‌ಪಿಜಿ ಸಿಲಿಂಡರ್‌ಗಳನ್ನು ಅನವಶ್ಯಕವಾಗಿ ಬುಕ್ಕಿಂಗ್ ಮಾಡಬಾರದು ಹಾಗೂ ಎಲ್‌ಪಿಜಿ ಏಜೆನ್ಸಿ, ಗೋದಾಮುಗಳಿಗೆ ಭೇಟಿ ನೀಡಬಾರದು. ಸಿಲಿಂಡರ್‌ಗಳನ್ನು ಮನೆಗಳಿಗೆ ವಿತರಿಸುತ್ತೇವೆ' ಎಂದು ಭರವಸೆ ನೀಡಿದರು.

'ತೈಲ ಮಾರುಕಟ್ಟೆ ಕಂಪನಿಗಳ (ಒಎಂಸಿ) ನಿರ್ದೇಶನದಂತೆ ಗೃಹ ಬಳಕೆದಾರರು ಹಾಗೂ ವಾಣಿಜ್ಯ ಬಳಕೆದಾರರಿಗೆ ಎಲ್‌ಪಿಜಿ ಸಿಲಿಂಡರ್‌ಗಳನ್ನು ನಿರಂತರವಾಗಿ ಪೂರೈಸಲಾಗುತ್ತಿದೆ. ಒಎಂಸಿಯ ನಿರ್ದೇಶನ, ಮಾರ್ಗಸೂಚಿ ಪ್ರಕಾರವೇ ವಿತರಕರು ಕಾರ್ಯನಿರ್ವಹಿಸುತ್ತಿದ್ದಾರೆ. ಎಲ್‌ಪಿಜಿ ಉತ್ಪಾದನೆ, ಹಂಚಿಕೆ ಅಥವಾ ಒಟ್ಟು ಪೂರೈಕೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ನಿಯಂತ್ರಣ ವಿತರಕರಿಗೆ ಇರುವುದಿಲ್ಲ' ಎಂದು ಮಾಹಿತಿ ನೀಡಿದರು. ▶10

'ಏಕಾತ್ಮ ಮಾನವ ದರ್ಶನ ಸಮ್ಮೇಳನ'ಕ್ಕೆ ಚಾಲನೆ

ಆದೇಶ ಧಿಕ್ಕರಿಸಿದ ಕೆಎಸ್‌ಒಯು

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಭವನದಲ್ಲಿ 'ಏಕಾತ್ಮ ಮಾನವ ದರ್ಶನ– ಭಾರತದ ವಿಶ್ವದೃಷ್ಟಿ' ಅಂತರ ರಾಷ್ಟ್ರೀಯ ಸಮ್ಮೇಳನವು ರಾಜ್ಯ ಸರ್ಕಾರದ ರದ್ದು ಆದೇಶವನ್ನು ಧಿಕ್ಕರಿಸಿ ಬುಧವಾರ ಆರಂಭವಾಯಿತು.

'ಪ್ರಜ್ಞಾ ಪ್ರವಾಹ' ಮತ್ತು 'ಶ್ಯಾಮಾ ಪ್ರಸಾದ್ ಮುಖರ್ಜಿ ಸಂಶೋಧನಾ ಪ್ರತಿಷ್ಠಾನ'ವು ಆಯೋಜಿಸಿದ್ದ ಸಮ್ಮೇಳನಕ್ಕೆ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಚಾಲನೆ ನೀಡಿದರು.

'ಇದು ವಿಶ್ವವಿದ್ಯಾಲಯದ ಅಧಿಕೃತ ಕಾರ್ಯಕ್ರಮ ಅಲ್ಲ. ಜಾಗವನ್ನು ಬಾಡಿಗೆಗೆ ನೀಡಲಾಗಿದೆ' ಎಂದು ಸರ್ಕಾರದ ನೋಟಿಸ್‌ಗೆ ಉತ್ತರಿಸಿದ್ದ ಕೆಎಸ್‌ಒಯು ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅವರು ಅತಿಥಿಗಳನ್ನು ಸ್ವಾಗತಿಸಿ, ಪ್ರಾಸ್ತಾವಿಕ ಮಾತುಗಳನ್ನಾಡಿದರು.

'ವಿಶ್ವವಿದ್ಯಾಲಯ ಎಲ್ಲರನ್ನೂ ಒಳಗೊಳ್ಳುತ್ತದೆ. ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸುವ ಜವಾಬ್ದಾರಿಯನ್ನು ಹೊಂದಿದೆ' ಎಂದು ಹೇಳಿದ ಅವರು, ಸಹಭಾಗಿತ್ವದ ಬಗ್ಗೆ ಪ್ರಸ್ತಾಪಿಸಲಿಲ್ಲ. ▶11

ಕಾನೂನು ಸಲಹೆ ಪಡೆದು ಮುಂದುವರಿಯುತ್ತೇವೆ: ಹಲಸೆ

ಮೈಸೂರು: 'ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲು ಉನ್ನತ ಶಿಕ್ಷಣ ಇಲಾಖೆ ಬ್ಯಾಂಕ್‌ಗಳಿಗೆ ಸೂಚನೆ ನೀಡಿದೆ. ಸಿಬ್ಬಂದಿಗೆ ಸಂಬಳ ಕೊಡಬೇಕು. ನೂರಾರು ಜವಾಬ್ದಾರಿಗಳಿವೆ. ನಿರಂಕುಶವಾಗಿ ಕ್ರಮ ತೆಗೆದುಕೊಳ್ಳುವುದನ್ನು ಪರಿಶೀಲಿಸಬೇಕು. ಕಾನೂನು ಸಲಹೆ ಪಡೆದು ಮುಂದುವರಿಯುತ್ತೇವೆ' ಎಂದು ಕುಲಪತಿ ಶರಣಪ್ಪ ವಿ.ಹಲಸೆ ಪ್ರತಿಕ್ರಿಯಿಸಿದರು.

'ವಿಶ್ವವಿದ್ಯಾಲಯ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಅವಕಾಶ ನೀಡದಿದ್ದರೆ ಹೇಗೆ? ಕಾರ್ಯಕ್ರಮ ಉತ್ತಮ ರೀತಿಯಲ್ಲಿ ಶುರುವಾಗಿದ್ದು, ಮಾರ್ಚ್ 26ರಂದು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಪಾಲ್ಗೊಳ್ಳುತ್ತಿದ್ದಾರೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು. ಎಚ್‌ಡಿಎಫ್‌ಸಿ, ಆಕ್ಸಿಸ್, ಎಸ್‌ಬಿಐ ಬ್ಯಾಂಕ್ ಶಾಖೆಗಳ ವ್ಯವಸ್ಥಾಪಕರಿಗೆ ಪತ್ರ ಬರೆದಿದ್ದ ಉನ್ನತ ಶಿಕ್ಷಣ ಇಲಾಖೆ, ಮುಕ್ತ ವಿವಿ ಖಾತೆಗಳ ಸ್ಥಗಿತಗೊಳಿಸಲು ಆದೇಶಿಸಿತ್ತು.

'ಆರ್ಥಿಕತೆ: ನಂ.1 ಕಡೆ ನಾಡು ದಾಪುಗಾಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯವು ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿಲ್ಲ. ಇತರ ಪ್ರಗತಿಶೀಲ ರಾಜ್ಯಗಳು ಮತ್ತು ಕೇಂದ್ರಕ್ಕಿಂತ ಉತ್ತಮ ಸ್ಥಿತಿಯಲ್ಲಿ ಇರುವುದರಿಂದಲೇ ರಾಜ್ಯದ ಬೆಳವಣಿಗೆ ದರ ಶೇ 9.4ರಷ್ಟಿದೆ. ನಾಡಿನ ಆರ್ಥಿಕತೆಯನ್ನು ದೇಶದಲ್ಲಿಯೇ ನಂಬರ್ 1 ಮಾಡುವತ್ತ ಹೆಜ್ಜೆ ಇಟ್ಟಿದ್ದೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

ಬಜೆಟ್ ಮೇಲಿನ ಚರ್ಚೆಗೆ ವಿಧಾನ ಸಭೆಯಲ್ಲಿ ಬುಧವಾರ ಐದು ತಾಸಿಗೂ ಹೆಚ್ಚು ಹೊತ್ತು ಉತ್ತರ ನೀಡಿದ ಅವರು, 'ವಿತ್ತೀಯ ಬೆಳವಣಿಗೆ ದರ ದೇಶದ ಬೆಳವಣಿಗೆ ದರವನ್ನೂ ಹಿಂದಿಕ್ಕಿದೆ. ಬಿಕ್ಕಟ್ಟು ಇದ್ದರೆ ಇದು ಸಾಧ್ಯವಾಗುತ್ತಿತ್ತೇ' ಎಂದು ವಿರೋಧ ಪಕ್ಷದ ಸದಸ್ಯರನ್ನು ಪ್ರಶ್ನಿಸಿದರು.

ಮುಖ್ಯಮಂತ್ರಿಯವರು ನೀಡಿದ ಉತ್ತರದಿಂದ ತೃಪ್ತರಾಗದ ವಿರೋಧ ಪಕ್ಷದ ಬಿಜೆಪಿಯ ಸದಸ್ಯರು, 'ಈ ಬಜೆಟ್ ಅಭಿವೃದ್ಧಿ ವಿರೋಧಿ' ಎಂದು ಘೋಷಣೆ ಕೂಗುತ್ತಾ ಆರ್. ಅಶೋಕ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು.

ಅದಕ್ಕೂ ಮೊದಲು ಮಾತನಾಡಿದ ಸಿದ್ದರಾಮಯ್ಯ, '2026–27ರ ಬಜೆಟ್ ಗಾತ್ರ ₹4.48 ಲಕ್ಷ ಕೋಟಿ. 2025–26ರಲ್ಲಿ ಬಜೆಟ್ ಗಾತ್ರ ₹4.09 ಲಕ್ಷ ಕೋಟಿ ಇತ್ತು. ಕಳೆದ ವರ್ಷಕ್ಕಿಂತ ಈ ಬಾರಿಯ ಬಜೆಟ್ ಗಾತ್ರ ₹38,455 ಕೋಟಿ ಹೆಚ್ಚಾಗಿದೆ. ಕೇಂದ್ರದ ಬಜೆಟ್ ಗಾತ್ರ ಈ ಬಾರಿ ₹53.47 ಲಕ್ಷ ಕೋಟಿ ಇದೆ. ಆರ್ಥಿಕ ಬೆಳವಣಿಗೆ ದರ ಶೇ 5.6ರಷ್ಟಿದೆ. ಕರ್ನಾಟಕದ ಜಿಡಿಪಿಯು (ಒಟ್ಟು ದೇಶೀಯ ಉತ್ಪನ್ನ) 2026–27ಕ್ಕೆ ₹33,05,500 ಕೋಟಿ, ಅಂದರೆ ಜಿಡಿಪಿ ಬೆಳವಣಿಗೆ ಶೇ 8.1 ಇದೆ. ಆದರೆ, ದೇಶದ ಜಿಡಿಪಿ ಬೆಳವಣಿಗೆ ಶೇ 7.4 ಮಾತ್ರ ಇದೆ. ದೇಶದ ಆರ್ಥಿಕ ಬೆಳವಣಿಗೆಗಿಂತ, ರಾಜ್ಯದ ಆರ್ಥಿಕ ಬೆಳವಣಿಗೆ ಹೆಚ್ಚು' ಎಂದು ಬಲವಾಗಿ ಪ್ರತಿಪಾದಿಸಿದರು.

'ನಮ್ಮ ಸರ್ಕಾರ ಬಂಡವಾಳ ಯೋಜನೆಗಳಿಗೆ ಹೆಚ್ಚಿನ ಅನುದಾನ ನೀಡುವ ಮೂಲಕ ಆರ್ಥಿಕ ಪ್ರಗತಿಗೆ ಉತ್ತೇಜನ ನೀಡುತ್ತಿರುವುದು ಇದಕ್ಕೆ ಸಾಕ್ಷಿ. ಇಷ್ಟೆಲ್ಲದರ ನಡುವೆ ನಮ್ಮ ವಿತ್ತೀಯ ಶಿಸ್ತು ಹಾಳು ಮಾಡಿಲ್ಲ. ವಿತ್ತೀಯ ಕೊರತೆ ಶೇ 3ರೊಳಗಿರಬೇಕು. ಇದು ಶೇ 2.95ರ ಮಿತಿಯೊಳಗೆ ಇರಲಿದೆ' ಎಂದು ತಿಳಿಸಿದರು. ▶6

ಡಿಕೆಶಿ ಹೆಸರೆತ್ತದ ಸಿದ್ದರಾಮಯ್ಯ

ಸಿದ್ದರಾಮಯ್ಯ

'ನಮ್ಮಲ್ಲಿ ಯಾರೇ ಮುಖ್ಯಮಂತ್ರಿ ಆದರೂ ಖುಷಿ ಪಡುತ್ತೇನೆ. ಪರಮೇಶ್ವರ, ಮುನಿಯಪ್ಪ, ಎಚ್.ಕೆ. ಪಾಟೀಲ, ಎಂ.ಬಿ. ಪಾಟೀಲ, ಎಚ್.ಸಿ.ಮಹದೇವಪ್ಪ, ಶಿವಾನಂದ ಪಾಟೀಲ, ಈಶ್ವರ ಖಂಡ್ರೆ, ಕೋನರಡ್ಡಿ,... ಎಲ್ಲರಿಗೂ ಯೋಗ್ಯತೆ ಇದೆ. ಅವಕಾಶ ಸಿಕ್ಕಿಲ್ಲ ಅಷ್ಟೇ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಪಕ್ಷದ ಹಲವು ಪ್ರಮುಖ ನಾಯಕರ ಹೆಸರು ಹೇಳಿ, ಡಿ.ಕೆ.ಶಿವಕುಮಾರ್ ಅವರ ಹೆಸರು ಹೇಳದೇ ಇರುವುದನ್ನು ವಿರೋಧ ಪಕ್ಷಗಳ ನಾಯಕರು ಪದೇ ಪದೇ ಪ್ರಸ್ತಾಪಿಸಿದರು. ಆಗಲೂ ಸಿದ್ದರಾಮಯ್ಯ ಅವರು ಶಿವಕುಮಾರ್ ಹೆಸರನ್ನು ಪ್ರಸ್ತಾಪಿಸಲೇ ಇಲ್ಲ. ಈ ವೇಳೆಯಲ್ಲಿ ಶಿವಕುಮಾರ್ ಸದನದಲ್ಲಿ ಇರಲಿಲ್ಲ. ▶6

ಹರ ಪಾರ್ವತಿ ಕಥಾಕ್ಕೆ 'ಸರಸ್ವತಿ ಸಮ್ಮಾನ್'

ಬೆಂಗಳೂರು: ಲೇಖಕ ರಾಮ್‌ಕುಮಾರ್ ಮುಖ್ಯೋಪಾಧ್ಯಾಯ ಅವರ 'ಹರ ಪಾರ್ವತಿ ಕಥಾ' ಬಂಗಾಳಿ ಕಾದಂಬರಿಯು 2025ನೇ ಸಾಲಿನ 'ಸರಸ್ವತಿ ಸಮ್ಮಾನ್' ಪ್ರಶಸ್ತಿಗೆ ಆಯ್ಕೆಯಾಗಿದೆ. ಈ ಕಾದಂಬರಿಯು ಶಿವ ಮತ್ತು ಪಾರ್ವತಿ ಕುರಿತ ಪೌರಾಣಿಕ ಕಥಾಹಂದರವನ್ನು ಹೊಂದಿದೆ. ▶6

ಚಿನಕುರುಳಿ | ಪ್ರಕಾಶ್ ಶೆಟ್ಟಿ

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಚೆನ್ನಮಲ್ಲಿಪುರ ಗ್ರಾಮದ ಸುತ್ತಮುತ್ತಲ ಪ್ರದೇಶದಲ್ಲಿ ಬೀಡುಬಿಟ್ಟ ಹುಲಿಯ ಚಿತ್ರ ಡ್ರೋನ್ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಅರಣ್ಯ ಇಲಾಖೆ ಹುಲಿಯ ಮೇಲೆ ನಿಗಾ ಇಟ್ಟಿದ್ದು, ಕೂಂಬಿಂಗ್ ನಡೆಸಲು ಮುಂದಾಗಿದೆ

₹2,172 ಕೋಟಿ ಮೌಲ್ಯದ ಭೂಮಿ ಸರ್ಕಾರದ ವಶ

• ಎ.ಎಂ.ಸುರೇಶ

ಬೆಂಗಳೂರು: ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ 533.16 ಎಕರೆ ಜಮೀನನ್ನು ವಶಕ್ಕೆ ಪಡೆಯಲಾಗಿದೆ.

ಮಾರ್ಗಸೂಚಿ ದರದ ಪ್ರಕಾರ ಈ ಜಮೀನಿನ ಒಟ್ಟು ಮೌಲ್ಯ ₹2,172.41 ಕೋಟಿ. ಆದರೆ, ಮಾರುಕಟ್ಟೆ ಮೌಲ್ಯ ₹20 ಸಾವಿರ ಕೋಟಿಗೂ ಅಧಿಕ ಎಂದು ಅಂದಾಜಿಸಲಾಗಿದೆ. ಭೂಗಳ್ಳರ ವಿರುದ್ಧ ಕಾರ್ಯಾಚರಣೆಯನ್ನು ಜಿಲ್ಲಾಡಳಿತ ಚುರುಕುಗೊಳಿಸಿದೆ. ರಾಜಧಾನಿ ಸುತ್ತ ಮುತ್ತ ಮತ್ತು ನಗರ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಒತ್ತುವರಿಯಾಗಿದ್ದ ಗುಂಡುತೋಪು, ಗೋಮಾಳ, ಕೆರೆ, ಸ್ಮಶಾನ, ರಾಜಕಾಲುವೆ, ಕಟ್ಟೆ ಹಾಗೂ ಇತರೆ ಸರ್ಕಾರಿ ಜಾಗಗಳನ್ನು ವಶಕ್ಕೆ ಪಡೆದು, ಅಂತಹ ಜಾಗಗಳ ಸುತ್ತ ತಂತಿ ಬೇಲಿ/ಕಾಂಪೌಂಡ್ ಹಾಕುವ ಮೂಲಕ ಪುನಃ ಒತ್ತುವರಿ ಆಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ.

ಈ ಜಾಗವನ್ನು ಭೂ ಬ್ಯಾಂಕ್ ಮಾದರಿಯಲ್ಲಿ ಸಂರಕ್ಷಿಸಿ, ವಸತಿ ಬಡಾವಣೆ ನಿರ್ಮಾಣ, ತ್ಯಾಜ್ಯ ನೀರು ಸಂಸ್ಕರಣಾ ಘಟಕ ಆರಂಭಿಸಲು, ವಿವಿಧ ಇಲಾಖೆಗಳಿಗೆ, ಪಾಲಿಕೆಗಳಿಗೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ನೀಡಲಾಗುತ್ತದೆ. ಇದಲ್ಲದೆ ಅಂಗನವಾಡಿಗಳು, ಶಾಲೆಗಳು, ವಸತಿ ನಿಲಯ ಇತ್ಯಾದಿಗೂ ಬಳಸಬಹುದು. ಬೇಡಿಕೆ ಅನುಸಾರ ಸರ್ಕಾರಿ ಇಲಾಖೆಗಳಿಗೆ ಜಾಗವನ್ನು ಹಂಚಿಕೆ ಮಾಡಲಾಗುತ್ತದೆ ಎಂದು ಜಿಲ್ಲಾಧಿಕಾರಿ ಜಿ.ಜಗದೀಶ್ ತಿಳಿಸಿದರು. ▶3

ನಕಲಿ ಪಿಎಚ್‌.ಡಿ ಪ್ರಮಾಣಪತ್ರ ಸಲ್ಲಿಕೆ: ಆರೋಪ

ನೈಜತೆ ಪರಿಶೀಲಿಸದೇ ಪ್ರಾಂಶುಪಾಲರ ನೇಮಕ

440	310	267	31	36
ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು	ನೇಮಕಾತಿ ಪ್ರಕ್ರಿಯೆ ನಡೆದ ಹುದ್ದೆಗಳ ಸಂಖ್ಯೆ	ಅಂತಿಮ ಪಟ್ಟಿಯಲ್ಲಿ ಸ್ಥಾನ ಪಡೆದವರು	ಸ್ಥಾನ ಪಡೆದ ಖಾಸಗಿ ಅಭ್ಯರ್ಥಿಗಳು	ಕಲ್ಯಾಣ ಕರ್ನಾಟಕಕ್ಕೆ ಸಿಕ್ಕ ಹುದ್ದೆಗಳು

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಪ್ರಾಂಶುಪಾಲರ ಹುದ್ದೆಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳ ಪಿಎಚ್‌.ಡಿ ಪ್ರಮಾಣಪತ್ರಗಳ ನೈಜತೆ ಪರಿಶೀಲಿಸದೆ ನೇಮಕಾತಿ ಆದೇಶ ನೀಡಲು ಕಾಲೇಜು ಶಿಕ್ಷಣ ಇಲಾಖೆ ಮುಂದಾಗಿದೆ.

ಅಂತಿಮ ಪಟ್ಟಿಯಲ್ಲಿ ಸ್ಥಾನ ಪಡೆದಿರುವ 267 ಅಭ್ಯರ್ಥಿಗಳಲ್ಲಿ ಹಲವರು ಹೊರ ರಾಜ್ಯಗಳ ವಿಶ್ವವಿದ್ಯಾಲಯಗಳಿಂದ ಪಡೆದ ನಕಲಿ ಪಿಎಚ್‌.ಡಿ ಪ್ರಮಾಣಪತ್ರಗಳನ್ನು ಸಲ್ಲಿಸಿದ್ದಾರೆ. ಇಂತಹ ಪ್ರಮಾಣಪತ್ರಗಳನ್ನು ಪ್ರಮಾಣಿತ ಕಾರ್ಯಾಚರಣೆ ವಿಧಾನದ (ಎಸ್‌ಒಪಿ) ಮೂಲಕ ನೈಜತೆ ಪರಿಶೀಲಿಸಿದ ನಂತರವೇ ನೇಮಕಾತಿ ಆದೇಶ ನೀಡಬೇಕು ಎಂದು ಹಲವು ಕಾಲೇಜುಗಳ ಪ್ರಾಧ್ಯಾಪಕರು ಮುಖ್ಯಮಂತ್ರಿ ಸಿದ್ದರಾಮಯ್ಯ, ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್, ಕಾಲೇಜು ಶಿಕ್ಷಣ ಇಲಾಖೆ ಆಯುಕ್ತೆ ಎನ್.ಮಂಜುಶ್ರೀ ಅವರಿಗೆ ಪತ್ರ ಬರೆದಿದ್ದರು. ▶10

ಕಲ್ಯಾಣ ಕರ್ನಾಟಕಕ್ಕೆ ಅನ್ಯಾಯ: ಆರೋಪ

ಅರ್ಹತೆಯ ಅನುಸಾರ ಅಂತಿಮ ಆಯ್ಕೆ ಪಟ್ಟಿ ಸಿದ್ಧಪಡಿಸದೆ ಕಲ್ಯಾಣ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕೇತರ ಎಂದು ಪ್ರತ್ಯೇಕ ಪಟ್ಟಿ ಪ್ರಕಟಿಸಿರುವುದಕ್ಕೆ ಅಭ್ಯರ್ಥಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮಾರ್ಗಸೂಚಿಗಳ ಪ್ರಕಾರ ಒಂದು ನೇಮಕಾತಿಗೆ ಅಧಿಸೂಚನೆ ಹೊರಡಿಸಿ, ಒಂದೇ ಪರೀಕ್ಷೆ ಮತ್ತು ಒಂದೇ ಆಯ್ಕೆ ಪ್ರಕ್ರಿಯೆ ನಡೆಸಿದಾಗ ಮೊದಲು ಅರ್ಹತಾ ಪಟ್ಟಿ ಸಿದ್ಧಪಡಿಸಬೇಕು. ಹೆಚ್ಚಿನ ಅಂಕಗಳನ್ನು ಪಡೆದ ಅಭ್ಯರ್ಥಿಗಳು ಪರಿಶಿಷ್ಟ ಜಾತಿ, ಕಲ್ಯಾಣ ಕರ್ನಾಟಕ ಮೀಸಲಾತಿ ಹೊಂದಿದ್ದರೂ ಸಾಮಾನ್ಯ ವರ್ಗದ ಅಡಿಯಲ್ಲಿ ಪರಿಗಣಿಸಬೇಕು ಎಂದು ಸ್ಪಷ್ಟಪಡಿಸಿದೆ. 'ನಿಯಮವನ್ನು ಕಡೆಗಣಿಸಿ ಕಾಲೇಜು ಶಿಕ್ಷಣ ಇಲಾಖೆ ಎರಡು ಪ್ರತ್ಯೇಕ ಪಟ್ಟಿಗಳನ್ನು ಬಿಡುಗಡೆ ಮಾಡಿದೆ. ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್ ತೀರ್ಪುಗಳನ್ನೂ ಕಡೆಗಣಿಸಿದೆ. ಇದರಿಂದ ಕಲ್ಯಾಣ ಕರ್ನಾಟಕದ 13 ಅಭ್ಯರ್ಥಿಗಳು ನ್ಯಾಯಸಮ್ಮತ ಅವಕಾಶಗಳಿಂದ ವಂಚಿತರಾಗಿದ್ದಾರೆ' ಎನ್ನುತ್ತಾರೆ ಕಲ್ಯಾಣ ಕರ್ನಾಟಕದ ಅಭ್ಯರ್ಥಿ ವಿರೂಪಾಕ್ಷ.

ಪ್ರಾಧಿಕಾರಗಳಿಗಿಲ್ಲ ತಪಾಸಣೆ ಅಧಿಕಾರ

ಉನ್ನತ ಶಿಕ್ಷಣ ಇಲಾಖೆಯ ನೇಮಕಾತಿ ನಿಯಮಗಳು, ಹೈಕೋರ್ಟ್, ಸುಪ್ರೀಂಕೋರ್ಟ್ ವಿವಿಧ ನೇಮಕಾತಿ ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಪ್ರಕಾರ ನೇಮಕಾತಿ ಪ್ರಾಧಿಕಾರಗಳಿಗೆ ಅಭ್ಯರ್ಥಿಗಳು ಸಲ್ಲಿಸುವ ಪ್ರಮಾಣ ಪತ್ರಗಳ ನೈಜತೆ ಪರಿಶೀಲಿಸುವ ಅಧಿಕಾರ ಇಲ್ಲ. 310 ಪ್ರಾಂಶುಪಾಲರ ಹುದ್ದೆಗಳಿಗೆ ಕೆಇಎ ಪರೀಕ್ಷೆ ನಡೆಸಿ, ಅರ್ಹತಾ ಪಟ್ಟಿ ಸಿದ್ಧಪಡಿಸಿಕೊಟ್ಟಿತ್ತು. ಅಭ್ಯರ್ಥಿಗಳು ನಮೂದಿಸಿದ ಪ್ರಮಾಣಪತ್ರಗಳನ್ನು ಲಗತ್ತಿಸಿದ್ದಾರೆಯೋ, ಇಲ್ಲವೋ ಎನ್ನುವುದನ್ನು ಕೆಇಎ ಪರಿಶೀಲಿಸಿದೆ. ಆದರೆ, ನಿಯಮದಂತೆ ಆಯಾ ಇಲಾಖೆಗಳೇ ಪರಿಶೀಲಿಸಬೇಕಿದೆ.

ಸುಧಾ, ಮಯೂರ ಓದಿರಿ

ವೀಕ್ಷಣಾ ಗೋಪುರ ನಿರ್ಮಾಣ

ಪ್ರಜಾವಾಣಿ ವಾರ್ತೆ

ಬನ್ನೇರುಘಟ್ಟ (ಆನೇಕಲ್): ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ 25 ಮೀಟರ್ ಎತ್ತರದ ಹೊಸ ವೀಕ್ಷಣಾ ಗೋಪುರ ನಿರ್ಮಿಸಲು ಸಿದ್ಧತೆ ನಡೆದಿದೆ.

ವೀಕ್ಷಣಾ ಗೋಪುರ ನಿರ್ಮಿಸಲು ಬೆಂಗಳೂರಿನ ರೋಹಿಣಿ ನಿಲೇಕಣಿ ಫಿಲಾಂತ್ರೋಪಿಸ್ ಫೌಂಡೇಷನ್ ₹5 ಕೋಟಿ ಆರ್ಥಿಕ ನೆರವು ನೀಡಲಿದೆ. ಈ ಸಂಬಂಧ ಫೌಂಡೇಷನ್ ಮತ್ತು ಉದ್ಯಾನದ ಅಧಿಕಾರಿಗಳು ಒಪ್ಪಂದಕ್ಕೆ ಸಹಿ ಹಾಕಿದರು.

ವೀಕ್ಷಣಾ ಗೋಪುರದಿಂದ ಪ್ರವಾಸಿಗರು ಅರಣ್ಯ ಕಣಿವೆಯ ವಿಹಂಗಮ ನೋಟ ಕಣ್ತುಂಬಿಕೊಳ್ಳಬಹುದು. ಪರಿಸರ ಸಂರಕ್ಷಣೆಯಲ್ಲಿ ತೊಡಗಿಸಿಕೊಳ್ಳಲು ಉತ್ತೇಜಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಲಾಗಿದೆ ಎಂದು ರೋಹಿಣಿ ನಿಲಕೇಣಿ ತಿಳಿಸಿದರು.

ಫೌಂಡೇಷನ್ ಸೇರಿದಂತೆ ಪಾಲುದಾರಿಕೆ ಮೂಲಕ ಬನ್ನೇರುಘಟ್ಟ ಉದ್ಯಾನದ ಸಮಗ್ರ ಅಭಿವೃದ್ಧಿಗೆ ಕ್ರಮ ವಹಿಸಲಾಗಿದೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಎ.ವಿ.ಸೂರ್ಯಸೇನ್ ತಿಳಿಸಿದರು.

ರಾಮಕೃಷ್ಣ ಮಠ: ಸ್ಮರಣ ಸಂಚಿಕೆ ಜನಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಲಸೂರಿನಲ್ಲಿರುವ ರಾಮಕೃಷ್ಣ ಮಠವು 125 ವರ್ಷಗಳಿಂದ ಕೈಗೊಂಡಿರುವ ಸೇವಾ ಕಾರ್ಯಗಳು ಅನನ್ಯವಾದವು' ಎಂದು ಕೋಲ್ಕತ್ತದ ಶ್ರೀರಾಮಕೃಷ್ಣ ಮಿಷನ್ ಹಾಗೂ ರಾಮಕೃಷ್ಣ ಮಠದ ಅಧ್ಯಕ್ಷ ಸ್ವಾಮಿ ಗೌತಮಾನಂದ ಮಹಾರಾಜ್ ಹೇಳಿದರು.

ಹಲಸೂರಿನ ರಾಮಕೃಷ್ಣ ಮಠಕ್ಕೆ ಭೇಟಿ ನೀಡಿದ್ದ ಅವರು 125ನೇ ವರ್ಷದ ಸ್ಮರಣ ಸಂಚಿಕೆಯನ್ನು ಜನಾರ್ಪಣೆ ಮಾಡಿ ಮಾತನಾಡಿದರು.

'ಕೇವಲ ಆಧ್ಯಾತ್ಮಿಕ ಕೇಂದ್ರವಾಗಿ ಮಾತ್ರವಲ್ಲದೇ ಶಿಕ್ಷಣ ಹಾಗೂ ಸಮಾಜ ಸೇವೆಯ ದಾರಿ ದೀಪವಾಗಿ ಹಲಸೂರು ಮಠ ಕೆಲಸ ಮಾಡುತ್ತಾ ಬಂದಿದೆ. ಗ್ರಾಮೀಣ ಪ್ರದೇಶದ ಬಡ ಮಕ್ಕಳು, ನಿರ್ಗತಿಕರಿಗೆ ಕಾಲಕಾಲಕ್ಕೆ ನೆರವು ನೀಡುತ್ತಾ ಬಂದಿದೆ' ಎಂದು ತಿಳಿಸಿದರು.

'ಕೆಲ ದಿನಗಳ ಹಿಂದೆ ಮಾರಿಷಸ್‌ಗೆ ಭೇಟಿ ನೀಡಿದ್ದಾಗ ಅಲ್ಲಿ ವಿವೇಕಾನಂದರ ಭೇಟಿಯ ನೆನಪಿಗೆ ನಾಲ್ಕು ಸಾವಿರ ಮಂದಿ ಕೂರಬಹುದಾದ ಅತ್ಯಾಧುನಿಕ ಸಭಾ ಮಂಟಪ ನಿರ್ಮಿಸಿರುವುದನ್ನು ಗಮನಿಸಿದೆ. ದೇಶ, ವಿದೇಶಗಳಲ್ಲೂ ನಮ್ಮಲ್ಲಿನ ಸೇವೆಗಳು ಸ್ಫೂರ್ತಿ ಪಡೆದಿವೆ' ಎಂದು ಹೇಳಿದರು.

ಹಲಸೂರಿನ ರಾಮಕೃಷ್ಣ ಮಠದ ಅಧ್ಯಕ್ಷ ಸ್ವಾಮಿ ಬೋಧಸ್ವರೂಪಾನಂದ ಮಹಾರಾಜ್ ಮಾತನಾಡಿ, 'ಬೆಂಗಳೂರಿನವರೇ ಆದ ಗೌತಮಾನಂದ ಅವರು 97ನೇ ವಯಸ್ಸಿನಲ್ಲೂ ಉತ್ಸಾಹದಿಂದ ಸೇವೆ ಮಾಡುತ್ತಿದ್ದಾರೆ' ಎಂದು ನುಡಿದರು.

ಸ್ವಾಮಿ ತತ್ತ್ವರೂಪಾನಂದ, ಸ್ವಾಮಿ ನಿತ್ಯಸ್ಥಾನಂದ, ಸ್ವಾಮಿ ಯಾದವೇಂದ್ರನಂದ, ಸ್ವಾಮಿ ಮಹಾಕಾಳಾನಂದ, ಸ್ವಾಮಿ ಯೋಗತತ್ತ್ವಾನಂದ, ಸ್ವಾಮಿ ಜ್ಞಾನಮೂರ್ತ್ಯಾನಂದ, ಸ್ವಾಮಿ ತ್ರೈಲೋಕ್ಯಾನಂದ ಉಪಸ್ಥಿತರಿದ್ದರು.



ಹಲಸೂರಿನಲ್ಲಿ ಇರುವ ರಾಮಕೃಷ್ಣ ಮಠದ 125ನೇ ವರ್ಷದ ಸ್ಮರಣ ಸಂಚಿಕೆಯನ್ನು ಸ್ವಾಮಿ ಗೌತಮಾನಂದ ಮಹಾರಾಜ್ (ಎಡದಿಂದ ಮೂರನೆಯವರು) ಜನಾರ್ಪಣೆಗೊಳಿಸಿದರು

ಕೋಟೆ ಪ್ರೌಢಶಾಲೆ ಆವರಣದಲ್ಲಿ ಆಯೋಜನೆ

ನಾಳೆಯಿಂದ ರಾಮನವಮಿ ಸಂಗೀತೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಇದೇ 27ರಿಂದ ಏಪ್ರಿಲ್ 22ರವರೆಗೆ ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದಲ್ಲಿ '88ನೇ ಶ್ರೀರಾಮನವಮಿ ಸಂಗೀತೋತ್ಸವ' ಹಮ್ಮಿಕೊಂಡಿದೆ.

ಈ ಸಂಗೀತೋತ್ಸವ 'ಪ್ರಜಾವಾಣಿ' ಮಾಧ್ಯಮ ಸಹಯೋಗದಲ್ಲಿ ನಡೆಯ ಲಿದೆ. ಹಿಂದೂಸ್ತಾನಿ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕರು ಹಾಗೂ ವೀಣೆ, ಪಿಟೀಲು, ಕೊಳಲು ಸೇರಿ ವಿವಿಧ ವಾದ್ಯಗಳ ವಾದಕರು ಸಂಗೀತ ಕಛೇರಿ ನಡೆಸಿಕೊಡಲಿದ್ದಾರೆ.

ಇದೇ 27ರಂದು ಬೆಳಿಗ್ಗೆ 8.30ರಿಂದ ರಾಮನವಮಿ ಮಹಾ ಅಭಿಷೇಕ ನಡೆಯಲಿದೆ. ಸಂಜೆ 5.30ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಸಂಜೆ 4.30ರಿಂದ ಶ್ರೀಧರ್ ಸಾಗರ್ ಮತ್ತು ಸಂಗಡಿಗರಿಂದ ಸಂಗೀತ ಕಛೇರಿ ನಡೆಯಲಿದೆ. 5.45ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಗೃಹ ಸಚಿವ ಜಿ. ಪರಮೇಶ್ವರ ಅವರು ಉದ್ಘಾಟಿಸಲಿದ್ದಾರೆ. ಬಳಿಕ ಅಭಿಷೇಕ್ ರಘುರಾಂ ಮತ್ತು ಸಂಗಡಿಗರಿಂದ ಸಂಗೀತ ಕಛೇರಿ ಹಮ್ಮಿಕೊಳ್ಳಲಾಗಿದೆ.

ಸಂಗೀತೋತ್ಸವದ ಅವಧಿಯಲ್ಲಿ ಪ್ರತಿದಿನ ಬೆಳಿಗ್ಗೆ 8ರಿಂದ 9.30ರವರೆಗೆ ವಾಲ್ಮೀಕಿ ರಾಮಾಯಣ ಉಪನ್ಯಾಸ ಮಾಲಿಕೆ ನಡೆಯಲಿದೆ. ಸಂಗೀತ ಕಛೇರಿಗಳು ಸಂಜೆ 5 ಗಂಟೆಯ ಬಳಿಕ ಪ್ರಾರಂಭವಾಗಲಿವೆ.

ಈ ಬಾರಿಯ ಸಂಗೀತೋತ್ಸವದಲ್ಲಿ ಮಲ್ಲಾಡಿ ಸಹೋದರರು, ಸುಧಾ ರಘುನಾಥನ್, ರಾಮಕೃಷ್ಣನ್ ಮೂರ್ತಿ, ವಿದ್ಯಾಭೂಷಣ್, ಶಿವಶ್ರೀ ಸ್ಕಂದಪ್ರಸಾದ್, ಸಂದೀಪ್ ನಾರಾಯಣ್, ರಂಜನಿ ಮತ್ತು ಗಾಯತ್ರಿ, ಸುಮಾ ಸುಧೀಂದ್ರ, ತ್ರಿಚೂರ್ ಸಹೋದರರು, ರವೀಂದ್ರ ಯಾವಗಲ್, ವೆಂಕಟೇಶ್ ಕುಮಾರ್, ಎಸ್. ಸಾಕೇತ ರಾಮನ್, ಪ್ರವೀಣ್ ಗೋಡ್ಖಿಂಡಿ, ಮೈಸೂರು ನಾಗರಾಜ್ ಮತ್ತು ಮೈಸೂರು ಮಂಜುನಾಥ್ ಸೇರಿ ಸಂಗೀತ ಕ್ಷೇತ್ರದ ಪ್ರಮುಖ ಗಾಯಕರು ಹಾಗೂ ಕಲಾವಿದರು ಕಛೇರಿ ನಡೆಸಿಕೊಡಲಿದ್ದಾರೆ.

www.ramanavamitickets.com ವೆಬ್‌ಸೈಟ್ ಮೂಲಕ ಟಿಕೆಟ್ ಗಳನ್ನು ಕಾಯ್ದಿರಿಸಬಹುದು. ವಿವರಕ್ಕೆ 9448079079 ಅಥವಾ 9483518012ಕ್ಕೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ರಾಮನವಮಿ: ಮಾಂಸ ಮಾರಾಟ ನಿಷೇಧ

ಬೆಂಗಳೂರು: ಶ್ರೀರಾಮನವಮಿ ಹಬ್ಬದ ಪ್ರಯುಕ್ತ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿರುವ ಕಸಾಯಿ ಖಾನೆಯಲ್ಲಿ ಪ್ರಾಣಿವಧೆ ಹಾಗೂ ಮಾರಾಟ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ಮಾರ್ಚ್ 27ರ ಶುಕ್ರವಾರದಂದು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಪಶುಪಾಲನಾ ವಿಭಾಗದ ಉಪ ನಿರ್ದೇಶಕರು ತಿಳಿಸಿದ್ದಾರೆ.

ಕಟ್ಟಡದಿಂದ ಹಾರಿ ವ್ಯಕ್ತಿ ಆತ್ಮಹತ್ಯೆ

ಗುರುಗ್ರಾಮ (ಪಿಟಿಐ): ಇಲ್ಲಿನ ಸೆಕ್ಟರ್ 63–ಎ ನಲ್ಲಿರುವ ಕಟ್ಟಡದ 13ನೇ ಮಹಡಿಯಿಂದ ಹಾರಿ ಬೆಂಗಳೂರಿನ ವ್ಯಕ್ತಿಯೊಬ್ಬರು ಬುಧವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿಯನ್ನು ಆನಂದ್ ಸುಬ್ರೋತೋ (54) ಎಂದು ಗುರುತಿಸಲಾಗಿದೆ. ಆನಂದ್ ಖಿನ್ನತೆಯಿಂದ ಬಳಲುತ್ತಿದ್ದರು ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ ಎಂದು ಶಂಕಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಸ್ತುತ ವಾಟಿಕಾ ಸಿಟಿ, ಸೆಕ್ಟರ್ 49ರಲ್ಲಿ ವಾಸಿಸುತ್ತಿದ್ದರು. ಅವರು ಪತ್ನಿಯಿಂದ ವಿಚ್ಛೇದನ ಪಡೆದು ಒಬ್ಬರೇ ವಾಸಿಸುತ್ತಿದ್ದರು ಎಂದಿದ್ದಾರೆ.

ಅಂತರರಾಷ್ಟ್ರೀಯ ಶಿಬಿರ 28ರಿಂದ

ಬೆಂಗಳೂರು: ಕೃಷ್ಣ ಸೆಟ್ಟಿ ಫೌಂಡೇಷನ್‌ನಿಂದ ಮಾರ್ಚ್ 28ರಿಂದ ಏಪ್ರಿಲ್ 1ರ ವರೆಗೆ ಹೆಸರಘಟ್ಟದ ನೇಚರ್ ನಾಟ್ಸ್‌ನಲ್ಲಿ ಅಂತರ ರಾಷ್ಟ್ರೀಯ ಚಿತ್ರಕಾರರ ಶಿಬಿರ ಆಯೋಜಿಸಿದೆ.

ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಫೌಂಡೇಷನ್‌ನ ಸಂಸ್ಥಾಪಕ ಕೃಷ್ಣಸೆಟ್ಟಿ, 'ಈ ಶಿಬಿರದಲ್ಲಿ ಜತಿನ್‌ದಾಸ್, ಆಸ್ಟ್ರಿಯಾದ ಕ್ಲೆಮೆನ್ಸ್ ಬ್ರ್ಯೂಂಗ್ಕುನ್ ಸೌ, ಇಟಲಿಯ ಸಿಮೋನೆ ನೋಸೆಡಾ, ಬಾರ್ಬರಾ ಪೆರ್ಗಾ, ಲೆಬನಾನ್‌ನ ನಾಡಾ ಇತಾನಿ, ಕಜಕಿಸ್ತಾನದ ಜೂಲಿಯಾ ಚುಬುಟ್ಕಿನಾ, ಸಿಂಗಪುರದ ಪಿ.ಜ್ಞಾನ, ಶ್ರೀಲಂಕಾದ ಸುಧತ್ ಅಬೇಸೇಕರ, ಅಚಲ ಗುಣವರ್ಧನ, ಬಾಂಗ್ಲಾದೇಶದ ನಜ್ಮಾ ಅಖ್ತರ್, ಜಮ್ಮು ಕಾಶ್ಮೀರದ ಕೆ.ಕೆ.ಗಾಂಧಿ, ಚಂಡೀಗಢದ ಮದನ್‌ಲಾಲ್ ಸೇರಿದಂತೆ ಹಲವಾರು ಕಲಾವಿದರು ಭಾಗವಹಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಬೆಂಗಳೂರು ನಗರ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯಿತಿ, ಯಲಹಂಕ
ಬಾಗಲೂರು ಗ್ರಾಮ ಪಂಚಾಯತಿ
E-mail: bagaluru.gp@gmail.com
ಸಂಖ್ಯೆ: ಬಾಗ್ರಾಪಂ/01/2025–26 ದಿನಾಂಕ: 24/03/2026
ಟೆಂಡರ್ ಪ್ರಕಟಣೆ
2025–26ನೇ ಸಾಲಿನಲ್ಲಿ ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಯಲಹಂಕ ತಾಲ್ಲೂಕಿನ ಬಾಗಲೂರು ಗ್ರಾಮ ಪಂಚಾಯಿತಿಯ ವರ್ಗ–1 ರ ಅನುದಾನ ಕ್ರಿಯಾ ಯೋಜನೆಯಡಿ ಅನುಮೋದನೆಗೊಂಡಿರುವ ವಿವಿಧ ಸಾಮಾಗ್ರಿಗಳನ್ನು ಸರಬರಾಜು ಪಡೆಯಲು/ಖರೀದಿಸಲು ಈ ಕೆಳಕಂಡಂತೆ ಇ–ಪ್ರೊಕ್ಯೂರ್‌ಮೆಂಟ್–1. RDPR/2025-26 /IND13917 ರಂತೆ ಪ್ರಕಟಣೆ ಹೊರಡಿಸಲು ಈ ಮೂಲಕ ಕೋರಿದೆ.
ಕಾಮಗಾರಿಯ ವಿವರ: ಯಲಹಂಕ ತಾಲ್ಲೂಕು, ಜಾಲ ಹೋಬಳಿಯ ಬಾಗಲೂರು ಪಂಚಾಯಿತಿಗೆ ವಿವಿಧ ಸಾಮಾಗ್ರಿಗಳನ್ನು ಸರಬರಾಜು ಮಾಡುವ ಬಗ್ಗೆ.
ಇಎಂಡಿ ಮೊತ್ತ: ರೂ.65,000–00.
1) ಟೆಂಡರ್ ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ. 2) ಟೆಂಡರ್ ತೆರೆಯುವುದು ಅ) ತಾಂತ್ರಿಕ ಲಕೋಟೆ: ಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕು ಪಂಚಾಯಿತಿ, ದೊಡ್ಡಬಳ್ಳಾಪುರ. 3) ಆ) ಆರ್ಥಿಕ ಲಕೋಟೆ: ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ. 4) ಸರಬರಾಜು ಆದೇಶ ನೀಡುವುದು: ಆರ್ಥಿಕ ಬಿಡ್ ಅನುಮೋದನೆಗೊಂಡ ನಂತರ. 5) ಟೆಂಡರ್ ಡಾಕ್ಯೂಮೆಂಟ್ ಲಭ್ಯವಾಗುವ ವಿಳಾಸ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್. 6) ಹೆಚ್ಚಿನ ಮಾಹಿತಿಗಾಗಿ ಗ್ರಾಮ ಪಂಚಾಯತಿ ಕಾರ್ಯಾಲಯ, ಬಾಗಲೂರು ಗ್ರಾಮ ಪಂಚಾಯಿತಿ, ಯಲಹಂಕ.
ಸಹಿ/–
ಪಂಚಾಯತಿ ಅಭಿವೃದ್ಧಿ ಅಧಿಕಾರಿ,
ಬಾಗಲೂರು ಗ್ರಾಮ ಪಂಚಾಯಿತಿ, ಯಲಹಂಕ ತಾಲ್ಲೂಕು
ವಾಸಾಸಂಇ/ವಾಪ್ರಾ/6393/ ಎಸ್‌ಎಂಸಿಎಲ್/2025–26

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಬೆಂಗಳೂರು ನಗರ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯಿತಿ, ಯಲಹಂಕ
ಬಾಗಲೂರು ಗ್ರಾಮ ಪಂಚಾಯತಿ
E-mail: bagaluru.gp@gmail.com
ಸಂಖ್ಯೆ: ಬಾಗ್ರಾಪಂ/02/2025–26 ದಿನಾಂಕ: 24/03/2026
ಟೆಂಡರ್ ಪ್ರಕಟಣೆ
2025–26ನೇ ಸಾಲಿನಲ್ಲಿ ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಯಲಹಂಕ ತಾಲ್ಲೂಕಿನ ಬಾಗಲೂರು ಗ್ರಾಮ ಪಂಚಾಯಿತಿಯ ವರ್ಗ–1 ರ ಅನುದಾನ ಕ್ರಿಯಾ ಯೋಜನೆಯಡಿ ಅನುಮೋದನೆಗೊಂಡಿರುವ ವಿವಿಧ ಸಾಮಾಗ್ರಿಗಳನ್ನು ಸರಬರಾಜು ಪಡೆಯಲು/ಖರೀದಿಸಲು ಈ ಕೆಳಕಂಡಂತೆ ಇ–ಪ್ರೊಕ್ಯೂರ್‌ಮೆಂಟ್–1. RDPR/2025-26 /IND13916 ರಂತೆ ಪ್ರಕಟಣೆ ಹೊರಡಿಸಲು ಈ ಮೂಲಕ ಕೋರಿದೆ.
ಕಾಮಗಾರಿಯ ವಿವರ: ಯಲಹಂಕ ತಾಲ್ಲೂಕು, ಜಾಲ ಹೋಬಳಿಯ ಬಾಗಲೂರು ಪಂಚಾಯಿತಿಗೆ ವಿವಿಧ ಸಾಮಾಗ್ರಿಗಳನ್ನು ಸರಬರಾಜು ಮಾಡುವ ಬಗ್ಗೆ.
ಇಎಂಡಿ ಮೊತ್ತ: ರೂ.65,000–00.
1) ಟೆಂಡರ್ ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ. 2) ಟೆಂಡರ್ ತೆರೆಯುವುದು ಅ) ತಾಂತ್ರಿಕ ಲಕೋಟೆ: ಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕು ಪಂಚಾಯಿತಿ, ದೊಡ್ಡಬಳ್ಳಾಪುರ. 3) ಆ) ಆರ್ಥಿಕ ಲಕೋಟೆ: ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ. 4) ಸರಬರಾಜು ಆದೇಶ ನೀಡುವುದು: ಆರ್ಥಿಕ ಬಿಡ್ ಅನುಮೋದನೆಗೊಂಡ ನಂತರ. 5) ಟೆಂಡರ್ ಡಾಕ್ಯೂಮೆಂಟ್ ಲಭ್ಯವಾಗುವ ವಿಳಾಸ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್. 6) ಹೆಚ್ಚಿನ ಮಾಹಿತಿಗಾಗಿ ಗ್ರಾಮ ಪಂಚಾಯತಿ ಕಾರ್ಯಾಲಯ, ಬಾಗಲೂರು ಗ್ರಾಮ ಪಂಚಾಯಿತಿ, ಯಲಹಂಕ.
ಸಹಿ/–
ಪಂಚಾಯತಿ ಅಭಿವೃದ್ಧಿ ಅಧಿಕಾರಿ,
ಬಾಗಲೂರು ಗ್ರಾಮ ಪಂಚಾಯಿತಿ, ಯಲಹಂಕ ತಾಲ್ಲೂಕು
ವಾಸಾಸಂಇ/ವಾಪ್ರಾ/6393/ ಎಸ್‌ಎಂಸಿಎಲ್/2025–26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ಪ್ರಕಟಣೆ
1. ಡಾ॥ ಕೆ.ಶಿವರಾಮ ಕಾರಂತ ಬಡಾವಣೆಯ ಸಕ್ರಮ ಜಮೀನು/ ಸಕ್ರಮ ಕಟ್ಟಡಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಭೆಯ ದಿನಾಂಕ:07.03.2024 ವಿಷಯ ಸಂಖ್ಯೆ:67/24 ರಲ್ಲಿ ಪ್ರಾಧಿಕಾರದ ಕಾಯ್ದೆ ಸೆಕ್ಷನ್ 20ರಂತೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ನಿಗದಿಪಡಿಸಿರುವ 2018ನೇ ಸಾಲಿನ ವಸತಿ ಉದ್ದೇಶದ ನಿವೇಶನ ಮೌಲ್ಯ ಹಾಗೂ 2024ನೇ ಸಾಲಿನ ವಸತಿ ಉದ್ದೇಶದ ನಿವೇಶನ ಮೌಲ್ಯದಲ್ಲಿನ ವ್ಯತ್ಯಾಸದ ಮೊತ್ತದ 1/3 ರಷ್ಟು ಮೌಲ್ಯವನ್ನು ಪುರೋಭಿವೃದ್ಧಿ ತೆರಿಗೆಯಾಗಿ ವಿಧಿಸಲು ಹಾಗೂ ಸ್ವತ್ತಿನ ವಸತಿ ಹಾಗೂ ವಾಣಿಜ್ಯ ಉಪಯೋಗದ ಅಂಶವನ್ನು ಗಮನದಲ್ಲಿರಿಸಿ ಪುರೋಭಿವೃದ್ಧಿ ಶುಲ್ಕವನ್ನು ನಿಗದಿಪಡಿಸಲಾಗಿರುತ್ತದೆ.
2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 1976 ರ ಕಂಡಿಕೆ 23 ರಂತೆ ಪ್ರಾಧಿಕಾರವು ನಿರ್ದಿಷ್ಟಪಡಿಸಿದ ಸಮಯದೊಳಗೆ ಪುರೋಭಿವೃದ್ಧಿ ಶುಲ್ಕವನ್ನು ಪಾವತಿಸಲು ವಿಫಲವಾದರೆ THE KARNATAKA MUNICIPAL CORPORATION ACT, 1976 ರ ಕಂಡಿಕೆ 112 ಉಪಕಂಡಿಕೆ (4) ರಲ್ಲಿ ತಿಳಿಸಿರುವಂತೆ ತೆರಿಗೆ ಪಾವತಿಸಲು ಬಾಧ್ಯಸ್ಥನಾಗಿರುವ ವ್ಯಕ್ತಿಯು ಉಪ ವಿಭಾಗ(3) ರಲ್ಲಿ ನಿರ್ದಿಷ್ಟಪಡಿಸಿದ 90 ದಿನಗಳ ಅವಧಿ ಮುಗಿದ ನಂತರ ಪಾವತಿಸದೆ ಉಳಿದಿರುವ ತೆರಿಗೆ ಮೊತ್ತಕ್ಕೆ ಪ್ರತಿ ತಿಂಗಳಿಗೆ ಶೇ.2 ರಂತೆ ಬಡ್ಡಿ ವಿಧಿಸಲಾಗುವುದು.
3. ಮುಂದುವರೆದು, ಡಾ॥ ಕೆ.ಶಿವರಾಮ ಕಾರಂತ ಬಡಾವಣೆಯ ಸಕ್ರಮ ಜಮೀನು/ಸಕ್ರಮ ಕಟ್ಟಡಗಳನ್ನು ಹೊಂದಿರುವ ಭೂಮಾಲೀಕರು ಕೂಡಲೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕೇಂದ್ರ ಕಛೇರಿಯನ್ನು ಸಂಪರ್ಕಿಸಿ, ಪುರೋಭಿವೃದ್ಧಿ ಶುಲ್ಕವನ್ನು ಪಾವತಿಸಿಕೊಳ್ಳುವಂತೆ ಅಥವಾ BDA Website ನಲ್ಲಿ ಲಾಗಿನ್ ಆಗಿ ಆನ್‌ಲೈನ್ ಸೇವೆಗಳು (Online Services) ಅಡಿಯಲ್ಲಿ ಕ್ರಮ ಸಂಖ್ಯೆ: 07ರ (DSKL ಉತ್ತಮೀಕರಣ ತೆರಿಗೆ ಪಾವತಿ) ಮೂಲಕ ಪುರೋಭಿವೃದ್ಧಿ ಶುಲ್ಕವನ್ನು ಪಾವತಿಸಬಹುದಾಗಿರುತ್ತದೆ.
4. ಆದುದರಿಂದ ಡಾ॥ ಕೆ.ಶಿವರಾಮ ಕಾರಂತ ಬಡಾವಣೆಯ ಸಕ್ರಮ ಜಮೀನು / ಸಕ್ರಮ ಕಟ್ಟಡಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಭೆಯ ಅಂತಿಮ ತೀರ್ಮಾನದಂತೆ ಕಾನೂನು ರೀತ್ಯಾ ಈಗಾಗಲೇ ಪುರೋಭಿವೃದ್ಧಿ ಶುಲ್ಕವನ್ನು ನಿಗದಿಪಡಿಸಲಾಗಿದ್ದು, ನಿಗದಿಪಡಿಸಿರುವ ಪುರೋಭಿವೃದ್ಧಿ ಶುಲ್ಕವನ್ನು ಪರಿಷ್ಕರಿಸಲು ಯಾವುದೇ ಅವಕಾಶವಿರುವುದಿಲ್ಲವೆಂಬ ಅಂಶವನ್ನು ಹಾಗೂ ಸಾರ್ವಜನಿಕ ಕುಂದುಕೊರತೆ ಸಭೆಯಲ್ಲಿ ಅರ್ಜಿಗಳನ್ನು ಮಾನ್ಯ ಮಾಡುವುದಿಲ್ಲ ಎಂಬ ವಿಷಯವನ್ನು ಸಾರ್ವಜನಿಕರ ಗಮನಕ್ಕೆ ತಿಳಿಯಪಡಿಸಲು ಪ್ರಕಟಿಸಲಾಗಿದೆ.
ಸಹಿ/– ಆಯುಕ್ತರು, ಬೆಂಅಪ್ರಾ, ಬೆಂಗಳೂರು

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ
ನಿರ್ಮಾಣ ಮತ್ತು ನಿರ್ವಹಣೆ ಸಮೂಹ
ದೇವನಹಳ್ಳಿ, ಕರ್ನಾಟಕ–562164, ದೂ: 080–29916308
ಇ–ಟೆಂ.ಪ್ರ.ಸಂ.: ಹೆಚ್‌ಎಸ್‌ಎಫ್‌ಸಿ/ಸಿಎಂಜಿ/2(19)/ಸಿಓಎಂಪಿ/172/2025–26 ದಿ: 25.03.2026
ಸಂಕ್ಷಿಪ್ತ ಇ–ಟೆಂಡರ್ ಆಹ್ವಾನ ಪ್ರಕಟಣೆ
ಭಾರತದ ರಾಷ್ಟ್ರಪತಿಯವರ ಪರವಾಗಿ ಕೆಳಕಂಡ ಕಾಮಗಾರಿಗೆ ಇ–ಟೆಂಡರಿಂಗ್ ಮೂಲಕ ಆನ್‌ಲೈನ್ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕೆಲಸದ ಹೆಸರು	ಎಚ್‌ಎಸ್‌ಎಫ್‌ಸಿ, ದೇವನಹಳ್ಳಿ, ಇಲ್ಲಿನ ವಾಹನ ನಿಲುಗಡೆ ಪ್ರದೇಶಕ್ಕೆ ಸಿವಿಲ್ ಹಾಗೂ ವಿದ್ಯುತ್ ಕಾಮಗಾರಿಗಳು ಮತ್ತು ಇತರೆ ಸಂಬಂಧಿತ ಕಾಮಗಾರಿಗಳು.
ಟೆಂಡರ್‌ಗಿಟ್ಟ ಅಂದಾಜು ಮೊತ್ತ	ರೂ. 233.00 ಲಕ್ಷಗಳು.
ಪೂರ್ಣಗೊಳಿಸುವ ಕಾಲಾವಧಿ (ಕೆಲಸದ ಆದೇಶ ಪತ್ರ ನೀಡಿದ ದಿನಾಂಕದಿಂದ 15ನೇ ದಿನದಿಂದ ಪರಿಗಣಿಸಲಾಗುತ್ತದೆ).	(5) ಐದು ತಿಂಗಳು.
ಟೆಂಡರ್ ದಸ್ತಾವೇಜಿಗೆ ಕೋರಿಕೆ ಸಲ್ಲಿಸುವ ಅವಧಿ	26.03.2026, 11:00 ಗಂಟೆಯಿಂದ 13.04.2026, 23:30 ಗಂಟೆವರೆಗೆ.
ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	26.03.2026, 11:10 ಗಂಟೆಯಿಂದ 13.04.2026, 23:59 ಗಂಟೆವರೆಗೆ.
ಬಿಡ್ ಸ್ಪಷ್ಟೀಕರಣಕ್ಕೆ ಅವಧಿ	26.03.2026, 11:30 ಗಂಟೆಯಿಂದ 14.04.2026, 14:30 ಗಂಟೆವರೆಗೆ.
ಬಿಡ್ ಸ್ಪಷ್ಟೀಕರಣಕ್ಕೆ ಪ್ರತಿಕ್ರಿಯೆ ನೀಡಲು ಕೊನೆಯ ದಿನಾಂಕ	15.04.2026, 17:00 ಗಂಟೆವರೆಗೆ.
ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ	16.04.2026, 10:30 ಗಂಟೆವರೆಗೆ.
ಟೆಂಡರ್‌ಗಳನ್ನು ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	16.04.2026, 11:00 ಗಂಟೆಗೆ
ಇಎಂಡಿ	ರೂ. 4,66,000/–

ಆಸಕ್ತಿಯುಳ್ಳ ಟೆಂಡರ್‌ದಾರರು ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗೆ ಟೆಂಡರ್ ಆಹ್ವಾನದ ವಿವರವಾದ ದ್ವಿಭಾಷೆ (ಹಿಂದಿ/ಇಂಗ್ಲಿಷ್) ಪ್ರಕಟಣೆಯನ್ನು (ಎನ್‌ಐಟಿ) ವೆಬ್‌ಸೈಟ್ www. isro.gov.in ರಲ್ಲಿ ಪರಿವೀಕ್ಷಿಸಬಹುದು. ಹೆಚ್ಚಿನ ವಿವರಗಳಿಗೆ ಮತ್ತು ಟೆಂಡರ್ ದಸ್ತಾವೇಜುಗಳ ಖರೀದಿಗೆ www.tenderwizard.com/ISRO ಗೆ ಭೇಟಿ ನೀಡುವುದು.
ಸಹಿ/– ಮುಖ್ಯಸ್ಥರು ಸಿಎಂಡಿ, ಸಿಎಂಜಿ, ಹೆಚ್‌ಎಸ್‌ಎಫ್‌ಸಿ

AstraZeneca
ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್
(CIN: L24231KA1979PLC003563)
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045
ಈಮೇಲ್: comp.secy@astrazeneca.com, ವೆಬ್: www.astrazeneca.com/india
ದೂ.: +91 80 6774 8000, ಫ್ಯಾಕ್ಸ್: 080 6774 8857
ಷೇರು ಪ್ರಮಾಣಪತ್ರಗಳು ಕಳೆದಿರುವ ಬಗ್ಗೆ ಸೂಚನೆ
ಈ ಕೆಳಗೆ ತಿಳಿಸಿರುವ ಕಂಪನಿಯ ಷೇರು ಪ್ರಮಾಣಪತ್ರಗಳು ಕಳೆದಿವೆ ಎಂದು ಷೇರುದಾರ ವರದಿ ಮಾಡಿದ್ದಾರೆ ಮತ್ತು ಮುಖ ಬೆಲೆ ರೂ. 2/– ರಂತೆ ನಕಲಿ ಷೇರು ಪ್ರಮಾಣಪತ್ರ ನೀಡುವಂತೆ ಷೇರುದಾರ ಕಂಪನಿಯನ್ನು ಕೋರಿದ್ದಾರೆ ಎಂದು ಈ ಮೂಲಕ ಸೂಚನೆಯನ್ನು ನೀಡುತ್ತಿದ್ದೇವೆ.

ಖಾತೆಪುಟ ಸಂಖ್ಯೆ	ಷೇರುಗಳ ಸಂಖ್ಯೆ (ಮುಖ ಬೆಲೆ ರೂ.10/–)	ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು		ಷೇರುದಾರರ ಹೆಸರು
		ಷೇರು ಪ್ರಮಾಣಪತ್ರ ಸಂಖ್ಯೆ	ವಿಶಿಷ್ಟ ಸಂಖ್ಯೆಗಳು	
S001512	25	24433	2324651 - 2324675	ಶಶಿಕಾಂತ್ ಗೋವರ್ಧನ್ ಸಹಸ್ರಬುದ್ದೆ (ಮೃತ)
	20	49671	3206870 - 3206889	
	5	49672	3206890 - 3206894	ಸುಮನ್ ಶಶಿಕಾಂತ್ ಸಹಸ್ರಬುದ್ದೆ

ಈ ಸೂಚನೆ ಪ್ರಕಟವಾದ ದಿನದಿಂದ 15 ದಿನಗಳ ಒಳಗಾಗಿ ಸಾರ್ವಜನಿಕರಿಂದ ಯಾವುದೇ ಆಕ್ಷೇಪ ಬರದಿದ್ದರೆ, ಕಂಪನಿಯು, ಕಂಪನಿಯ ಕ್ಲೇಮ್ ಮಾಡದ ಸಸ್ಪೆನ್ಸ್ ಖಾತೆಯಿಂದ ಷೇರುಗಳು ಮತ್ತು ಪಾವತಿಸದ ಲಾಭಾಂಶವನ್ನು ಬಿಡುಗಡೆ ಮಾಡಲು ಮುಂದುವರೆಯುತ್ತದೆ.
ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ
ಸ್ಥಳ: ಬೆಂಗಳೂರು
ದಿನಾಂಕ: 25–03–2026
ತಾನ್ಯಾ ಸನೀಶ್
ಕಂಪನಿ ಕಾರ್ಯದರ್ಶಿ

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಕೊಠಡಿ ಸಂಖ್ಯೆ: 207, 2ನೇ ಮಹಡಿ, ಜಿಲ್ಲಾ ಸಂಕೀರ್ಣ ಭವನ, ಬೀರಸಂದ್ರ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ,
ದೂರವಾಣಿ: 080–29787452, ಇ–ಮೇಲ್: dhobangalorerural@gmail.com
ಸಂಖ್ಯೆ: ಸಿಬ್ಬಂದಿ(4)/02/2026–27 ದಿನಾಂಕ: 24.03.2026
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ) ದ್ವಿ ಲಕೋಟೆ ಪದ್ಧತಿ.
2026–27 ನೇ ಸಾಲಿನ ಆರ್ಥಿಕ ವರ್ಷಕ್ಕೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ದೇವನಹಳ್ಳಿ/ನೆಲಮಂಗಲ/ದೊಡ್ಡಬಳ್ಳಾಪುರ/ಹೊಸಕೋಟೆ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮತ್ತು ವಿಜಯಪುರ/ತ್ಯಾಮಗೊಂಡ್ಲು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಗ್ರೂಪ್–ಡಿ, ಡಿಇಓ, ಫಾರ್ಮಾಸಿಸ್ಟ್, ಲ್ಯಾಬ್ ಟೆಕ್ನಿಷಿಯನ್ ಹಾಗೂ ವಾಹನ ಚಾಲಕರನ್ನು ಹೊರಗುತ್ತಿಗೆ ಆಧಾರದ ಮೇಲೆ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರಮೆಂಟ್ ಪೋರ್ಟಲ್‌ನ ಮುಖಾಂತರ ಟೆಂಡರ್ ಕರೆಯಲಾಗಿದೆ. ಕೆಪಿಪಿ ಟೆಂಡರ್ ರೆಫರೆನ್ಸ್ ಸಂಖ್ಯೆ DHFWS/2025-26/SE2096

Commencement of Down load of e-tender form website http://kppp.karnataka.gov.in	From 25.03.2026 After 11:00 am
Last date for queries through on-line	06.04.2026 Up to 5:00 pm
Last date and time for uploading of e-tender in e-procurement platform on or before	08.04.2026 Up to 5:00 pm
The Technical Bid will be opened Online by the Authorized Officer on	10.04.2026 at 11:00 am
Original Documents Verifications	Shall be intimated
The Price Bid will be opened Online by the Authorized Officer on	Shall be intimated
Place of opening of tenders and address for communication	DISTRICT HEALTH & FAMILY WELFARE OFFICE, BANGALORE RURAL No.207, II nd floor, District Adm Block, Vishwanthapura, Devanahalli, Bangalore Rural Dist

ಸಹಿ/–ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ.
ವಾ.ಸಾ.ಸಂ.ಇ/ವಾಪ್ರ/6449/ಶಿರಡಿ ಸಾಯಿ/2025–26

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ಸಿ.ಎ ನಿವೇಶನ ಖಾತೆ ನಂ. 31–511–371, ವಾರ್ಡ್ ನಂ. 20, ಅಂಬಿಕಾ ಲೇಔಟ್, ಸೌತೇಗೌಡನಹಳ್ಳಿ ಗ್ರಾಮ, ಸೂಲಿಬೆಲೆ ರಸ್ತೆ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110.
ಸಂ: ಬಿಐಎಎಪಿಎ/ಟಿಪಿ/ಭೂಉಬ/172/2025–26/3506 ದಿನಾಂಕ : 17.03.2026
ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಾಣಿಜ್ಯ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ಮುನೇಗೌಡ ಎನ್. ಬಿನ್ ಬಿ. ನಾರಾಯಣಸ್ವಾಮಿ	ದೇವನಹಳ್ಳಿ	ಚನ್ನರಾಯಪಟ್ಟಣ	ತೆಲ್ಲೋಹಳ್ಳಿ ಅಗ್ರಹಾರ	15/1	0–15	ವ್ಯವಸಾಯ	ವಾಣಿಜ್ಯ

ಷರಾ: ಪ್ರಸ್ತಾವನೆಯಲ್ಲಿ ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಹಾಗೂ ಪರಿಸರದಲ್ಲಿ ವಸತಿ/ವಸತಿಯೇತರ ಅಭಿವೃದ್ಧಿ ಬೆಳವಣಿಗೆಗಳು ಬರುತ್ತಿದ್ದು, ಈ ಜಮೀನಿನ ಪರಿಸರದಲ್ಲಿ 'ವಾಣಿಜ್ಯ' ಉದ್ದೇಶಕ್ಕೆ ಸಾರ್ವಜನಿಕರಿಂದ ತುಂಬ ಬೇಡಿಕೆಯಿದ್ದು, ಭವಿಷ್ಯದಲ್ಲಿ 'ವಾಣಿಜ್ಯ' ಉದ್ದೇಶಕ್ಕೆ ಹೆಚ್ಚಿನ ಬೇಡಿಕೆ ಬರುವುದರಿಂದ ಪ್ರಸ್ತಾಪಿತ ಪ್ರದೇಶದಲ್ಲಿ 'ವಾಣಿಜ್ಯ' ಬೆಳವಣಿಗೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತೇವೆ. ಅಲ್ಲದೇ, ಪ್ರಸ್ತಾಪಿತ ಜಮೀನಿನ 'ವಾಣಿಜ್ಯ' ಬೆಳವಣಿಗೆ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಜಮೀನು 'ವ್ಯವಸಾಯ ವಲಯ' ದಿಂದ 'ವಾಣಿಜ್ಯ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.
ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.
ವಾಸಾಸಂಇ/ವಾ.ಪ್ರ/ಎಎಎ/6460/2025–26

PUBLIC NOTICE
All the General Public are hereby informed that, my Client **TRS Solutions LLP** rep by Dr. Sunita Maheshwari, having its registered office at No.7G, Council Katha 180/63, Kundahalli Main Road, Vishwesharaiah Industrial Area, Whitefiled, Bangalore – 560048 is intending to purchase the Schedule Property from its present owner, who has acquired the same through Sale Deed Dt.02.07.2010, Registered as Doc No. 857/2010-11 from Mrs Bhagawathi Anantharaman Pan No. AWYPB4661J So, the general public are hereby requested that, if any person having any claim or objection, the same can be intimated to the undersigned or to my client directly and oblige.
SCHEDULE PROPERTY
All that piece and parcel of the Southern half portion of Site No.453/4, Old No.599, New No.29, measuring EW : 86 ft and NS : 61 ¼ ft totally 5268 sq ft, together with commercial building, measuring 13,624 Square Feet of Super built up area and 3195 Sq. Ft Car Parking area, consisting of Basement, Ground, First, Second, Third and Terrace Floors, under B.W.C.C limits, having PID No. 7-10-29, New EPID No.7420580714, situated at 11th main Road, Malleshwaram, Bangalore and bounded on :
East by : 11th Main Road, or West End Road,
West by : Property bearing Old No. 43/5, later No.600,
North by : Property of Mrs Puttaganagamma,
South by : 14th Cross Road.
SHRIDHARA MURTHY, Advocate
No.79/80, 1st Floor, Kothanur Dinne Main Road, Opp to Bigbazar, JP Nagar 7th Phase, Bangalore-560078. M: 9880595946
PRADEEP J: 9731217412

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
My clients are negotiating to purchase the Schedule immovable Property from its Joint Co-owners **Mr. L. SELVAM GEORGE** and **Mrs . VASANTHI GEORGE.**
If any individual/s or financial institution/s having any Rights, Claims, Title, Interest or Subsisting charges over the same, it shall be lodged within 10 (Ten) days from the date of Publication of this Notice with Documentary Evidence with the undersigned.
SCHEDULE
Site No. 50 (earlier khatha No. 1123, BBMP khatha No. 1143/1123/50) formed out of Residentially Converted Survey Number 3, Situated at Junnasandra Village, Varthur Hobli, Bangalore East Taluk, and presently bearing Bruhuth Bangalore Nagara Palike e-khatha No. 1007852239, Bangalore City and situated in the layout named as "RAINBOW RESIDENCY".
Measuring : **East by :** 99.6 feet and **West by :** 99.6 feet, **North by:** 50.2 feet and **South by :** 50 feet, in all totally measuring – 4,962 sq. feet and bounded on :
East by - Site No. 49, **West by-** Private Road, **North by –** Site No. 51, **South by –** Private Road
S. ANANTHA RAMA REDDY,
Advocate & Consultant, No. 12, 3rd Floor, 10th Cross, (Opp. St. Martha's Hospital), Cubbonpet, Bangalore–560 002,
email id: ananthareddy2006@hotmail.com
Mobile - 9845049944
Bangalore. Date : 26-03-2026

ಸಾರ್ವಜನಿಕ ಪ್ರಕಟಣೆ
ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಶ್ರೀ ವಿ.ಎಸ್. ಸುಬ್ರಮಣಿಯನ್ ಬಿನ್ ಬಿ.ಆರ್. ನಾಚಿ ಮುತ್ತು ವಾಸ: ನಂ.15, ಗಾಂಧಿನಗರ ಕಾಲೋನಿ, 2ನೇ ರಸ್ತೆ, ಸುರಂಪಟ್ಟಿ ಪೋಸ್ಟ್, ಈರೋಡ್ –638 009, ತಮಿಳುನಾಡು ಆದ ನಾನು ತಿಳಿಸುವುದೇನೆಂದರೆ ನಾನು ಷೆಡ್ಯೂಲ್ ಸ್ವತ್ತನ್ನು ಶ್ರೀ ವಿ ಶಶಿಕುಮಾರ್ ಬಿನ್ ಲೇಟ್ ಆರ್.ವೆಂಕಟೇಶ್ವರರವರಿಂದ ದಿನಾಂಕ: 19/02/2025 ರಂದು ರಿಜಿಸ್ಟರ್ಡ್ ಕ್ರಯ ಪತ್ರದ ಮೂಲಕ ಖರೀದಿ ಮಾಡಿದ್ದು, ಜಿಗಣಿ ಬಸವನಗುಡಿ, (ಬನ್ನೇರುಘಟ್ಟ), ಆನೇಕಲ್ ತಾಲ್ಲೂಕು) ಬೆಂಗಳೂರು ಸಬ್ ರಿಜಿಸ್ಟ್ರಾರ್ ರವರ ಕಛೇರಿಯಲ್ಲಿ ರಿಜಿಸ್ಟರ್ಡ್ ಆಗಿದ್ದು ಕ್ರಯ ಪತ್ರದ ದಸ್ತಾವೇಜಿನ ಸಂಖ್ಯೆ IGN-1-07988/24-25 ಆಗಿರುತ್ತದೆ. ಅಂದಿನಿಂದ ಸದರಿ ಸ್ವತ್ತಿಗೆ ನಾನೇ ವಾರಸುದಾರರಾಗಿ ಅನುಭವಿಸಿಕೊಂಡು ಬಂದಿರುತ್ತೇನೆ.
ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಯಾವುದೇ ಅತಿಕ್ರಮ ಪ್ರವೇಶಿಸಿದರೆ ಅಥವಾ ಸದರಿ ಸ್ವತ್ತಿಗೆ ಯಾವುದೇ ರೀತಿಯಲ್ಲಿ ವ್ಯವಹರಿಸಿದರೆ ಅಥವಾ ಯಾವುದೇ ಪವರ್ ಆಫ್ ಅಟಾರ್ನಿಯನ್ನು ಕಾಯಗಗೊಳಿಸಿದರೆ ಅಥವಾ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಒಪ್ಪಂದಗಳನ್ನು ಮಾಡಿಕೊಂಡರೆ ಅಥವಾ ಸದರಿ ಸ್ವತ್ತಿನ ಮೇಲೆ ಅತಿಕ್ರಮಣ ಮಾಡಿದರೆ, ಅದರ ಎಲ್ಲಾ ವೆಚ್ಚಗಳು ಮತ್ತು ಪರಿಣಾಮಗಳಿಗೆ ಅವನು/ಅವರು ಮಾತ್ರ ಹೊಣೆಗಾರರಾಗಿರುತ್ತಾರೆ.
ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ, ವ್ಯಕ್ತಿಗಳು ಅಥವಾ ಯಾವುದೇ ರೀತಿಯ ಆಕ್ಷೇಪಣೆಗಳು ಅಥವಾ ಪ್ರಶ್ನೆಗಳನ್ನು ಹೊಂದಿದ್ದರೆ, ಅವರು ನನ್ನ ವ್ಯವಸ್ಥಾಪಕ ಶ್ರೀ ಜ್ಯೋತಿ ರಾಜೇಶ್.ಸಿ, ರವರ ಮುಂದೆ ಮೊಬೈಲ್ ಸಂಖ್ಯೆ 9994619400 ತಮ್ಮ ಆಕ್ಷೇಪಣೆಗಳು ಅಥವಾ ಪ್ರಶ್ನೆಗಳನ್ನು ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.
ಷೆಡ್ಯೂಲ್ ಸ್ವತ್ತು
ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಕೊಪ್ಪ ಗ್ರಾಮದಲ್ಲಿರುವ ಹಳೆ ಸರ್ವೆ ನಂ.196/1, ಹೊಸ ಸರ್ವೆ ನಂ.196/1: ಮತ್ತು ಹಾಲಿ ಸರ್ವೆ ನಂ.196/5ರಲ್ಲಿ ವಿಸ್ತೀರ್ಣ 0–35.12 ಗುಂಟೆ ಕೃಷಿ ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ ವಿ.ಶಶಿಕುಮಾರ್‌ರವರಿಗೆ ಸೇರಿದ ಸರ್ವೆ ನಂ.196/2, ಪಶ್ಚಿಮಕ್ಕೆ –ವಿ. ಶಶಿಕುಮಾರ್‌ರವರಿಗೆ ಸೇರಿದ ಸರ್ವೆ ನಂ.196/1A, ಉತ್ತರಕ್ಕೆ– 30 ಅಡಿ ರಸ್ತೆ ಮತ್ತು ರಾಜಾ ರೆಡ್ಡಿ ಅವರ ಜಮೀನು, ದಕ್ಷಿಣಕ್ಕೆ –ತೋಟ ಇನಾಮತಿ ಜಮೀನು.
ಶ್ರೀ ವಿ.ಎಸ್. ಸುಬ್ರಮಣಿಯನ್ ಬಿನ್ ಬಿ.ಆರ್. ನಾಚಿ ಮುತ್ತು
ವಾಸ: ನಂ.15, ಗಾಂಧಿನಗರ ಕಾಲೋನಿ, 2ನೇ ರಸ್ತೆ, ಸುರಂಪಟ್ಟಿ ಪೋಸ್ಟ್, ಈರೋಡ್ –638 009, ತಮಿಳುನಾಡು.
ಬೆಂಗಳೂರು. ದಿನಾಂಕ:26–03–2026

CONNECT

ಅದ್ಧೂರಿ ಉದ್ಘಾಟನೆ
ನಮ್ಮ 3ನೇ ಮಳಿಗೆ
Opening Offer 60% off
ON PURE MYSORE CREPE SILK SAREE
MYSORE SILKS ಸೀರೆ ಉತ್ಸವ By Sulakshmi Silks

ಸೀರೆ ಉತ್ಸವ-3 ನಮ್ಮೊಂದಿಗೆ ಸೇರಿ ಆಚರಿಸಿ
ನಮ್ಮ ಹೊಸ ಮಳಿಗೆಯಲ್ಲಿ 16 ರಿಂದ 31ನೇ ಮಾರ್ಚ್ 2026 ರ ವರೆಗೆ
SULAKSHMI SILKS
ಕರ್ನಾಟಕದ ಅತಿದೊಡ್ಡ ಸೀರೆ ಉತ್ಸವ
ಸಂಪರ್ಕಿಸಿ: 99727 18898 | 93531 38343 | 9886306643 | 96631 27606
ಸ್ಥಳ: ನಂ.119/1, ಶ್ರೀನಿಧಿ ಕಾಂಪ್ಲೆಕ್ಸ್, 11ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003

PERSONAL

Lost

DOCUMENT LOST
I, Jethro Jeyadeep J Residing at No. 14/1 Colonel Hill Road, Shivajinagar, Bangalore-560051 have Lost my Educational Certificates of ICSE Marks Card Unique ID No. 6127224 year 2016, ISC Marks Card Unique ID No. 6127224, year 2018 from Bishop Cotton Boys School, Bangalore, & Degree Convocation Certificate Reg No. 18EPS12028, BA year 2022 from Bangalore City University While in transit: Finders Please
Contact: 7022221376

JOB OPPORTUNITIES
Teachers / Professors
BRIGHT WAY SCHOOL
No.105, 12th Main, Opp.BHCS Layout, Gowdanapalya, Bangalore-61
WALK-IN-INTERVIEW
Sunday : 29.03.2026 Time: 10.30 a.m - 1.30 p.m
Subject: English, Social, Hindi - B.A, M.A / B.Ed
Science - B.Sc, M.Sc / B.Ed Music, Dance - Senior Grade
P.Edu - B.PEd, M.PEd. Fine Arts - B.A, M.A - Visual Arts
BRIGHT WAY PRE-UNIVERSITY COLLEGE
Principal Post: - M.Sc, M.A, M.Com / B.Ed
With more than 15 years experience
(Resumes can be sent early to our E-mail)
Email: brightways.school@yahoo.in
Contact: 080 - 2639 6720, Mob: 92412 04762

DH DECCAN HERALD Classifieds More value, more impact
ಪ್ರಜಾವಾಣಿ
PUBLIC NOTICE
BOOK YOUR PUBLIC NOTICE
ADS IN DH ALL + PRAJAVANI BENGALURU CITY, ON ALL DAYS
@ 550/-* PER SQCM
www.dhclassifieds.com
BOOK NOW
For more details contact:
+91 9886213331 | +91 9731810277
9845114560 | 080- 45557163 / 164
*Conditions apply

ಸಿಲಿಂಡರ್ ಅಭಾವ ಪರಿಣಾಮ: ಹಾಲಿಗೆ ಕುಸಿದ ಬೇಡಿಕೆ

ಬೆಂಗಳೂರು: ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆಯಿಂದಾಗಿ ಹೋಟೆಲ್ ಉದ್ಯಮದ ಜತೆಗೆ ಕರ್ನಾಟಕ ಹಾಲು ಮಹಾಮಂಡಳಿಯ ಹಾಲು ಮಾರಾಟದ ಮೇಲೂ ಪರಿಣಾಮ ಬೀರಿದೆ.

ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಕಡೆ ವಾಣಿಜ್ಯ ಸಿಲಿಂಡರ್‌ಗಳ ಸರಬರಾಜು ಆಗದ ಕಾರಣ ಹೋಟೆಲ್‌ಗಳನ್ನು ಬಂದ್ ಮಾಡಲಾಗಿದೆ. ಇದರಿಂದಾಗಿ ಹಾಲಿನ ಮಾರಾಟದಲ್ಲೂ ವ್ಯತ್ಯಯವಾಗಿದೆ. ಮೊಸರು, ತುಪ್ಪಕ್ಕೂ ಸ್ವಲ್ಪಮಟ್ಟಿಗೆ ಬೇಡಿಕೆ ಕುಸಿದಿದೆ.

‘ಬೆಂಗಳೂರಿನಲ್ಲಿಯೇ ನಿತ್ಯ 21ರಿಂದ 22 ಲಕ್ಷ ಲೀಟರ್ ಹಾಗೂ ರಾಜ್ಯದ ಇತರೆಡೆ 48 ಲಕ್ಷ ಲೀಟರ್ ಹಾಲು ಮಾರಾಟವಾಗುತ್ತಿತ್ತು. ಆದರೆ, ಹೋಟೆಲ್‌ಗಳ ಬಂದ್‌ನಿಂದಾಗಿ ಈಗ ನಿತ್ಯ 60 ಸಾವಿರ ಲೀಟರ್ ಹಾಲಿಗೆ ಬೇಡಿಕೆ ಕಡಿಮೆಯಾಗಿದೆ. ಬೇರೆ ಕಡೆ ಮಾರಾಟ ಮಾಡುವುದಕ್ಕೆ ಒತ್ತು ನೀಡಿದ್ದೇವೆ’ ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ತಿಳಿಸಿದರು.

ಮದಿರಾಪಾನಕ್ಕೆ ಕೋರ್ಟ್ ಮೂಗುದಾರ

ಪಬ್–ಬಾರ್‌ಗಳಲ್ಲಿ ಶಿಷ್ಟಾಚಾರ ಪಾಲನೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ವಯಸ್ಸಿನ ಪರಿಶೀಲನೆ ಕಡ್ಡಾಯ
- ಅಲ್ಕೋಹಾಲ್ ಮಾರಾಟ ಕೇಂದ್ರಗಳಿಗೆ ನಿಗಾ

ಬೆಂಗಳೂರು: ‘ನಗರ ಪ್ರದೇಶಗಳಲ್ಲಿ ವ್ಯಾಪಕವಾಗಿ ಹರಡಿರುವ ಬ್ರೂವರಿಸ್ (ಶರಾಬು ಭಟ್ಟಿ) ಮತ್ತು ಇದೇ ತೆರನಾದ ಕೇಂದ್ರಗಳಿಗೆ ಅಪ್ರಾಪ್ತ ವಯಸ್ಸಿನ ಮಕ್ಕಳು ಪ್ರವೇಶಿಸುವುದು ಮತ್ತು ಅವರಿಗೆ ಮದ್ಯ ಸರಬರಾಜು ಮಾಡುವುದನ್ನು ತಡೆಗಟ್ಟಲು ಕಠಿಣವಾದ ಶಿಷ್ಟಾಚಾರ ಪಾಲನೆ ಕಡ್ಡಾಯ’ ಎಂದು ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

‘ನನ್ನ ವಿರುದ್ಧ ರಾಜರಾಜೇಶ್ವರಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ಗೆ ಸಂಬಂಧಿಸಿದಂತೆ 46ನೇ ಹೆಚ್ಚುವರಿ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು’ ಎಂದು ಕೋರಿ ‘ಲೆಗಸಿ ಬ್ರೂವಿಂಗ್ ಕಂಪನಿ’ ಪಾಲುದಾರ ವಿ.ಚಿಟ್ಟಿಬಾಬು ಸಲ್ಲಿಸಿದ್ದ ರಿಟ್ ಅರ್ಜಿ ವಜಾಗೊಳಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಬುಧವಾರ ಆದೇಶಿಸಿದೆ.

‘ಕಾನೂನು ಪ್ರಕಾರ 18ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಮದ್ಯ ಸರಬರಾಜು ಮಾಡುವಂತಿಲ್ಲ. ಹಾಗಾಗಿ, ಮಕ್ಕಳು ಬ್ರೂವರಿಸ್ ಮತ್ತು ಇಂತಹ ಕೇಂದ್ರಗಳ ಒಳಹೊಕ್ಕಾಗ ಮತ್ತು ಮದ್ಯವನ್ನು ಆರ್ಡರ್ ಮಾಡಿದಾಗ ಅವರ ಆಧಾರ್ ಕಾರ್ಡ್ ಅಥವಾ ಮಾನ್ಯತೆ ಹೊಂದಿದ ಗುರುತಿನ ಚೀಟಿಗಳ ಮೂಲಕ ವಯಸ್ಸಿನ ಪರಿಶೀಲನೆ ಕಡ್ಡಾಯ. ಈ ಕುರಿತಂತೆ ಎಲ್ಲ ಕೇಂದ್ರಗಳಲ್ಲಿ ಶಾಸನಬದ್ಧ ಎಚ್ಚರಿಕೆಯ ಫಲಕಗಳನ್ನು ಜಾಹೀರುಗೊಳಿಸಬೇಕು. ಇದು ಕೇವಲ ಯಾರನ್ನೋ ಮೆಚ್ಚಿಸಲು ಔಪಚಾರಿಕ ಆಚರಣೆ ಎನಿಸಬಾರದು’ ಎಂದು ಖಡಕ್ ತಾಕೀತು ಮಾಡಿದೆ.

ಮಕ್ಕಳು ಮಾದಕ ವಸ್ತುಗಳ ದಾಸರಾಗುವುದನ್ನು ತಡೆಯುವಲ್ಲಿ ಬ್ರೂವರಿಸ್ ಮತ್ತು ಇಂತಹದೇ ಕೇಂದ್ರಗಳು ಉದಾಸೀನ ತೋರಿದರೆ ಶಿಕ್ಷಾರ್ಹ ದಂಡನೆ ಖಚಿತ. ಯುವಕರ ರಕ್ಷಣೆ ನೈತಿಕ ಹೊಣೆಗಾರಿಕೆ.
ನ್ಯಾ.ಎಂ.ನಾಗಪ್ರಸನ್ನ

‘ವೈದ್ಯರು ನೀಡುವ ಔಷಧ ಚೀಟಿ ಹೊರತುಪಡಿಸಿ, ಮಕ್ಕಳಿಗೆ ಮಾದಕ ದ್ರವ್ಯ, ತಂಬಾಕು ಉತ್ಪನ್ನ ಅಥವಾ ಸೈಕೋಟ್ರೋಪಿಕ್ (ಮನಸ್ಸಿನ ಮೇಲೆ ಪರಿಣಾಮ ಬೀರುವ ಅಥವಾ ಮಾನಸಿಕ ಸ್ಥಿತಿ, ಕೇಂದ್ರ ನರಮಂಡಲದ ಚಟುವಟಿಕೆಯನ್ನು ಬದಲಾಯಿಸುವ) ವಸ್ತುವನ್ನು ನೀಡುವ ಅಥವಾ ನೀಡಲು ಕಾರಣವಾಗುವ ಯಾರೇ ಆಗಿರಲಿ ಅಂಥವರಿಗೆ ಈ ನಿಬಂಧನೆಯ ಕಠಿಣತೆ ಅನ್ವಯವಾಗುತ್ತದೆ. ಈ ನಿಟ್ಟಿನಲ್ಲಿ ಕಂಡುಬರುವ ಯಾವುದೇ ಲೋಪಗಳಿಗೆ ಆಯಾ ಬ್ರೂವರಿಸ್ ಮತ್ತು ಇಂತಹ ಕೇಂದ್ರಗಳ ನಿರ್ವಹಣೆಗಾರರನ್ನೇ ಸಂಪೂರ್ಣ ಹೊಣೆಗಾರರನ್ನಾಗಿ ಮಾಡಲಾಗುತ್ತದೆ’ ಎಂದು ನ್ಯಾಯಪೀಠ ಎಚ್ಚರಿಸಿದೆ.

ಪ್ರಾಸಿಕ್ಯೂಷನ್ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ವಾದ ಮಂಡಿಸಿದ್ದರು.

7ನೇ ಮಹಡಿಯಿಂದ ಬಿದ್ದು ಬಾಲಕ ಸಾವು

‘ರೆಯಾನ್ ಜೇಕಬ್ (15) ತನ್ನ ಸ್ನೇಹಿತರೊಂದಿಗೆ 2026ರ ಜನವರಿ 31ರಂದು ಅರ್ಜಿದಾರರು ಪಾಲದಾರರಾಗಿರುವ ಬ್ರೂವರಿಸ್‌ಗೆ ತೆರಳಿ ಮದ್ಯ ಸೇವಿಸಿ, ಧೂಮಪಾನ ಮಾಡಿ ಮನೆಗೆ ತೆರಳಿದ್ದ. ನಂತರ ತಾನು ಮದ್ಯ ಸೇವನೆ ಮಾಡಿರುವ ವಿಚಾರ ಮನೆಯಲ್ಲಿ ಗೊತ್ತಾದರೆ ತೊಂದರೆಯಾಗುತ್ತದೆ ಎಂದು ಭಯಪಟ್ಟು ತನ್ನ ಅಪಾರ್ಟ್‌ಮೆಂಟ್‌ನ ಏಳನೇ ಮಹಡಿಯಿಂದ ಕಳೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದ’ ಎಂಬ ಆರೋಪದಡಿ ರಾಜರಾಜೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲು ಮಾಡಲಾಗಿದೆ.

ಈ ಕಾರಣದಿಂದ ಪೊಲೀಸರು, ಬಾಲನ್ಯಾಯ ಮಕ್ಕಳ ರಕ್ಷಣೆ ಮತ್ತು ಆರೈಕೆ ಕಾಯ್ದೆ–2015 ಕಲಂ 77, ಕರ್ನಾಟಕ ಅಬಕಾರಿ ಕಾಯ್ದೆ–1965ರ ಕಲಂ 36(1)(ಜಿ) ಅಡಿಯಲ್ಲಿ ಚಿಟ್ಟಬಾಬು ವಿರುದ್ಧ ತನಿಖೆ ಕೈಗೊಂಡಿದ್ದರು.

28ಕ್ಕೆ ‘ಸೀರೆಯ ಸುತ್ತ’ ಕಾರ್ಯಕ್ರಮ

ಬೆಂಗಳೂರು: ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು ಕೋರಮಂಗಲದಲ್ಲಿರುವ ಇಂಡಿಯನ್ ಹೆರಿಟೇಜ್ ಅಕಾಡೆಮಿಯಲ್ಲಿ ಇದೇ 28ರಂದು ಸಂಜೆ 6.30ಕ್ಕೆ ‘ಸೀರೆಯ ಸುತ್ತ’ ಶೀರ್ಷಿಕೆಯಡಿ ವಿಶೇಷ ಕಾರ್ಯಕ್ರಮ ಆಯೋಜಿಸಿದೆ.

ಸೀರೆಯ ಸುತ್ತ ಹೆಣೆದ ಕಥೆಗಳು, ಸಂಸ್ಕೃತಿ ಮತ್ತು ಮಹಿಳಾ ಸಂವೇದನೆಗಳನ್ನು ಪರಿಚಯಿಸುವ ಕಾರ್ಯಕ್ರಮ ಇದಾಗಿದೆ. ಕಾಡುಗೊಲ್ಲ ಸಮುದಾಯದ ‘ಜುಂಜಪ್ಪನ ಕಾವ್ಯ’ವನ್ನು ಜಾನಪದ ಕಲಾವಿದರು ಪ್ರಸ್ತುತಪಡಿಸಲಿದ್ದಾರೆ. ತುಮಕೂರು ಜಿಲ್ಲೆಯ ಶಿರಾದ ‘ಜಿಗುರು ಅಕಾಡೆಮಿ ಆಫ್ ಪರ್‌ಫಾರ್ಮಿಂಗ್ ಆರ್ಟ್ಸ್’ನ ಬಿ.ಕೆ. ನರಸಿಂಹರಾಜು ನೇತೃತ್ವದಲ್ಲಿ ಕಾರ್ಯಕ್ರಮ ರೂಪುಗೊಂಡಿದೆ.

ಕಾಡುಗೊಲ್ಲರ ಆರಾಧ್ಯ ದೈವ ಜುಂಜಪ್ಪ. ಮೌಖಿಕ ಪರಂಪರೆಯ ‘ಜುಂಜಪ್ಪನ ಕಾವ್ಯ' ದಲ್ಲಿ ಆತನ ಮಹಿಮೆ, ಸಾಹಸ ಮತ್ತು ಬಲಿದಾನಗಳನ್ನು ಕೊಂಡಾಡಲಾಗುತ್ತದೆ. ಜುಂಜಪ್ಪನ ಭಕ್ತಿಯನ್ನು ಪ್ರಧಾನವಾಗಿ ಒಳಗೊಂಡ ಕಾವ್ಯವು ಕಾಡುಗೊಲ್ಲರ ಆಚರಣೆ, ದೈನಂದಿನ ಜೀವನ ಚಿತ್ರಿಸುತ್ತದೆ. ಸಮುದಾಯದ ಮಹಿಳೆಯರು ಧರಿಸುವ ಸೀರೆಗಳು, ಅದರ ಬಣ್ಣ, ಕುಸುರಿಗಳ ಕಥನಗಳನ್ನು ಕಾವ್ಯ ಬಣ್ಣಿಸುತ್ತದೆ.

ಕಲಾವಿದರಾದ ಮಂಜುನಾಥ್ ಯಲಪೇನಹಳ್ಳಿ, ಸಣ್ಣಮ್ಮ ಮತ್ತು ಸಂಗಡಿಗರು ಜುಂಜಪ್ಪನ ಕಾವ್ಯವನ್ನು ಪ್ರಸ್ತುತಪಡಿಸಲಿದ್ದಾರೆ. ವಿಮೋರ್ ಸಂಸ್ಥೆಯ ಸಂಸ್ಥಾಪಕಿ ಪವಿತ್ರಾ ಮುದ್ದಯ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನೋಂದಣಿಗೆ: https://forms.gle/hSgPjC4LBmyM23Rw9

ಕೇಂದ್ರೀಯ ವಿದ್ಯಾಲಯ ಭಾ.ವಿ.ಸಂ., ಬೆಂಗಳೂರು–560012
KENDRIYA VIDYALAYA INDIAN INSTITUTE OF SCIENCE BENGALURU-560012
Website: https://iiscbangalore.kvs.ac.in Ph: 080-23371316

ಗುತ್ತಿಗೆ ಆಧಾರದ ಮೇಲೆ ಶಿಕ್ಷಕರ ನೇರ ಸಂದರ್ಶನ

ದಿನಾಂಕ: 28.03.2026 ರಂದು (ಶನಿವಾರ) ಬೆಳಿಗ್ಗೆ 9.00 ಬೆಳಿಗ್ಗೆ 11.30ರ ವರೆಗೆ ಕೆಳಕಂಡ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ನೇರ ಸಂದರ್ಶನ ನಡೆಯಲಿದೆ.

PGT (Physics), TGT (Science) TGT (Maths), Primary Teachers, Educational Counsellor, ATL Instructor, Coach (Art & Craft)

ಅಭ್ಯರ್ಥಿಗಳು: https://samvida-sathi.kvs.gov.in ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು.

ಗಮನಿಸಿ: ಅರ್ಹತೆ, ಶೈಕ್ಷಣಿಕ ಅರ್ಹತೆ, ಸಂಭಾವನೆ ಮತ್ತು ಸಂದರ್ಶನ ದಿನಾಂಕ ಮತ್ತು ಸಮಯದ ವಿವರಗಳನ್ನು ಶಾಲಾ ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ನೀಡಲಾದ ವೇಳಾಪಟ್ಟಿಯ ಪ್ರಕಾರ ಸರಿಯಾಗಿ ಭರ್ತಿ ಮಾಡಿದ ಬಯೋಡೇಟಾ ಫಾರ್ಮ್ ಜೊತೆಗೆ ಎಲ್ಲಾ ಮೂಲ ದಾಖಲೆಗಳು / ಪ್ರಮಾಣ ಪತ್ರಗಳು ಮತ್ತು ಎಲ್ಲಾ ದಾಖಲೆಗಳ ಸ್ವಯಂ–ದೃಢೀಕೃತ ಜೆರಾಕ್ಸ್ ಪ್ರತಿಗಳೊಂದಿಗೆ ವಿದ್ಯಾಲಯದಲ್ಲಿ ವರದಿ ಮಾಡಿಕೊಳ್ಳಿ.
ಸಂದರ್ಶನಕ್ಕೆ ಹಾಜರಾಗಲು ಯಾವುದೇ ಟಿಎ / ಡಿಎ ಪಾವತಿಸಲಾಗುವುದಿಲ್ಲ.

ಸಹಿ/– ಪ್ರಾಂಶುಪಾಲರು

₹2,172 ಕೋಟಿ ಮೌಲ್ಯದ ಭೂಮಿ ಸರ್ಕಾರದ ವಶ

ಒಂದನೇ ಪುಟದಿಂದ...

‘ನ್ಯಾಯಾಲಯಗಳಲ್ಲಿ ಇರುವ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ, ತಡೆಯಾಜ್ಞೆ ತೆರವಿಗೆ ಪ್ರಯತ್ನಿಸಲಾಗುತ್ತಿದೆ’ ಎಂದು ವಿವರಿಸಿದರು.

ಭೂ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಹಿಂದೆ ಐದು ಸಾವಿರ ಪ್ರಕರಣಗಳಿದ್ದವು. ಈಗ 1,500ಕ್ಕೆ ಇಳಿದಿದೆ. ಯಶವಂತಪುರ ಹೋಬಳಿಯ ಹೇರೋಹಳ್ಳಿ ಬಳಿ ಜಮ್ನಾಲಾಲ್ ಬಜಾಜ್ ಸೇವಾ ಟ್ರಸ್ಟ್ ವಶದಲ್ಲಿದ್ದ ಜಮೀನಿನ ವಿವಾದಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ಜಿಲ್ಲಾಡಳಿತದ ಪರವಾಗಿ ತೀರ್ಪು ಬಂದಿದೆ. 270 ಎಕರೆ ಭೂಮಿಯನ್ನು ಟ್ರಸ್ಟ್‌ನಿಂದ ಹಿಂದಕ್ಕೆ ಪಡೆದು ಎಪಿಎಂಸಿಗೆ ನೀಡಲಾಗಿದೆ. ಸರ್ಜಾಪುರ ಬಳಿ 40 ಎಕರೆ ಒತ್ತುವರಿ ತೆರವುಗೊಳಿಸಿ ಹಣ್ಣಿನ ಮಾರುಕಟ್ಟೆಗೆ ನೀಡಲಾಗಿದೆ.

‘ಜಿಲ್ಲಾಡಳಿತವು ಕಠಿಣ ಕ್ರಮಗಳನ್ನು ಕೈಗೊಳ್ಳುವ ಮೂಲಕ ಸರ್ಕಾರಕ್ಕೆ ಸೇರಿದ ಆಸ್ತಿಯನ್ನು ಮರಳಿ ವಶಕ್ಕೆ ಪಡೆಯುವತ್ತ ದಿಟ್ಟಹೆಜ್ಜೆ ಇಟ್ಟಿದೆ. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಇರುವ ಪ್ರಕರಣಗಳಲ್ಲಿ ಜಿಲ್ಲಾಡಳಿತದ ಪರವಾಗಿ ಸಮರ್ಥವಾಗಿ ವಾದ ಮಾಡಲು ಅನುಭವಿ ವಕೀಲರನ್ನು ನಿಯೋಜಿಸಲಾಗಿದೆ. ಸಾರ್ವಜನಿಕ ಆಸ್ತಿಯನ್ನು ಸಂರಕ್ಷಿಸುವ ವಿಷಯದಲ್ಲಿ ಒತ್ತಡಕ್ಕೆ ಮಣಿಯುವ ಪ್ರಶ್ನೆಯೇ ಇಲ್ಲ’ ಎಂದು ಪ್ರತಿಪಾದಿಸಿದರು.

‘ಸರ್ಕಾರಿ ಭೂಮಿ ಒತ್ತುವರಿಗೆ ಸಂಬಂಧಪಟ್ಟಂತೆ ಹಲವು ವರ್ಷಗಳ ಹಿಂದೆಯೇ ಎ.ಟಿ.ರಾಮಸ್ವಾಮಿ ನೇತೃತ್ವದ ಸಮಿತಿ ಮತ್ತು ಸರ್ಕಾರಿ ಜಮೀನುಗಳ ಸಂರಕ್ಷಣೆ ಕಾರ್ಯಪಡೆ ಅಧ್ಯಕ್ಷರಾಗಿದ್ದ ವಿ.ಬಾಲಸುಬ್ರಮಣಿಯನ್ ಸಮಿತಿ ವರದಿ ನೀಡಿದೆ. ಆದರೆ, ಈ ವರದಿಗಳಲ್ಲಿ ಏಕರೂಪತೆ ಇಲ್ಲ. ಇದರಿಂದಾಗಿ ಎಷ್ಟು ಭೂಮಿ ಒತ್ತುವರಿಯಾಗಿದೆ ಎಂದು ನಿಖರವಾಗಿ ಗೊತ್ತಿಲ್ಲ. ಆದರೆ, ಆ ವರದಿಗಳಲ್ಲಿ ಉಲ್ಲೇಖವಾಗಿರುವ ಸರ್ವೆ ನಂಬರ್‌ಗಳನ್ನು ಆಧರಿಸಿ, ತಹಶೀಲ್ದಾರ್‌ಗಳಿಂದ ಬರುವ ವರದಿ ಆಧರಿಸಿ ಒತ್ತುವರಿ ತೆರವು ಮಾಡಲಾಗುತ್ತಿದೆ’ ಎಂದು ತಿಳಿಸಿದರು.

ಪ್ರಮುಖ ಅಂಶಗಳು
- 2025ರ ಮಾರ್ಚ್‌ನಿಂದ ನಿರಂತರ ಕಾರ್ಯಾಚರಣೆ
- ಭೂ ಒತ್ತುವರಿದಾರರ ವಿರುದ್ಧ ಜಿಲ್ಲಾಡಳಿತ ಕಠಿಣ ಕ್ರಮ

ತಾಲ್ಲೂಕು	ತೆರವಾದ ವಿಸ್ತೀರ್ಣ (ಎಕರೆಗಳಲ್ಲಿ)	ಮೌಲ್ಯ (₹ಕೋಟಿಗಳಲ್ಲಿ)
ಬೆಂಗಳೂರು ಪೂರ್ವ	45.15	243.20
ಆನೇಕಲ್	91.18	199.26
ಬೆಂಗಳೂರು ದಕ್ಷಿಣ	157.04	334.08
ಯಲಹಂಕ	118	973.05
ಬೆಂಗಳೂರು ಉತ್ತರ	120.22	421.65
ಒಟ್ಟು	533.16	2,172.41

ಸರ್ಕಾರಿ ಭೂಮಿ ಎಲ್ಲೆಲ್ಲಿ ಒತ್ತುವರಿ ಆಗಿದೆ ಎಂದು ತಹಶೀಲ್ದಾರ್‌ಗಳ ಮೂಲಕ ಗುರುತಿಸಿ, ಅದನ್ನು ತೆರವುಗೊಳಿಸುವ ಕಾರ್ಯವನ್ನು ಮಾಡುತ್ತಿದ್ದೇವೆ. ಬಹುತೇಕ ಈ ಕಾರ್ಯ ಮುಗಿಯುವ ಹಂತಕ್ಕೆ ಬಂದಿದೆ
ಜಿ. ಜಗದೀಶ್, ನಗರ ಜಿಲ್ಲಾಧಿಕಾರಿ

ಸ್ವಾವಲಂಬಿ ಸಾರಥಿ: ವಾಹನ ಹಸ್ತಾಂತರ

ಬೆಂಗಳೂರು:‘ಸ್ವಾವಲಂಬಿ ಸಾರಥಿ’ ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಹನಗಳನ್ನು ವಿತರಣೆ ಮಾಡಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ವಿವಿಧ ಸಮುದಾಯಗಳ ಅಭಿವೃದ್ಧಿ ನಿಗಮಗಳ ವತಿಯಿಂದ ವಿಧಾನಸೌಧದ ಪೂರ್ವ ದ್ವಾರದ ಮುಂಭಾಗ ಬುಧವಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ಎಸ್. ತಂಗಡಗಿ, ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್, ವಿವಿಧ ನಿಗಮಗಳ ಅಧ್ಯಕ್ಷರು, ಶಾಸಕರು ಉಪಸ್ಥಿತರಿದ್ದರು.

‘ಸ್ವಾವಲಂಬಿ ಸಾರಥಿ’ ಯೋಜನೆಯಡಿ ವಾಹನಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು. ಡಿ.ಕೆ.ಶಿವಕುಮಾರ್, ಶಿವರಾಜ ಎಸ್. ತಂಗಡಗಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಅಪಘಾತದಲ್ಲಿ ಮೃತಪಟ್ಟ ಮಹಿಳೆಯ ಶವ ಎಸೆದಿದ್ದ ಚಾಲಕ

ಕಸದಲ್ಲಿ ಮೃತದೇಹ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಆಟೊ ಡಿಕ್ಕಿಯಾಗಿ ಮೃತಪಟ್ಟ ಮಹಿಳೆಯ ಶವವನ್ನು ಕೆಂಗೇರಿಯ ವಳಗೆರೆಹಳ್ಳಿ ಬಳಿ, ಕಸದ ರಾಶಿಯಲ್ಲಿ ಎಸೆದು ಪರಾರಿಯಾಗಿದ್ದ ಆಟೊ ಚಾಲಕನನ್ನು ಕೆಂಗೇರಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಬಸವೇಗೌಡ ಬಂಧಿತ ಆರೋಪಿ.

ಮಹದೇಶ್ವರ ಬಡಾವಣೆಯ ನಿವಾಸಿ ಕೆಂಪಮ್ಮ (45) ಅವರ ಮೃತದೇಹವನ್ನು ಆರೋಪಿ ಚಾಲಕ ಕಸದ ರಾಶಿಗೆ ಎಸೆದು ಪರಾರಿಯಾಗಿದ್ದ. ಬಸ್ ನಿಲ್ದಾಣದ ಹಿಂಭಾಗದ ಕಸದ ರಾಶಿಯಲ್ಲಿ ಮಹಿಳೆಯ ಮೃತದೇಹ ಪತ್ತೆಯಾಗಿತ್ತು. ಕೊಲೆಯ ಶಂಕೆ ವ್ಯಕ್ತವಾಗಿತ್ತು. ಪೊಲೀಸರು ತನಿಖೆ ಆರಂಭಿಸಿದಾಗ, ಆಟೊ ಡಿಕ್ಕಿಯಾಗಿ ಮೃತಪಟ್ಟಿರುವುದು ಹಾಗೂ ಆರೋಪಿ ಮೃತದೇಹ ಎಸೆದು ಪರಾರಿ ಆಗಿದ್ದು ಪತ್ತೆಯಾಗಿತ್ತು.

ಮಾರ್ಚ್ 22ರ ರಾತ್ರಿ ಕೆಂಪಮ್ಮ ಅವರಿಗೆ ಆರೋಪಿ ಆಟೊ ಡಿಕ್ಕಿ ಹೊಡೆಸಿದ್ದ. ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡ ಮಹಿಳೆಯನ್ನು ಆರೋಪಿ ಆಸ್ಪತ್ರೆಗೆ ಕರೆದೊಯ್ಯಲು ಯತ್ನಿಸಿದ್ದ. ಆದರೆ, ಮಾರ್ಗ ಮಧ್ಯೆಯೇ ಕೆಂಪಮ್ಮ ಮೃತಪಟ್ಟಿದ್ದರು.

ಮಹಿಳೆ ಮೃತಪಟ್ಟಿದ್ದರಿಂದ ಗಾಬರಿಯಾದ ಚಾಲಕ, ಮೃತದೇಹವನ್ನು ರಸ್ತೆ ಬದಿಯ ಕಸದ ರಾಶಿಗೆ ಎಸೆದು ಪರಾರಿಯಾಗಿದ್ದ. ಮರುದಿನ ಕಸದ ರಾಶಿಯಲ್ಲಿ ಮಹಿಳೆಯ ಶವ ನೋಡಿದ ಸ್ಥಳೀಯರು ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿ ವಿಷಯ ತಿಳಿಸಿದ್ದರು. ಬಳಿಕ ಸ್ಥಳಕ್ಕೆ ಹೋಗಿ ಪೊಲೀಸರು ಪರಿಶೀಲನೆ ನಡೆಸಿದ್ದರು.

ಘಟನಾ ಸ್ಥಳದ ಸುತ್ತ ಮುತ್ತಲಿನ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಿದಾಗ ಸಾವಿನ ರಹಸ್ಯ ಬಯಲಾಯಿತು. ಕೆಂಪಮ್ಮ, ರಸ್ತೆ ದಾಟುವಾಗ ಅಪಘಾತ ಸಂಭವಿಸಿತ್ತು.

ಸಿಸಿಟಿವಿ ಕ್ಯಾಮೆರಾದ ದೃಶ್ಯಾವಳಿಯಲ್ಲಿ ಆಟೊದ ನೋಂದಣಿ ಸಂಖ್ಯೆ ಸೆರೆಯಾಗಿತ್ತು. ಅದರ ಸುಳಿವು ಆಧರಿಸಿ, ಚಾಲಕನನ್ನು ಪತ್ತೆ ಮಾಡಲಾಯಿತು ಎಂದು ಪೊಲೀಸರು ಹೇಳಿದರು.

ಭಯದಿಂದ ಮಹಿಳೆಯ ಮೃತದೇಹವನ್ನು ಎಸೆದು ಹೋಗಿದ್ದೆ ಎಂಬುದಾಗಿ ಆರೋಪಿ ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದರು.

ಮಂಡ್ಯ ಜಿಲ್ಲೆಯ ಕೆಂಪಮ್ಮ, ವಳಗೆರೆಹಳ್ಳಿಯ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಪುತ್ರಿ ಪಕ್ಕದ ರಸ್ತೆಯಲ್ಲಿ ಪತಿ ಹಾಗೂ ಮಕ್ಕಳೊಂದಿಗೆ ಪ್ರತ್ಯೇಕವಾಗಿ ವಾಸವಾಗಿದ್ದರು. ಹೂವಿನ ವ್ಯಾಪಾರ ಮಾಡುತ್ತಿದ್ದ ಕೆಂಪಮ್ಮ, ಬಿಡುವಿನ ವೇಳೆಯಲ್ಲಿ ಮನೆಗೆಲಸಕ್ಕೆ ಹೋಗುತ್ತಿದ್ದರು ಎಂದು ಮೂಲಗಳು ಹೇಳಿವೆ.

ಬಸವೇಗೌಡ

ಕೆಂಪಮ್ಮ

ಲೈಂಗಿಕ ಕಿರುಕುಳ: ಇನ್‌ಸ್ಪೆಕ್ಟರ್ ವಿರುದ್ಧ ತನಿಖೆ

ಬೆಂಗಳೂರು: ‘ಕೋಣನಕುಂಟೆ ಠಾಣೆಯ ಇನ್‌ಸ್ಪೆಕ್ಟರ್ ಪಾಪಣ್ಣ ಅವರು ಲೈಂಗಿಕ ಕಿರುಕುಳ ನೀಡಿದ್ದಾರೆ’ ಎಂದು ಆರೋಪಿಸಿ ರೌಡಿಶೀಟರ್ ಯಶಸ್ವಿನಿಗೌಡ ಅವರು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರಿಗೆ ದೂರು ನೀಡಿದ್ದಾರೆ. ಆಡಿಯೊ ಸಂಭಾಷಣೆ ಹಾಗೂ ವಾಟ್ಸ್‌ಆ್ಯಪ್ ಸಂದೇಶಗಳ ಸಮೇತ ದೂರು ನೀಡಿದ್ದಾರೆ.

ಇನ್‌ಸ್ಪೆಕ್ಟರ್ ವಿರುದ್ಧ ಇಲಾಖಾ ತನಿಖೆ ನಡೆಸಿ ವರದಿ ನೀಡುವಂತೆ ದಕ್ಷಿಣ ವಿಭಾಗದ ಡಿಸಿಪಿ ಅನಿತಾ ಹದ್ದಣ್ಣನವರಿಗೆ ನಗರ ಪೊಲೀಸ್ ಕಮಿಷನರ್ ಸೂಚಿಸಿದ್ದಾರೆ.

‘2017ರಲ್ಲಿ ನನ್ನ ವಿರುದ್ಧ ಬಸವನಗುಡಿ ಠಾಣೆಯಲ್ಲಿ ರೌಡಿಶೀಟರ್ ತೆರೆಯಲಾಗಿತ್ತು. ಆಗ ಪಾಪಣ್ಣ ಠಾಣಾಧಿಕಾರಿ ಆಗಿದ್ದರು. ಆಗ ನನ್ನ ಮೊಬೈಲ್ ಸಂಖ್ಯೆ ಪಡೆದುಕೊಂಡಿದ್ದರು. ಅಂದಿನಿಂದ ನಿತ್ಯ ಸಂದೇಶ ಕಳುಹಿಸುತ್ತಿದ್ದರು. ಬಳಿಕ ಡಿಸಿಪಿಗೂ ದೂರು ನೀಡಿದ್ದೆ. ಆಗ ಪಾಪಣ್ಣ ಅವರು ಬೆದರಿಕೆ ಹಾಕಿದ್ದರು’ ಎಂದು ಯಶಸ್ವಿನಿಗೌಡ ಮಾಧ್ಯಮದವರಿಗೆ ತಿಳಿಸಿದರು.

ಅಕ್ಕನ ಕೊಲೆಗೆ ಯತ್ನ: ಆರೋಪಿಗಳ ಬಂಧನಕ್ಕೆ ತಂಡ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯ ಅಂಬೇಡ್ಕರ್ ನಗರದಲ್ಲಿ ನೆಲಸಿದ್ದ ಮಹಿಳೆ ಮಹೇಶ್ವರಿ (59) ಅವರ ಕೊಲೆಗೆ ಯತ್ನಿಸಿದ್ದ ಆರೋಪಿಗಳ ಬಂಧನಕ್ಕೆ ವಿಶೇಷ ತಂಡಗಳನ್ನು ರಚಿಸಲಾಗಿದೆ.

ಗಂಭೀರವಾಗಿ ಗಾಯಗೊಂಡಿರುವ ಮಹಿಳೆಯನ್ನು ಸೇಂಟ್ ಜಾನ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಮಹಿಳೆಯ ಸಹೋದರ ಮಣಿಕಂಠನ್ ಹಾಗೂ ಅವರ ಪುತ್ರ ಕಿರಣ್, ಸಹಚರರು ಕೃತ್ಯ ಎಸಗಿದ್ದಾರೆ ಎಂಬುದು ಗೊತ್ತಾಗಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಬುಧವಾರ ಬೆಳಿಗ್ಗೆ ಮಹಿಳೆಯ ಮನೆಗೆ ನುಗ್ಗಿದ್ದ ಆರೋಪಿಗಳು ಚಾಕುವಿನಿಂದ ಇರಿದು, ಕಬ್ಬಿಣದ ರಾಡಿನಿಂದ ಹಲ್ಲೆ ನಡೆಸಿ ಕೊಲೆಗೆ ಯತ್ನಿಸಿದ್ದರು.

ಮಹೇಶ್ವರಿ ಅವರ ಮೊಮ್ಮಗಳನ್ನು ಕಿರಣ್ ಮದುವೆಯಾಗಿದ್ದರು. ದಂಪತಿ ಮಧ್ಯೆ ಭಿನ್ನಾಭಿಪ್ರಾಯ ಇತ್ತು. ಹೀಗಾಗಿ, ಮಹೇಶ್ವರಿ ಮನೆಗೆ ಮೊಮ್ಮಗಳು ಬಂದು ನೆಲಸಿದ್ದರು. ಈ ನಡುವೆ ಪುತ್ರನಿಗೆ ತಿಳಿವಳಿಕೆ ಹೇಳುವಂತೆ, ತಮ್ಮ ಸಹೋದರ ಮಣಿಕಂಠನ್‌ಗೆ ಕರೆ ಮಾಡಿ ಮಹೇಶ್ವರಿ ತಿಳಿಸಿದ್ದರು. ಇದರಿಂದ ಕೋಪಗೊಂಡಿದ್ದ ಮಣಿಕಂಠನ್, ಪುತ್ರನ ಜತೆಗೆ ಬಂದು ಅಕ್ಕನ ಕೊಲೆಗೆ ಯತ್ನಿಸಿದ್ದರು ಎಂದು ಪೊಲೀಸರು ಹೇಳಿದರು.

ಕರ್ನಾಟಕಕ್ಕೆ ಅಧಿಕಾರ ಇಲ್ಲ: ಫಡಣವೀಸ್

ಮುಂಬೈ: ‘ಮಹಾರಾಷ್ಟ್ರದ ಮಾಜಿ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರ ಸಾವಿಗೆ ಕಾರಣವಾದ ಬಾರಾಮತಿ ವಿಮಾನ ದುರಂತದ ಬಗ್ಗೆ ಶೂನ್ಯ ಎಫ್‌ಐಆರ್ ದಾಖಲಿಸಿಕೊಳ್ಳುವ ಅಧಿಕಾರ ನೆರೆಯ ರಾಜ್ಯ ಕರ್ನಾಟಕಕ್ಕೆ ಇಲ್ಲ’ ಎಂದು ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹೇಳಿದ್ದಾರೆ.

‘ಮಹಾರಾಷ್ಟ್ರದ ಹೆಸರು ಕೆಡಿಸಲು ಕರ್ನಾಟಕದಲ್ಲಿ ಜೀರೊ ಎಫ್‌ಐಆರ್ ದಾಖಲಿಸಲಾಗಿದೆ’ ಎಂದು ಅವರು ದೂರಿದ್ದಾರೆ.

ಅಜಿತ್ ಪವಾರ್ ಅವರ ಸಾವು ಕೇವಲ ಅಪಘಾತವಲ್ಲ, ಅದೊಂದು ವ್ಯವಸ್ಥಿತ ಕೊಲೆ’ ಎಂದು ಆರೋಪಿಸಿ ಅವರ ಅಳಿಯ ರೋಹಿತ್ ರಾಜೇಂದ್ರ ಪವಾರ್ ಅವರು ಬೆಂಗಳೂರಿನ ಹೈಗ್ರೌಂಡ್ಸ್ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಸೋಮವಾರ ಎಫ್‌ಐಆರ್ ದಾಖಲಾಗಿತ್ತು.

ದೇವೇಂದ್ರ ಫಡಣವೀಸ್

वित्त मंत्रालय MINISTRY OF FINANCE

ಜಿಎಸ್‌ಟಿ ತೆರಿಗೆದಾತರೇ ಗಮನಿಸಿ!

ಸರಾಸರಿ ವಾರ್ಷಿಕ ವಹಿವಾಟು# ನಿಗದಿತ ಮಿತಿಯೊಳಗೆ# ಇರುವ ತೆರಿಗೆದಾತರು, 31ನೇ ಮಾರ್ಚ್, 2026 ರೊಳಗೆ ತಮ್ಮ ಹ.ವ. 2026–2027ನೇ ಸಾಲಿನ ಜಿಎಸ್‌ಟಿ ಕಂಪೋಸಿಷನ್ ಸ್ಕೀಮ್ ಆಯ್ಕೆ ಮಾಡಿಕೊಳ್ಳಬಹುದು

ಜಿಎಸ್‌ಟಿ ಕಂಪೋಸಿಷನ್ ಸ್ಕೀಮ್ ಪಡೆದುಕೊಳ್ಳಲು ಬಯಸುವ ಅರ್ಹ ತೆರಿಗೆದಾತರು, ಜಿಎಸ್‌ಟಿ ಪೋರ್ಟಲ್‌ನಲ್ಲಿ (www.gst.gov.in) ಕೆಳಕಂಡ ಹಂತಗಳನ್ನು ಅನುಸರಿಸಬೇಕು:–

1. ಟ್ಯಾಕ್ಸ್‌ಪೇಯರ್ಸ್ ಇಂಟರ್‌ಫೇಸ್‌ಗೆ ಲಾಗಿನ್ ಆಗಿರಿ
2. ಕಂಪೋಸಿಷನ್ ಲೆವಿ ಪಡೆದುಕೊಳ್ಳಲು ಸರ್ವೀಸಸ್ > ರಿಜಿಸ್ಟ್ರೇಶನ್ > ಅಪ್ಲಿಕೇಶನ್ ಲಿಂಕ್ ತೆರೆಯಿರಿ
3. ಜಿಎಸ್‌ಟಿ ಸಿಎಂಪಿ–02 ನಮೂನೆ ಭರ್ತಿ ಮಾಡಿರಿ ಮತ್ತು ಸಲ್ಲಿಸಿರಿ

ಈಗಾಗಲೇ ಕಂಪೋಸಿಷನ್ ಸ್ಕೀಮ್ ಆಯ್ಕೆ ಮಾಡಿಕೊಂಡಿರುವ ಅರ್ಹ ತೆರಿಗೆದಾತರು, ಒಂದು ವೇಳೆ ಅರ್ಹರಾಗಿದ್ದಲ್ಲಿ, ಅಂತಹವರು ಸಿಎಂಪಿ–02 ನಮೂನೆ ಭರ್ತಿ ಮಾಡುವ ಅವಶ್ಯಕತೆ ಇರುವುದಿಲ್ಲ.

- ಸುಲಭ ಮತ್ತು ಅನುಕೂಲಕರ ಅನುಸರಣೆ
- ಆಕರ್ಷಕ ತೆರಿಗೆ ದರಗಳು
- ಕನಿಷ್ಠ ಅನುಸರಣಾ ಅಗತ್ಯಗಳು
- ಸ್ವಯಂಚಾಲಿತ ಮುಂದುವರಿಕೆ/ನವೀಕರಣ ಮತ್ತು ಆಯ್ಕೆ ಕೈಬಿಡಲು ಸುಲಭ
- ಸರಕುಗಳು ಮತ್ತು ಸೇವೆಗಳು ಎರಡನ್ನೂ ಪೂರೈಕೆ ಮಾಡುವವರಿಗೆ ಲಭ್ಯ
- ಅತಿ ಕಡಿಮೆ ಪುಸ್ತಕ ನಿರ್ವಹಣೆ

* ಪೂರೈಕೆದಾರರ ವಿಧ		# ಹ.ವ. 2025–26ರ ಅವಧಿಯಲ್ಲಿ ಸರಾಸರಿ ವಾರ್ಷಿಕ ವಹಿವಾಟು
ಸರಕುಗಳ ಪೂರೈಕೆದಾರರು	ನಿಗದಿತ 08 ರಾಜ್ಯಗಳಲ್ಲಿ ನೋಂದಾಯಿತ ತೆರಿಗೆದಾತರು	ರೂ. 75 ಲಕ್ಷದವರೆಗೆ
	ಇನ್ನಿತರ ರಾಜ್ಯಗಳಲ್ಲಿ ನೋಂದಾಯಿತ ತೆರಿಗೆದಾತರು	ರೂ. 150 ಲಕ್ಷದವರೆಗೆ
ಸೇವೆಗಳ ಪೂರೈಕೆದಾರರು		ರೂ. 50 ಲಕ್ಷದವರೆಗೆ

ದಯವಿಟ್ಟು ಹೆಚ್ಚಿನ ವಿವರಗಳಿಗಾಗಿ, ಸಿಜಿಎಸ್‌ಟಿ ಆಕ್ಟ್‌ನ ಸೆಕ್ಷನ್ 10, ಸಿಜಿಎಸ್‌ಟಿ ರೂಲ್ಸ್‌ನ ರೂಲ್ 3–7 ಮತ್ತು ಸೆಂಟ್ರಲ್ ಟ್ಯಾಕ್ಸ್‌ನ ದಿನಾಂಕ 07.03.2019ರ ಅಧಿಸೂಚನೆ ಸಂ. 14/2019 ಪರಿಶೀಲಿಸಿರಿ

ಜಿಎಸ್‌ಟಿ ಕಂಪೋಸಿಷನ್ ಸ್ಕೀಮ್ : ಸಣ್ಣ ತೆರಿಗೆದಾತರಿಗೆ ಭಾರಿ ಲಾಭಗಳು

@cbicindia @cbic_india @cbicindia @CBICINDIA @CBIC india

CBC 15502/13/0051/2526

> ಆರ್ಥಿಕ ಹಿಂಜರಿತ ಬರುತ್ತದೆ, ಷೇರುಪೇಟೆ ಕುಸಿಯುತ್ತದೆ. ಅಂಥವು ಎದುರಾಗುವುದು ಅರ್ಥವಾಗದಿದ್ದರೆ, ವ್ಯಕ್ತಿಯಲ್ಲಿ ಸಿದ್ಧತೆ ಇಲ್ಲ ಎಂದು ಅರ್ಥ. ಆತನಿಗೆ ಮಾರುಕಟ್ಟೆಯಲ್ಲಿ ಬಹಳ ಒಳಿತೇನೂ ಆಗುವುದಿಲ್ಲ.
> – ಪೀಟರ್ ಲಿಂಚ್, ಹೂಡಿಕೆದಾರ

ದುಡ್ಡಿನಂಥಾ ಮಾತು

ಬಾಡಿಗೆ ಆದಾಯಕ್ಕೆ ಯಾವುದು ಸೂಕ್ತ?

• ಭವ್ಯಾ ಬಗ್ರೇಚಾ

ಆಸ್ತಿ ಖರೀದಿಸುವುದು ಹಣಕಾಸಿನ ವಿಚಾರದಲ್ಲಿ ಯಶಸ್ಸು ಕಾಣುವುದಕ್ಕೆ ಸಮ ಎಂದು ತಲೆಮಾರುಗಳಿಂದ ಭಾವಿಸಲಾಗಿದೆ. ರಿಯಲ್ ಎಸ್ಟೇಟ್ ಆಸ್ತಿ ಹೊಂದುವುಕ್ಕೆ ನಮ್ಮ ಸಂಸ್ಕೃತಿಯಲ್ಲಿ ವಿಶೇಷವಾದ ಸ್ಥಾನವಿದೆ. ರಿಯಲ್ ಎಸ್ಟೇಟ್ ಆಸ್ತಿ ಎಂಬುದು ದೀರ್ಘಕಾಲ ಬಾಳಿಕೆ ಬರುವ ಸುರಕ್ಷಿತ ಸಂಪತ್ತು ಎಂಬ ನಂಬಿಕೆಯು ಮೊದಲಿನಿಂದಲೂ ಇದೆ. ಮೊದಲ ಬಾರಿಗೆ ಹೂಡಿಕೆ ಮಾಡುತ್ತಿರುವ ಹಲವರ ಪಾಲಿಗೆ ರಿಯಲ್ ಎಸ್ಟೇಟ್ ಆಸ್ತಿಯು ಸ್ಥಿರತೆಯನ್ನು, ಅನುಭವಿಸಬಹುದಾದ ಹಾಗೂ ದೀರ್ಘಾವಧಿಯಲ್ಲಿ ಹೆಚ್ಚಿನ ಸಂಪತ್ತು ಸೃಷ್ಟಿಸಿಕೊಡುವ ಹೂಡಿಕೆಯಾಗಿದೆ.

ಆದರೆ ರಿಯಲ್ ಎಸ್ಟೇಟ್ ವಲಯದಲ್ಲಿನ ಹೂಡಿಕೆ ಸ್ವರೂಪ ಬದಲಾಗುತ್ತಿದೆ. ಬಹಳ ಉತ್ತಮ ಗುಣಮಟ್ಟದ ಹಾಗೂ ಆದಾಯ ತಂದುಕೊಡುವ ಆಸ್ತಿಗಳಾದ ಕಚೇರಿ ಕಟ್ಟಡಗಳು, ಮಾಲ್‌ಗಳು ಮತ್ತು ಗೋದಾಮುಗಳ ಮೇಲೆ ಹೂಡಿಕೆ ಮಾಡಲು ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್‌ಗಳು (ಆರ್‌ಇಐಟಿ) ಅವಕಾಶ ಕಲ್ಪಿಸಿಕೊಡುತ್ತಿದೆ. ಷೇರುಗಳ ಮೇಲೆ ಹೂಡಿಕೆ ಮಾಡುವ ಮಾದರಿಯಲ್ಲಿಯೇ ಇವುಗಳಲ್ಲಿಯೂ ಹಣ ತೊಡಗಿಸಬಹುದು. ಬಾಡಿಗೆ ಆದಾಯ ಬಯಸುವ ಹೂಡಿಕೆದಾರರು ಭಾರಿ ಮೊತ್ತವನ್ನು ತೊಡಗಿಸದೆಯೇ, ಆಸ್ತಿ ಮಾಲೀಕರಿಗೆ ಇರುವ ತಲೆಬಿಸಿಗಳನ್ನು ಅನುಭವಿಸದೆಯೇ ಆ ಆದಾಯ ಪಡೆಯಬಹುದು.

ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಆರ್‌ಇಐಟಿಗಳಿಗೆ ಸಂಬಂಧಿಸಿದ ನಿಯಮಗಳನ್ನು 2014ರಲ್ಲಿ ರೂಪಿಸಿ, ಜಾರಿಗೆ ತಂದಿತು. ಈ ನಿಯಮಗಳ ಅಡಿ ಆರ್‌ಇಐಟಿಗಳು 2019ರಲ್ಲಿ ಭಾರತದಲ್ಲಿ ಆರಂಭವಾದವು. ಈಗ ಭಾರತದಲ್ಲಿ ಷೇರುಪೇಟೆ ನೋಂದಾಯಿತ ಐದು ಆರ್‌ಇಐಟಿಗಳು ಇವೆ. ಈ ಐದು ಆರ್‌ಇಐಟಿಗಳು ಭಾರತದಲ್ಲಿ ನಿರ್ವಹಿಸುತ್ತಿರುವ ಆಸ್ತಿಗಳ ಒಟ್ಟು ಮೌಲ್ಯ (ಎಯುಎಂ) ₹2.5 ಲಕ್ಷ ಕೋಟಿಯಷ್ಟಿದೆ. ಇವುಗಳ ಮಾರುಕಟ್ಟೆ ಬಂಡವಾಳದ ಮೌಲ್ಯವು ₹1.75 ಲಕ್ಷ ಕೋಟಿಗಿಂತ ಹೆಚ್ಚಾಗಿದೆ. ಇವು ದೇಶದಾದ್ಯಂತ ನಿರ್ವಹಣೆ ಮಾಡುತ್ತಿರುವ 'ಗ್ರೇಡ್ ಎ' ವಾಣಿಜ್ಯ ಕಟ್ಟಡಗಳ ವಿಸ್ತೀರ್ಣವು 18.50 ಕೋಟಿ ಚದರ ಅಡಿಗಳಷ್ಟಿದೆ (2025ರ ಡಿಸೆಂಬರ್ 31ರವರೆಗಿನ ಮಾಹಿತಿ). ದೇಶದಲ್ಲಿ ಆರ್‌ಇಐಟಿ ಮಾರುಕಟ್ಟೆಯನ್ನು ವಿಸ್ತರಿಸುವ ಉದ್ದೇಶದಿಂದ, ಸಣ್ಣ ಮತ್ತು ಮಧ್ಯಮ ಗಾತ್ರದ ಆರ್‌ಇಐಟಿಗಳಿಗೆ (ಅಂದರೆ ಎಸ್‌ಎಂ ಆರ್‌ಇಐಟಿ) ಅನ್ವಯವಾಗುವ ನಿಯಮಗಳನ್ನು ಕೂಡ ಸೆಬಿ ಜಾರಿಗೆ ತಂದಿದೆ.

ಇವೆಲ್ಲವುಗಳ ಕಾರಣದಿಂದಾಗಿ, ಕಡಿಮೆ ಬಂಡವಾಳದೊಂದಿಗೆ ನಿಯಮಿತವಾದ ಆದಾಯ ಬಯಸುವವರಿಗೆ, ದೀರ್ಘಾವಧಿಯಲ್ಲಿ ಸಂಪತ್ತು ಸೃಷ್ಟಿಸುವ ಉದ್ದೇಶ ಇರುವವರಿಗೆ, ಹಣದುಬ್ಬರ ಪ್ರಮಾಣ ಮೀರಿದ ಗಳಿಕೆ ತಂದುಕೊಡುವ ವೈವಿಧ್ಯಮಯ ಪೋರ್ಟ್‌ಫೋಲಿಯೊ ಹೊಂದಲು ಇಚ್ಛಿಸುವವರಿಗೆ ಆರ್‌ಇಐಟಿಗಳು ಆಕರ್ಷಕವಾದ ಹೂಡಿಕೆ ಆಯ್ಕೆ.

ಸಾಂಪ್ರದಾಯಿಕ ಬಗೆಯಲ್ಲಿ ರಿಯಲ್ ಎಸ್ಟೇಟ್ ಆಸ್ತಿಯನ್ನು ಖರೀದಿಸಬೇಕೋ ಅಥವಾ ಆಧುನಿಕವಾದ ಆರ್‌ಇಐಟಿ ಯೂನಿಟ್‌ಗಳನ್ನು ಖರೀದಿಸಬೇಕೋ ಎಂಬ ಸಂದಿಗ್ಧದಲ್ಲಿ ಇರುವವರಿಗೆ, ಮೊದಲ ಹೆಜ್ಜೆಯನ್ನು ಇರಿಸಲು ನೆರವಾಗುವ, ವಾಸ್ತವಕ್ಕೆ ಹತ್ತಿರವಾದ ವಿಶ್ಲೇಷಣೆ ಇಲ್ಲಿದೆ.

ಲೇಖಕಿ ವೆಲ್ತ್ ಕಂಪನಿ ಅಸೆಟ್ ಮ್ಯಾನೇಜ್ಮೆಂಟ್ ಪ್ರೈ.ಲಿ. ಕಂಪನಿಯ ನಿಧಿ ನಿರ್ವಾಹಕಿ

ಕಲೆ: ಸಂತೋಷ್ ಸಸಿಹಿತ್ಲು

ಆರಂಭಿಕ ಹೆಜ್ಜೆ ಇರಿಸುವವರಿಗೆ ಯಾವುದು ಸೂಕ್ತ?

ಇದಕ್ಕೆ ಉತ್ತರ ಮೂರು ಅಂಶಗಳನ್ನು ಒಳಗೊಂಡಿದೆ. ಬಂಡವಾಳದ ಲಭ್ಯತೆ, ಸಮಯದ ಲಭ್ಯತೆ ಮತ್ತು ರಿಸ್ಕ್ ತೆಗೆದುಕೊಳ್ಳುವ ಸಾಮರ್ಥ್ಯ ಆ ಮೂರು ಅಂಶಗಳು.

ಉಳಿತಾಯದ ಹಣವು ಗಣನೀಯ ಮಟ್ಟದಲ್ಲಿ ಇದೆ ಎಂದಾದರೆ, ಸಾಲ ಮಾಡಲು ಸಿದ್ಧವಿರುವುದಾದರೆ, ದೀರ್ಘ ಅವಧಿಗೆ ಆಸ್ತಿಯನ್ನು ಖುದ್ದಾಗಿ ನಿರ್ವಹಿಸಲು ಸಿದ್ಧವಾಗಿದ್ದರೆ ಭೌತಿಕವಾದ ರಿಯಲ್ ಎಸ್ಟೇಟ್ ಆಸ್ತಿಯನ್ನು ಖರೀದಿಸುವುದು ಸೂಕ್ತವಾಗಬಹುದು.

ಆದರೆ ಸೀಮಿತ ಬಂಡವಾಳ, ವೃತ್ತಿಬದುಕಿನ ಒತ್ತಡ, ನಗದೀಕರಣಕ್ಕೆ ಆದ್ಯತೆ, ರಿಸ್ಕ್ ಒಂದೇ ಕಡೆ ಇರುವುದು ಬೇಡ ಎನ್ನುವವರಿಗೆ ಆರ್‌ಇಐಟಿಗಳು ಹೆಚ್ಚು ಅನುಕೂಲಕರವಾದ ಆರಂಭಿಕ ಹೂಡಿಕೆ ಆಯ್ಕೆ ಆಗುತ್ತವೆ. ಇವು ಪ್ರೀಮಿಯಂ ವರ್ಗದ ವಾಣಿಜ್ಯ ಆಸ್ತಿಗಳಲ್ಲಿ ಹಣ ತೊಡಗಿಸಲು ದಾರಿ ಮಾಡಿಕೊಡುತ್ತವೆ. ಈ ಹೂಡಿಕೆಗಳಿಂದ ನಿರಂತರ ಆದಾಯ ಸಿಗುತ್ತದೆ. ಇದರ ಜೊತೆಯಲ್ಲೇ, ಆಸ್ತಿ ನಿರ್ವಹಣೆಯ ಒತ್ತಡ ಇರುವುದಿಲ್ಲ.

ಹೂಡಿಕೆ ಜಗತ್ತಿನಲ್ಲಿ ಆರಂಭಿಕ ಹೆಜ್ಜೆಗಳನ್ನು ಇರಿಸುತ್ತಿರುವವರಿಗೆ ಆರ್‌ಇಐಟಿಗಳು ಹೇಳಿಮಾಡಿಸಿದ ಮೊದಲ ಹೆಜ್ಜೆ ಇದ್ದಂತೆ. ಆಸ್ತಿಗಳಲ್ಲಿನ ಹೂಡಿಕೆಯು ಹೇಗೆ ಆದಾಯ ತಂದುಕೊಡುತ್ತದೆ ಎಂಬುದನ್ನು ಇವು ಕಲಿಸುತ್ತವೆ, ಸ್ಥಿರವಾದ ಆದಾಯ ತಂದುಕೊಡುತ್ತವೆ ಮತ್ತು ರಿಯಲ್ ಎಸ್ಟೇಟ್ ಆಸ್ತಿಗಳ ಬಗ್ಗೆ ಪರಿಚಯ ಮಾಡಿಸಿಕೊಡುತ್ತವೆ.

ರಿಯಲ್ ಎಸ್ಟೇಟ್ ಆಸ್ತಿಯ ಖರೀದಿ

ಬಾಡಿಗೆ ಆದಾಯ ಪಡೆಯಲು ಇರುವ ಬಹಳ ಜನಪ್ರಿಯವಾದ ಮಾರ್ಗ ವಸತಿ ಅಥವಾ ವಾಣಿಜ್ಯ ಉದ್ದೇಶದ ರಿಯಲ್ ಎಸ್ಟೇಟ್ ಆಸ್ತಿಯನ್ನು ಖರೀದಿಸಿ, ಅದನ್ನು ಬಾಡಿಗೆಗೆ ನೀಡುವುದು.

ಒಳಿತು: ಭೌತಿಕವಾದ ರಿಯಲ್ ಎಸ್ಟೇಟ್ ಆಸ್ತಿಯ ಖರೀದಿಯಲ್ಲಿ ಇರುವ ಅತಿದೊಡ್ಡ ಆಕರ್ಷಣೆ ಎಂದರೆ ಅದರ ಮೇಲೆ ಮಾಲೀಕರಿಗೆ ನಿಯಂತ್ರಣ ಇರುವುದು. ಬಾಡಿಗೆದಾರ ಯಾರಾಗಬೇಕು ಎಂಬುದನ್ನು ಇಲ್ಲಿ ಮಾಲೀಕರೇ ತೀರ್ಮಾನಿಸುತ್ತಾರೆ. ಆಸ್ತಿಯ ನವೀಕರಣದ ಕೆಲಸವನ್ನು ಹೇಗೆ ಮತ್ತು ಯಾವಾಗ ಕೈಗೆತ್ತಿಕೊಳ್ಳಬಹುದು, ಯಾವಾಗ ಆಸ್ತಿಯನ್ನು ಮಾರಾಟ ಮಾಡಬಹುದು ಎಂಬುದರ ತೀರ್ಮಾನವೂ ಅವರದ್ದೇ ಆಗಿರುತ್ತದೆ. ಮಾಲೀಕತ್ವದ ಈ ಭಾವವು ಭಾವನಾತ್ಮಕವಾದ ನೆಮ್ಮದಿಯೊಂದನ್ನು ನೀಡುತ್ತದೆ. ಇದು ಹಣಕಾಸಿನ ಆಸ್ತಿಗಳಲ್ಲಿ ಸಾಮಾನ್ಯವಾಗಿ ಇರುವುದಿಲ್ಲ.

ಆಸ್ತಿಗಳನ್ನು ಅಡಮಾನವಾಗಿ ಇರಿಸಿ ಸಾಲ ಪಡೆಯುವ ಅವಕಾಶ ಇನ್ನೊಂದು ಅನುಕೂಲ. ರಿಯಲ್ ಎಸ್ಟೇಟ್ ಆಸ್ತಿಯನ್ನು ಖರೀದಿಸಬೇಕು ಎಂದಿದ್ದರೆ, ಅದಕ್ಕೆ ಬ್ಯಾಂಕ್‌ಗಳು ಸಾಲ ಕೊಡಲು ಹಿಂಜರಿಯುವುದಿಲ್ಲ. ಇಂತಹ ಆಸ್ತಿಗಳ ಒಟ್ಟು ಮೌಲ್ಯದ ಬಹುದೊಡ್ಡ ಭಾಗವನ್ನು ಬ್ಯಾಂಕ್‌ಗಳು ಸಾಲದ ರೂಪದಲ್ಲಿ ಕೊಡುತ್ತವೆ.

ಭೌತಿಕವಾದ ಆಸ್ತಿಯು ಹಣದುಬ್ಬರದ ಸವಾಲಿಗೆ ಉತ್ತರವಾಗಿ ನಿಲ್ಲುತ್ತದೆ. ದೀರ್ಘ ಅವಧಿಯಲ್ಲಿ ಹಣದುಬ್ಬರ ಪ್ರಮಾಣ ಏರಿಕೆ ಕಂಡಂತೆಲ್ಲ ಬಾಡಿಗೆ ಆದಾಯ ಮತ್ತು ಆಸ್ತಿಯ ಮೌಲ್ಯದಲ್ಲಿ ಹೆಚ್ಚಳ ಆಗುತ್ತದೆ. ಇದು ಹೂಡಿಕೆ ಮಾಡಿದ ಬಂಡವಾಳದ ಮೊತ್ತವು ಸ್ಥಿರ ದರದಲ್ಲಿ ಏರಿಕೆ ಕಾಣುವಂತೆ ಮಾಡುತ್ತದೆ.

ತೊಡಕು: ಹೊಸದಾಗಿ ಹೂಡಿಕೆ ಮಾಡುವವರಿಗೆ ಇಲ್ಲಿರುವ ದೊಡ್ಡ ಅಡ್ಡಿ, ಭಾರಿ ಮೊತ್ತದ ಅವಶ್ಯಕತೆ. ಆರಂಭಿಕವಾಗಿ ತೊಡಗಿಸಬೇಕಾದ ಮೊತ್ತ, ನೋಂದಣಿ ಶುಲ್ಕ, ಬ್ರೋಕರೇಜ್ ಮೊತ್ತ, ಕಾನೂನಿನ ಕೆಲಸಗಳಿಗೆ ಪಾವತಿಸಬೇಕಿರುವ ಶುಲ್ಕ ಇವೆಲ್ಲ ದೊಡ್ಡ ಮಟ್ಟದಲ್ಲಿರುತ್ತವೆ. ಇಷ್ಟು ದೊಡ್ಡ ಮೊತ್ತವನ್ನು ಒಂದೆಡೆ ತೊಡಗಿಸಿದಾಗ ಹಲವರಿಗೆ ತಮ್ಮ ಹೂಡಿಕೆಯಲ್ಲಿ ವೈವಿಧ್ಯ ತಂದುಕೊಳ್ಳುವುದು ಕಷ್ಟವಾಗುತ್ತದೆ.

ಆಸ್ತಿಯ ನಗದೀಕರಣ ಇಲ್ಲಿ ಇನ್ನೊಂದು ಸಮಸ್ಯೆ. ರಿಯಲ್ ಎಸ್ಟೇಟ್ ಆಸ್ತಿಗಳನ್ನು ತಕ್ಷಣಕ್ಕೆ ಮಾರಾಟ ಮಾಡಲು ಅಥವಾ ಆಸ್ತಿಯ (ಅದು ಚಿಕ್ಕದಾಗಿದ್ದರೆ) ಒಂದು ಭಾಗವನ್ನು ಮಾತ್ರ ಮಾರಾಟ ಮಾಡಲು ಆಗುವುದಿಲ್ಲ. ತುರ್ತಾಗಿ ಹಣ ಬೇಕಾಗುವ ಸಂದರ್ಭಗಳಲ್ಲಿ, ಆಸ್ತಿ ಮಾರಾಟಕ್ಕೆ ಹಲವು ತಿಂಗಳುಗಳು ಬೇಕಾಗಬಹುದು. ಕೆಲವು ಸಂದರ್ಭಗಳಲ್ಲಿ ವರ್ಷಗಳೇ ಬೇಕಾಗಬಹುದು.

ಇಷ್ಟೇ ಅಲ್ಲ, ಮಾಲೀಕರು ಇನ್ನೂ ಕೆಲವು ಸಮಸ್ಯೆಗಳನ್ನು ಎದುರಿಸಬೇಕಾಗಬಹುದು. ಬಾಡಿಗೆಗೆ ಇರುವವರನ್ನು ನಿಭಾಯಿಸುವುದು, ರಿಪೇರಿ ಕೆಲಸಗಳನ್ನು ಮಾಡಿಸುವುದು, ಎಲ್ಲವೂ ಕಾನೂನಿಗೆ ಅನುಗುಣವಾಗಿ ನಡೆಯುವಂತೆ ನೋಡಿಕೊಳ್ಳುವುದು, ಬಾಡಿಗೆದಾರರು ತೊರೆದಾಗ ಹೊಸಬರನ್ನು ಹುಡುಕುವುದು... ಇವೆಲ್ಲ ಕೆಲಸಗಳಿಂದಾಗಿ ಹೂಡಿಕೆಯು ಬಹಳ ಶ್ರಮ ಬಯಸುವ ಕೆಲಸದಂತೆ ಆಗಿಬಿಡಬಹುದು.

ಆಧುನಿಕ ಪರ್ಯಾಯ: ಆರ್‌ಇಐಟಿ

ಆರ್‌ಇಐಟಿಗಳು ಷೇರುಪೇಟೆಯಲ್ಲಿ ನೋಂದಾಯಿತ ಆಗಿರುತ್ತವೆ. ಇವುಗಳ ಯೂನಿಟ್‌ಗಳನ್ನು ಷೇರುಪೇಟೆಯ ಮೂಲಕ ಖರೀದಿಸಬಹುದು, ಮಾರಬಹುದು.

ಆರ್‌ಇಐಟಿಗಳು ಆದಾಯ ತಂದುಕೊಡುವ ರಿಯಲ್ ಎಸ್ಟೇಟ್ ಆಸ್ತಿಗಳನ್ನು, ಅಂದರೆ ಕಚೇರಿ ಸ್ಥಳ, ಮಾಲ್‌ಗಳು, ಗೋದಾಮುಗಳನ್ನು ಹೊಂದಿರುತ್ತವೆ. ಆರ್‌ಇಐಟಿ ಯೂನಿಟ್‌ಗಳನ್ನು ಖರೀದಿಸಿದಾಗ ಹೂಡಿಕೆದಾರರು ಅವುಗಳ ಮಾಲೀಕತ್ವದ ವೈವಿಧ್ಯಮಯ ಆಸ್ತಿಗಳ ಸಣ್ಣ ಪಾಲನ್ನು ಖರೀದಿಸಿದಂತಾಗುತ್ತದೆ.

ಒಳಿತು: ಯೂನಿಟ್‌ಗಳು ಕೈಗೆ ಎಟಕುವಂತೆ ಇರುವುದು ಇಲ್ಲಿ ಬಹುಮುಖ್ಯವಾದ ಅಂಶ. ಬಹಳ ಕಡಿಮೆ ಮೊತ್ತದೊಂದಿಗೆ ಹೂಡಿಕೆದಾರರು ಬಹಳ ಪ್ರೀಮಿಯಂ ವರ್ಗದ ವಾಣಿಜ್ಯ ರಿಯಲ್ ಎಸ್ಟೇಟ್ ಆಸ್ತಿಗಳ ಮೇಲೆ ಹಣ ತೊಡಗಿಸಬಹುದು. ಹಿಂದೊಂದು ಕಾಲದಲ್ಲಿ ಇಂತಹ ರಿಯಲ್ ಎಸ್ಟೇಟ್ ಆಸ್ತಿಗಳ ಮೇಲೆ ಹಣ ತೊಡಗಿಸುವುದು ಸಾಂಸ್ಥಿಕ ಹೂಡಿಕೆದಾರರು ಹಾಗೂ ಅತಿಶ್ರೀಮಂತ ಹೂಡಿಕೆದಾರರಿಗೆ ಮಾತ್ರವೇ ಆಗುವಂಥದ್ದಾಗಿತ್ತು.

ನಗದೀಕರಣವು ಆರ್‌ಇಐಟಿಗಳಲ್ಲಿನ ಇನ್ನೊಂದು ಪ್ರಮುಖ ಅನುಕೂಲ. ಆರ್‌ಇಐಟಿ ಯೂನಿಟ್‌ಗಳು ಷೇರುಪೇಟೆಯಲ್ಲಿ ಮಾರಾಟ, ಖರೀದಿ ಆಗುತ್ತವೆಯಾದ ಕಾರಣ ಮಾರುಕಟ್ಟೆ ಅವಧಿಯಲ್ಲಿ ಹೂಡಿಕೆದಾರರು ಅವುಗಳನ್ನು ಬೇಕೆಂದಾಗಲೆಲ್ಲ ಖರೀದಿಸಬಹುದು, ಮಾರಾಟ ಮಾಡಬಹುದು. ಆರ್‌ಇಐಟಿಗಳಲ್ಲಿ ಹೂಡಿಕೆ ಮಾಡಿದವರಿಗೆ ಆಸ್ತಿ ನಿರ್ವಹಣೆಯ ರಗಳೆ ಇರುವುದಿಲ್ಲ. ವೃತ್ತಿಪರರ ತಂಡಗಳು ಆಸ್ತಿಯನ್ನು ಭೋಗ್ಯಕ್ಕೆ ನೀಡುವ ಕೆಲಸವನ್ನು, ಬಾಡಿಗೆ ನೀಡಿದ್ದರೆ ಬಾಡಿಗೆ ಸಂಗ್ರಹಿಸುವ ಕೆಲಸವನ್ನು, ನಿರ್ವಹಣೆಯನ್ನು ಮತ್ತು ಆಸ್ತಿಯನ್ನು ಮೇಲ್ದರ್ಜೆಗೇರಿಸುವ ಕೆಲಸವನ್ನು ನೋಡಿಕೊಳ್ಳುತ್ತವೆ. ಆಸ್ತಿಯನ್ನು ನಿರ್ವಹಿಸುವ ತಲೆಬಿಸಿ ಇಲ್ಲದಿದ್ದರೂ, ಹೂಡಿಕೆದಾರರಿಗೆ ಆದಾಯವು ಕಾಲಕಾಲಕ್ಕೆ ಪಾವತಿ ಆಗುತ್ತಿರುತ್ತದೆ.

ತೊಡಕುಗಳು: ಆರ್‌ಇಐಟಿಗಳು ಷೇರು ಮಾರುಕಟ್ಟೆ ವಹಿವಾಟಿನ ಭಾಗವಾಗಿರುವ ಕಾರಣ ಅವುಗಳ ಬೆಲೆಯು ಮಾರುಕಟ್ಟೆಯ ಏರಿಳಿತಗಳಿಗೆ ಅನುಗುಣವಾಗಿ ಹೆಚ್ಚು, ಕಡಿಮೆ ಆಗುತ್ತದೆ. ಬಡ್ಡಿ ದರದಲ್ಲಿನ ಬದಲಾವಣೆ, ಆರ್ಥಿಕ ಸ್ಥಿತಿಯಲ್ಲಿನ ಬದಲಾವಣೆ ಹಾಗೂ ಮಾರುಕಟ್ಟೆಯ ಅಸ್ಥಿರತೆಯು ಅಲ್ಪಾವಧಿಗೆ ಆರ್‌ಇಐಟಿ ಯೂನಿಟ್ ಮೌಲ್ಯದ ಮೇಲೆ ಪರಿಣಾಮ ಬೀರಬಹುದು.

ಹೂಡಿಕೆದಾರರಿಗೆ ಹೆಚ್ಚಿನ ನಿಯಂತ್ರಣ ಇರುವುದಿಲ್ಲ. ಆಸ್ತಿ ಖರೀದಿ, ಬಾಡಿಗೆದಾರರಿಗೆ ಸಂಬಂಧಿಸಿದ ತೀರ್ಮಾನಗಳನ್ನು ವೃತ್ತಿಪರ ನಿರ್ವಾಹಕರೇ ಪೂರ್ಣವಾಗಿ ತೆಗೆದುಕೊಳ್ಳುತ್ತಾರೆ.

ಆರ್‌ಇಐಟಿಗಳಿಂದ ಸಿಗುವ ಆದಾಯದ ಮೇಲಿನ ತೆರಿಗೆಯು ಸಂಕೀರ್ಣವಾಗಿರುತ್ತದೆ. ಆರ್‌ಇಐಟಿಗಳಿಂದ ಸಿಗುವ ಆದಾಯದಲ್ಲಿ ಲಾಭಾಂಶ, ಬಡ್ಡಿ ಆದಾಯ ಮತ್ತು ಬಂಡವಾಳದ ಮರುಪಾವತಿಯು ಇರುತ್ತವೆಯಾದ ಕಾರಣ, ಇವೆಲ್ಲವುಗಳನ್ನೂ ಭಿನ್ನ ಬಗೆಯಲ್ಲಿ ತೆರಿಗೆಗೆ ಒಳಪಡಿಸಲಾಗುತ್ತದೆ. ಹೀಗಾಗಿ, ಆರ್‌ಇಐಟಿಗಳಿಂದ ಸಿಗುವ ಆದಾಯದ ತೆರಿಗೆಯ ಬಗ್ಗೆ ಅರ್ಥ ಮಾಡಿಕೊಳ್ಳಬೇಕಿರುವುದು ಮಹತ್ವದ್ದಾಗುತ್ತದೆ.

ಹೂಡಿಕೆಗೆ ಹಲವು ತೊಡಕು

ದೇಶದಲ್ಲಿ ಅಂದಾಜು 33.72 ಕೋಟಿ ಕುಟುಂಬಗಳಿವೆ. ಈ ಪೈಕಿ 3.21 ಕುಟುಂಬಗಳು (ಶೇ 9.5ರಷ್ಟು) ಮಾತ್ರ ಹೂಡಿಕೆ ಮಾಡುತ್ತಿವೆ. ಆದರೆ, ಈ ಪೈಕಿ ಶೇ 60ರಷ್ಟು ಕುಟುಂಬಗಳು ಮಾತ್ರ ಸಕ್ರಿಯವಾಗಿ ಹೂಡಿಕೆ ಮಾಡುತ್ತಿವೆ.

ಮಾರುಕಟ್ಟೆಯು ಕಡಿಮೆ ಗಳಿಕೆ ನೀಡಿರುವುದು, ಹೆಚ್ಚಿನ ಚಂಚಲತೆ, ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಅನಿಶ್ಚಿತ ಸ್ಥಿತಿ, ಹೆಚ್ಚಿನ ಶುಲ್ಕಗಳಿಂದಾಗಿ ಶೇ 40ರಷ್ಟು ಕುಟುಂಬಗಳು ಕಳೆದ ಒಂದು ವರ್ಷದಿಂದ ಹೊಸ ಹೂಡಿಕೆಯನ್ನೇ ಮಾಡಿಲ್ಲ. ಅಲ್ಲದೆ, ತಮ್ಮ ಪೂರ್ಣ ಹೂಡಿಕೆ ಮೊತ್ತವನ್ನು ವಾಪಸ್ ಪಡೆದಿವೆ.

ಮ್ಯೂಚುವಲ್ ಫಂಡ್‌ಗಳು, ಇಟಿಎಫ್‌ಗಳು, ಷೇರುಗಳು, ಫ್ಯೂಚರ್ ಆ್ಯಂಡ್ ಆಪ್ಶನ್ಸ್ (ಎಫ್ ಆ್ಯಂಡ್ ಒ), ಕಾರ್ಪೊರೇಟ್ ಸಾಲಪತ್ರಗಳು, ಪರ್ಯಾಯ ಹೂಡಿಕೆ ನಿಧಿಗಳಲ್ಲಿ (ಎಐಎಫ್) ಹೂಡಿಕೆ ಮಾಡಲು ಸಾಂಪ್ರದಾಯಿಕ ಹೂಡಿಕೆದಾರರಿಗೆ ಹಲವು ಸವಾಲುಗಳು ಇವೆ. ಹೀಗಾಗಿ, ಈ ಹೂಡಿಕೆದಾರರ ಪ್ರಮಾಣ ಕಡಿಮೆ ಇದೆ.

ಹೂಡಿಕೆ ಯಾವ ರೀತಿ ಪ್ರಾರಂಭಿಸಬೇಕು ಎನ್ನುವುದು ತಿಳಿಯದೇ ಇರುವುದು, ಹೂಡಿಕೆ ಮಾಡಿದ ಬಳಿಕ ಹಣ ನಷ್ಟ ಆಗಬಹುದು ಎನ್ನುವ ಭಯ, ಗಳಿಕೆಯ ಅನಿಶ್ಚಿತ ಸ್ಥಿತಿ, ನಿಧಿ ನಿರ್ವಾಹಕರ ಮೇಲೆ ನಂಬಿಕೆಯ ಕೊರತೆ, ಹೆಚ್ಚಿನ ಶುಲ್ಕಗಳು, ವೆಚ್ಚಗಳು, ಹೂಡಿಕೆ ಮಾಡಲು ಸಾಕಷ್ಟು ಹಣ ಇಲ್ಲದೇ ಇರುವುದು, ಕುಟುಂಬಗಳು, ಸ್ನೇಹಿತರು ಸೇರಿದಂತೆ ಇತರರು ಹೂಡಿಕೆ ಮಾಡದಂತೆ ಸಲಹೆ ನೀಡಿರುವುದು, ಸ್ಥಳೀಯ ಭಾಷೆಯಲ್ಲಿ ಹೂಡಿಕೆಯ ಮಾಹಿತಿ ಇಲ್ಲದಿರುವುದು ಸಾಂಪ್ರದಾಯಿಕ ಹೂಡಿಕೆದಾರರಿಗೆ ಉಂಟಾಗಿರುವ ಅಡಚಣೆಗಳಾಗಿವೆ.

ಹೂಡಿಕೆಗೆ ಎದುರಾಗಿರುವ ಪ್ರಮುಖ ಅಡಚಣೆಗಳು

1	74%
2	73%
3	51%
4	26%
5	18%
6	8%
7	5%
8	3%

1. ಸಂಕೀರ್ಣತೆ ಮತ್ತು ಮಾಹಿತಿಯ ಕೊರತೆ 2. ಅಪಾಯ ಮತ್ತು ಗಳಿಕೆಯ ಕುರಿತಾದ ಆತಂಕ 3. ನಂಬಿಕೆ ಮತ್ತು ಪಾರದರ್ಶಕತೆಗೆ ಸಂಬಂಧಿಸಿದ ಸವಾಲುಗಳು 4. ವೆಚ್ಚ 5. ಬಾಹ್ಯ ಒತ್ತಡಗಳು 6. ನಗದು ಕೊರತೆ 7. ಹೆಚ್ಚುವರಿ ದಾಖಲೆಯ ಅಗತ್ಯ ಪ್ರಕ್ರಿಯೆಯಿಂದ ಅಡಚಣೆಗಳು 8. ಇತರೆ

ಆಧಾರ: ಸೆಬಿ ಸಮೀಕ್ಷೆ

ಟಿಬಿಒ ಟೆಕ್

ಬ್ರೋಕರೇಜ್ ಮಾತು

ಪ್ರವಾಸ ಸಂಬಂಧಿ ಸೇವೆಗಳನ್ನು ಒದಗಿಸುವ ಟಿಬಿಒ ಟೆಕ್ ಕಂಪನಿಯ ಷೇರು ಮೌಲ್ಯವು ₹1,360ಕ್ಕೆ ತಲುಪಬಹುದು ಎಂದು ಬ್ರೋಕರೇಜ್ ಕಂಪನಿ ಮೋತಿಲಾಲ್ ಓಸ್ವಾಲ್ ಹೇಳಿದೆ.

ಕಂಪನಿಯು ತಂತ್ರಜ್ಞಾನ ಆಧಾರಿತ ಬಿ2ಬಿ ಪ್ರವಾಸ ಸಂಬಂಧಿ ವೇದಿಕೆಯನ್ನು ಹೊಂದಿದೆ. ಇದು ಹಲವು ವಿಮಾನಯಾನ ಕಂಪನಿಗಳನ್ನು, 10 ಲಕ್ಷಕ್ಕೂ ಹೆಚ್ಚು ಹೋಟೆಲ್‌ಗಳನ್ನು ಸಂಪರ್ಕಕ್ಕೆ ತಂದಿದೆ. ಕಂಪನಿಯು ಬಹಳ ಬಲಿಷ್ಠವಾದ ಸ್ಪರ್ಧಾತ್ಮಕ ವೈಶಿಷ್ಟ್ಯವನ್ನು ರೂಪಿಸಿಕೊಂಡಿದೆ. ಈ ಮೂಲಕ ಕಂಪನಿಯು ಜಗತ್ತಿನಾದ್ಯಂತ ಸರಿಸುಮಾರು 20 ಲಕ್ಷ ಟ್ರಾವೆಲ್ ಏಜೆಂಟ್‌ಗಳಿಗೆ ಸೇವೆ ಒದಗಿಸುತ್ತಿದೆ ಎಂದು ಮೋತಿಲಾಲ್ ಓಸ್ವಾಲ್ ವಿವರಿಸಿದೆ.

ಟಿಬಿಒ ಟೆಕ್ ಕಂಪನಿಯ ವರಮಾನ, ತೆರಿಗೆ ನಂತರದ ಲಾಭವು 2024–25ನೇ ಹಣಕಾಸು ವರ್ಷದಿಂದ 2027–28ನೇ ಹಣಕಾಸು ವರ್ಷದವರೆಗೆ ಕ್ರಮವಾಗಿ ಶೇ 35ರಷ್ಟು ಹಾಗೂ ಶೇ 32ರಷ್ಟು ವಾರ್ಷಿಕ ಸಂಯುಕ್ತ ಬೆಳವಣಿಗೆ ದರವನ್ನು (ಸಿಎಜಿಆರ್) ಸಾಧಿಸುವ ನಿರೀಕ್ಷೆಯನ್ನು ಈ ಬ್ರೋಕರೇಜ್ ಕಂಪನಿ ಹೊಂದಿದೆ. ಬುಧವಾರದ ವಹಿವಾಟಿನ ಅಂತ್ಯಕ್ಕೆ ಟಿಬಿಒ ಟೆಕ್ ಕಂಪನಿಯ ಷೇರುಮೌಲ್ಯವು ₹1,091 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ಮಾಹಿತಿ, ವಿವರಗಳಿಗೆ ಪತ್ರಿಕೆ ಹೊಣೆಯಲ್ಲ)

'ನೀಟ್' ದಿಕ್ಸೂಚಿ — ಎಸ್ಎಸ್ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ — ಪಿಯುಸಿ/ಸಿಇಟಿ ಪರೀಕ್ಷೆ

PHYSICS

1) A full wave rectifier circuit consists of two p-n junction diodes, a centre-tapped transformer, capacitor and a load resistance. Which of these components remove the ac ripple from the rectified output

a) Load resistance
b) A centre-tapped transformer
c) p-n junction diodes d) Capacitor

Ans:- (d) Theory based Capacitor in parallel removes the ac ripple from the rectified output.

2) Earth is moving around the sun in elliptical orbit as shown. The ratio of OB and OA is R. Then the ratio of Earth's is velocities at A and B is



(a) R^{-1} (b) $\sqrt{R}$
(c) R (d) $R^{2/3}$

Ans:- (c)

Expln- In central force motion, the angular momentum of body remains conserved.



i.e., Angular momentum, $L = r \times p = mvr$

[at minor and major axis v and r are perpendicular]

So if v_1 and v_2 be the speed of earth at A and B, respectively.

Then, $mv_1r_1 = mv_2r_2$

$$\Rightarrow \frac{v_1}{v_2} = \frac{r_2}{r_1} = \frac{OB}{OA} \Rightarrow \frac{v_1}{v_2} = R$$

3) Consider a water tank shown in the figure. It has one wall at x = L and can be taken to be very wide in the z direction. When filled with a liquid of surface tension S and density ρ, the liquid surface makes angle θ_0 ($\theta_0 \ll 1$) with the x-axis at x = L. If y(x) is the height of the surface then the equation for y(x) is



(take $\theta(x) = \sin\theta(x) = \tan\theta(x) = \frac{dy}{dx}$, g is the acceleration due to gravity)

(1) $\frac{d^2y}{dx^2} = \frac{\rho g}{S}x$ (2) $\frac{d^2y}{dx^2} = \frac{\rho g}{S}y$

(3) $\frac{d^2y}{dx^2} = \sqrt{\frac{\rho g}{S}}$ (4) $\frac{dy}{dx} = \sqrt{\frac{\rho g}{S}}x$

Ans:- 2

4) The errors in the measurement which arise due to unpredictable fluctuations in temperature and voltage supply are:

a) Random errors b) Instrumental errors
c) Personal errors d) Least count errors

Ans:- (a)

Expln:- As the factors controlling temperature and voltage supply are beyond prediction and control so the error occurred due to unpredictable fluctuations of temperature and voltage would be random errors.

5) A metal wire has mass (0.4 ± 0.002) g, radius (0.3± 0.001)mm and length (5 ± 0.02) cm. The maximum possible percentage error in the measurement of density will nearly be

a) 1.4% b) 1.2%
c) 1.3% d) 1.6%

Ans:-

(d) $m = \rho\pi r^2 l$

$$\rho = \frac{m}{\pi r^2 l}$$

$$\frac{\Delta\rho}{\rho} = \frac{\Delta m}{m} + \frac{2\Delta r}{r} + \frac{\Delta l}{l}$$

$$\frac{\Delta\rho}{\rho}\times 100 = \frac{0.002}{0.4}\times 100 + \frac{2\times 0.001}{0.3}\times 100 + \frac{0.02}{5}\times 100$$

$$= \frac{0.2}{0.4} + \frac{0.2}{0.3} + \frac{2}{5}$$

$= 0.5 + 0.67 + 0.4$

$= 1.57$

$= 1.6\%$

6) The output of an OR gate is connected to both the inputs of a NAND gate. The combination will serve as....................

(a) AND gate (b) NOT gate
(c) NAND gate (d) NOR gate

Ans:- (d)

Expln- The given situation can be shown as



The output $Y' = \overline{A + B}$ is the output of NOR gate.

7) The speed of light in medium M_1 and M_2 are 1.5×10^8 ms^{-1} and 2×10^8 ms^{-1} respectively. A ray travels from medium M_1 to the medium M_2 with an angle of incidence θ. The ray suffers total internal reflection. Then the value of the angle of incidence θ is. *(Contd….)*

Biology

MULTIPLE CHOICE QUESTIONS

25) with respect to angiosperms, identify the incorrect pair from the following

(a) Antipodal -2n
(b) Vegetative cell of male gametophyte -n
(c) Primary endosperm nucleus - 3n
(d) Cells of nucleus of ovule - 2n

Ans: a

Expl:- out of the given pairs in the option only antipodal is wrongly matched because antipodals are haploid cells (n) found within the mature embryo sac towards the chalazal end. Rest all three options are correctly matched.

26). Statement (A) for a particular character in an individual, each gamete gets only one allele.

Statement (B) Chromatids of a chromosome spilt (separate) and move towards opposite pole during anaphase of mitosis.

(a) Both the statements are correct and 'B' is the reason for 'A'
(b) Both the statements are correct and 'B' is not the reason for 'A'
(c) Statement 'A' is correct and statement 'B; is wrong
(d) Statement 'B' is correct and statement 'B' is wrong

Ans:b

Expl:- Alleles are alternative forms of particular gene having the same position on a pair of homologous chromosomes affecting the same trait. During fertilization each gamete receives only one allele for a particular character. In anaphase the chromatids of a chromosome of future daughter nuclei start migrating towards the opposite poles along the path of their chromosome fibers. Thus, both statements given are correct but, one is not the correct reason for the other.

27) Match the column-I with Column-II. Choose the correct option given below.

Column-I	Column-II
(a) Streptococcus	i. Free living nitrogen fixing bacteria
(b) Penicillium	ii. Clot buster
(c) Methanogens	iii. Source of antibiotic
(d) Anabaena	iv. Biogas production

Ans Code

(a) a – ii, b – iv, c – iii, d - i
(b) a – iv, b – iii, c – I, d – ii
(c) a – iv, b – I, c – iii, d – ii
(d) a – ii, b – iii, c – iv, d – i

Ans : d

28) Internal bleeding, muscular pain, blockage of the intestinal passage and anemia are some of the symptoms caused due to infection by

(a) wuchereia (b) Trichophyton
(c) Ascaris (d) Plasmodium

Ans: C

Expl:- Ascariasis is the helminthic disease caused by Ascaris lumbricoides, an intestinal parasite commonly known as roundworm which is responsible for the symptoms mentioned in the question such as internal bleeding, muscular pain, blockage of intestinal passage, anemia, fever, etc.

While, the other agents given in the other options causes the following diseases filariasis (is caused by Wuchereria), ringworm (is caused by Trichophyton) and malaria (is caused by Plasmodium).

29) RNA interference which is employed in making tobacco plant resistant to Meloidegyne incognita is essentially involved in

(a) Preventing the process of translation of mRNA
(b) Preventing the process of transcription
(c) Preventing the process of replication of DNA
(d) Preventing the process of spilicing of hnRNA

Ans:(a)

Expl:- several nematodes infect a wide variety of plants and animals including human beings. Nematodes known as Meloidegyne incognitia infects the roots of tobacco plants and reduces the production of tobacco.

Thus, to prevent this infection a strategy has adopted known as RNA interface (RNAi) which takes place in all eukaryotic organisms as a method of cellular defense. This method involves silencing of mRNA due to complementary dsRNA molecule that binds to it and prevents the process of translation of mRNA.

30) The success of mammals on earth is largely because

(a) They can conform to the changes in the environment
(b) They can reduce metabolic activity and go into a state of dormancy during unfavorable conditions in the environment
(c) They have the ability to maintain constant body temperature
(d) They can take of their young ones as they have mammary glands to suckle them **Ans:(C)**

Expl:- out of the statements given in the options, the appropriate explanation is that the success of mammals on earth is largely because they are homeotherms, i,e., they have ability to maintain a constant internal body temperature within a tolerable range regardless of the changing external conditions.

31) Which one of the following hormones also produces anti-inflammatory reactions in man and suppresses the immune response in addition to its primary functions?

(a) Cortisol (b) Erythropoietin
(c) Thyrocalcitonin (d) thymosin

Ans:(a)

Expl:- Cortisol hormone is the main glucocorticiod produced in the body. It is secreted by zona fasciculate of adrenal cortex of adrenal gland. Apart from serving many other functions, one of its major functions is to produce anti-inflammatory reactions in man and also functions in suppressing the immune response. While, thymosin (hormone secreted by thymus)stimulates the development of disease fighting T-cell, Thyrocalcition (hormone secreted by parfollicular cells in the thyroid gland) regulates the calcium and phosphate metabolism and erythropoietin (hormone produced by the kidney) and control erythropoiesis or production of red blood cells.

‘ಬನಶಂಕರಿ: ಮೇಲ್ಸೇತುವೆ ಅತ್ಯಗತ್ಯ’

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ರಾಮಲಿಂಗಾರೆಡ್ಡಿ ಪತ್ರ

ಬನಶಂಕರಿ ಜಂಕ್ಷನ್‌ನಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುವ ವರ್ತುಲ ಸ್ಕೈವಾಕ್ ಮಾದರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನಶಂಕರಿ ದೇವಸ್ಥಾನದಿಂದ ಕನಕಪುರ ರಸ್ತೆ ಹಾಗೂ ಹೊರ ವರ್ತುಲ ರಸ್ತೆಯ ವಾಹನ ದಟ್ಟಣೆ ನಿವಾರಿಸಲು ರೂಪಿಸಿರುವ ಮೇಲ್ಸೇತುವೆ ಯೋಜನೆಯನ್ನು ಅನುಷ್ಠಾನಗೊಳಿಸಬೇಕು ಎಂದು ಸ್ಥಳೀಯ ಮುಖಂಡರು, ನಾಗರಿಕರು ಒತ್ತಾಯಿಸಿದ್ದಾರೆ.

ಈ ಮಧ್ಯೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರಿಗೆ ಪತ್ರ ಬರೆದಿದ್ದು ಎರಡು ವರ್ಷಗಳ ಹಿಂದೆ ರೂಪಿಸಿರುವ ಈ ಯೋಜನೆಯನ್ನು ಕೂಡಲೇ ಅನುಷ್ಠಾನಗೊಳಿಸಬೇಕು ಎಂದು ಮನವಿ ಮಾಡಿದ್ದಾರೆ.

ಕನಕಪುರ ರಸ್ತೆ- ಬನಶಂಕರಿ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ನಿವಾರಿಸಲು 2.5 ಕಿ.ಮೀ ಮೇಲ್ಸೇತುವೆ ನಿರ್ಮಾಣ ಮಾಡಲು 2023ರ ಆಗಸ್ಟ್ 19ರಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅಂದಿನ ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಿದ್ದರು.

ಬನಶಂಕರಿ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ಉಂಟಾಗುತ್ತಿರುವ ಬಗ್ಗೆ ಸ್ಥಳ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ, ಮೆಟ್ರೊ, ಬಿಬಿಎಂಪಿ ಅಧಿಕಾರಿಗಳು ಹಾಗೂ ಸ್ಥಳೀಯ ಜನಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿದ್ದರು.

ಬಿಎಂಆರ್‌ಸಿಎಲ್‌ನಿಂದ ಬನಶಂಕರಿ ಜಂಕ್ಷನ್‌ನಲ್ಲಿ ₹45 ಕೋಟಿ ವೆಚ್ಚದಲ್ಲಿ ಸ್ಕೈವಾಕ್ ನಿರ್ಮಿಸಲಾಗುತ್ತದೆ ಎಂದು ನಮ್ಮ ಮೆಟ್ರೊ ಅಧಿಕಾರಿಗಳು ಮಾಹಿತಿ ನೀಡಿದ್ದರು. ಆದರೆ, ಅಷ್ಟೊಂದು ವೆಚ್ಚ ಮಾಡಿದರೂ ಅದರಿಂದ ಸಂಚಾರ ದಟ್ಟಣೆ ಕಡಿಮೆಯಾಗುವುದಿಲ್ಲ ಎಂಬ ಅಭಿಪ್ರಾಯ ಅಂದು ವ್ಯಕ್ತವಾಗಿತ್ತು.

ಬನಶಂಕರಿ ಜಂಕ್ಷನ್‌ನಲ್ಲಿ ಹೆಚ್ಚಿನ ಸಂಚಾರ ದಟ್ಟಣೆ ಇದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಾಗಲಿದೆ. ಆದ್ದರಿಂದ ದೂರದೃಷ್ಟಿಯಿಂದ ಸಂಚಾರ ದಟ್ಟಣೆ ನಿವಾರಣೆಗೆ ಕ್ರಮ ಕೈಗೊಳ್ಳಬೇಕು. ಈ ಜಂಕ್ಷನ್ ಸೇರಿದಂತೆ ಐದಾರು ಜಂಕ್ಷನ್‌ಗಳಲ್ಲಿ ಸಿಗ್ನಲ್ ರಹಿತ ಸಂಚಾರಕ್ಕೆ ಅನುವಾಗುವಂತೆ ಮೇಲ್ಸೇತುವೆ ನಿರ್ಮಿಸಬೇಕು ಎಂದು ಕಾಂಗ್ರೆಸ್‌ನ ಮುಖಂಡ ರಘುನಾಥ ನಾಯ್ಡು ಹಾಗೂ ಸ್ಥಳೀಯ ಮುಖಂಡರು ಮನವಿ ಮಾಡಿಕೊಂಡಿದ್ದರು.

ಈ ಪ್ರಸ್ತಾವವನ್ನು ಪರಿಶೀಲಿಸಿದ್ದ ಡಿ.ಕೆ. ಶಿವಕುಮಾರ್ ಅವರು, ಯೋಜನೆಯ ವಿವರವಾದ ವರದಿ ಸಲ್ಲಿಸಿ, ಯೋಜನೆ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಅಂದಿನ ದಕ್ಷಿಣ ವಲಯದ ಆಯುಕ್ತ ಜಯರಾಂ ರಾಯಪುರ ಅವರಿಗೆ ಸೂಚನೆ ನೀಡಿದ್ದರು. ಇದಾದ ಮೇಲೆ, ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು 2023ರ ಸೆಪ್ಟೆಂಬರ್ 25ರಂದು ಟೆಂಡರ್ ಆಹ್ವಾನಿಸಲಾಗಿತ್ತು. ಆದರೆ, ನಂತರ ಇದು ಮುಂದುವರಿಯಲಿಲ್ಲ.

‘ಸುಗಮ ಸಂಚಾರಕ್ಕೆ ಅಗತ್ಯ’

ಎ.ಎಚ್. ಬಸವರಾಜು

‘ಬನಶಂಕರಿ ದೇವಸ್ಥಾನಕ್ಕೆ ನಿತ್ಯವೂ ಸಾವಿರಾರು ಜನರು ಬರುತ್ತಾರೆ. ಶುಕ್ರವಾರ ಹಾಗೂ ವಿಶೇಷ ದಿನಗಳಲ್ಲಿ 20 ಸಾವಿರಕ್ಕೂ ಹೆಚ್ಚು ಜನರು ಬರುತ್ತಾರೆ. ಇವರ ಅನುಕೂಲಕ್ಕೆ ಸ್ಕೈವಾಕ್ ಅಗತ್ಯವಾಗಿದ್ದು, ವಾಹನಗಳ ಸುಗಮ ಸಂಚಾರಕ್ಕೆ ಮೇಲ್ಸೇತುವೆಯೂ ಅಗತ್ಯವಾಗಿದೆ. ಕನಕಪುರ, ಮೈಸೂರು, ಹೊಸೂರು ರಸ್ತೆಗೆ ಈ ಜಂಕ್ಷನ್ ಸಂಪರ್ಕ ಕಲ್ಪಿಸುತ್ತದೆ. ಇಲ್ಲಿ ಮೇಲ್ಸೇತುವೆ ನಿರ್ಮಿಸುವುದರಿಂದ ಭವಿಷ್ಯದಲ್ಲೂ ಸುಗಮ ಸಂಚಾರ ಸಾಧ್ಯವಾಗುತ್ತದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇತ್ತ ಗಮನಹರಿಸಿ ಕ್ರಮ ಕೈಗೊಳ್ಳಲಿ’ ಎಂದು ಬಿಜೆಪಿ ಮುಖಂಡ ಎ.ಎಚ್. ಬಸವರಾಜು ಒತ್ತಾಯಿಸಿದರು.

‘ಸಾರ್ವಜನಿಕರಿಗೆ ಅನುಕೂಲ’

ರಾಮಲಿಂಗಾ ರೆಡ್ಡಿ

‘ಬನಶಂಕರಿ ದೇವಾಲಯದ ಬಳಿ ಸ್ಕೈವಾಕ್ ನಿರ್ಮಿಸಲು ಅನುಮೋದನೆಯಾಗಿದೆ. ಆದರೆ, ಬನಶಂಕರಿ ದೇವಸ್ಥಾನದಿಂದ ಸಾರಕ್ಕಿ ಸಿಗ್ನಲ್, ಹುಣಸೆಮರ ಜಂಕ್ಷನ್‌ವರೆಗೆ ಹಾಗೂ ಉತ್ತರಹಳ್ಳಿ ಮುಖ್ಯರಸ್ತೆಯಿಂದ ಬರುವ ವಾಹನಗಳಿಂದ ಕಿಲೋಮೀಟರ್ ವರೆಗೆ ದಟ್ಟಣೆ ಉಂಟಾಗುತ್ತಿದೆ. ಇದರಿಂದ ಸಾರ್ವಜನಿಕರಿಗೆ ಬಹಳ ಅನನುಕೂಲವಾಗಿದೆ. ಈ ಸಮಸ್ಯೆ ನಿವಾರಿಸಲು ಬನಶಂಕರಿ ದೇವಾಲಯದ ಜಂಕ್ಷನ್‌ನಲ್ಲಿ ಮೇಲ್ಸೇತುವೆ ನಿರ್ಮಿಸಬೇಕು. ಈ ಸಂಬಂಧ ಸೂಕ್ತ ನಿರ್ದೇಶನ ನೀಡಬೇಕು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪತ್ರ ಬರೆದಿದ್ದಾರೆ.

‘ಪಿಂಚಣಿದಾರರಿಗೆ ಅನ್ಯಾಯವಾಗುವ ಕಾಯ್ದೆ ಬೇಡ’

ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಸದಸ್ಯರು ಬುಧವಾರ ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರು: ಪಿಂಚಣಿದಾರರಿಗೆ ಅನ್ಯಾಯವಾಗುವ ಕಾಯ್ದೆಯನ್ನು ಕೇಂದ್ರ ಸರ್ಕಾರ ಕೂಡಲೇ ಹಿಂಪಡೆಯಬೇಕು ಎಂದು ಆಗ್ರಹಿಸಿ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಸದಸ್ಯರು ಬುಧವಾರ ಪ್ರತಿಭಟನೆ ನಡೆಸಿದರು.

ಕಬ್ಬನ್ ಉದ್ಯಾನದಲ್ಲಿರುವ ರಾಜ್ಯ ಸರ್ಕಾರಿ ನೌಕರರ ಸಂಘದ ಕಚೇರಿ ಮುಂಭಾಗದಲ್ಲಿ ಸಂಘದ ಅಧ್ಯಕ್ಷ ಎಲ್. ಬೈರಪ್ಪ ಅವರ ನೇತೃತ್ವದಲ್ಲಿ ಕಪ್ಪು ಪಟ್ಟಿ ಧರಿಸಿ ಕೇಂದ್ರದ ವಿರುದ್ಧ ಘೋಷಣೆ ಕೂಗಿದರು.

‘ಉತ್ತರ ಭಾರತದ ರಾಜ್ಯಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ನಿವೃತ್ತ ನೌಕರರು ಒಟ್ಟಾಗಿ ಪ್ರತಿಭಟನೆ ನಡೆಸುತ್ತಿದ್ದಾರೆ. ಆಂಧ್ರ ಪ್ರದೇಶ, ತೆಲಂಗಾಣ ನಂತರ ನಮ್ಮಲ್ಲೂ ಈಗ ವಿರೋಧ ವ್ಯಕ್ತವಾಗುತ್ತಿದೆ. ನಿವೃತ್ತ ನೌಕರರು ಜಂಟಿಯಾಗಿ ಹೋರಾಟ ಮಾಡಿ ನಿವೃತ್ತರ ಸಂಘಟನಾ ಶಕ್ತಿ ಪ್ರದರ್ಶಿಸೋಣ. ತಪ್ಪಿದಲ್ಲಿ ಸಂಧ್ಯಾಕಾಲದ ಸ್ವಾಭಿಮಾನದ ಬದುಕು ಕಳವಳಕಾರಿ ಆಗಲಿದೆ’ ಎಂದು ಬಿ.ಎಲ್.ಬೈರಪ್ಪ ಹೇಳಿದರು.

ದಿವಂಗತ ಡಿ.ಎಸ್.ನಕರ ಅವರ ಪ್ರಕರಣದಲ್ಲಿ ಸುಪ್ರೀಂಕೋರ್ಟ್‌ನ ಅಂದಿನ ನ್ಯಾ.ಚಂದ್ರಚೂಡ್ ನೇತೃತ್ವದ ಐವರು ಸದಸ್ಯರ ಸಂವಿಧಾನ ಪೀಠವು, ಪಿಂಚಣಿಯು ಸಾಮಾಜಿಕ ಕಲ್ಯಾಣ ಕ್ರಮವಾಗಿದ್ದು, ತಮ್ಮ ವೃದ್ಧಾಪ್ಯದಲ್ಲಿ ಜೀವನ ನಡೆಸಲು ಆರ್ಥಿಕವಾಗಿ ಸಹಾಯವಾಗುತ್ತದೆ ಎಂದು ತೀರ್ಪು ನೀಡಿದೆ ಎಂದು ಹೇಳಿದರು..

ಕೇಂದ್ರ ಸರ್ಕಾರ ಜಾರಿ ಮಾಡಲು ಹೊರಟಿರುವ ಕಾಯ್ದೆಯನ್ನು ಕೂಡಲೇ ಹಿಂಪಡೆಯಬೇಕು ಎಂದು ಎಲ್ಲಾ ರಾಜ್ಯಗಳ ಸರ್ಕಾರಿ ನಿವೃತ್ತ ನೌಕರರ ಸಂಘಗಳು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿವೆ ಎಂದು ತಿಳಿಸಿದರು.

ನಗರದಲ್ಲಿ ಇಂದು

ವಿದ್ಯಾರ್ಥಿ ಸಾಹಿತ್ಯ ಸಂಭ್ರಮ: ಭಾಗವಹಿಸುವವರು: ಧರ್ಮೇಂದ್ರ ಕುಮಾರ್, ಸುರೇಶ್ ವಾಗ್ಮೋರೆ, ಅರ್ಜುನ್ ಭಾರದ್ವಾಜ್, ಆಯೋಜನೆ: ಯುವಕ ಸಂಘ, ಸ್ಥಳ: ಯುವಪಥ, ಜಯನಗರ, ಬೆಳಿಗ್ಗೆ 10ರಿಂದ

‘ಕಾಲಗರ್ಭ’ ನಾಟಕ ಪ್ರದರ್ಶನ: ನಿರ್ದೇಶನ: ವೀರೇಶ್ ಮತ್ತಿನವರ, ಆಯೋಜನೆ: ಭಾಗ್ಯಶ್ರೀ ಕಲಾವೃಂದ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಮಧ್ಯಾಹ್ನ 3

‘ದಲಿತ ಕಥನಗಳು–ಅನುವಾದದ ಸವಾಲು, ಸಾಧ್ಯತೆಗಳು’ ತಿಂಗಳ ಉಪನ್ಯಾಸ: ದು. ಸರಸ್ವತಿ, ಪ್ರಸ್ತಾವನೆ: ಪಿ. ಭಾರತಿದೇವಿ, ಅಧ್ಯಕ್ಷತೆ: ಚನ್ನಪ್ಪ ಕಟ್ಟಿ, ಆಯೋಜನೆ ಮತ್ತು ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಚೇರಿ ಆವರಣ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5

ಕಣಕಟ್ಟೆ ಕೃಷ್ಣಮೂರ್ತಿರಾವ್ ಸ್ಮಾರಕ ದತ್ತಿ ಸಂಗೀತ ಕಛೇರಿ: ಸುಧಾ ನಟರಾಜ್ ಮತ್ತು ತಂಡ, ಉಪಸ್ಥಿತಿ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ದಿವಂಗತ ಬ.ನ. ಸುಂದರರಾವ್ ಸ್ಮರಣಾರ್ಥ ‘ಬೆಂಗಳೂರಿನ ಐತಿಹಾಸಿಕ ಭೂದೃಶ್ಯಗಳ ಕತೆಗಳು’ ಉಪನ್ಯಾಸ: ಎಂ.ಬಿ. ರಜನಿ, ಸಂದೀಪ್ತಾ ದಾಸ್, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 6

‘ದಾಸರು ಕಂಡ ಶ್ರೀರಾಮ’ ಉಪನ್ಯಾಸ: ಪ್ರಗಲ್ಭ ಆರ್. ಎಸ್., ಉಪಸ್ಥಿತಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಆವರಣ, ಹೊಂಬೇಗೌಡನಗರ, ಸಂಜೆ 6.30

ಮುತ್ಯಾಲಮ್ಮ ದೇವಿ ರಥೋತ್ಸವ: ಹೂವಿನ ಪಲ್ಲಕ್ಕಿ ಉತ್ಸವ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ದೇವಸ್ಥಾನ ಟ್ರಸ್ಟ್, ಮುತ್ಯಾಲಮ್ಮ ಕೆ. ಸ್ಟ್ರೀಟ್, ಶಿವಾಜಿನಗರ, ಸಂಜೆ 7

‘ಈ ಕೆಳಗಿನವರು’ ನಾಟಕ ಪ್ರದರ್ಶನ: ನಿರ್ದೇಶನ: ವೀಣಾ ಶರ್ಮ ಭೂಸನೂರಮಠ, ಆಯೋಜನೆ ಮತ್ತು ಸ್ಥಳ: ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ಕೇಂದ್ರದ ಆವರಣ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಕರಗ ಶಕ್ತ್ಯೋತ್ಸವ: ಮಧ್ಯಾಹ್ನ 12.30ಕ್ಕೆ ಸಂಪಂಗಿ ಕೆರೆಯ ಅಂಗಳ (ಶಕ್ತಿಪೀಠ), ವಿಶೇಷ ಪೂಜೆ, ಧರ್ಮರಾಯ ಸ್ವಾಮಿಗೆ ಅರಿಶಿನ ಅಲಂಕಾರ, ಆಯೋಜನೆ ಮತ್ತು ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ ಆವರಣ, ಸಂಜೆ 7.30

‘ಕುರುಕ್ಷೇತ್ರ’ ಪೌರಾಣಿಕ ನಾಟಕ ಪ್ರದರ್ಶನ: ಆಯೋಜನೆ: ಯಶಸ್ವಿನಿ ಸಾಂಸ್ಕೃತಿಕ ಕಲಾ ಟ್ರಸ್ಟ್, ಸ್ಥಳ: ಪಟಾಲಮ್ಮ ಹಾಗೂ ಐಗಂಡ್ಲಮ್ಮ ದೇವಸ್ಥಾನದ ಪಕ್ಕ, ಮಾಚಗೊಂಡನಹಳ್ಳಿ, ರಾತ್ರಿ 9

ರಾಮನವಮಿ ವಿಶೇಷ

ಶ್ರೀರಾಮೋತ್ಸವಕ್ಕೆ ಚಾಲನೆ: ಬಾಲ ಕಲಾವಿದರಿಂದ ಶ್ರೀರಾಮ, ಸೀತಾ, ಹನುಮಂತ ಹಾಗೂ ಇತರೆ ದೇವತೆಗಳ ವೇಷಭೂಷಣ ಪ್ರದರ್ಶನ, ಶ್ರೀರಾಮ ಮಂದಿರದಲ್ಲಿ ವಿಶೇಷ ಪೂಜೆ, ಆಯೋಜನೆ: ಶ್ರೀರಾಮ ಸೇವಾ ಮಂಡಳಿ, ಸ್ಥಳ: ಶ್ರೀರಾಮ ಮಂದಿರ ಆಟದ ಮೈದಾನ, 74 ಅಡಿ ಶ್ರೀರಾಮ ಮೂರ್ತಿ ಮುಂಭಾಗ, ಬೆಳಿಗ್ಗೆ 11ರಿಂದ

120ನೇ ವರ್ಷದ ಶ್ರೀರಾಮೋತ್ಸವ: ಪ್ರವಚನ, ವೇಣುಗಾನ ಲಹರಿ: ಶ್ರೀಮದಾನಂದತೀರ್ಥಾಚಾರ್ಯ ಮತ್ತು ತಂಡ, ಆಯೋಜನೆ: ಶ್ರೀರಾಮ ಭಕ್ತ ಸಭಾ, ಸ್ಥಳ: ಶ್ರೀಕಂಠೇಶ್ವರ ಭವನ, ಐದನೇ ಅಡ್ಡ ರಸ್ತೆ, ಮಲ್ಲೇಶ್ವರ, ಸಂಜೆ 5.30



‘ಶ್ರೀಮದ್ ರಾಮಾಯಣ’ ಉಪನ್ಯಾಸ: ವಿದ್ಯಾಸಿಂಧುಮಾಧವ ತೀರ್ಥ ಸ್ವಾಮೀಜಿ, ಆಯೋಜನೆ ಹಾಗೂ ಸ್ಥಳ: ಅಭಯ ಲಕ್ಷ್ಮೀ ನರಸಿಂಹ ಚಾರಿಟೇಬಲ್ ಟ್ರಸ್ಟ್, ತ್ಯಾಗರಾಜನಗರ, ಸಂಜೆ 6

26ನೇ ಶ್ರೀರಾಮ ನವಮಿ ಸಂಗೀತೋತ್ಸವ: ಗಾಯನ: ಜಯರಂಗ ಸಂಗೀತ ಶಾಲೆಯ ವಿದ್ಯಾರ್ಥಿಗಳಿಂದ, ಆಂಜನೇಯ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ದೇವಸ್ಥಾನದ ಆವರಣ, ಎಂಟನೇ ಕ್ರಾಸ್, ವೆಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಶ್ರೀರಾಮನವಮಿ ಉತ್ಸವ: ಗಾಯನ: ಆರ್.ಕೆ. ಪ್ರಸನ್ನಕುಮಾರ್ ಮತ್ತು ತಂಡ, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

‘ಎದೆಯ ಹಣತೆಯ ಬೆಳಕಿನಲ್ಲಿ ಮಾತುಕತೆ’ಯಲ್ಲಿ ಬಾನು ಮುಷ್ತಾಕ್ ಅಭಿಮತ

‘ಒತ್ತಡದ ಮಧ್ಯೆ ಸಹೋದರಿತ್ವ ಮಸುಕು’

ಪ್ರಜಾವಾಣಿ ವಾರ್ತೆ

ಸಂವಾದ ಕಾರ್ಯಕ್ರಮದಲ್ಲಿ ಬಾನು ಮುಷ್ತಾಕ್ ಅವರನ್ನು ಸನ್ಮಾನಿಸಲಾಯಿತು. ಲೇಖಕಿಯರಾದ ಚಂಪಾವತಿ, ಮಮತಾ ಯಜಮಾನ್, ಶಕುನ್ ಮೋಹಿನಿ, ಇಶ್ರತ್ ನಿಸಾರ್, ಆರ್.ಸುನಂದಮ್ಮ, ರಕ್ಷಿತಾ, ವಿಜಯಾ, ಗೌರಮ್ಮ, ಪುಷ್ಪ ಮತ್ತು ಮಲ್ಲಿಗೆ ಉಪಸ್ಥಿತರಿದ್ದರು

ಬೆಂಗಳೂರು: ‘ಸಹೋದರಿತ್ವ ನಮ್ಮೊಳಗೆ ಸಹಜವಾಗಿ ಇದ್ದರೂ, ಜಗತ್ತಿನ ಒತ್ತಡಗಳ ನಡುವೆ ಮಸುಕಾಗಿರುತ್ತದೆ. ಆದರೆ ಸಂದರ್ಭ ಬಂದಾಗ ಪುಟಿದೇಳುತ್ತದೆ. ಇದನ್ನೇ ನಾನು ನನ್ನ ಕತೆಗಳಲ್ಲಿ ಹೇಳಲು ಯತ್ನಿಸಿದ್ದೇನೆ’ ಎಂದು ಲೇಖಕಿ ಬಾನು ಮುಷ್ತಾಕ್ ಹೇಳಿದರು.

‘ನಾವೆದ್ದು ನಿಲ್ಲದಿದ್ದರೆ- ಕರ್ನಾಟಕ’ ಮತ್ತು ‘ಕರ್ನಾಟಕ ಲೇಖಕಿಯರ ಸಂಘ’ವು ಬುಧವಾರ ಆಯೋಜಿಸಿದ್ದ ‘ಎದೆಯ ಹಣತೆಯ ಬೆಳಕಿನಲ್ಲಿ ಮಾತುಕತೆ’ ಸಂವಾದದಲ್ಲಿ ಅವರು ಸಭಿಕರ ಪ್ರಶ್ನೆಗಳಿಗೆ ಉತ್ತರಿಸಿದರು. ಲೇಖಕಿಯ ಸಂಘದ ಅಧ್ಯಕ್ಷೆ ಆರ್.ಸುನಂದಮ್ಮ, ‘ಸಹೋದರಿತ್ವದ ಕುರಿತಾಗಿ ನಿಮ್ಮ ಕತೆಗಳು ವಿಶಿಷ್ಟವಾದ ಮಾದರಿಗಳನ್ನು ಕಟ್ಟಿಕೊಡುತ್ತವೆ’ ಎಂದು ವಿಷಯ ಪ್ರಸ್ತಾಪಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಬಾನು ಅವರು, ‘ಕರಿನಾಗರಗಳು ಕತೆಯಲ್ಲಿ ಪ್ರಧಾನ ಪಾತ್ರವಾದ ಮಹಿಳೆಯು ಕೇವಲ ಹೆಣ್ಣುಮಕ್ಕಳನ್ನೇ ಹಡೆದಳೆಂಬ ಕಾರಣಕ್ಕೆ ಗಂಡ ಮತ್ತು ಪಿತೃಪ್ರಧಾನ ಸಮಾಜದಿಂದ ತಿರಸ್ಕೃತಳಾಗಿರುತ್ತಾಳೆ. ಆಕೆ ಅದೆಲ್ಲವನ್ನೂ ಸಹಿಸಿಕೊಳ್ಳುತ್ತಾಳೆ. ಆದರೆ ಯಾವ ಹೆಣ್ಣುಮಗಳಿಗಾಗಿ ಅದೆಲ್ಲವನ್ನು ಸಹಿಸಿಕೊಂಡಿದ್ದಳೋ, ಆ ಮಗಳು ಮೃತಪಟ್ಟಾಗ ಆಕೆ ಸಿಡಿದೇಳುತ್ತಾಳೆ. ಆಕೆಯ ನೋವಿಗೆ ಇಡೀ ಕೇರಿಯ ಹೆಣ್ಣುಮಕ್ಕಳು ಜತೆಯಾಗುತ್ತಾರೆ’ ಎಂದು ಉದಾಹರಿಸಿದರು.

ಲೇಖಕಿ ಅನಿತಾ ಚೆರಿಯಾ, ‘ನೀವು ಆವರೆಗೆ ಕನ್ನಡದ ಸಾಹಿತ್ಯಲೋಕದಲ್ಲಿ ಹೆಚ್ಚಾಗಿ ಕಂಡುಬರದಿದ್ದ ಸಾಮಾನ್ಯ ಮಹಿಳೆಯರನ್ನು, ದುಡಿಯುವ ವರ್ಗದ ಪಾತ್ರಗಳನ್ನು, ಮುಸ್ಲಿಂ ಸಮುದಾಯದ ಕಥನಗಳನ್ನು ಕಟ್ಟಿಕೊಟ್ಟಿರಿ. ಬಂಡಾಯ ಸಾಹಿತ್ಯ ಚಳವಳಿಯ ಬೆಂಬಲದ ಜತೆಗೆ ನಿಮ್ಮ ಬರಹಕ್ಕೆ ಬಂದ ಪ್ರತಿಕ್ರಿಯೆ, ಎದುರಾದ ಸವಾಲುಗಳು ಹೇಗಿದ್ದವು’ ಎಂದು ಸಂವಾದವನ್ನು ವಿಸ್ತರಿಸಿದರು.

ಬಾನು, ‘ನಾನು ಬರೆದ ಸಂದರ್ಭದಲ್ಲಿ ಇದ್ದ ಚಳವಳಿಗಳ ರಭಸ ಇಂದು ಇಲ್ಲ. ಮತ್ತೆ ಅಂತಹ ವಾತಾವರಣ ಸೃಷ್ಟಿಯಾಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಹೀಗಾಗಿ ಇಂದು ಸವಾಲುಗಳು ಹೆಚ್ಚು ಇರಬಹುದು. ಹಾಗೆಂದು ನಮಗೆ ಸವಾಲುಗಳು ಇರಲಿಲ್ಲ ಎಂದಲ್ಲ. ನಮ್ಮ ಬರಹಗಳನ್ನು ‘ಅಡಿಗೆಮನೆ ಸಾಹಿತ್ಯ, ಸಾಬರ ಸಾಹಿತ್ಯ’ ಎಂಬ ಮಾತುಗಳನ್ನು ಬಳಸಿಕೊಂಡು ಸಾಹಿತ್ಯ ಸಮ್ಮೇಳನಗಳಲ್ಲೂ ಲೇವಡಿ ಮಾಡಿದ ಘಟನೆಗಳು ನಡೆದಿದ್ದವು’ ಎಂದರು.

ಸಾಂಸ್ಕೃತಿಕ ಮುನ್ನೋಟ

ಹಾಸ್ಯ ನಾಟಕ ಪ್ರದರ್ಶನ

‘ಮುದ್ದಣ್ಣನ ಪ್ರಮೋಷನ್ ಪ್ರಸಂಗ’ ನಾಟಕದ ದೃಶ್ಯ

ಬೆಂಗಳೂರು: ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗತಂಡವು ಇದೇ 29ರ ಸಂಜೆ 5 ಮತ್ತು 7 ಗಂಟೆಗೆ ಬನಶಂಕರಿಯ ಸುಚಿತ್ರ ಫಿಲ್ಮ್ ಸೊಸೈಟಿಯಲ್ಲಿ ‘ಮುದ್ದಣ್ಣನ ಪ್ರಮೋಷನ್ ಪ್ರಸಂಗ’ ಹಾಸ್ಯ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ರಾಜೇಂದ್ರ ಕಾರಂತ ಅವರು ನಾಟಕ ರಚಿಸಿದ್ದು, ಅಶೋಕ್ ಬಿ. ನಿರ್ದೇಶಿಸಿದ್ದಾರೆ. ಟಿಕೆಟ್‌ಗಳು ಬುಕ್ ಮೈ ಶೋನಲ್ಲಿ ಲಭ್ಯ. ಸಂಪರ್ಕಕ್ಕೆ: 9945977184 ಅಥವಾ 9916863637

27ರಿಂದ ನಾಟಕೋತ್ಸವ

ಬೆಂಗಳೂರು: ವಿಶ್ವ ರಂಗಭೂಮಿ ದಿನಾಚರಣೆ ಪ್ರಯುಕ್ತ ಎಂಇಎಸ್ ಕಲಾವೇದಿ ಸಂಸ್ಥೆಯು ಇದೇ 27ರಿಂದ 29ರವರೆಗೆ ಮಲ್ಲೇಶ್ವರದಲ್ಲಿರುವ ಎಂಇಎಸ್ ಕಿಶೋರ ಕೇಂದ್ರದ ಪ್ರೊ.ಬಿ.ಆರ್. ಶೇಷಾದ್ರಿ ಅಯ್ಯಂಗಾರ್ ಸಭಾಂಗಣದಲ್ಲಿ ‘ಶ್ರೀಮತಿ ವಿಮಲಾ ರಂಗಚಾರ್ ಮತ್ತು ಡಾ.ರಂಗಚಾರ್’ ನಾಟಕೋತ್ಸವ ಹಮ್ಮಿಕೊಂಡಿದೆ.

ಮೂರೂ ದಿನ ಸಂಜೆ 6.30ರಿಂದ ಕಾರ್ಯಕ್ರಮಗಳು ಪ್ರಾರಂಭವಾಗಲಿವೆ. 27ರಂದು ಅರ್ಚನಾ ಶಾಮ್ ನಿರ್ದೇಶನದಲ್ಲಿ ಅಂತರಂಗ ತಂಡದ ಕಲಾವಿದರು ‘ಹುತ್ತದಲ್ಲಿ ಹುತ್ತ’ ನಾಟಕ ಪ್ರದರ್ಶಿಸಲಿದ್ದಾರೆ. 28ರಂದು ವೀಣಾ ಶರ್ಮಾ ಭೂಸನೂರಮಠ ಅವರ ನಿರ್ದೇಶನದಲ್ಲಿ ರಾಷ್ಟ್ರೀಯ ನಾಟಕ ಶಾಲೆ ವಿದ್ಯಾರ್ಥಿಗಳು ‘ಈ ಕೆಳಗಿನವರು’ ನಾಟಕ ಹಾಗೂ 29ರಂದು ದಾಕ್ಷಾಯಿಣಿ ಭಟ್ ಅವರ ನಿರ್ದೇಶನದಲ್ಲಿ ದೃಶ್ಯ ಬೆಂಗಳೂರು ತಂಡದ ಕಲಾವಿದರು ‘ಮೃಚ್ಛಕಟಿಕ’ ನಾಟಕ ಪ್ರದರ್ಶಿಸಲಿದ್ದಾರೆ.

‘ಹುತ್ತದಲ್ಲಿ ಹುತ್ತ’ ನಾಟಕ ಪ್ರದರ್ಶನ

ಬೆಂಗಳೂರು: ಅಂತರಂಗ ತಂಡವು ಇದೇ 28 ಮತ್ತು 29ರಂದು ಸಂಜೆ 7.15ಕ್ಕೆ ಎನ್.ಆರ್. ಕಾಲೊನಿಯಲ್ಲಿರುವ ಡಾ.ಸಿ.ಅಶ್ವಥ್ ಕಲಾ ಭವನದಲ್ಲಿ ‘ಹುತ್ತದಲ್ಲಿ ಹುತ್ತ’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಈ ನಾಟಕವನ್ನು ಟಿ.ಪಿ. ಕೈಲಾಸಂ ಅವರು ರಚಿಸಿದ್ದಾರೆ. ಇದು ಹಾಸ್ಯ ನಾಟಕವಾಗಿದ್ದು, ಮೂಲದಲ್ಲಿ ಬಿ.ವಿ. ರಾಜಾರಾಂ ಅವರು ನಿರ್ದೇಶಿಸಿದ್ದಾರೆ. ಈಗ ಅರ್ಚನಾ ಶ್ಯಾಮ್ ನಿರ್ದೇಶನದಲ್ಲಿ ಈ ನಾಟಕ ಪ್ರದರ್ಶನ ಕಾಣಲಿದೆ. ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ

ಸಂಪರ್ಕಕ್ಕೆ: 9880914509

‘ಹುತ್ತದಲ್ಲಿ ಹುತ್ತ’ ನಾಟಕದ ದೃಶ್ಯ

ಪ್ರತಿ ಗುರುವಾರ ಪ್ರಕಟವಾಗುವ ‘ಸಾಂಸ್ಕೃತಿಕ ಮುನ್ನೋಟ’ ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

‘ಭಗವಂತನ ಮರಣ’ ನಾಟಕ ಪ್ರದರ್ಶನ

ಬೆಂಗಳೂರು: ಸಮುದಾಯ ಬೆಂಗಳೂರು ಇದೇ 28ರಂದು ಮಧ್ಯಾಹ್ನ 3.30 ಹಾಗೂ ಸಂಜೆ 7.30ಕ್ಕೆ ಜೆ.ಪಿ.ನಗರದಲ್ಲಿರುವ ರಂಗಶಂಕರದಲ್ಲಿ ‘ಭಗವಂತನ ಮರಣ’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಇದು ಕೆ.ಆರ್. ಮೀರಾ ಅವರ ಮಲಯಾಳಂ ಕಥೆ ಆಧಾರಿತ ನಾಟಕವಾಗಿದೆ. ಕೆ.ಪ್ರಭಾಕರನ್ ಅವರು ಕನ್ನಡಕ್ಕೆ ತಂದಿದ್ದು, ಸ್ಯಾಮ್ ಕುಟ್ಟಿ ಪಟ್ಟಂಕರಿ ಅವರು ಈ ನಾಟಕ ನಿರ್ದೇಶಿಸಿದ್ದಾರೆ. ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ

28ಕ್ಕೆ ‘ಕಲಾ ಸ್ಪಂದನ’ ಸಂಗೀತ–ನೃತ್ಯ

ಬೆಂಗಳೂರು: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್ ಹಾಗೂ ಅಲಂಕೃತಾ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ ಜಂಟಿಯಾಗಿ ಇದೇ 28ರಂದು ಸಂಜೆ 6 ಗಂಟೆಗೆ ಜಯನಗರದ 4ನೇ ಬ್ಲಾಕ್‌ನಲ್ಲಿರುವ ಸನಾತನ ಕಲಾಕ್ಷೇತ್ರದಲ್ಲಿ ‘ಕಲಾ ಸ್ಪಂದನ’ ಶಾಸ್ತ್ರೀಯ ಸಂಗೀತ, ನೃತ್ಯ ತಿಂಗಳ ಕಾರ್ಯಕ್ರಮ ಹಮ್ಮಿಕೊಂಡಿದೆ.

ಶ್ರೀಜಿತ ಸಾನಿಯಲ್ ಅವರಿಂದ ಒಡಿಸ್ಸಿ ನೃತ್ಯ, ನಿಯತಿ ಅರವಿಂದ ಅವರಿಂದ ಹಿಂದೂಸ್ತಾನಿ ಗಾಯನ ನಡೆಯಲಿದೆ. ಸುಹಾಸ್ ಎಸ್. ರಾವ್, ಸುಮೇಧ್ ಕಡೇಕಾರ್ ಅವರಿಂದ ತಬಲಾ ವಾದನ ಹಮ್ಮಿಕೊಳ್ಳಲಾಗಿದೆ. ಅವರಿಗೆ ಅಮೃತೇಶ್ ಕುಲಕರ್ಣಿ ಹಾಗೂ ನಿಖಿಲ್ ಕಾರಂತ್ ಸಾಥ್ ನೀಡಲಿದ್ದಾರೆ.

ಪ್ರತಿಭಟನೆ: ಸಂಚಾರ ದಟ್ಟಣೆ

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಗರದಲ್ಲಿ ಸರಣಿ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ನಗರದಲ್ಲಿ ಬುಧವಾರ ಸರಣಿ ಪ್ರತಿಭಟನೆಗಳು ನಡೆದ ಪರಿಣಾಮ ಸಂಚಾರ ಅಸ್ತವ್ಯಸ್ತವಾಯಿತು. ಇದರಿಂದಾಗಿ ವಾಹನ ಸವಾರರು ಪರದಾಡಿದರು.

ಹಳೆಯ ಮೀಸಲಾತಿ ಜಾರಿಗೊಳಿಸುವಂತೆ ಆಗ್ರಹಿಸಿ, ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟದಿಂದ ಪ್ರತಿಭಟನೆ ನಡೆಯಿತು. ಈ ಪ್ರತಿಭಟನೆಗೆ ದೊಡ್ಡ ಸಂಖ್ಯೆಯಲ್ಲಿ ಪ್ರತಿಭಟನಕಾರರು ಬಂದಿದ್ದರು. ಸ್ವಾತಂತ್ರ್ಯ ಉದ್ಯಾನದ ಸುತ್ತಮುತ್ತಲ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು.

ಶಾಂತಲಾ ಜಂಕ್ಷನ್, ಆನಂದ ರಾವ್ ವೃತ್ತದ ಮೇಲ್ಸೇತುವೆ, ಶೇಷಾದ್ರಿ ರಸ್ತೆ, ಮೈಸೂರು ಬ್ಯಾಂಕ್ ವೃತ್ತ, ಚಾಲುಕ್ಯ ವೃತ್ತ, ಕೆ.ಜಿ ರಸ್ತೆ, ಸಾಗರ್ ಜಂಕ್ಷನ್, ರಾಜೀವ್ ಗಾಂಧಿ ವೃತ್ತ, ಸ್ವಸ್ತಿಕ್, ನೆಹರೂ ವೃತ್ತದಲ್ಲಿ ದಟ್ಟಣೆ ಉಂಟಾಗಿ ವಾಹನ ಚಾಲಕರು ಪರದಾಡಿದರು.

ಕಾಳಿದಾಸ ರಸ್ತೆಯ ಕನಕದಾಸ ಜಂಕ್ಷನ್ ಕಡೆಯಿಂದ ಸ್ವಾತಂತ್ರ್ಯ ಉದ್ಯಾನ ಕಡೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು. ವಾಹನ ಸವಾರರು, ಕನಕದಾಸ ಜಂಕ್ಷನ್‌ನಲ್ಲಿ ಬಲಕ್ಕೆ ತಿರುವು ಪಡೆದು ಸಾಗರ ಜಂಕ್ಷನ್ ಕಡೆಗೆ ಸಂಚರಿಸುತ್ತಿದ್ದರು. ಅಲ್ಲಿಯೂ ದಟ್ಟಣೆ ಉಂಟಾಯಿತು.

ರಾಜ್ಯ ಸರ್ಕಾರಿ ನೌಕರರ ಸಂಘದ ಆವರಣದಲ್ಲಿ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದಿಂದ ಪ್ರತಿಭಟನೆ ನಡೆಯಿತು. ಸಂಘದ ಕಚೇರಿ ಸುತ್ತಮುತ್ತಲ ರಸ್ತೆಗಳಲ್ಲಿ ವಾಹನ ದಟ್ಟಣೆ ಉಂಟಾಗಿತ್ತು. ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಮಾದಿಗ ಸಂಘಟನೆಗಳ ಒಕ್ಕೂಟದಿಂದ ಮುಖ್ಯಮಂತ್ರಿ ನಿವಾಸಕ್ಕೆ ಮುತ್ತಿಗೆ ಹಾಕುವುದಾಗಿ ಮುಖಂಡರು ಎಚ್ಚರಿಕೆ ನೀಡಿದ್ದರು. ಹೀಗಾಗಿ ಮುಖ್ಯಮಂತ್ರಿ ನಿವಾಸದ ಸುತ್ತಮುತ್ತ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಪ್ರತಿಭಟನೆ ಹಿನ್ನೆಲೆಯಲ್ಲಿ ವಾಹನ ಸವಾರರು ಪರ್ಯಾಯ ಮಾರ್ಗದಲ್ಲಿ ಸಂಚರಿಸಿದರು. ಹೆಬ್ಬಾಳ ರಸ್ತೆ, ಮೇಖ್ರಿ ವೃತ್ತ, ಯಶವಂತಪುರ, ಬಿಡಿಎ ವೃತ್ತ, ಚಾಲುಕ್ಯ ವೃತ್ತ, ಇನ್ಫೆಂಟ್ರಿ ರಸ್ತೆ, ಇಂಡಿಯನ್ ಎಕ್ಸ್‌ಪ್ರೆಸ್ ವೃತ್ತದಲ್ಲಿ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ಪ್ರತಿಭಟನೆಯ ಪರಿಣಾಮ ನಗರದ ಸ್ವಾತಂತ್ರ್ಯ ಉದ್ಯಾನದ ಬಳಿ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತ್ತು

ಮನವಿ...

ಪ್ರಜಾವಾಣಿ ಚಿತ್ರ

ಹೆಬ್ಬಾಳದ ಮೇಲ್ಸೇತುವೆ ಬಳಿಯ ನಾಡಪ್ರಭು ಕೆಂಪೇಗೌಡರ ಪ್ರತಿಮೆಯನ್ನು ಎತ್ತರದ ಪ್ರದೇಶದಲ್ಲಿ ಮರು ಪ್ರತಿಷ್ಠಾಪಿಸುವಂತೆ ರಾಜ್ಯ ಒಕ್ಕಲಿಗರ ಮಹಾಸಭಾ ಅಧ್ಯಕ್ಷ ಆನಂದ್ ಎ.ಎಚ್., ತಲಕಾಡು ಚಿಕ್ಕ ರಂಗೇಗೌಡ, ಭಾಸ್ಕರ್ ಗೌಡ, ರಣಜಿತ್, ಮೋಹನ್ ಕುಮಾರ್, ಪ್ರಕಾಶ್ ಮತ್ತು ಲೋಕೇಶ್ ಅವರನ್ನು ಒಳಗೊಂಡ ನಿಯೋಗವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧ್ಯಕ್ಷ ಎನ್.ಎ. ಹ್ಯಾರಿಸ್ ಅವರಿಗೆ ಮನವಿ ಸಲ್ಲಿಸಿತು

‘ಅಪಾರ್ಟ್‌ಮೆಂಟ್ ಮಾಲೀಕತ್ವ ಮಸೂದೆ: ಶೀಘ್ರ ಚರ್ಚೆ’

ಬೆಂಗಳೂರು: ‘ಕರ್ನಾಟಕ ಅಪಾರ್ಟ್‌ಮೆಂಟ್ (ಮಾಲೀಕತ್ವ ಮತ್ತು ನಿರ್ವಹಣೆ) ಮಸೂದೆಗೆ ಸಂಬಂಧಿಸಿದಂತೆ ಶೀಘ್ರದಲ್ಲೇ ಶಾಸಕರ ಸಭೆ ಕರೆದು ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಡಾ.ಸಿ.ಎನ್. ಅಶ್ವತ್ಥನಾರಾಯಣ ವಿಷಯ ಪ್ರಸ್ತಾಪಿಸಿದಾಗ ಪ್ರತಿಕ್ರಿಯಿಸಿದ ಶಿವಕುಮಾರ್,‘ ಅಪಾರ್ಟ್‌ಮೆಂಟ್ ಅಸೋಸಿಯೇಷನ್‌ಗಳ ಜೊತೆ ಮಾತುಕತೆ ನಡೆಸಿದಾಗ, ಅವರು ನನ್ನನ್ನು ಬ್ಲ್ಯಾಕ್‌ಮೇಲ್ ಮಾಡಲು ಬಂದರು. ಆದರೂ, ಕಾಯ್ದೆ ತರಲು ಸರ್ಕಾರ ಸಿದ್ಧವಿದೆ’ ಎಂದು ಭರವಸೆ ನೀಡಿದರು.

ಮೆಟ್ರೊ 3ನೇ ಹಂತ: ₹6,775 ಕೋಟಿ ಸಾಲಕ್ಕೆ ಒಪ್ಪಂದ

ಬೆಂಗಳೂರು: ನಮ್ಮ ಮೆಟ್ರೊ ರೈಲು ಯೋಜನೆ ಹಂತ-3ಕ್ಕೆ ಸಂಬಂಧಿಸಿದಂತೆ ₹6,775 ಕೋಟಿ ಸಾಲ ಪಡೆಯುವ ಸಂಬಂಧ ಜಪಾನ್ ಅಂತರರಾಷ್ಟ್ರೀಯ ಸಹಕಾರ ಸಂಸ್ಥೆಯೊಂದಿಗೆ (ಜೈಕಾ) ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್) ಒಪ್ಪಂದ ಮಾಡಿಕೊಂಡಿದೆ.

ಭಾರತದಲ್ಲಿ ಇರುವ ಜೈಕಾ ಕಚೇರಿಯ ಮುಖ್ಯ ಪ್ರತಿನಿಧಿ ಟಕೆಉಚಿ ತಕುರು ಮತ್ತು ಕೇಂದ್ರ ಸರ್ಕಾರದ ಆರ್ಥಿಕ ವ್ಯವಹಾರಗಳ ಇಲಾಖೆಯ ಜಂಟಿ ಕಾರ್ಯದರ್ಶಿ ಅಲೋಕ್ ತಿವಾರಿ ಒಪ್ಪಂದಕ್ಕೆ ಸಹಿ ಹಾಕಿದರು. ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಜೆ. ರವಿಶಂಕರ್, ನಿರ್ದೇಶಕ (ಹಣಕಾಸು) ಎಸ್. ಶಿವಮಾಥನ್ ಉಪಸ್ಥಿತರಿದ್ದರು.

₹6,775 ಕೋಟಿ ಸಾಲವನ್ನು ಎರಡು ಹಂತಗಳಲ್ಲಿ ನೀಡಲು ಜೈಕಾ ಒಪ್ಪಿಕೊಂಡಿದೆ. ಮೊದಲ ಹಂತವಾಗಿ ₹6,100 ಕೋಟಿ ನೀಡಲಿದೆ.

ಮೆಟ್ರೊ ಹಂತ-3 ಎರಡು ಕಾರಿಡಾರ್‌ಗಳನ್ನು ಹೊಂದಿದ್ದು, ಒಟ್ಟು 44.65 ಕಿಮೀ ಉದ್ದವಿದೆ. ಜೆ.ಪಿ ನಗರ 4ನೇ ಹಂತದಿಂದ ಕೆಂಪಾಪುರವರೆಗೆ 32.15 ಕಿ.ಮೀ., ಹೊಸಹಳ್ಳಿಯಿಂದ ಕಡಬಗೆರೆವರೆಗೆ 12.5 ಕಿ.ಮೀ. ಉದ್ದದ ಕಾರಿಡಾರ್‌ಗಳಾಗಿವೆ. ಈ ಯೋಜನೆಯ ಅಂದಾಜು ವೆಚ್ಚ ₹15,611 ಕೋಟಿಯಾಗಿದೆ.

ಮಾದಿಗ ಸಂಘಟನೆಗಳ ಒಕ್ಕೂಟದಿಂದ ಪ್ರತಿಭಟನೆ

‘ಒಳಮೀಸಲಾತಿ ಜಾರಿ ಮಾಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೇಮಕಾತಿಗಳಲ್ಲಿ ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ, ಮಾದಿಗ ಸಂಘಟನೆಗಳ ಒಕ್ಕೂಟದಿಂದ ನಗರದ ಮೌರ್ಯ ವೃತ್ತದ (ಗಾಂಧಿ ಪ್ರತಿಮೆ) ಬಳಿ ಬುಧವಾರ ಪ್ರತಿಭಟನೆ ನಡೆಯಿತು.

ಪ್ರತಿಭಟನೆಯ ಬಳಿಕ ಮುಖ್ಯಮಂತ್ರಿ ನಿವಾಸಕ್ಕೆ ಮುತ್ತಿಗೆ ಹಾಕಲು ಹೋರಾಟಗಾರರು ಮುಂದಾಗಿದ್ದರು. ಆದರೆ, ಅವರನ್ನು ಮೌರ್ಯ ವೃತ್ತದ ಬಳಿಯೇ ಪೊಲೀಸರು ತಡೆದರು. ಇದೇ ಬೇಡಿಕೆ ಇಟ್ಟುಕೊಂಡು ಮಾದಿಗ ಸಂಘಟನೆಗಳ ಒಕ್ಕೂಟದಿಂದ ರಾಜ್ಯದ ಜಿಲ್ಲಾ ಕೇಂದ್ರಗಳಲ್ಲೂ ಪ್ರತಿಭಟನೆ ನಡೆಯಿತು.

ಒಳಮೀಸಲಾತಿ ಇಲ್ಲದೇ 56,432 ಹುದ್ದೆಗಳಿಗೆ ನೇಮಕಾತಿ ನಡೆಸಲು ರಾಜ್ಯ ಸರ್ಕಾರ ಆದೇಶ ಹೊರಡಿಸಿರುವುದು ಮಾದಿಗ ಹಾಗೂ ಮಾದಿಗ ಸಂಬಂಧಿತ ಉಪ ಜಾತಿಗಳಿಗೆ ಮರಣಶಾಸನವಾಗಿದೆ ಎಂದು ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು.

ಫೆ.27ರಂದು ಹೊರಡಿಸಿರುವ ಆದೇಶವನ್ನು ತಕ್ಷಣವೇ ವಾಪಸ್ ಪಡೆಯಬೇಕು. ಒಳಮೀಸಲಾತಿ ಅಳವಡಿಸಿ ಶೇ 15ರಷ್ಟು ಮೀಸಲಾತಿಯಡಿ ನೇಮಕಾತಿ ನಡೆಸಬೇಕು ಎಂದು ಆಗ್ರಹಿಸಿದರು.

ವಿಶ್ವವಿದ್ಯಾಲಯಗಳನ್ನು ಒಂದು ಘಟಕವಾಗಿಸಿ ನೇಮಕಾತಿ ಮಾಡುವ ಪ್ರಯತ್ನವನ್ನು ಕೈಬಿಡಬೇಕು. ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳಿಗೆ ಶೇ 1ರಷ್ಟು ಪ್ರತ್ಯೇಕ ಮೀಸಲಾತಿ ಕಲ್ಪಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಮೊದಲ ಅಧಿವೇಶನದಲ್ಲಿಯೇ ಒಳ ಮೀಸಲಾತಿ ಜಾರಿಗೆ ತರುವುದಾಗಿ ಭರವಸೆ ನೀಡಿ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿತ್ತು. ಅಧಿಕಾರಕ್ಕೆ ಬಂದು ಎರಡೂವರೆ ವರ್ಷ ಕಳೆದಿದ್ದರೂ ಪ್ರಾಮಾಣಿಕ ಪ್ರಯತ್ನ ನಡೆದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದೀಗ ಉದ್ಯೋಗ ನೇಮಕಾತಿಗಳಲ್ಲಿ ಒಳಮೀಸಲಾತಿ ಅಳವಡಿಸಲು ತಾಂತ್ರಿಕ ಅಡಚಣೆ ಅಥವಾ ಕಾನೂನು ತೊಡಕಿದೆ ಎಂದು ಕುಂಟುನೆಪ ಹೇಳುವುದು ಮೋಸ, ಕುತಂತ್ರ. ಒಳಮೀಸಲಾತಿಯ ವಿರೋಧಿಗಳು ಸಂವಿಧಾನದ ವಿರೋಧಿಗಳು ಎಂದು ಆಕ್ರೋಶ ಹೊರಹಾಕಿದರು.

ಪ್ರತಿಭಟನೆಯಲ್ಲಿ ದಲಿತ ಸಂಘರ್ಷ ಸಮಿತಿಯ ರಾಜ್ಯ ಅಧ್ಯಕ್ಷ ಎನ್.ಮೂರ್ತಿ, ಕರ್ನಾಟಕ ಮಾದಿಗ ದಂಡೋರ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಶಂಕರಪ್ಪ, ಮಾದಿಗ ಮೀಸಲಾತಿ ಹೋರಾಟ ಸಮಿತಿ ರಾಜ್ಯ ಗೌರವಾಧ್ಯಕ್ಷ ಕೇಶವಮೂರ್ತಿ, ವಿಶ್ವ ಜಾಂಭವ ಮಹಾಸಭಾದ ರಾಜ್ಯ ಅಧ್ಯಕ್ಷ ಭೀಮ್‌ರಾಜ್ ಪಾಲ್ಗೊಂಡಿದ್ದರು.

ನೇಮಕಾತಿಗಳಲ್ಲಿ ಒಳಮೀಸಲಾತಿ ಜಾರಿಗೆ ಆಗ್ರಹಿಸಿ, ಮಾದಿಗ ಸಂಘಟನೆಗಳ ಒಕ್ಕೂಟದಿಂದ ಬೆಂಗಳೂರಿನ ಮೌರ್ಯ ವೃತ್ತದ (ಗಾಂಧಿ ಪ್ರತಿಮೆ) ಬಳಿ ಬುಧವಾರ ಪ್ರತಿಭಟನೆ ನಡೆಯಿತು

ಒಳಮೀಸಲು: ವರದಿ ಹರಿದು ಆಕ್ರೋಶ

ಮಾರ್ಚ್ 27ಕ್ಕೆ ಯಾವುದೇ ತೀರ್ಮಾನ ಇಲ್ಲ: ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗ ನೀಡಿರುವ ವರದಿಯನ್ನು ತಿರಸ್ಕರಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟ ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ವರದಿಯ ಪ್ರತಿಯನ್ನು ಹರಿದು ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ನಾಗಮೋಹನದಾಸ್ ಆಯೋಗದ ವರದಿ ಅವೈಜ್ಞಾನಿಕವಾಗಿದ್ದು, ಬಲಗೈ ಸೇರಿದಂತೆ ಹಲವು ಸಮುದಾಯಗಳಿಗೆ ಅನ್ಯಾಯವಾಗಿದೆ. ಈ ವರದಿಯನ್ನು ತಿರಸ್ಕರಿಸಬೇಕು. ಮರು ಸಮೀಕ್ಷೆ ನಡೆಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'ಹಿಂದುಳಿದ ವರ್ಗಗಳ ಆಯೋಗದ ಕುಟುಂಬ ಸಮೀಕ್ಷೆಯ ಅಂಕಿ ಅಂಶದೊಂದಿಗೆ ನಾಗಮೋಹನದಾಸ್ ಆಯೋಗದ ಅಂಕಿ ಅಂಶಗಳನ್ನು ಹೋಲಿಕೆ ಮಾಡಬೇಕು. ಯಾವುದೇ ವೈಜ್ಞಾನಿಕ ಮಾನದಂಡ ಅನುಸರಿಸದೇ ಹೊರಡಿಸಿರುವ ಒಳಮೀಸಲಾತಿ ಆದೇಶವನ್ನು ಹಿಂಪಡೆಯಬೇಕು. ಕಾಯಂ ಜಾತಿ ಪ್ರಮಾಣ ಪತ್ರಗಳನ್ನು ಹೊಸ ಜಾತಿ ಪ್ರಮಾಣ ಪತ್ರಗಳೊಂದಿಗೆ ಪರಿಗಣಿಸಬೇಕು' ಎಂದು ಆಗ್ರಹಿಸಿದರು.

'ನಾವು ಒಳ ಮೀಸಲಾತಿಗೆ ವಿರೋಧಿಗಳಲ್ಲ. ಎಲ್ಲ 101 ಪರಿಶಿಷ್ಟ ಜಾತಿಗಳಿಗೂ ಅವುಗಳ ಜನಸಂಖ್ಯೆಗೆ ಅನುಗುಣವಾಗಿ ಸಮಾನ ಅವಕಾಶ ಸಿಗಬೇಕು. ಆಯೋಗದ ವರದಿಯು ಯಾವುದೋ ಒಂದು ಸಮುದಾಯಕ್ಕೆ ಅನುಕೂಲ ಮಾಡಿಕೊಡುತ್ತಿದೆ' ಎಂದು ಆರೋಪಿಸಿದರು.

ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ನೇತೃತ್ವ ವಹಿಸಿದ್ದರು. ಜ್ಞಾನಜ್ಯೋತಿ ಭಂತೇಜಿ, ಮೈಸೂರಿನ ಸ್ವರೂಪಾನಂದ ಸ್ವಾಮೀಜಿ, ಚಿತ್ರದುರ್ಗದ ಬಸವ ನಾಗಿದೇವ ಸ್ವಾಮೀಜಿ, ಕುಡಚಿ ಮಹಾದೇವ ಮಹಾರಾಜ್ ಸಾನ್ನಿಧ್ಯ ವಹಿಸಿದ್ದರು. ಮುಖಂಡರಾದ ಸಿದ್ದಯ್ಯ, ಚಂದ್ರಶೇಖರಯ್ಯ, ಶಿವಣ್ಣ, ಡಿ.ಜಿ. ಸಾಗರ್, ವಿಠಲ ವಗ್ಗನ್, ವಾಣಿ ಶಿವರಾಂ, ಡಿ.ಎಚ್. ಮೂರ್ತಿ ಮಾತನಾಡಿದರು.

ಛಲವಾದಿ ಮಾತಿಗೆ ಅಡ್ಡಿ

- ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಲು ಬಂದಾಗ ಜನರು ವಿರೋಧ ವ್ಯಕ್ತಪಡಿಸಿದ್ದರಿಂದ ಒಂದು ಮಾತೂ ಆಡದೇ ಇಳಿದು ಹೋದರು
- ರಾಜ್ಯದ ವಿವಿಧ ಮೂಲೆಗಳಿಂದ ಭಾರಿ ಸಂಖ್ಯೆಯಲ್ಲಿ ಜನರು ಬಂದಿದ್ದರಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಜಾಗ ಸಾಲದೇ ರಸ್ತೆಯಲ್ಲಿ ತುಂಬಿದ್ದರು
- ಮಾಜಿ ಸಚಿವ ಎನ್. ಮಹೇಶ್ ಸಹಿತ ಅನೇಕ ಹಾಲಿ ಮತ್ತು ಮಾಜಿ ಜನಪ್ರತಿನಿಧಿಗಳು ಭಾಗವಹಿಸಿ ಸಂಘಟನೆಯ ಮುಖಂಡರ ಮಾತುಗಳನ್ನು ಆಲಿಸಿದರು



ನ್ಯಾ. ನಾಗಮೋಹನದಾಸ್ ವರದಿ ತಿರಸ್ಕರಿಸಲು ಆಗ್ರಹಿಸಿ ಕರ್ನಾಟಕ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟ ಬುಧವಾರ ನಡೆಸಿದ ಪ್ರತಿಭಟನೆಯಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದರು. – ಪ್ರಜಾವಾಣಿ ಚಿತ್ರ

'ಮುಖ್ಯಮಂತ್ರಿ ಬರಲೇಬೇಕೆಂದು ಪಟ್ಟು'

ಒಳ ಮೀಸಲಾತಿ ಮತ್ತು ನೇಮಕಾತಿಗೆ ಸಂಬಂಧಿಸಿದಂತೆ ಮಾ.27ರ ಸಚಿವ ಸಂಪುಟ ಸಭೆಯಲ್ಲಿ ಯಾವುದೇ ತೀರ್ಮಾನ ತೆಗೆದುಕೊಳ್ಳುವುದಿಲ್ಲ ಎಂದು ಸರ್ಕಾರ ಹೇಳಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಥಳಕ್ಕೆ ಬರಲೇಬೇಕೆಂದು ಪ್ರತಿಭಟನಕಾರರು ಪಟ್ಟು ಹಿಡಿದರು. ಅವರನ್ನು ಕರೆತರಲು ಪ್ರಮುಖರನ್ನು ಸಚಿವರ ಜತೆ ವಿಧಾನಸೌಧಕ್ಕೆ ಕಳುಹಿಸಲಾಯಿತು. ಆದರೆ, ಅಲ್ಲಿಗೆ ಹೋದವರು ತಂದ ಸಂದೇಶವನ್ನು ಸಭೆಯಲ್ಲಿ ಓದಲಾಯಿತು.

'ಸಚಿವ ಸಂಪುಟ ಸಭೆಯಲ್ಲಿ ಯಾವುದೇ ತೀರ್ಮಾನ ಕೈಗೊಳ್ಳುವುದಿಲ್ಲ. ವಿಶೇಷ ಸಭೆ ನಡೆಸಿ ಒಕ್ಕೂಟದೊಂದಿಗೆ ಚರ್ಚೆಗೆ ಮಾಡಲಾಗುವುದು' ಎಂದಷ್ಟೇ ಸಂದೇಶ ಒಳಗೊಂಡಿತ್ತು. ಬಳಿಕ ಪ್ರತಿಭಟನೆ ಮುಕ್ತಾಯವಾಯಿತು.

ಭರವಸೆ: ಸರ್ಕಾರದ ಪರವಾಗಿ ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಪ್ರತಿಭಟನಾ ಸ್ಥಳಕ್ಕೆ ಬಂದಾಗ ಅವರಿಗೆ ಬೇಡಿಕೆಯ ಮನವಿ ಸಲ್ಲಿಸಲಾಯಿತು. ಬಳಿಕ ಮಾತನಾಡಿದ ಎಂ.ಬಿ. ಪಾಟೀಲ, 'ಎಐಸಿಸಿ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಖರ್ಗೆ, ಸಂಪುಟದಲ್ಲಿ ಎಚ್.ಸಿ. ಮಹದೇವಪ್ಪ, ಜಿ. ಪರಮೇಶ್ವರ, ಪ್ರಿಯಾಂಕ್ ಖರ್ಗೆ ಇರುವುದರಿಂದ ಯಾರಿಗೂ ಆತಂಕ ಬೇಡ. ಸಿದ್ದರಾಮಯ್ಯ ನಿಮ್ಮ ಪರ ಇದ್ದಾರೆ. ಯಾರಿಗೂ ಅನ್ಯಾಯವಾಗುವ ತೀರ್ಮಾನವನ್ನು ಸರ್ಕಾರ ಕೈಗೊಳ್ಳುವುದಿಲ್ಲ' ಎಂದು ಭರವಸೆ ನೀಡಿದರು.

ಅದನ್ನೊಪ್ಪದ ಪ್ರತಿಭಟನಕಾರರು, 'ಮುಖ್ಯಮಂತ್ರಿ ಬರಲೇಬೇಕು' ಎಂದು ಪಟ್ಟು ಹಿಡಿದರು. ಇದರಿಂದ ಗೊಂದಲ ಉಂಟಾಯಿತು. ಮಧ್ಯಪ್ರವೇಶಿಸಿದ ಜ್ಞಾನಪ್ರಕಾಶ ಸ್ವಾಮೀಜಿ, 'ನಿಮ್ಮ ಜತೆ ನಮ್ಮ ಒಕ್ಕೂಟದ ಐವರು ಮುಖಂಡರು ಬರುತ್ತಾರೆ. ಅವರೊಂದಿಗೆ ಮುಖ್ಯಮಂತ್ರಿಯನ್ನು ಕಳುಹಿಸಿಕೊಡಿ' ಎಂದು ಸಚಿವರೊಂದಿಗೆ ಕೆಲವರನ್ನು ಕಳುಹಿಸಿಕೊಟ್ಟರು.

ತಿರಸ್ಕರಿಸದಿದ್ದರೆ ಹೋರಾಟ

'ಸದ್ಯ ಯಾವುದೇ ತೀರ್ಮಾನ ಕೈಗೊಳ್ಳುವುದಿಲ್ಲ ಎಂದು ಮುಖ್ಯಮಂತ್ರಿ ತಿಳಿಸಿರುವುದರಿಂದ ಪ್ರತಿಭಟನೆ ಮುಕ್ತಾಯಗೊಳಿಸುತ್ತೇವೆ. ಮುಂದೆ ತೀರ್ಮಾನ ಕೈಗೊಳ್ಳದೇ ಇದ್ದರೆ, ನಾಗಮೋಹನ್‌ದಾಸ್ ಆಯೋಗದ ವರದಿಯನ್ನು ತಿರಸ್ಕರಿಸದೇ ಇದ್ದರೆ ಮತ್ತೆ ಹೋರಾಟ ನಡೆಸಲಾಗುವುದು. ನಮಗೆ ಅಂಬೇಡ್ಕರ್ ಮೀಸಲಾತಿ ಸಾಕು. ಒಳಮೀಸಲಾತಿ ಬಿಸಾಕು ಎಂಬುದೇ ನಮ್ಮ ಘೋಷಣೆ' ಎಂದು ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ತಿಳಿಸಿದರು.

'ಒಳಮೀಸಲಾತಿ ಕಲ್ಪಿಸದಿದ್ದರೆ ತಕ್ಕಪಾಠ'

ಮಂಡ್ಯ: 'ಸರ್ಕಾರಿ ನೇಮಕಾತಿಯಲ್ಲಿ ಶೇ 6ರಷ್ಟು ಒಳಮೀಸಲಾತಿಯನ್ನು ಹಂಚಿಕೆ ಮಾಡದಿದ್ದರೆ ದಾವಣಗೆರೆ ಹಾಗೂ ಬಾಗಲಕೋಟೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ವಿರುದ್ಧ ಮತ ಚಲಾಯಿಸಬೇಕು' ಎಂದು ಮಾದಿಗ ಸಮುದಾಯ ಬುಧವಾರ ನಡೆಸಿದ ಸಭೆಯಲ್ಲಿ ನಿರ್ಣಯ ಕೈಗೊಂಡಿತು.

'ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಬೇಕು. ಮಾದಿಗರಿಗೆ ಪಾಲು ನೀಡಿದರೆ ಕಾಂಗ್ರೆಸ್ ಜತೆಗಿರುತ್ತೇವೆ. ಇಲ್ಲದಿದ್ದರೆ ಉಪ ಚುನಾವಣೆಯಲ್ಲಿ ಮಾತ್ರವಲ್ಲ, ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲೂ ಕಾಂಗ್ರೆಸ್ ಸೋಲಿಸಬೇಕು' ಎಂದು ನಾಯಕರು ಕರೆ ನೀಡಿದರು.

ಕರ್ನಾಟಕ ಸರ್ಕಾರ
(ಧಾರ್ಮಿಕ ದತ್ತಿ ಇಲಾಖೆ)
ಶ್ರೀ ಶ್ರೀಕಂಠೇಶ್ವರಸ್ವಾಮಿ, ದೇವಾಲಯ, ನಂಜನಗೂಡು

ದೊಡ್ಡಜಾತ್ರಾ ಮಹೋತ್ಸವ – 2026

ಸ್ವಸ್ತಿಶ್ರೀ ವಿಜಾಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು 1948ಕ್ಕೆ ಸಲ್ಲುವ ಶ್ರೀ ಪರಾಭನಾಮ ಸಂವತ್ಸರದ 2026ನೇ ಸಾಲಿನ ಶ್ರೀ ಗೌತಮ ಪಂಚಮಹಾರಥೋತ್ಸವ ಮತ್ತು ತೆಪ್ಪೋತ್ಸವದ ವಿವರ

1.	ದಿ : 27-03-2026 ಶುಕ್ರವಾರ	ಸಂಜೆ : 7.00 ಗಂಟೆಗೆ	"ಶ್ರೀಕಂಠಮುಡಿ ಉತ್ಸವ"
2.	ದಿ : 30-03-2026 ಸೋಮವಾರ	ಬೆಳಗ್ಗೆ : 5.50 ರಿಂದ 6.30 ಗಂಟೆಯೊಳಗೆ	"ಶ್ರೀ ಮನ್ಮಹಾಗೌತಮ ರಥಾರೋಹಣ"
3.	ದಿ : 01-04-2026 ಬುಧವಾರ	ಸಂಜೆ : 7.00 ಗಂಟೆಗೆ	"ಕಪಿಲಾ ನದಿಯಲ್ಲಿ ತೆಪ್ಪೋತ್ಸವ"

ಭಕ್ತ ಮಹಾಶಯಗಳಾದ ತಾವುಗಳು ಸಪರಿವಾರ ಸಮೇತ ಸದರಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಶ್ರೀ ಪಾರ್ವತಿ ಸಮೇತ ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸಿದೆ.

ಸರ್ವರಿಗೂ ಆದರದ ಸುಸ್ವಾಗತ

ಸಿ.ಜಿ. ಕೃಷ್ಣ, ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು.
ಡಾ.ಪಿ. ಶಿವರಾಜು. ಕ.ಆ.ಸೇ, ಆಡಳಿತಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು.
ಜಿ. ಲಕ್ಷ್ಮೀಕಾಂತರೆಡ್ಡಿ, ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು.
ಶರತ್ ಬಿ. ಭಾ.ಆ.ಸೇ., ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರು (ವಿನ್ಯಾಸ & ಗುಳ) ರವರ ಕಛೇರಿ,
9ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009

ಐಎಫ್‌ಟಿ ನಂ: ಬೆಂಜಮಂ/ಮುಅ(ವಿ&ಗುಳ)/ಅಮುಅ/ತಾಂಸ/6561/2025–26 ದಿನಾಂಕ: 24.03.2026

ಟೆಂಡರ್ ಪ್ರಕಟಣೆ – 3ನೇ ಕರೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ ದ್ವಿ–ಹಂತದ ಟೆಂಡರ್ ಪದ್ಧತಿಯಲ್ಲಿ **ಸಕಾನಿಅ(ಬಿಡಬ್ಲ್ಯೂ&ಪಿಎಸ್)–2–3 ಉಪ ವಿಭಾಗದ ವ್ಯಾಪ್ತಿಯಡಿ ಬರುವ ಕಾರ್ಯನಿರ್ವಹಿಸದ ಆರ್‌ಓ ಘಟಕಗಳ ದುರಸ್ತಿ ಮತ್ತು ಪುನರ್ ಸ್ಥಾಪನೆ ಕಾಮಗಾರಿಗಾಗಿ** ಟೆಂಡರನ್ನು ಅಹ್ವಾನಿಸಿದೆ.
ಟೆಂಡರ್‌ಗಿಟ್ಟ ಮೊತ್ತ: **ರೂ.3,24,48,000/–**. ಇ.ಎಂ.ಡಿ: **ರೂ.5,74,400/–**.
ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 08.04.2026 ರ ಸಂಜೆ 04.00 ಗಂಟೆವರೆಗೆ. ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ 09.04.2026 ರಂದು ಸಂಜೆ 4.00 ಗಂಟೆಗೆ. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ಸಹಿ/– ಮುಖ್ಯ ಅಭಿಯಂತರರು (ವಿನ್ಯಾಸ & ಗುಳ)
ವಾ.ಸಾ.ಸಂ.ಇ/ವಾಪ್ರ/6455/ಆಕಾರ್/2025–26

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಯ ಮತ್ತು ಪಾಲನಾ ವಿಭಾಗ, ಸರ್ವಜ್ಞವೃತ್ತ, ಕಾರ್ಕಳ–574104
CIN: U40109 KA 2002 SGC 030425
ಕ್ರಮಾಂಕ: ಕಾನಿಇಂ(ವಿ)/ಲೆಅ/ಸಲೆಹ/ಸಿಸಾ/ಕಾರ್ಕಳ/2025-26/ ದಿನಾಂಕ: 13.03.2026

ತಿಳುವಳಿಕೆ ಅಂತಿಮ ನೋಟೀಸು

ಶ್ರೀ ರಾಘವೇಂದ್ರ, ಚಿಂತಾಮಣಿ, ಕಿರಿಯ ಪವರ್‌ಮ್ಯಾನ್ (ತರಬೇತಿ), ಮುಂಡ್ಕೂರು ಶಾಖೆ, ನಿಟ್ಟೆ ಉಪವಿಭಾಗಕ್ಕೆ ತಾವು ದಿನಾಂಕ 20.06.2022 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡು, ದಿನಾಂಕ 23.01.2023 ರಿಂದ ಕಂಪನಿ ಕಾರ್ಯಗಳಿಗೆ ಹಾಜರಾಗಿರುವುದಿಲ್ಲ. ನಿಮ್ಮ ಗೈರು ಹಾಜರಿ ಬಗ್ಗೆ ನಿಮ್ಮ ಮೇಲಾಧಿಕಾರಿಗಳಿಗೆ ಯಾವುದೇ ಮಾಹಿತಿ ನೀಡದೆ ರಜೆ ಅರ್ಜಿ ಸಲ್ಲಿಸದೆ ಈ ತನಕ ಕಂಪನಿಯ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುತ್ತೀರಿ. ನಿಮ್ಮ ಗೈರು ಹಾಜರಿ ಮತ್ತು ಕಾರ್ಯವೈಖರಿ ಕುರಿತು ನಿಮ್ಮ ಮೇಲಾಧಿಕಾರಿಗಳು ಹಲವಾರು ಬಾರಿ ನಿಮಗೆ ನೋಟೀಸು ಜಾರಿಗೊಳಿಸಲಾಗಿದ್ದರೂ, ನೀವು ಸದರಿ ನೋಟೀಸುಗಳಿಗೆ ಈ ತನಕ ಯಾವುದೇ ಲಿಖಿತ ಉತ್ತರ ನೀಡದೇ ಉದಾಸೀನತೆ ತೋರಿರುತ್ತೀರಿ.
ಆದ್ದರಿಂದ ಸೂಕ್ತ ಸಮಜಾಯಿಷಿಯೊಂದಿಗೆ ನೀಡಿರುವ ನೋಟೀಸಿಗೆ ಉತ್ತರಿಸಿ ಹಾಗೂ ತಕ್ಷಣವೇ ಕರ್ತವ್ಯಕ್ಕೆ ವರದಿ ಮಾಡಲು ಸೂಚಿಸಲಾಗಿದೆ. ತಪ್ಪಿದಲ್ಲಿ ಕವಿಮಂ ನೌಕರರ ಸೇವಾ (ವರ್ಗೀಕರಣ, ಶಿಸ್ತು, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1987ರನ್ವಯ ನಿಮ್ಮ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.
ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಕಾರ್ಕಳ
DIPR/DK/MPL/1807/25-26
ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ : 1912ಕ್ಕೆ ಕರೆ ಮಾಡಿ

ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯ 2025ನೇ ಸಾಲಿನ 'ಗೌರವ ಪ್ರಶಸ್ತಿ'ಗೆ ಸಾಹಿತಿಗಳಾದ ಪ್ರೊ. ಶಿವರಾಮಯ್ಯ (ಬೆಂಗಳೂರು), ಚಂದ್ರಶೇಖರ ತಾಳ್ಯ (ಚಿತ್ರದುರ್ಗ), ಚಂದ್ರಕಾಂತ ಪೋಕಳೆ (ಬೆಳಗಾವಿ), ಡಾ. ವಸುಂಧರಾ ಭೂಪತಿ (ಬಳ್ಳಾರಿ) ಹಾಗೂ ಎಸ್. ತುಕಾರಾಂ (ಮೈಸೂರು) ಆಯ್ಕೆಯಾಗಿದ್ದಾರೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಹಾಗೂ ರಿಜಿಸ್ಟ್ರಾರ್ ಜೆ. ಕರಿಯಪ್ಪ ಮಾಳಿಗೆ ಅವರು ಅಕಾಡೆಮಿ ಸದಸ್ಯರ ಸಮ್ಮುಖದಲ್ಲಿ ಪ್ರಶಸ್ತಿ ಪಟ್ಟಿ ಬಿಡುಗಡೆ ಮಾಡಿದರು. 'ಗೌರವ ಪ್ರಶಸ್ತಿ'ಯು ತಲಾ ₹50 ಸಾವಿರ ನಗದು ಬಹುಮಾನ ಒಳಗೊಂಡಿದೆ.

2025ನೇ ಸಾಲಿನ 'ಸಾಹಿತ್ಯಶ್ರೀ' ಪ್ರಶಸ್ತಿಗೆ ನಿಷ್ಠಿ ರುದ್ರಪ್ಪ (ಬಳ್ಳಾರಿ), ವೀರೇಶ ಬಡಿಗೇರ (ಬಾಗಲಕೋಟೆ), ಸಿ.ಜಿ. ಲಕ್ಷ್ಮೀಪತಿ (ಚಿತ್ರದುರ್ಗ), ಕಂನಾಡಿಗ ನಾರಾಯಣ (ಬೆಂಗಳೂರು), ರೂಪ ಹಾಸನ (ಹಾಸನ), ಜಯರಾಮ್ ರಾಯಪುರ (ವಿಜಯವಾಡ), ಕುಮುದಾ ಸುಶೀಲ್ (ದಾವಣಗೆರೆ), ಓ. ನಾಗರಾಜು (ತುಮಕೂರು), ಬಿ.ಎಂ. ಬಷೀರ್ (ಮಂಗಳೂರು) ಹಾಗೂ ಜ್ಯೋತಿ (ಬೆಂಗಳೂರು) ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು ತಲಾ ₹25 ಸಾವಿರ ಒಳಗೊಂಡಿದೆ.

2024ರ ಪುಸ್ತಕ ಬಹುಮಾನಕ್ಕೆ ವಿಮರ್ಶಕರ ಅಭಿಪ್ರಾಯ ಆಧರಿಸಿ 17 ಕೃತಿಗಳನ್ನು ಆಯ್ಕೆ ಮಾಡಲಾಗಿದೆ. ಈ ಬಹುಮಾನವು ತಲಾ ₹25 ಸಾವಿರ ನಗದು ಒಳಗೊಂಡಿದೆ. 2024ರ ವಿವಿಧ ದತ್ತಿ ಬಹುಮಾನಗಳಿಗೆ 11 ಕೃತಿಗಳು ಆಯ್ಕೆಯಾಗಿವೆ. 'ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮೈಸೂರಿನಲ್ಲಿ ಆಯೋಜಿಸಬೇಕೆಂದುಕೊಂಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಲಭ್ಯತೆ ಆಧರಿಸಿ ಕಾರ್ಯಕ್ರಮ ನಡೆಸಲಾಗುವುದು' ಎಂದು ಎಲ್.ಎನ್. ಮುಕುಂದರಾಜ್ ಹೇಳಿದರು.

5 ಮಂದಿಗೆ 'ಗೌರವ ಪ್ರಶಸ್ತಿ'

ಚಂದ್ರಶೇಖರ ಚಂದ್ರಕಾಂತ ಶಿವರಾಮಯ್ಯ ತುಕಾರಾಂ ವಸುಂಧರಾ

2024ರ ಪುಸ್ತಕ ಬಹುಮಾನ ಪುರಸ್ಕೃತರು

ಪ್ರಕಾರ	ಕೃತಿಯ ಹೆಸರು	ಲೇಖಕರು
ಕಾವ್ಯ	ಚಲಿಸುತ್ತಿವೆ ಚುಕ್ಕಿಗಳು	ಭಾರತೀದೇವಿ ಪಿ.
ಪ್ರಥಮ ಸಂಕಲನ	ಪ್ಯೂಪಾ	ಶಶಿ ತರೀಕೆರೆ
ಕಾದಂಬರಿ	ಇಮಾಮ್ ಸಾಹೇಬರ ಕುದುರೆ	ವೈ.ಎಸ್.ಹರಗಿ
ಸಣ್ಣಕತೆ	ಸರ್ವೆ ನಂಬರ್–97	ಅನಿಲ್ ಗುನ್ನಾಪೂರ
ನಾಟಕ	ಗಂಧವತಿ	ಚಂದ್ರು ಕಾಳೇನಹಳ್ಳಿ
ಲಲಿತ ಪ್ರಬಂಧ	ಒಂದು ತಲೆ ಚವುರದ ಕಥೆ	ಶಿವರಾಜ ಬ್ಯಾಡರಹಳ್ಳಿ
ಪ್ರವಾಸ ಸಾಹಿತ್ಯ	ತಿರುಗಾಟ	ಮಲ್ಲಿಕಾರ್ಜುನ ಹುಲಗಬಾಳಿ
ಜೀವನ ಚರಿತ್ರೆ/ಆತ್ಮಕಥೆ	ಚಿಮಣಿ ಬೆಳಕಿನಿಂದ	ಎಂ.ಜಿ.ಹೆಗಡೆ
ಸಾಹಿತ್ಯ ವಿಮರ್ಶೆ	ಬೆಳಕು ಬೆಳೆಯುವ ಹೊತ್ತು	ಮಹಾಂತೇಶ ಪಾಟೀಲ
ಮಕ್ಕಳ ಸಾಹಿತ್ಯ	ಬಿಸಿ ಬಿಸಿ ಬಾತು	ರಾಜಶೇಖರ ಕುಕ್ಕುಂದಾ
ವಿಜ್ಞಾನ ಸಾಹಿತ್ಯ	ಪಕ್ಷಿಗಳ ವಿಸ್ಮಯ ವಿಶ್ವ	ಶ್ರೀಧರ ತುಮರಿ
ಮಾನವಿಕ	ಪ್ರಜಾಮಾತೆ	ಎನ್.ಎನ್. ಚಿಕ್ಕಮಾದು
ಸಂಶೋಧನೆ	ದಾಸೊಕ್ಕಲಿಗರು	ಹಂಪನಹಳ್ಳಿ ತಿಮ್ಮೇಗೌಡ
ಅನುವಾದ-1 (ಭಾರತೀಯ ಭಾಷೆಯಿಂದ ಕನ್ನಡಕ್ಕೆ ಅನುವಾದ)	ಜಾತಿ ಮತ್ತು ಲಿಂಗತ್ವ	ದು.ಸರಸ್ವತಿ
ಅಂಕಣ ಬರಹ/ವೈಚಾರಿಕ ಬರಹ	ನುಡಿ ಕಂಡಾಯ	ಹುಲಿಕುಂಟೆ ಮೂರ್ತಿ
ಲೇಖಕರ ಮೊದಲ ಸ್ವತಂತ್ರ ಕೃತಿ	ತಿದಿಯ ತುದಿಗೆ ಬೆಂಕಿಯ ಉಗುಳು	ಲಕ್ಷ್ಮಣ ಶರೆಗಾರ
ಸಂಕೀರ್ಣ	ನರವಾನರ	ಪ್ರದೀಪ್ ಕೆಂಜಿಗೆ

2024ರ ದತ್ತಿ ಬಹುಮಾನ ಪುರಸ್ಕೃತರು

ಪ್ರಕಾರ	ದತ್ತಿನಿಧಿ ಬಹುಮಾನ	ಕೃತಿಯ ಹೆಸರು	ಲೇಖಕರು
ಕಾದಂಬರಿ	ಚದುರಂಗ ದತ್ತಿನಿಧಿ ಬಹುಮಾನ	ಬಹುರೂಪಿ	ಪ್ರೇಮಕುಮಾರ್ ಹರಿಯಬ್ಬೆ
ಲಲಿತ ಪ್ರಬಂಧ	ವಿ. ಸೀತಾರಾಮಯ್ಯ ಸೋದರಿ ಇಂದಿರಾ ದತ್ತಿ ಬಹುಮಾನ	ನನ್ನೂರಿನ ಶ್ರೀಸಾಮಾನ್ಯರು	ಕಡಿದಾಳ್ ಪ್ರಕಾಶ್
ಜೀವನಚರಿತ್ರೆ	ಸಿಂಪಿ ಲಿಂಗಣ್ಣ ದತ್ತಿನಿಧಿ ಬಹುಮಾನ	ಕಳೆದ ಕಾಲ ನಡೆದ ದೂರ	ನ್ಯಾ.ಶಿವರಾಜ ವಿ. ಪಾಟೀಲ
ಸಾಹಿತ್ಯ ವಿಮರ್ಶೆ	ಪಿ. ಶ್ರೀನಿವಾಸರಾವ್ ದತ್ತಿನಿಧಿ ಬಹುಮಾನ	ಒಳಮೀಸಲಾತಿ ಮತ್ತು ಇತರ ಲೇಖನಗಳು	ಎಚ್.ಲಕ್ಷ್ಮೀನಾರಾಯಣಸ್ವಾಮಿ
ಕಾವ್ಯ ಹಸ್ತಪ್ರತಿ	ಚಿ. ಶ್ರೀನಿವಾಸರಾಜು ದತ್ತಿ ಬಹುಮಾನ	ಆಕೆ ಒಂದು ಹೂವು ಮತ್ತು ಹಿಡಿ ಮಣ್ಣು	ಅಭಿಷೇಕ ಬಳೆ ಮಸರಕಲ್
ಅನುವಾದ–1	ಎಲ್. ಗುಂಡಪ್ಪ ಮತ್ತು ಶಾರದಮ್ಮ ದತ್ತಿನಿಧಿ ಬಹುಮಾನ	ಸತ್ತವರ ಸೊಲ್ಲು	ಕಾರ್ತಿಕ್ ಆರ್.
ಲೇಖಕರ ಮೊದಲ ಸ್ವತಂತ್ರ ಕೃತಿ	ಮಧುರಚೆನ್ನ ದತ್ತಿನಿಧಿ ಬಹುಮಾನ	ರಾಕ್ಷಸರ ನಡುವೆ ಪಯಣ	ಶೈಲಜಾ ಅಶ್ವತ್ಥ್ ಕೋಲಾರ
ವೈಚಾರಿಕ/ಅಂಕಣ ಬರಹ	ಬಿ.ವಿ. ವೀರಭದ್ರಪ್ಪ ದತ್ತಿನಿಧಿ ಬಹುಮಾನ	ವಾರ್ತಾಭಾರತಿ ಸಂಪಾದಕೀಯ	ಎ.ಎಸ್. ಪುತ್ತಿಗೆ
ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದ	ಅಮೆರಿಕನ್ನಡ ದತ್ತಿನಿಧಿ ಬಹುಮಾನ	ಕುವೆಂಪು ಬ್ರೈಡ್ ಇನ್ ದಿ ಹಿಲ್ಸ್	ವನಮಾಲಾ ವಿಶ್ವನಾಥ್
ದಾಸ ಸಾಹಿತ್ಯ	ಜಲಜಾ ಶ್ರೀಪತಿ ಆಚಾರ್ಯ ಗಂಗೂರ್ ದತ್ತಿನಿಧಿ ಬಹುಮಾನ	ಹರಿದಾಸರ ಮುಂಡಿಗೆಗಳು	ಕಬ್ಬಿನಾಲೆ ವಸಂತ ಭಾರದ್ವಾಜ
ಗಜಲ್ ಕಾವ್ಯ	ನಾಡೋಜ ಡಾ.ಶಾಂತರಸ ಗಜಲ್ ಕಾವ್ಯ ದತ್ತಿ ಬಹುಮಾನ	ನೆಲ ನುಡಿದ ನಾದ	ಯು.ಸಿರಾಜ್ ಅಹಮದ್

350 ಎಪಿಪಿಗಳಿಗೆ ವೇತನ ಬಿಡುಗಡೆ

ಪ್ರಜಾವಾಣಿ ವಾರ್ತೆ

ಶಹಾಪುರ (ಯಾದಗಿರಿ ಜಿಲ್ಲೆ): ಜಿಲ್ಲಾ, ತಾಲ್ಲೂಕುಗಳ ನ್ಯಾಯಾಲಯಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ 350 ಮಂದಿ ಸರ್ಕಾರಿ ಸಹಾಯಕ ಅಭಿಯೋಜಕರಿಗೆ (ಎಪಿಪಿ) ಬುಧವಾರ ಸರ್ಕಾರ ಮೂರು ತಿಂಗಳ ವೇತನ ಬಿಡುಗಡೆ ಮಾಡಿದೆ.

'ಪ್ರಜಾವಾಣಿ' ಮಾರ್ಚ್ 22ರ ಸಂಚಿಕೆಯಲ್ಲಿ '3 ತಿಂಗಳಿಂದ ಎಪಿಪಿಗಳಿಗಿಲ್ಲ ವೇತನ' ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟವಾಗಿತ್ತು. ವರದಿಗೆ ಸ್ಪಂದಿಸಿ ಸರ್ಕಾರ ವೇತನ ಪಾವತಿಸಿದೆ ಎಂದು ಎಪಿಪಿಯೊಬ್ಬರು ತಿಳಿಸಿದರು.

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
5ನೇ ಮಹಡಿ, ಪ್ಲಾಟ್ ನಂ: 1234, ಕೆಎಸ್‌ಐಐಡಿಸಿ ಕಟ್ಟಡ, ಐಟಿ ಪಾರ್ಕ್, ಸೌತ್ ಬ್ಲಾಕ್, ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು–10.
Ph : 080-22372738 e-mail: karnregs.ombudsman@gmail.com
ಸಂ:ಗ್ರಾಅಪ: 186 :ಉಖಾಯೋ:2026 ದಿನಾಂಕ:25.03.2026

ಪತ್ರಿಕಾ ಪ್ರಕಟಣೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಸಂಬಂಧದಲ್ಲಿ ಸ್ವೀಕೃತವಾಗುವ ದೂರುಗಳ ವಿಲೇವಾರಿ ಮತ್ತು ಕುಂದುಕೊರತೆಗಳ ನಿವಾರಣೆಗಾಗಿ ಈ ಕೆಳಕಂಡ ಜಿಲ್ಲೆಗಳಲ್ಲಿ ಎರಡು ವರ್ಷದ ಅವಧಿಗೆ ಓಂಬುಡ್ಸ್ ಪರ್ಸನ್‌ಗಳಾಗಿ ಕಾರ್ಯನಿರ್ವಹಿಸಲು ಆಸಕ್ತರಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಓಂಬುಡ್ಸ್ ಪರ್ಸನ್ ಹುದ್ದೆ ಖಾಲಿಯಿರುವ/ಖಾಲಿಯಾಗಿರುವ ಜಿಲ್ಲೆಗಳು : ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ, ಬೆಳಗಾವಿ, ಬೀದರ್, ಚಿತ್ರದುರ್ಗ, ದಾವಣಗೆರೆ, ಗದಗ, ಹಾಸನ, ಕೊಪ್ಪಳ, ಕೋಲಾರ, ಮೈಸೂರು ಮತ್ತು ಶಿವಮೊಗ್ಗ.
ಅರ್ಜಿ ನಮೂನೆಯನ್ನು ಇಲಾಖೆಯ ವೆಬ್‌ಸೈಟ್ **www.rdpr.karnataka.gov.in** ಗೆ ಭೇಟಿ ನೀಡಿ ಡೌನ್‌ಲೋಡ್ ಮಾಡಿ, ಭರ್ತಿ ಮಾಡಿದ ಅರ್ಜಿಗಳನ್ನು ಪೂರಕ ದಾಖಲೆಗಳೊಂದಿಗೆ **ದಿನಾಂಕ:24.04.2026 ರಂದು ಸಂಜೆ 5.30 ರ** ಒಳಗಾಗಿ ಖುದ್ದಾಗಿ/ಅಂಚೆ ಮೂಲಕ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸುವುದು. ನಿಗದಿಪಡಿಸಿದ ದಿನಾಂಕದ ನಂತರ ತಡವಾಗಿ ಸ್ವೀಕೃತವಾಗುವ ಅಥವಾ ಅಪೂರ್ಣ ಮಾಹಿತಿ/ ಅಗತ್ಯ ದಾಖಲೆಗಳನ್ನು ಲಗತ್ತಿಸಿರದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. (ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080–22342794 ಅನ್ನು ಸಂಪರ್ಕಿಸಬಹುದಾಗಿದೆ).
ಸಹಿ/–
ಮುಖ್ಯ ಕಾರ್ಯಾಚರಣೆ ಅಧಿಕಾರಿ (ಪ್ರ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
DIPR/CP/6450/ZEN/2025-26

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಸಾಮಾಜಿಕ ಅರಣ್ಯ ಉಪ–ವಿಭಾಗ, ವಿಜಯಪುರ
ಸಂಖ್ಯೆ: ವಿಜೆಪಿ/ಸಾಅಉವಿ/ವಿಜೆಪಿ/ಹೊರಗುತ್ತಿಗೆ/ಟೆಂಡರ್/2025–26
ದಿನಾಂಕ: 23.03.2026

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

2026–27 ನೇ ಸಾಲಿನಲ್ಲಿ ವಿಜಯಪುರ ಸಾಮಾಜಿಕ ಅರಣ್ಯ ವಿಭಾಗೀಯ ಕಛೇರಿ ಮತ್ತು ವಲಯ ಅರಣ್ಯ ಅಧಿಕಾರಿ ಸಾಮಾಜಿಕ ಅರಣ್ಯ ವಲಯಗಳಲ್ಲಿ ಡಾಟಾ ಎಂಟ್ರಿ ಆಪರೇಟರ್, ವಾಹನ ಚಾಲಕ ಹಾಗೂ ರಾತ್ರಿ/ಹಗಲು ಕಾವಲುಗಾರರ ಕೆಲಸ ನಿರ್ವಹಿಸಲು ಹೊರಗುತ್ತಿಗೆ ಸೇವೆಯ ಟೆಂಡರ್‌ನ್ನು ದಿನಾಂಕ: 23.03.2026 ರಿಂದ 30.03.2026 **(ಟೆಕ್ನಿಕಲ್ ಮತ್ತು ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ: 01.04.2026 ರಂದು ಬೆಳಿಗ್ಗೆ 11.00 ಘಂಟೆಗೆ)** ರಂದು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವೆಬ್‌ಸೈಟ್ ಮೂಲಕ ಟೆಂಡರ್‌ನ್ನು ಕರೆಯಲಾಗಿದೆ ಹಾಗೂ ಭಾಗವಹಿಸಲಿಚ್ಚಿಸುವವರು ತಮಗೆ ಅನುಕೂಲವಾಗುವ ಟೆಂಡರ್ ವಿವರಗಳನ್ನು https://kppp.karnataka.gov.in ಮೂಲಕ ಟೆಂಡರ್ ನಿಬಂಧನೆ ಇತ್ಯಾದಿ ಮಾಹಿತಿಯನ್ನು ಪಡೆದುಕೊಳ್ಳಬಹುದು.
ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ಉಪ ವಿಭಾಗ, ವಿಜಯಪುರ
ವಾಸಾಸಂಇ/ವಿಜಯಪುರ/837/ಕೆಎಸ್‌ಎಂಸಿಎ/2025–26

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.
ದೂರವಾಣಿ ಸಂಖ್ಯೆ: 080–22255210
ಸಂಖ್ಯೆ: ಕಾಅ/ಕವಿ.1/ಎಇ–4/ಎಇ–ಎಲ್‌ಹೆಚ್/2025–26/88 ದಿನಾಂಕ: 23.03.2026

ಟೆಂಡರ್‌ಗಾಗಿ ಆಹ್ವಾನ

ಮೇಲ್ಕಂಡ ಇಲಾಖೆಯ ಸೂಚಿತ ಸ್ಥಳಗಳಲ್ಲಿ ಪೇಂಟಿಂಗ್, ಪಾಲಿಷಿಂಗ್, ವಾಟರ್ ಪ್ರೂಫಿಂಗ್, ಫ್ಲೈಪ್ರೂಫ್ ಮೆಶ್‌ಗಳನ್ನು ಒದಗಿಸುವುದು, ಶೌಚಾಲಯ ನವೀಕರಣ, ಮಾಸ್ ಪ್ರೊಡಕ್ಷನ್ ಯೂನಿಟ್ ನಿರ್ಮಾಣ, ಮೇಲ್ವಿಚಾರಕರು/ಕಾರ್ಮಿಕರ ಕ್ವಾರ್ಟರ್ಸ್ ನಿರ್ಮಾಣ, ಫೈರ್ ಫೈಟಿಂಗ್ ಹಾಗೂ ಸೋಲಾರ್ ಸಿಸ್ಟಮ್‌ನ್ನು ಒದಗಿಸುವುದು ಹಾಗೂ ಸುಧಾರಣೆ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ ಒಟ್ಟು 05 ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://kppp.karnataka.gov.in)** ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಾಮಗಾರಿಗಿಟ್ಟ ಅಂದಾಜು ಮೊತ್ತ: ಕನಿಷ್ಠ **ರೂ.10.12 ಲಕ್ಷಗಳು,** ಗರಿಷ್ಠ **ರೂ. 82.80 ಲಕ್ಷಗಳು.** ಇಎಂಡಿ: ಕನಿಷ್ಠ **ರೂ.25,500/–, ಗರಿಷ್ಠ ರೂ.82,900/–** ಪ್ರತೀ ಕಾಮಗಾರಿಯ ಕಾಲಾವಧಿ: 2 ರಿಂದ 9 ತಿಂಗಳು (ಮಳೆಗಾಲ ಸೇರಿದಂತೆ). ಕಾಮಗಾರಿಯ ದಸ್ತಾವೇಜು ಬೆಲೆ: ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ **ದಿನಾಂಕ: ಕ್ರ.ಸಂ.1 ರಿಂದ 3ಕ್ಕೆ 30.03.2026, ಸಂಜೆ 5.00 ಗಂಟೆಯೊಳಗೆ** ಮತ್ತು **ಕ್ರ.ಸಂ.4 ಮತ್ತು 5ಕ್ಕೆ 01.04.2026, ಸಂಜೆ 5.00 ಗಂಟೆಯೊಳಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಮಗಾರಿಯ ಸಂಕ್ಷಿಪ್ತ ವಿವರ, ಇಂಡೆಂಟ್ ಸಂಖ್ಯೆಗಳು, ಅಂದಾಜು ಮೊತ್ತ, ಇಎಂಡಿ, ಕಾಲಾವಧಿ, ಮೀಸಲಾತಿ ಮತ್ತು ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://kppp.karnataka.gov.in** ಮೂಲಕ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು.
ವಾಸಾಸಂಇ/ಯುನಿ–ಸಿ.ಪಿ/6437/ಕೆಎಸ್‌ಎಂಸಿಎ/2025–26

GOVERNMENT OF KARNATAKA
Karnataka Government Secretariat, Vikasa Soudha, Dr. B.R. Ambedkar Veedhi, Bengaluru.
NO: DOH 57 RERA 2026 Dated: 24-03-2026

NOTIFICATION

The detailed notification inviting Applications from eligible persons for the Post of One Technical / Administrative Member of the Karnataka Real Estate Appellate Tribunal is Posted on the RERA Website: **www.rera.karnataka.gov.in**

Interested Persons may Apply by 23.04.2026 till 5.00 PM.

By Order and in the name of the Governor of Karnataka
Sd/-
(MOHAN RAJ K.P.)
Secretary to Government, Housing Department.
DIPR/CP/6445/Adverto/2025-26

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ,
ನಂ.16ಸಿ, ಮೌಲಾನಾ ಅಬುಲ್ ಕಲಾಂ ಅಜಾದ್ ಭವನ,
ಮಿಲ್ಲರ್ ಟ್ಯಾಂಕ್‌ಬಂಡ್ ರಸ್ತೆ, ವಸಂತನಗರ, ಬೆಂಗಳೂರು–560052.
Website: https://dom.karnataka.gov.in
ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ

2025–26ನೇ ಸಾಲಿಗೆ Police Constable ನೇಮಕಾತಿ ಪರೀಕ್ಷಾ ಪೂರ್ವ ತರಬೇತಿ ಪಡೆಯಲು ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ ಪ್ರಕಟಣೆ

ಅರ್ಜಿ ಸಲ್ಲಿಕೆ
2025–26ನೇ ಸಾಲಿಗೆ ವಸತಿಯುತ Police Constable ನೇಮಕಾತಿ ಪರೀಕ್ಷಾ ಪೂರ್ವ ತರಬೇತಿಯನ್ನು ನೀಡಲು ಅರ್ಹ ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಮಯಾವಕಾಶ
ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ: **26.03.2026.**
ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **31.03.2026.**

ಅರ್ಹತೆಗಳು
- ವಿದ್ಯಾರ್ಥಿಯು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿರಬೇಕು. (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ).
- ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯ ರೂ. 08 ಲಕ್ಷಕ್ಕಿಂತ ಮೀರಿರಬಾರದು.
- ವಿದ್ಯಾರ್ಥಿಯು ದ್ವಿತೀಯ ಪಿ.ಯು.ಸಿ/ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
- **ವಿದ್ಯಾರ್ಥಿಯ ವಯೋಮಿತಿ:** ಕನಿಷ್ಠ 18 ಹಾಗೂ ಗರಿಷ್ಠ 27 ವರ್ಷಗಳ ವಯೋಮಿತಿಯನ್ನು ನಿಗಧಿಪಡಿಸಲಾಗಿದೆ (ಅರ್ಜಿ ಸಲ್ಲಿಸುವ ಅಂತಿಮ ದಿನಾಂಕದೊಳಗೆ).
- ಕೇಂದ್ರ ಮತ್ತು ರಾಜ್ಯ ಸರ್ಕಾರದ ನೌಕರಿಯಲ್ಲಿರುವ ಅಭ್ಯರ್ಥಿಗಳು ಅರ್ಹರಿರುವುದಿಲ್ಲ.

ಅರ್ಜಿದಾರರಿಗೆ ಸೂಚನೆಗಳು
- ಅರ್ಜಿದಾರರು ಅಲ್ಪಸಂಖ್ಯಾತರ ನಿರ್ದೇಶನಾಲಯದ ಜಾಲತಾಣ https://dom.karnataka.gov.in ಇಲ್ಲಿ ಲಭ್ಯವಿರುವ ಅರ್ಜಿ ನಮೂನೆಯಲ್ಲಿ ಮಾರ್ಗಸೂಚಿಗಳನ್ವಯ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.
- ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಜಿಲ್ಲಾ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ ಸಹಾಯವಾಣಿ ಸಂಖ್ಯೆ: 8277799990 ಇವರನ್ನು ಸಂಪರ್ಕಿಸಬಹುದು.

ದಿನಾಂಕ : 26.03.2025
ಸ್ಥಳ : ಬೆಂಗಳೂರು
ಸಹಿ/– ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು
ವಾಸಾಸಂಇ/ವಾಪ್ರ/6457/ಎಂಎಎ/25–26

ಕರ್ನಾಟಕ ಸರ್ಕಾರ ಸಾಮಾಜಿಕ ಅರಣ್ಯ ವಿಭಾಗ, ಚಿತ್ರದುರ್ಗ.
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಚಿತ್ರದುರ್ಗ.
ದೂ.ಸಂಖ್ಯೆ: 08194–220130, 9449863645 ಇಮೇಲ್:dcfsfcta@gmail.com
ಸಂಖ್ಯೆ:ಸಾಅವಿಚಿ.ಆರ್‌ಕೆವಿವೈ/ಸಾಅಯೋ ಟೆಂಡರ್. ಸಿಆರ್ 01/2025–26
+ದಿನಾಂಕ:–23–03–2026

ಇ–ಟೆಂಡರ್ ಪ್ರಕಟಣೆ
ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ

ಚಿತ್ರದುರ್ಗ ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ 2026–27ನೇ ಸಾಲಿನಲ್ಲಿ ಚಿತ್ರದುರ್ಗ ಸಾಮಾಜಿಕ ಅರಣ್ಯ ವಿಭಾಗ ವ್ಯಾಪ್ತಿಯಲ್ಲಿ ಬರುವ ಸಾಮಾಜಿಕ ಅರಣ್ಯ ವಲಯಗಳಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಕೈಗೊಳ್ಳಬೇಕಾದ ಅರಣ್ಯೀಕರಣ ಕಾಮಗಾರಿಗಳಿಗೆ ಸಂಬಂಧಿಸಿದಂತೆ 2026–27 ನೇ ಸಾಲಿಗೆ ರಾಜ್ಯದ ಅರಣ್ಯ ವಿಭಾಗದಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೋಂದಣಿ ಆಗಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ, ಸದರಿ ಕಾಮಗಾರಿಗಳಿಗೆ ದಿನಾಂಕ: 27–03–2026 ರಿಂದ 10–04–2026 ರಂದು 16:00 ಗಂಟೆಯವರೆಗೆ[ಸಂಜೆ:4.00 ಗಂಟೆ] ನಿಗದಿಪಡಿಸಲಾಗಿದೆ. ಒಂದು ವೇಳೆ ಮೇಲ್ಕಂಡ ದಿನಾಂಕದಂದು ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳಲ್ಲಿ ಭಾಗವಹಿಸದ ಕಾಮಗಾರಿಗಳಿಗಾಗಿ ಮರು ಇ_ಟೆಂಡರ್‌ನ್ನು ದಿನಾಂಕ:– 18–04–2026ರಿಂದ 24–04–2026 16:00 ಗಂಟೆಯವರೆಗೆ [ಸಂಜೆ:4.00 ಗಂಟೆ] ನಿಗದಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಟೆಂಡರ್ ವಿವರಗಳನ್ನು https://kppp.karnataka.gov.in/ವೆಬ್ ಸೈಟ್ ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ. ಒಟ್ಟು ಟೆಂಡರ್ ಮೊತ್ತ ರೂ.401.407 ಲಕ್ಷಗಳು.
ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ತಾಂತ್ರಿಕ ಸಹಾಯಕರು, ಸಾಮಾಜಿಕ ಅರಣ್ಯ ವಿಭಾಗ, ಚಿತ್ರದುರ್ಗ
RO.No.793:DIPR/CTA/KSMCA/2025-26

‘ಕೇಂದ್ರದ್ದು ಚೊಂಬು; ನಮ್ಮದು ತುಂಬಿದ ಕೊಡ’

ಬಜೆಟ್ ಮೇಲಿನ ಚರ್ಚೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಖಾಲಿ ಚೊಂಬು ಕೊಟ್ಟಿದ್ದಾರೆ ಎಂದು ವಿರೋಧ ಪಕ್ಷದವರು ಬಜೆಟ್ ಅನ್ನು ಟೀಕಿಸಿದ್ದಾರೆ. ನಮ್ಮದು ಖಾಲಿ ಚೊಂಬಲ್ಲ, ತುಂಬಿದ ಕೊಡದಂತಹ ಬಜೆಟ್’ ಎಂದು ಸಿದ್ದರಾಮಯ್ಯ ಹೇಳಿದರು.

ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡಿದ ಅವರು, ತಾವು ಮಂಡಿಸಿದ 17ನೇ ಬಜೆಟ್ ಅನ್ನು ಸಮರ್ಥಿಸಿಕೊಂಡರು. ‘ಕೇಂದ್ರ ಬಜೆಟ್ ರಾಜ್ಯಕ್ಕೆ ಖಾಲಿ ಚೊಂಬು ಕೊಟ್ಟಿತ್ತು ಎಂದಿದ್ದೆ. ಅದಕ್ಕೆ, ನಾನು ಬಜೆಟ್ ಮಂಡಿಸಿದ ದಿನವೇ ಬಿಜೆಪಿಯವರು ಖಾಲಿ ಚೊಂಬು ಪ್ರದರ್ಶಿಸಿದರು. ನಮ್ಮದು ಖಾಲಿ ಚೊಂಬು ಆಗಲು ಸಾಧ್ಯವೇ ಇಲ್ಲ’ ಎಂದರು. ‘ಮಾವಿನ ಹಣ್ಣು ಬೇವಿನ ಹಣ್ಣು ಆಗಲು ಸಾಧ್ಯವಿಲ್ಲ. ಅದೇ ರೀತಿ ಬೇವಿನ ಹಣ್ಣು ಮಾವಿನ ಹಣ್ಣು ಆಗಲು ಸಾಧ್ಯವಿಲ್ಲ. ರಾಜ್ಯದ ಜನ ಬುದ್ಧಿವಂತರು ಅವರಿಗೆ ಮಾವಿನಹಣ್ಣು ಯಾವುದು ಬೇವಿನ ಹಣ್ಣು ಯಾವುದು ಎಂಬುದು ಗೊತ್ತಾಗುತ್ತದೆ. ಮಾವಿನ ಹಣ್ಣನ್ನು ಬೇವಿನ ಹಣ್ಣು ಎನ್ನುವುದಿಲ್ಲ’ ಎನ್ನುತ್ತಾ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರ ಕಾಲೆಳೆದರು.

‘ನೀವು ಕೊಟ್ಟ ಮಾವಿನಹಣ್ಣು ಬರೀ ಹುಳಿ ಎಂಬುದು ಜನರಿಗೆ ಗೊತ್ತಾಗಿದೆ’ ಎಂದು ಅಶೋಕ ತಿರುಗೇಟು ನೀಡಿದರು.

‘ಹೈಕಮಾಂಡ್ ಅವಕಾಶ ನೀಡಿದರೆ ಮತ್ತೆರಡು ಬಜೆಟ್’

‘ಹೈಕಮಾಂಡ್ ಅವಕಾಶ ನೀಡಿದರೆ ಮುಂದಿನ ಎರಡು ಬಜೆಟ್ ನಾನೇ ಮಂಡಿಸುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ಪುನರುಚ್ಚರಿಸಿದರು.

ಬಜೆಟ್ ಚರ್ಚೆಯ ಮೇಲೆ ಉತ್ತರಿಸುವ ವೇಳೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ‘ನೀವು ಮತ್ತೆ ಎರಡು ಬಜೆಟ್ ಮಂಡಿಸಬೇಕಿದೆ’ ಎಂದರು.

ಅದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘ಮುಂದಿನ ಎರಡು ವರ್ಷ ನಮ್ಮ ಸರ್ಕಾರವೇ ಬಜೆಟ್ ಮಂಡಿಸಲಿದೆ. ಹೈಕಮಾಂಡ್ ಒಪ್ಪಿದರೆ ಮತ್ತೆರಡು ಬಜೆಟ್ ನಾನೇ ಮಂಡಿಸುತ್ತೇನೆ. ಮುಂದೆಯೂ ನಾವೇ ಅಧಿಕಾರಕ್ಕೆ ಬರುತ್ತೇವೆ’ ಎಂದು ಪುನರುಚ್ಚರಿಸಿದರು.

ಆಗ ಸಿದ್ದರಾಮಯ್ಯ, ‘ನೀನು ಕೂಡ ಮುಂದಿನ ಮುಖ್ಯಮಂತ್ರಿ ನಾನೇ ಅಂತ ಹೇಳಪ್ಪ’ ಎಂದು ಅಶೋಕ್‌ಗೆ ಕಾಲೆಳೆದರು.

ಮಧ್ಯಪ್ರವೇಶಿಸಿದ ಬಿಜೆಪಿಯ ವಿ. ಸುನಿಲ್ ಕುಮಾರ್, ‘ಜೆಡಿಎಸ್‌ನಲ್ಲಿದ್ದಾಗ ನೀವು ರಾಷ್ಟ್ರೀಯ ಅಧ್ಯಕ್ಷರ ಮಾತು ಕೇಳಿಲ್ಲ ಅಂದಿದ್ದೀರಿ. ಅದೇ ರೀತಿ ಈಗಲೂ ನಿಮ್ಮ ರಾಷ್ಟ್ರೀಯ ನಾಯಕರ ಮಾತು ಕೇಳಬಾರದು. ರಾಜ್ಯದ ಗಟ್ಟಿ ನಾಯಕ ನೀವು, ಯಾವ ಹೈಕಮಾಂಡ್ ಸರ್... ನಿಮ್ಮ ಮುಂದೆ’ ಎಂದು ಕೆಣಕಿದರು. ಅದಕ್ಕೆ ಸಿದ್ದರಾಮಯ್ಯ, ‘ನಿಮಗೆ ಧಮ್ ಇದ್ದರೆ ಮೋದಿ ಮಾತನ್ನು ಕೇಳಲ್ಲ ಅಂತ ಹೇಳಿ’ ಎಂದ ತಿರುಗೇಟು ನೀಡಿದರು.

ಆಗ ಸುನಿಲ್ ಕುಮಾರ್, ‘ನಾನು ಮೋದಿಯವರ, ಹೈಕಮಾಂಡ್‌ನ ಭಕ್ತ. ಪಕ್ಷದ ಶಿಸ್ತಿನ ಸಿಪಾಯಿ. ನಾನು ಹೈಕಮಾಂಡ್ ಮಾತನ್ನೇ ಕೇಳುವುದು. ಆದರೆ, ನೀವು ದೇವೇಗೌಡರು ರಾಷ್ಟ್ರೀಯ ಅಧ್ಯಕ್ಷರಾಗಿದ್ದಾಗ ಜೆಡಿಎಸ್‌ನಲ್ಲಿ ನಿಮ್ಮತನವನ್ನೇ ಉಳಿಸಿಕೊಂಡಿದ್ದೀರಿ. ಈವಾಗ್ಲೂ ಅದೇ ನಿಮ್ಮತನವನ್ನು 2026ರಿಂದ 2028ರವರೆಗೆ ಉಳಿಸಿಕೊಳ್ಳಿ’ ಎಂದರು.

ಆಗ ಸಿದ್ದರಾಮಯ್ಯ, ‘ಹೈಕಮಾಂಡ್ ಮಾತನ್ನು ಎಲ್ಲರೂ ಕೇಳಲೇಬೇಕು. ನಾನು ಏನು ಹೈಕಮಾಂಡ್ ಮಾತು ಕೇಳಲ್ಲ ಅಂತ ಹೇಳಲ್ಲ. ಹೈಕಮಾಂಡ್ ಮಾತನ್ನು ಈಗಲೂ ಕೇಳ್ತೇನೆ. ಮುಂದೆಯೂ ಕೇಳ್ತೇನೆ. ನಾಳೆಯೂ ಕೇಳ್ತೇನೆ’ ಎಂದರು.

ನಿದ್ದೆ ಕೆಟ್ಟಿದ್ದಕ್ಕೆ ಸರ್ಕಾರ ಬಂದಿದೆ: ಡಿಕೆಶಿ

‘ಬಿಜೆಪಿಯವರಿಗೆ ನನ್ನ ಹಾಗೂ ಸಿದ್ದರಾಮಯ್ಯ ಅವರ ಬಗ್ಗೆ ಮಾತನಾಡದಿದ್ದರೆ ನಿದ್ದೆ ಬರುವುದಿಲ್ಲ. ನಾನು ನಿದ್ದೆ ಕೆಟ್ಟಿದ್ದಕ್ಕೆ ನಮ್ಮ ಪಕ್ಷ ಸರ್ಕಾರ ರಚಿಸಿದೆ. ಮುಂದೆ ಎಲ್ಲದಕ್ಕೂ ಕಾಲವೇ ಉತ್ತರ ಕೊಡಲಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾರ್ಮಿಕವಾಗಿ ಹೇಳಿದರು.

ಬಜೆಟ್ ಮೇಲಿನ ಚರ್ಚೆ ವೇಳೆ ಸಿದ್ದರಾಮಯ್ಯ, ‘ಅಶೋಕ ನಿನಗೆ ರಾಜಕೀಯವಾಗಿ ನೀರು ಕುಡಿಸುತ್ತೇನೆ’ ಎಂದರು. ಅದಕ್ಕೆ ಅಶೋಕ, ‘ನೀವು ಪಕ್ಕದಲ್ಲಿರುವವರಿಗೆ (ಡಿ.ಕೆ. ಶಿವಕುಮಾರ್) ನಿದ್ದೆಗೆಡಿಸಿದ್ದೀರಿ. ಪಾಪ, ಅವರು ದೆಹಲಿಯಿಂದ ಬೆಂಗಳೂರು, ಬೆಂಗಳೂರಿನಿಂದ ದೆಹಲಿಗೆ ಅಲೆಯುತ್ತಿದ್ದಾರೆ. ಅವರಿಗೆ ನಿದ್ದೆ ಇಲ್ಲದಂತಾಗಿದೆ’ ಎಂದು ಕೆಣಕಿದರು.

ಸಿದ್ದರಾಮಯ್ಯ ಅವರು ಪಕ್ಕದಲ್ಲೇ ಕುಳಿತಿದ್ದ ಶಿವಕುಮಾರ್ ಕಡೆ ನೋಡುತ್ತಾ, ‘ನಾವಿಬ್ಬರೂ ಚೆನ್ನಾಗಿಯೇ ಇದ್ದೇವೆ. ಹೈಕಮಾಂಡ್ ತೀರ್ಮಾನವೇ ಅಂತಿಮ ಎಂದು ಹೇಳಿದ್ದೇವೆ’ ಎಂದರು.

ಆಗ ಶಿವಕುಮಾರ್, ‘ಅವರಿಗೆ ನಮ್ಮ ಬಗ್ಗೆ ಮಾತನಾಡದಿದ್ದರೆ ನಿದ್ದೆ ಬರಲ್ಲ’ ಎಂದಾಗ ಅಶೋಕ, ‘ನಿಮಗೆ ನಿದ್ದೆ ಇಲ್ಲದಂತೆ ಆಗಿದೆಯಲ್ಲಾ ಅದರ ಬಗ್ಗೆ ಹೇಳುತ್ತಿದ್ದೇವೆ. ನೀವು ಮುಖ್ಯಮಂತ್ರಿ ಆಗುವುದು ಯಾವಾಗ ಅದನ್ನು ಹೇಳಿ’ ಎಂದು ಕೆಣಕಿದರು. ಆಗ ಶಿವಕುಮಾರ್, ‘ನಾನು ನಿದ್ದೆ ಕೆಟ್ಟಿದ್ದಕ್ಕಾಗಿಯೇ ಈ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದು. ಎಲ್ಲದಕ್ಕೂ ಕಾಲ ಉತ್ತರ ಕೊಡುತ್ತದೆ’ ಎಂದರು.

ನನ್ನ ಬಳಿ ಪಾಶುಪತಾಸ್ತ್ರ ಇದೆ: ಸಿ.ಎಂ

‘ದಕ್ಷಿಣದ ರಾಜ್ಯಗಳಲ್ಲಿ ಕರ್ನಾಟಕದ ಆರ್ಥಿಕ ಸ್ಥಿತಿ ಉತ್ತಮವಾಗಿದೆ ಎಂದು ಪತ್ರಿಕೆಗಳು ಹೇಳಿವೆ. ಸಾಲಗಾರರ ರಾಜ್ಯ ಎಂದು ಯಾವ ಬಾಯಲ್ಲಿ ಹೇಳ್ತೀರಾ’ ಎಂದು ಬಿಜೆಪಿ ಸದಸ್ಯರ ವಿರುದ್ಧ ಸಿದ್ದರಾಮಯ್ಯ ಕಿಡಿಕಾರಿದರು.

ಈ ವೇಳೆ ಆರ್. ಅಶೋಕ, ‘ಸಾಲದ ಸಂಬಂಧ ನಿಮ್ಮ ಫೋಟೋ ಹಾಕಿ ಪತ್ರಿಕೆಯಲ್ಲಿ ಬರೆದಿದ್ದಾರೆ ಎಂಬ ಪತ್ರಿಕೆಯೊಂದರ ಪ್ರತಿ ಪ್ರದರ್ಶಿಸಿದರು. ನಿಮ್ಮ ಯಾವ ಅಸ್ತ್ರಕ್ಕೆ ಯಾವ ಅಸ್ತ್ರ ಬಿಡಬೇಕೆಂದು ಗೊತ್ತಿದೆ’ ಎಂದರು.

ಅದಕ್ಕೆ ಸಿದ್ದರಾಮಯ್ಯ, ‘ನಾನು ಪಾಶುಪತಾಸ್ತ್ರ ಬಳಸಿದ್ದೇನೆ’ ಎಂದು ಕುಟುಕಿದರು. ‘ಅದಕ್ಕೆ ಬ್ರಹ್ಮಾಸ್ತ್ರ ಬಿಟ್ಟರೆ ಸಾಕು’ ಎಂದು ಅಶೋಕ ತಿರುಗೇಟು ನೀಡಿದರು. ಆಗ ಸಿದ್ದರಾಮಯ್ಯ, ‘ಬ್ರಹ್ಮಾಸ್ತ್ರ ನಿನ್ನ ಹತ್ತಿರ ಇರಬೇಕಲ್ಲ. ಈಗ ಹುಡುಕಿಕೊಂಡು ತಗೊಂಡು ಬಂದಿದ್ದೀಯಾ. ನನ್ನ ಬಳಿ ಪಾಶುಪತಾಸ್ತ್ರ ಇದೆ’ ಎಂದರು.

‘ಪಾಶುಪತಾಸ್ತ್ರ ಅರ್ಜುನನಿಗೆ ಕೊಟ್ಟಿದ್ದು ಈಶ್ವರ. ಈಶ್ವರನ ಮುಂದೆ ಬ್ರಹ್ಮಂದು ಏನೂ ನಡೆಯಲ್ಲ. ರಾಮ, ಸೀತೆ ಒಂದು ಪುರಾಣ. ಆದರೆ, ದೇವರು ಇದ್ದಾನೆ. ನಮ್ಮನೆ ದೇವರು ಸಿದ್ದರಾಮೇಶ್ವರ. ಅದಕ್ಕಾಗೇ ನನ್ನ ಸಿದ್ದರಾಮಯ್ಯ ಅಂತಾ ಕರೆಯೋದು. ನಮ್ಮಪ್ಪನ ಹೆಸರು ಸಿದ್ದರಾಮೇಗೌಡ’ ಎಂದರು.

‘ಅದಕ್ಕೆ ಸ್ವಲ್ಪ ದಿನ ದೇವೇಗೌಡರ ಪಾರ್ಟಿಯಲ್ಲಿದ್ರಿ’ ಎಂದು ಅಶೋಕ ಕೆಣಕಿದರು. ‘ಈ ವೇಳೆ ದೇವೇಗೌಡರು ನಮ್ಮ ಪಾರ್ಟಿಯಲ್ಲಿ ಇದ್ದರು. ಜಿ.ಟಿ. ದೇವೇಗೌಡ ಇಲ್ಲೇ ಕೂತಿದ್ದಾನಲ್ಲ’ ಎಂದು ಸಿದ್ದರಾಮಯ್ಯ ಹೇಳಿದಾಗ, ‘ಅವರು (ಜಿ.ಟಿ. ದೇವೇಗೌಡ) ಬಿಡಿ ಈಗ ಅತಂತ್ರರಾಗಿದ್ದಾರೆ’ ಎಂದು ಅಶೋಕ ಕಿಚಾಯಿಸಿದರು.

‘ಜಿ.ಟಿ. ದೇವೇಗೌಡ ಮೊನ್ನೆ ಹೇಳಿದ್ದಾರಲ್ಲ. ಪಕ್ಷ ಕಟ್ಟಿದ್ದು ನಾನೇ ಎಂದು. ಜನತಾದಳ (ಎಸ್) ಆದಾಗ ದೇವೇಗೌಡ್ರು ರಾಷ್ಟ್ರೀಯ ಅಧ್ಯಕ್ಷರು. ನಾನು ಆರು ವರ್ಷ ರಾಜ್ಯದ ಅಧ್ಯಕ್ಷ. ಈಗ ಬಾಯಿಗೆ ಬಂದಂಗೆ ಬೈಸ್ಕೊಂಡು ಅವರನ್ನು (ದೇವೇಗೌಡರು) ಸೇರಿಸಿಕೊಂಡಿದ್ದೀರಲ್ಲ’ ಎಂದು ಸಿದ್ದರಾಮಯ್ಯ ಟೀಕಿಸಿದರು.

ಸುದ್ದಿ 2 ನಿಮಿಷ

ಬೀದರ್ ಜಿಲ್ಲಾಧಿಕಾರಿಗೆ ಸಮನ್ಸ್ ಸಭಾನಾಯಕ ಹೊರಟ್ಟಿ ಸೂಚನೆ

ಬೆಂಗಳೂರು: ಗುರುವಾರ (ಮಾ.26) ಬೆಳಿಗ್ಗೆ 11ಕ್ಕೆ ತಮ್ಮ ಕಚೇರಿಯಲ್ಲಿ ಹಾಜರು ಇರುವಂತೆ ಬೀದರ್ ಜಿಲ್ಲಾಧಿಕಾರಿಗೆ ಸಮನ್ಸ್ ನೀಡಿ ಎಂದು ಸಭಾಪತಿ ಬಸವರಾಜ ಹೊರಟ್ಟಿ ಅವರು ಸಭಾನಾಯಕ ಎನ್.ಎಸ್.ಬೋಸರಾಜು ಅವರಿಗೆ ಸೂಚಿಸಿದರು.

ಬುಧವಾರ ಬೆಳಿಗ್ಗೆ ಕಲಾಪ ಆರಂಭವಾಗುತ್ತಿದ್ದಂತೆಯೇ ಕಾಂಗ್ರೆಸ್‌ನ ಪುಟ್ಟಣ್ಣ, ‘ಭೀಮಾರಾವ ಪಾಟೀಲ ಅವರು ಪರಿಷತ್ತಿನ ಸದಸ್ಯರಾಗಿ ನಾಲ್ಕೂವರೆ ವರ್ಷವಾಗಿದೆ. ಆದರೆ ಅವರ ನೋಡಲ್ ತಾಲ್ಲೂಕಾದ ಔರಾದ್‌ನಲ್ಲಿ ಅವರಿಗೆ ಕಚೇರಿ ಒದಗಿಸಿಕೊಟ್ಟಿಲ್ಲ. ಸಭಾಪತಿ ಅವರು ಈ ಬಗ್ಗೆ ಬರೆದ ಪತ್ರಕ್ಕೂ ಜಿಲ್ಲಾಧಿಕಾರಿ ಬೆಲೆ ನೀಡಿಲ್ಲ’ ಎಂದು ವಿಷಯ ಪ್ರಸ್ತಾಪಿಸಿದರು. ‘ಈ ಬಗ್ಗೆ ಭೀಮಾರಾವ್ ಅವರು ಹಲವು ಬಾರಿ ಪತ್ರ ಬರೆದಿದ್ದರು. ಹಕ್ಕು ಭಾಧ್ಯತಾ ಸಮಿತಿ ಸದಸ್ಯರೂ ಬೀದರ್‌ಗೆ ಭೇಟಿ ನೀಡಿ, ಕಚೇರಿ ಒದಗಿಸುವಂತೆ ಜಿಲ್ಲಾಧಿಕಾರಿಗೆ ಸೂಚಿಸಿದ್ದರು. ಹೀಗಿದ್ದರೂ ಕಚೇರಿ ಒದಗಿಸಿಲ್ಲ. ತಕ್ಷಣವೇ ಜಿಲ್ಲಾಧಿಕಾರಿಯನ್ನು ಸದನಕ್ಕೆ ಕರೆಸಿ, ಛೀಮಾರಿ ಹಾಕಬೇಕು’ ಎಂದು ಒತ್ತಾಯಿಸಿದರು.



ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್, ಕಾಂಗ್ರೆಸ್‌ನ ಎಂ.ನಾಗರಾಜ್ ಯಾದವ್, ಬಿಜೆಪಿಯ ಶಶೀಲ್ ಜಿ.ನಮೋಶಿ, ಜೆಡಿಎಸ್‌ನ ಎಸ್.ಎಲ್.ಭೋಜೇಗೌಡ ಅವರು ಪುಟ್ಟಣ್ಣ ಅವರ ಒತ್ತಾಯಕ್ಕೆ ದನಿಗೂಡಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಹೊರಟ್ಟಿ ಅವರು, ‘ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಹೇಳಿ, ಜಿಲ್ಲಾಧಿಕಾರಿಯನ್ನು ಕರೆಯಿಸಿ’ ಎಂದು ಬೋಸರಾಜು ಅವರಿಗೆ ಸೂಚಿಸಿದರು.

ಇವಿಎಂ ಪರಿಶೀಲನೆಗೆ ‘ಹ್ಯಾಕಥಾನ್’

ಬೆಂಗಳೂರು: ವಿದ್ಯುನ್ಮಾನ ಮತಯಂತ್ರಗಳ (ಇವಿಎಂ) ನೈಜತೆ ಪರಿಶೀಲಿಸಲು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಸಮಕ್ಷಮದಲ್ಲಿ ದೇಶ–ವಿದೇಶಗಳ ತಜ್ಞರ ಮೂಲಕ ‘ನೈತಿಕ ಹ್ಯಾಕಥಾನ್’ಗೆ ಅವಕಾಶ ಮಾಡಿಕೊಡಬೇಕು ಎಂದು ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಚುನಾವಣಾ ಆಯೋಗವನ್ನು ಕೋರಿದರು.

ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತ ಯಂತ್ರಗಳ ಬದಲಿಗೆ ಮತ ಪತ್ರಗಳ ಮೂಲಕ ಮತ ಚಲಾಯಿಸುವುದನ್ನು ಮರು ಪರಿಚಯಿಸುವ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ತಿದ್ದುಪಡಿ ಮಸೂದೆಯನ್ನು ವಿಧಾನಪರಿಷತ್‌ನಲ್ಲಿ ಮಂಡಿಸಿ ಅವರು ಮಾತನಾಡಿದರು.

‘ಜಗತ್ತಿನ ಸಿಲಿಕಾನ್ ವ್ಯಾಲಿಯಲ್ಲಿಯೇ ಇವಿಎಂ ಮೂಲಕ ಮತದಾನ ನಡೆಯುತ್ತಿಲ್ಲ. ಮುಂದುವರಿದ ದೇಶಗಳೇ ಇವಿಎಂ ವಿಶ್ವಾಸಾರ್ಹತೆ ಬಗ್ಗೆ ಸಂಶಯ ಹೊಂದಿದ್ದು ಮತ್ತೆ ಮತಪತ್ರದ ಮೂಲಕ ಚುನಾವಣೆ ನಡೆಸುತ್ತಿವೆ. ಇವಿಎಂ ಅನ್ನು ವಿವಿಧಡೆ ಹೇಗೆ ಹ್ಯಾಕ್ ಮಾಡಲಾಗುತ್ತಿದೆ ಎನ್ನುವ ಕುರಿತು ಪ್ರಾತ್ಯಕ್ಷಿಕೆ ನಡೆಸಲು ಆಯೋಗ ವೇದಿಕೆ ಕಲ್ಪಿಸಬೇಕು. ಆಗ ಸತ್ಯ ದೇಶದ ಜನರಿಗೆ ತಿಳಿಯಲಿದೆ’ ಎಂದರು. ಪ್ರಿಯಾಂಕ್ ಖರ್ಗೆ ಅವರ ಮಾತಿಗೆ ಅಸಮಾಧಾನ ವ್ಯಕ್ತಪಡಿಸಿದ ಬಿಜೆಪಿಯ ಸಿ.ಟಿ.ರವಿ, ‘ನಾವೆಲ್ಲ ಸಭಾತ್ಯಾಗ ಮಾಡುತ್ತೇವೆ’ ಎಂದು ಹೇಳಿ ಹೊರಟರು.

ಆದರೆ, ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸೇರಿದಂತೆ ಉಳಿದವರು ತಮ್ಮ ಆಸನ ಬಿಟ್ಟು ಮೇಲೇಳಲಿಲ್ಲ. ಛಲವಾದಿ ನಾರಾಯಣಸ್ವಾಮಿ ಅವರು ತಮ್ಮ ಆಕ್ಷೇಪಗಳನ್ನು ವ್ಯಕ್ತಪಡಿಸಿದ ನಂತರ ವಿರೋಧ ಪಕ್ಷಗಳ ಸದಸ್ಯರ ಜತೆ ಸಭಾತ್ಯಾಗ ಮಾಡಿದರು.

ವಸತಿ ಶಾಲೆ: ಅಂತಿಮ ಫಲಿತಾಂಶ ಪ್ರಕಟ

ಬೆಂಗಳೂರು: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ವಸತಿ ಶಾಲೆ, ಏಕಲವ್ಯ ಮಾದರಿ ವಸತಿ ಶಾಲೆ ಹಾಗೂ ಇತರ ವಸತಿ ಶಾಲೆಗಳಲ್ಲಿ 6ನೇ ತರಗತಿಗೆ ಪ್ರವೇಶಕ್ಕೆ ನಡೆಸಿದ್ದ ಲಿಖಿತ ಪರೀಕ್ಷೆಯ ಅಂತಿಮ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬುಧವಾರ ಪ್ರಕಟಿಸಿದೆ. ಅಭ್ಯರ್ಥಿಗಳು ಗಳಿಸಿದ ಅಂಕಗಳ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ತಾತ್ಕಾಲಿಕ ಫಲಿತಾಂಶಕ್ಕೆ ಅಭ್ಯರ್ಥಿಗಳು ಸಲ್ಲಿಸಿದ ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಚಿಟಿಕೆ ಸುದ್ದಿ

ಆದಿಕವಿ ಪಂಪ ಪ್ರತಿಷ್ಠಾನ ರಚನೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಧಾರವಾಡ ಜಿಲ್ಲೆಯ ಅಣ್ಣಿಗೇರಿಯಲ್ಲಿ ಆದಿಕವಿ ಪಂಪ ಪ್ರತಿಷ್ಠಾನ ರಚಿಸಿ ಆದೇಶ ಹೊರಡಿಸಿದೆ.

ಪಂಪ ಮೊದಲ ಬಾರಿಗೆ ಜಾತಿ ವ್ಯವಸ್ಥೆಯನ್ನು ವಿರೋಧಿಸಿದ ಕವಿ. ‘ಮನುಷ್ಯ ಜಾತಿ ತಾನೊಂದೆ ವಲಂ’ ಎಂಬ ಪಂಪವಾಣಿಯು ಇಂದಿಗೂ ಪ್ರಸ್ತುತವಾಗಿದೆ. ‘ವಿಕ್ರಮಾರ್ಜುನ ವಿಜಯಂ’ ಕಾವ್ಯದಲ್ಲಿ ಕರ್ಣನ ಪಾತ್ರವನ್ನು ಕುಲಪದ್ಧತಿಯ ಪ್ರತಿರೋಧದ ರೂಪಕವಾಗಿ ಬಳಸಿ ಜಾತಿ ಪದ್ಧತಿಯನ್ನು ವಿರೋಧಿಸಿದ್ದರು. ಪಂಪ ಮಹಾಕವಿಯ ಸ್ಮಾರಕವನ್ನು ನಿರ್ಮಿಸಿ, ಪಂಪ ಭವನವನ್ನು ಉನ್ನತೀಕರಿಸಿ, ಜಾತ್ಯತೀತ, ದ್ವೇಷಾತೀತ, ಸೃಜನಶೀಲ ಕೆಲಸಗಳನ್ನು ಮಾಡಬಹುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಕೋರಿದ್ದರು. ಈ ಪ್ರಸ್ತಾವದಂತೆ ಪಂಪ ಪ್ರತಿಷ್ಠಾನ ರಚಿಸಲಾಗಿದೆ ಎಂದು ಇಲಾಖೆ ತಿಳಿಸಿದೆ.

ಬರಗೂರು ಒತ್ತಾಯದ ಫಲ: ಪಂಪ ಮಹಾಕವಿಯ ಪ್ರತಿಷ್ಠಾನ ಆರಂಭಿಸಬೇಕು ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಅವರನ್ನು ಭೇಟಿ ಮಾಡಿ ಒತ್ತಾಯ ಮಾಡಿದ್ದರು. ಪ್ರತಿಷ್ಠಾನ ರಚನೆಯ ಅಗತ್ಯದ ಕುರಿತು ಲೇಖನವನ್ನೂ ಬರೆದಿದ್ದರು.

ಪೂರ್ಣ ಬಜೆಟ್ ವಿಧಾನಸಭೆ ಒಪ್ಪಿಗೆ

ಬೆಂಗಳೂರು: ವಿಧಾನಸಭೆಯು 2026–27ನೇ ಸಾಲಿನ ಹಣಕಾಸು ವರ್ಷಕ್ಕಾಗಿ ₹4.67 ಲಕ್ಷ ಕೋಟಿ ಮೊತ್ತದ ಪೂರ್ಣ ಪ್ರಮಾಣದ ಬಜೆಟ್‌ಗೆ ಅನುಮೋದನೆ ನೀಡಿತು.

ಬಜೆಟ್ ಮೇಲಿನ ಚರ್ಚೆಗೆ ತಾವು ಉತ್ತರ ನೀಡಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 2026ರ ಕರ್ನಾಟಕ ಧನವಿನಿಯೋಗ ಮಸೂದೆಯನ್ನು ಮಂಡಿಸಿದರು.

ಬಜೆಟ್ ಮಂಡನೆಯ ವೇಳೆ ಬಜೆಟ್‌ನ ಗಾತ್ರ ₹4.48 ಲಕ್ಷ ಕೋಟಿ ಎಂದು ಉಲ್ಲೇಖಿಸಲಾಗಿತ್ತು. ಧನವಿನಿಯೋಗ ಮಸೂದೆಯಲ್ಲಿ ಬಜೆಟ್‌ನ ಗಾತ್ರವನ್ನು ಸುಮಾರು ₹19,000 ಕೋಟಿಯಷ್ಟು ಹೆಚ್ಚಿಗೆ ತೋರಿಸಲಾಗಿದೆ. ಕೇಂದ್ರದ ಅನುದಾನ, ಸಹಾಯಾನುದಾನ, ಪ್ರಕೃತಿ ವಿಕೋಪಕ್ಕೆ ಪರಿಹಾರ ಎಲ್ಲವೂ ಸೇರಿ ಈ ಮೊತ್ತ ಹೆಚ್ಚಳವಾಗಿದೆ.

ಆರ್ಥಿಕ ವರ್ಷದ ಕೊನೆಯಲ್ಲಿ ಮಂಡಿಸಲಾದ ಅಂತಿಮ ಹಾಗೂ ಕೊನೆಯ ಕಂತಿನ ₹14 ಸಾವಿರ ಕೋಟಿ ಮೊತ್ತದ ಪೂರಕ ಅಂದಾಜಿಗೂ ವಿಧಾನಸಭೆ ಒಪ್ಪಿಗೆ ಸೂಚಿಸಿತು. ಬಜೆಟ್ ಮೇಲಿನ ಚರ್ಚೆಗೆ ಮುಖ್ಯಮಂತ್ರಿ ನೀಡಿದ ಉತ್ತರ ತೃಪ್ತಕರವಾಗಿಲ್ಲ ಎಂದು ವಿರೋಧ ಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದ ವೇಳೆ ಮಸೂದೆ ಮಂಡಿಸಿ ಅನುಮೋದನೆ ಪಡೆಯಲಾಯಿತು.

ವಾಹನ ತೆರಿಗೆ ಪರಿಷ್ಕರಣೆ: ಮಸೂದೆಗೆ ಒಪ್ಪಿಗೆ

ಬೆಂಗಳೂರು: ರಾಜ್ಯದಲ್ಲಿ ಸಂಚರಿಸುವ ಬಾಡಿಗೆ ವಾಹನಗಳು ಮತ್ತು ಇತರ ವಾಹನಗಳ ತೆರಿಗೆ ಪರಿಷ್ಕರಣೆಗೆ ಅವಕಾಶ ಕಲ್ಪಿಸುವ ‘ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧಾರಣೆ (ತಿದ್ದುಪಡಿ) ಮಸೂದೆ’ಗೆ ವಿಧಾನಸಭೆ ಬುಧವಾರ ಅಂಗೀಕಾರ ನೀಡಿತು.

‘ರಾಹುಕಾಲ ನೋಡಿ ಬಜೆಟ್ ಮಂಡಿಸಿದ್ದು ನಿಜ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಈ ಬಾರಿ ರಾಹುಕಾಲಕ್ಕೂ ಮೊದಲೇ ಬಜೆಟ್ ಮಂಡಿಸಿದ್ದೇನೆ. ನಿಮ್ಮಂತಹವರ ಮಾತು ಕೇಳಬೇಕಲ್ಲವಾ? ಮನೆಯವರು, ಅಧಿಕಾರಿಗಳ ಮಾತೂ ಕೇಳಬೇಕಲ್ಲವಾ? ಪ್ರಜಾತಂತ್ರದಲ್ಲಿ ಎಲ್ಲರ ಮಾತಿಗೂ ಮನ್ನಣೆ ನೀಡಬೇಕಲ್ಲವಾ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡುವ ವೇಳೆ, ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ರಾಹುಕಾಲದ ವಿಚಾರ ಪ್ರಸ್ತಾಪಿಸಿದರು.

‘ನಾನು ಹಣೆ ಬರಹ, ಕರ್ಮ ಸಿದ್ಧಾಂತ ಒಪ್ಪುವುದಿಲ್ಲ. ಬಸವಣ್ಣ ಅವರೂ ಕರ್ಮ ಸಿದ್ಧಾಂತವನ್ನು ಸಂಪೂರ್ಣ ತಿರಸ್ಕಾರ ಮಾಡಿದ್ದರು’ ಎಂದು ಸಿದ್ದರಾಮಯ್ಯ ಹೇಳಿದರು. ಆಗ ಅಶೋಕ, ‘ಕಾಮಾಕ್ಯಕ್ಕೂ ಹೋಗಿ ಭರ್ಜರಿ ಪೂಜೆ ಮಾಡಿಸುವವರೂ ನಿಮ್ಮವರೇ, ರಾಹುಕಾಲ ನೋಡಿ ಬಜೆಟ್ ಮಂಡಿಸುವವರೂ ನೀವೇ’ ಎಂದು ಕಾಲೆಳೆದರು. ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘ರಾಹುಕಾಲ ನೋಡಿಕೊಂಡು ಬಜೆಟ್ ಮಂಡಿಸಿದ್ದಾರೆ ಎಂದಿದ್ದೀರಿ. ಹೌದು, ನಿಜ, ನಿಮ್ಮಂತವರ ಮಾತು ಕೇಳಬೇಕಲ್ಲವೇ? ಈ ಹಿಂದೆ ಹಲವು ಬಾರಿ ರಾಹುಕಾಲದಲ್ಲೇ ಬಜೆಟ್ ಮಂಡಿಸಿದ್ದೇನೆ. ಇತ್ತೀಚೆಗೆ ಮನೆಯವರ ಮತ್ತು ಅಧಿಕಾರಿಗಳ ಮಾತು ಕೇಳಬೇಕಾಗಿದೆ’ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಅಶೋಕ, ‘ಆವತ್ತಿನ ಪರಿಸ್ಥಿತಿ ಬೇರೆ ಇತ್ತು. ಇವತ್ತಿನ ಪರಿಸ್ಥಿತಿ ಬೇರೆ ಇದೆ. ಮುಂದೆಯೂ ಬಜೆಟ್ ಮಂಡಿಸಬೇಕಲ್ಲ. ಅದಕ್ಕೆ ರಾಹುಕಾಲ ನೋಡಿರಬೇಕು, ಕಾಲಾಯ ತಸ್ಮೈ ನಮಃ’ ಎಂದು ಛೇಡಿಸಿದರು. ‘ನನಗೆ ರಾಹುಕಾಲ, ಗುಳಿಕಕಾಲ, ಯಮಗಂಡ ಕಾಲ ಎಲ್ಲವೂ ಒಂದೇ. ಇವುಗಳನ್ನು ನಂಬುವುದಿಲ್ಲ’ ಎಂದು ಸಿದ್ದರಾಮಯ್ಯ ಪ್ರತಿಕ್ರಿಯಿಸಿದರು.

‘ಸಿದ್ದರಾಮಯ್ಯ ಶಲ್ಯದ ಬೆಲೆ ₹13,500’

ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರೇಷ್ಮೆ ಶಲ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ಶಾಲಿನ ಬಗ್ಗೆ ಸ್ವಾರಸ್ಯಕರ ಚರ್ಚೆ ನಡೆಯಿತು.

ಬಿಜೆಪಿಯ ವಿ.ಸುನಿಲ್‌ಕುಮಾರ್ ಅವರು, ‘ನೀವು ಶಾಲು ಹಾಕಿದ ಬಳಿಕವೇ ಮುಖ್ಯಮಂತ್ರಿ ಆಗಿದ್ದು. ಅದಕ್ಕಾಗಿ ಶಿವಕುಮಾರ್ ಅವರೂ ನಿಮ್ಮನ್ನು ನೋಡಿ ಶಾಲು ಹಾಕುತ್ತಿದ್ದಾರೆ’ ಎಂದು ಕಿಚಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘ಮುಖ್ಯಮಂತ್ರಿ ಸ್ಥಾನ ಸಿಗುವುದಕ್ಕೆ ಮೊದಲಿಂದಲೂ ಶಲ್ಯ ಹಾಕುತ್ತಿದ್ದೇನೆ. ಹಿಂದೆ ಹೆಗಲಿನ ಒಂದು ಬದಿ ಟವೆಲ್ ಹಾಕುತ್ತಿದ್ದೆ. ಈಗ ಜಿ.ಟಿ.ದೇವೇಗೌಡ ಹಾಕುತ್ತಾನಲ್ಲ ಆ ರೀತಿಯದು. ಆದರೆ ಬಗ್ಗಿದಾಗ ಯಾವಾಗಲೂ ಬಿದ್ದು ಹೋಗುತ್ತಿತ್ತು. ಅದಕ್ಕಾಗಿ ರೇಷ್ಮೆ ಶಲ್ಯ ಹಾಕಲು ಆರಂಭಿಸಿದೆ’ ಎಂದರು.

‘ನಾನು ಹಾಕಿರೋದು ದುಬಾರಿ ಶಾಲು, ಪ್ಯೂರ್ ಸಿಲ್ಕ್’ ಎಂದ ಅವರು ಶಲ್ಯದ ಎರಡೂ ಬದಿ ಹಿಡಿದು ಜಗುತ್ತಾ, ‘ಇದು ನನ್ನ ಭಕ್ತಿ’ ಎಂದರು. ಶಿವಕುಮಾರ್ ಅವರು, ‘ಅದರ ಬೆಲೆ ₹13,500’ ಎಂದು ಹೇಳಿದರು. ‘ಹೌದು’ ಎಂದು ಸಿದ್ದರಾಮಯ್ಯ ಒಪ್ಪಿಕೊಂಡರು.

‘ಯುಗಾದಿ, ಶಿವರಾತ್ರಿಲೂ ಮಾಂಸ ತಿನ್ನುವೆ’

‘ನಾನು ಯುಗಾದಿ, ಶಿವರಾತ್ರಿಯಲ್ಲೂ ಮಾಂಸ ತಿನ್ನುತ್ತೇನೆ. ನೀವು ಯುಗಾದಿ, ಶಿವರಾತ್ರಿ ದಿನ ಮಾಂಸ ತಿನ್ನುತ್ತೀರಾ? ನಾನು ತಿಂದಿದ್ದೇನೆ. ನೀವು ಹಬ್ಬ ಹರಿದಿನ ಅಂತ ನೋಡುತ್ತೀರಿ’ ಎಂದು ಅಶೋಕ ಅವರನ್ನು ಉದ್ದೇಶಿಸಿ ಸಿದ್ದರಾಮಯ್ಯ ಹೇಳಿದರು.

‘ದೇವರಿದ್ದಾನೆ ಎನ್ನುವುದನ್ನು ನಂಬುತ್ತೇನೆ. ಆದರೆ, ದೇವಸ್ಥಾನದಲ್ಲೇ ದೇವರಿದ್ದಾನೆ ಅಂತ ನಾನು ನಂಬಿಲ್ಲ. ಎಲ್ಲಾ ಕಡೆ ದೇವರಿದ್ದಾನೆ ಎನ್ನೋದೆ ನನ್ನ ನಂಬಿಕೆ. ಬಸವಣ್ಣ ಅವರು ಹೇಳಿದಂತೆ ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಸವಯ್ಯ, ನಾನೇನು ಮಾಡಲಿ ಬಡವನಯ್ಯ... ಎಂಬುದರ ಮೇಲೆ ನಂಬಿಕೆ ಇಟ್ಟವನು’ ಎಂದರು.

ಪಿಯು ಹಂತದಿಂದಲೇ ವಿದ್ಯಾರ್ಥಿ ಚುನಾವಣೆ

ಬೆಂಗಳೂರು: ಪದವಿ ಪೂರ್ವ ಕಾಲೇಜುಗಳೂ ಸೇರಿದಂತೆ ಎಲ್ಲ ಬಗೆಯ ಪದವಿ, ಸ್ನಾತಕೋತ್ತರ ಪದವಿ ಕಾಲೇಜುಗಳಲ್ಲೂ 2026–27ನೇ ಸಾಲಿನಿಂದ ವಿದ್ಯಾರ್ಥಿ ಸಂಘಗಳಿಗೆ ಚುನಾವಣೆ ನಡೆಸಲು ಸರ್ಕಾರ ನಿರ್ಧರಿಸಿದೆ.

ಕಾಲೇಜು ಹಂತದಲ್ಲಿ ವಿದ್ಯಾರ್ಥಿ ಸಂಘಗಳಿಗೆ ಚುನಾವಣೆ ನಡೆಸುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಚೆಗೆ ಮಂಡಿಸಿದ ಬಜೆಟ್‌ನಲ್ಲೇ ಘೋಷಣೆ ಮಾಡಿದ್ದರು. ಚುನಾವಣೆಗಳನ್ನು ಮರು ಆರಂಭಿಸುವ ಬಗ್ಗೆ ನಿರ್ಧಾರ ಕೈಗೊಳ್ಳಲು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಮಿತಿಯನ್ನು ನೇಮಕ ಮಾಡಿದ್ದರು.

ಪ್ರಥಮ ಪಿಯುನಿಂದಲೇ ಚುನಾವಣೆ ಮೂಲಕ ವಿದ್ಯಾರ್ಥಿ ಸಂಘಗಳಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಸರ್ಕಾರದ ನಿರ್ಧಾರವನ್ನು ಖಚಿತಪಡಿಸಿದ ಸಮಿತಿಯ ಸಂಯೋಜಕರೂ ಆದ ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ, ‘ಈ ಕುರಿತು ಖಾಸಗಿ ಕಾಲೇಜು ಆಡಳಿತ ಮಂಡಳಿಗಳು, ವಿವಿಧ ವಿಶ್ವವಿದ್ಯಾಲಯಗಳ ಕುಲಪತಿಗಳ ಜತೆಗೆ ಚರ್ಚಿಸಲಾಗುತ್ತಿದ್ದು, ಬರುವ ಶೈಕ್ಷಣಿಕ ಸಾಲಿನಿಂದಲೇ ಚುನಾವಣೆಗಳನ್ನು ನಡೆಸಲಾಗುತ್ತದೆ’ ಎಂದರು.

ಶರಣ ಪ್ರಕಾಶ ಪಾಟೀಲ

‘ನಾಯಕತ್ವ ಗುಣಗಳು ಪಿಯು ಕಾಲೇಜು ಹಂತದಲ್ಲಿಯೇ ಬೆಳೆಯಬೇಕು. ಈ ವಿಷಯವನ್ನು ಸಮಿತಿ ಸಭೆಗಳಲ್ಲಿ ಚರ್ಚಿಸಿ, ಪಿಯು ಕಾಲೇಜುಗಳಲ್ಲಿಯೂ ಚುನಾವಣೆಯನ್ನು ಪರಿಗಣಿಸಲು ತೀರ್ಮಾನಿಸಲಾಗಿದೆ. ರಾಜಕೀಯ ಪಕ್ಷಗಳೊಂದಿಗೆ ನಿಕಟವರ್ತಿಗಳಾದ ವಿವಿಧ ವಿದ್ಯಾರ್ಥಿ ಸಂಘಟನೆಗಳು, ಪೋಷಕರ ಸಂಘಗಳ ಜತೆಗೂ ಸಮಾಲೋಚನೆ ನಡೆಸಲಾಗುವುದು. ಅವರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗುವುದು’ ಎಂದು ಹೇಳಿದರು.

ಭಾರತದ ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆಗಳನ್ನು ನಡೆಸಲು ಲಿಂಗ್ಡೋ ಸಮಿತಿಯು ರೂಪಿಸಿದ ನಿಯಮಗಳು ಮತ್ತು ಮಾರ್ಗಸೂಚಿಗಳನ್ನೂ ಸಮಿತಿ ಪರಿಶೀಲಿಸುತ್ತಿದೆ. ವರದಿ ಆಧಾರದಲ್ಲೇ ಚುನಾವಣಾ ರೂಪುರೇಷೆ ಸಿದ್ಧಪಡಿಸಲಾಗುತ್ತದೆ ಎಂದು ಪಾಟೀಲ ಮಾಹಿತಿ ನೀಡಿದರು.

ಅಪರೂಪದ ಕ್ಷಣ

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಬೆಂಗಳೂರಿನ ವಿಧಾನ ಸೌಧದ ಆವರಣದಲ್ಲಿ ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹದಿನಾರನೇ ವಿಧಾನಸಭೆಯ ಸದಸ್ಯರುಗಳ ಜೊತೆ ಗ್ರೂಪ್ ಫೋಟೊ ತೆಗೆಸಿಕೊಂಡರು

ಹರ ಪಾರ್ವತಿ ಕಥಾಕ್ಕೆ ‘ಸರಸ್ವತಿ ಸಮ್ಮಾನ್’

ಒಂದನೇ ಪುಟದಿಂದ...

ಭಾರತೀಯ ಪ್ರಜೆಗಳು ದೇಶದ ಯಾವುದೇ ಭಾಷೆಯಲ್ಲಿ ಬರೆದ ಶ್ರೇಷ್ಠ ಸಾಹಿತ್ಯ ಕೃತಿಗೆ ಕೆ.ಕೆ. ಬಿರ್ಲಾ ಫೌಂಡೇಷನ್ 1991ರಿಂದ ಈ ಪ್ರಶಸ್ತಿಯನ್ನು ನೀಡುತ್ತಿದೆ. ಪ್ರಶಸ್ತಿಯು ₹15 ಲಕ್ಷ ನಗದು ಮತ್ತು ಪಾರಿತೋಷಕವನ್ನು ಒಳಗೊಂಡಿದೆ.

ರಾಮ್‌ಕುಮಾರ್ ಮುಖ್ಯೋಪಾಧ್ಯಾಯ ಅವರು ಕೋಲ್ಕತ್ತದಲ್ಲಿ 1956 ಅಕ್ಟೋಬರ್ 5ರಂದು ಜನಿಸಿದರು. ಹೌರಾದ ರಾಮಕೃಷ್ಣ ಮಿಷನ್ ವಿದ್ಯಾಮಂದಿರದಲ್ಲಿ ಪದವಿ ಮತ್ತು ಕಲ್ಕತ್ತ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಜಾದವ್‌ಪುರ ವಿಶ್ವವಿದ್ಯಾಲಯದಲ್ಲಿ ಪಿ.ಎಚ್‌ಡಿ ಮಾಡಿದ್ದಾರೆ. ಸಾಹಿತ್ಯ ಅಕಾಡೆಮಿಯ ಪೂರ್ವ ಮತ್ತು ಈಶಾನ್ಯ ಪ್ರದೇಶದ ಕಾರ್ಯದರ್ಶಿಯಾಗಿ ಮತ್ತು ವಿಶ್ವಭಾರತಿ ಪ್ರಕಾಶನ ಇಲಾಖೆಯಲ್ಲಿ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಬಹುಮುಖಿ ಪ್ರತಿಭೆಯನ್ನು ಹೊಂದಿರುವ ಅವರು ಈವರೆಗೆ 9 ಕಾದಂಬರಿಗಳು, 11 ಕಥಾ ಸಂಗ್ರಹ ಮತ್ತು ನಾಲ್ಕು ಪ್ರಬಂಧ ಸಂಗ್ರಹ ಹೊರತಂದಿದ್ದಾರೆ. ಎರಡು ಪ್ರವಾಸ ಕಥನಗಳನ್ನು ಬರೆದಿದ್ದಾರೆ. ಅಲ್ಲದೇ, 54 ಭಾಷೆಗಳ ಸುಮಾರು 128 ಜನಪದ ಕಥೆಗಳನ್ನು ಸಂಗ್ರಹಿಸಿದ್ದಾರೆ.

ಬಂಕಿಮಚಂದ್ರ ಪುರಸ್ಕಾರ ಮತ್ತು ಬಾಂಗ್ಲಾ ಅಕಾಡೆಮಿ ಪುರಸ್ಕಾರ ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಅವರು ಭಾಜನರಾಗಿದ್ದಾರೆ.

ಬೋಧಕೇತರ ಕೆಲಸಗಳಿಗೆ ಬಳಸಿಕೊಳ್ಳದಂತೆ ನಿಯಮ ರೂಪಿಸಲು ಆಗ್ರಹ

ಶಿಕ್ಷಕರ ಬಳಕೆ ನಿರ್ಬಂಧಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೋಧಕೇತರ ಹುದ್ದೆಗಳಿಗೆ ಶಿಕ್ಷಕರ ನೇಮಕವನ್ನು ನಿಷೇಧಿಸಲು ಹೊರಟಿರುವ ಶಾಲಾ ಶಿಕ್ಷಣ ಇಲಾಖೆ, ಚುನಾವಣಾ ಕಾರ್ಯ, ಜನಗಣತಿ, ಜಾತಿ ಗಣತಿಯಂತಹ ಬೋಧಕೇತರ ಕೆಲಸಗಳಿಗೂ ಬಳಸಿಕೊಳ್ಳದಂತೆ ನಿಯಮ ರೂಪಿಸಬೇಕು ಎಂದು ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಒತ್ತಾಯಿಸಿದರು.

ಶಾಲೆಗಳನ್ನು ಮೂರು ವರ್ಗಗಳಾಗಿ ವಿಂಗಡಿಸಿ, ತುರ್ತು ಸೇವಾ ಗುಂಪು ಎಂದು ಪರಿಗಣಿಸಿ ಶಿಕ್ಷಕರ ವರ್ಗಾವಣೆ ಸ್ವರೂಪದಲ್ಲಿ ಆಮೂಲಾಗ್ರ ಬದಲಾವಣೆಗೆ ಅವಕಾಶ ಕಲ್ಪಿಸುವ ‘ಕರ್ನಾಟಕ ರಾಜ್ಯ ನಾಗರಿಕ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಮಸೂದೆಯನ್ನು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಂಡಿಸಿದರು.

ಮಸೂದೆ ಕುರಿತು ಮಾತನಾಡಿದ ಕಾಂಗ್ರೆಸ್‌ನ ಪುಟ್ಟಣ್ಣ, ಬಿಜೆಪಿಯ ಶಶೀಲ್ ನಮೋಶಿ, ಎಸ್.ವಿ.ಸಂಕನೂರ, ಹಣಮಂತ ನಿರಾಣಿ, ಜೆಡಿಎಸ್‌ನ ಭೋಜೇಗೌಡ ಅವರು, 'ಜಾತಿ ಗಣತಿ, ಒಳಮೀಸಲಾತಿ ಗಣತಿ, ಜನಗಣತಿ, ಮತದಾರರಪಟ್ಟಿ ವಿಶೇಷ ಸಮಗ್ರ ಪರಿಷ್ಕರಣಾ ಕಾರ್ಯ (ಎಸ್‌ಐಆರ್), ಚುನಾವಣಾ ಕಾರ್ಯಗಳಿಗೆ ಶಿಕ್ಷಕರನ್ನು ನಿಯೋಜನೆ ಮಾಡಲಾಗುತ್ತಿದೆ. ಪರೀಕ್ಷಾ ಕಾರ್ಯಗಳಿದ್ದರೂ ವಿನಾಯಿತಿ ನೀಡಿಲ್ಲ. ಇದರಿಂದ ಶಿಕ್ಷಕರು ಬೋಧನಾ ಕೆಲಸಗಳಲ್ಲಿ ಶ್ರದ್ಧೆಯಿಂದ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ’ ಎಂದರು. ವಿಸ್ತೃತ ಚರ್ಚೆಯ ನಂತರ ಮಸೂದೆಯನ್ನು ಅಂಗೀಕರಿಸಲಾಯಿತು.

ಸರ್ಕಾರಿ ಶಾಲೆ ಭೂಮಿ ಸಂರಕ್ಷಣೆ: ಸರ್ಕಾರಿ ಶಾಲೆಗಾಗಿ ದಾನ ಮಾಡಲಾದ ಭೂಮಿಯನ್ನು ಸರ್ಕಾರದ ಹೆಸರಿಗೆ ವರ್ಗಾವಣೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡುವ ಮಸೂದೆಯನ್ನು ವಿಧಾನ ಪರಿಷತ್ತು ಅಂಗೀಕರಿಸಿತು.

ಸಚಿವ ಮಧು ಬಂಗಾರಪ್ಪ ಅವರು, ‘ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸಕ್ರಮಾತಿ) ಮಸೂದೆ–2026’ ಅನ್ನು ಮಂಡಿಸಿದರು. ಚರ್ಚೆ ಬಳಿಕ ಅನುಮೋದನೆ ನೀಡಲಾಯಿತು.

ಜ್ಞಾನಭಂಡಾರ ಮಸೂದೆಗೆ ಒಪ್ಪಿಗೆ: ಖಾಸಗಿ ವ್ಯಕ್ತಿಗಳ ಮನೆಗಳಲ್ಲಿ ಇರುವ ಹಸ್ತಪ್ರತಿಗಳ ಪರಿಶೀಲನೆ, ಡಿಜಿಟಲೀಕರಣ ಮತ್ತು ಸಂರಕ್ಷಣೆಗೆ ಅವಕಾಶ ಮಾಡಿಕೊಡುವ, ‘ಕರ್ನಾಟಕ ಜ್ಞಾನಭಂಡಾರ ಹಸ್ತಪ್ರತಿಗಳು ಮತ್ತು ಡಿಜಿಟಲೀಕರಣ ಮಸೂದೆಯನ್ನು ವಿಧಾನ ಪರಿಷತ್ತು ಅಂಗೀಕರಿಸಿತು.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಮಸೂದೆ ಮಂಡಿಸಿದರು, ಪರಿಷತ್ತಿನ ಸದಸ್ಯರು ಸುಮಾರು 30 ನಿಮಿಷ ಚರ್ಚೆ ನಡೆಸಿದರು.

‘ಆರ್ಥಿಕತೆ: ನಂ.1 ಕಡೆ ನಾಡು ದಾಪುಗಾಲು’

ಒಂದನೇ ಪುಟದಿಂದ...

‘ಒಟ್ಟು ಸಾಲ ಜಿಡಿಪಿಯ ಶೇ 25ರಷ್ಟನ್ನು ಮೀರಬಾರದು ಎಂಬ ಆರ್ಥಿಕ ಶಿಸ್ತನ್ನು ತರಲು ಇರುವ ಮಾನದಂಡಗಳನ್ನು ರಾಜ್ಯ ಸರ್ಕಾರ ಪೂರೈಸಿದೆ. ಸಾಲದ ಮೊತ್ತ ಶೇ 24.94ರಷ್ಟಿದೆ. ಮಿಗತೆ ಬಜೆಟ್ ಆಗದೇ ವಿತ್ತೀಯ ಕೊರತೆ ಆಗಿದೆ. ಇದಕ್ಕೆ ಕಾರಣಗಳಿವೆ’ ಎಂದರು.

‘ರಾಜಸ್ವ ಸಂಗ್ರಹದ ವಿಷಯಕ್ಕೆ ಬಂದರೆ, ಕಳೆದ ವರ್ಷದ ಬಜೆಟ್‌ಗಿಂತ ಸುಮಾರು ₹22,573 ಕೋಟಿ ಹೆಚ್ಚು ಸಂಗ್ರಹ ಆಗಬಹುದು. ₹2.92 ಲಕ್ಷ ಕೋಟಿಗಳಿದ್ದ ಕಳೆದ ವರ್ಷದ ಅಂದಾಜು ಈ ವರ್ಷ ₹3.15 ಲಕ್ಷ ಕೋಟಿಗೆ ಏರಿಕೆಯಾಗಲಿದೆ ಎಂದು ಅಂದಾಜು ಮಾಡಿದ್ದೇವೆ’ ಎಂದು ಸಿದ್ದರಾಮಯ್ಯ ವಿವರಿಸಿದರು. ‘ಕೇಂದ್ರ ಸರ್ಕಾರ ಮಾಡಿದ ದ್ರೋಹದಿಂದ, ಜಿಎಸ್‌ಟಿ ಪರಿಹಾರ ಸಿಗದ ಕಾರಣ ಸುಮಾರು ₹2 ಲಕ್ಷ ಕೋಟಿಗೂ ಹೆಚ್ಚಿನ ನಷ್ಟ ರಾಜ್ಯಕ್ಕೆ ಆಗಿದೆ. ಪರಿಸ್ಥಿತಿ ಹೀಗಾದರೆ ರಾಜ್ಯಗಳ ಆರ್ಥಿಕತೆ ಹೇಗೆ ಉಳಿಯುತ್ತದೆ? ಗ್ಯಾರಂಟಿಯಂತಹ ಕಲ್ಯಾಣ ಯೋಜನೆಗಳಿಗೆ ನಯಾಪೈಸೆ ಖರ್ಚು ಮಾಡದ ಗುಜರಾತ್ ಈ ಬಾರಿ ₹1 ಲಕ್ಷ ಕೋಟಿ ಸಾಲ ಮಾಡುತ್ತಿದೆ’ ಎಂದರು.

‘ಬಿಜೆಪಿಯು ‘ಟ್ರಿಕಲ್ ಡೌನ್ ಎಕಾನಮಿ’ಯಲ್ಲಿ ನಂಬಿಕೆ ಇರಿಸಿದೆ. ನಮ್ಮದು ‘ಯೂನಿವರ್ಸಲ್ ಬೇಸಿಕ್ ಇನ್‌ಕಂ’ ಹಾಗೂ ಬೇಡಿಕೆಯ ಆರ್ಥಿಕ ತತ್ವ ಆಧರಿಸಿದೆ. ಬುದ್ಧನ ಕರುಣೆ, ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯವನ್ನು ನಮ್ಮ ಬಜೆಟ್ ಆಧರಿಸಿದೆ’ ಎಂದು ಹೇಳಿದರು.

‘ನಮ್ಮ ಬಜೆಟ್ ಕುರಿತು ‘ಪ್ರಜಾವಾಣಿ’ ಸಂಪಾದಕೀಯ ಸೇರಿ ಹಲವು ಪತ್ರಿಕೆಗಳಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ. ಕಿರಣ್ ಮಜುಂದಾರ್ ಸೇರಿ ಹಲವರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ’ ಎಂದು ಹೇಳಿದ ಸಿದ್ದರಾಮಯ್ಯ, ಅವರ ಮಾತುಗಳನ್ನು ಸದನದಲ್ಲಿ ಉಲ್ಲೇಖಿಸಿದರು.

ಡಿಕೆಶಿ ಹೆಸರೆತ್ತದ ಸಿದ್ದರಾಮಯ್ಯ

ಒಂದನೇ ಪುಟದಿಂದ...

ಚರ್ಚೆ ಆರಂಭ ಹೀಗೆ; ‘ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಇವತ್ತು ಫೋಟೊ ಶೂಟ್ ಮಾಡಿಸಿದ್ದಾರೆ. ನನಗೆ ಅವರ ಬಗ್ಗೆ ಸಂದೇಹ ಆಗುತ್ತಿದೆ. ಐದು ವರ್ಷಕ್ಕೊಮ್ಮೆ ಫೋಟೋ ಶೂಟ್ ಮಾಡಲಾಗುತ್ತದೆ. ಅವರು ಇವತ್ತೇ ಹೊಸ ಬಟ್ಟೆ ತೊಟ್ಟು ರೆಡಿ ಆಗಿದ್ದಾರೆ. ಹೊಸ ಬಾಗಿಲು, ಕಿಟಕಿ ಮಾಡಿಸುತ್ತಿದ್ದಾರೆ’ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಖಾದರ್ ಅವರನ್ನು ಕಿಚಾಯಿಸಿದರು.

ಆಗ ಮಧ್ಯಪ್ರವೇಶ ಮಾಡಿದ ಸಿದ್ದರಾಮಯ್ಯ, ‘ಖಾದರ್ ಎಲ್ಲೂ ಹೋಗಲ್ಲ. 2028ಕ್ಕೂ ಗೆಲ್ಲುತ್ತಾರೆ. ಚುನಾವಣೆಗೆ ಸ್ಪರ್ಧಿಸಿದಾಗಲೆಲ್ಲ ಗೆಲ್ಲುತ್ತಲೇ ಇರುತ್ತಾರೆ’ ಎಂದರು. ‘ಹಾಗಿದ್ದರೆ ಎಲ್ಲಿಯವರೆಗೆ ಸಭಾಧ್ಯಕ್ಷ ಆಗಿರುತ್ತಾರೆ’ ಎಂದು ಅಶೋಕ ಪ್ರಶ್ನಿಸಿದಾಗ, ‘ಹೈಕಮಾಂಡ್ ತೀರ್ಮಾನ ಮಾಡುವವರೆಗೆ ಇರುತ್ತಾರೆ’ ಎಂದರು.

‘ಅವರಿಗೂ ಕನಸಿರುವುದಿಲ್ಲವೇ’ ಎಂದು ಅಶೋಕ ಪ್ರಶ್ನಿಸಿದರು.

‘ನಿನಗೂ ಸಿಎಂ ಆಗಬೇಕು ಅಂತ ಕನಸಿಲ್ವೇನಯ್ಯಾ? ನೀನು ಸಿಎಂ ಆದರೂ, ಅರವಿಂದ ಬೆಲ್ಲದ ಆದರೂ ಸಂತೋಷ ಪಡುತ್ತೇನೆ. ನೋಡಿ ಅಲ್ಲಿ ಹಿಂದೆ ವಿಜಯೇಂದ್ರ ಕಾಯುತ್ತಾ ಕೂತಿದ್ದಾರೆ. ವಿಜಯೇಂದ್ರ ಯಾರಿಗೂ ಆಗಲು ಬಿಡಲ್ಲ’ ಎಂದು ಸಿದ್ದರಾಮಯ್ಯ ನಗುತ್ತಲೇ ಕಾಲೆಳೆದರು.

ಆಗ ಮಧ್ಯ ಪ್ರವೇಶಿಸಿದ ಬಿಜೆಪಿಯ ಸುನಿಲ್‌ಕುಮಾರ್, ‘ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆದರೂ ಖುಷಿ ಪಡುತ್ತೇನೆ ಎಂದು ಹೇಳಿ. ನಮ್ಮದು ಮಾತ್ರ ಏಕೆ ಹೇಳುತ್ತಿದ್ದೀರಿ’ ಎಂದರು. ಅದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ ಅವರು ‘ನಮ್ಮ ಪಕ್ಷದ ಎಲ್ಲ ನಾಯಕರಿಗೂ, ಎಲ್ಲ ಶಾಸಕರಿಗೂ ಮುಖ್ಯಮಂತ್ರಿ ಆಗುವ ಯೋಗ್ಯತೆ ಇದೆ’ ಎಂದರು. ಆಗಲೂ ಶಿವಕುಮಾರ್ ಹೆಸರು ಪ್ರಸ್ತಾಪಿಸಲಿಲ್ಲ. ‘ಹೈಕಮಾಂಡ್ ಎಲ್ಲಿಯವರೆಗೆ ತೀರ್ಮಾನ ಮಾಡುತ್ತದೆಯೋ, ಅಲ್ಲಿಯವರೆಗೆ ನಾನೇ ಮುಖ್ಯಮಂತ್ರಿ ಆಗಿರುತ್ತೇನೆ’ ಎಂದು ಹೇಳಿದರು.

‘ಹಸು– ಕರುಗಳಿಗೆ ನೀರು ಕುಡಿಸುವುದನ್ನು ನಿಮ್ಮ ತಂದೆ ನಿಮಗೆ ಕಲಿಸಿದ್ದಾರೆ. ಆದರೆ, ನೀವು ಶಿವಕುಮಾರ್, ಪರಮೇಶ್ವರ್ ಸೇರಿದಂತೆ ನಮಗೂ ನೀರು ಕುಡಿಸುತ್ತಿದ್ದೀರಿ’ ಎಂದು ಅಶೋಕ ಅವರು ಸಭೆಯನ್ನು ನಗೆಗಡಲಲ್ಲಿ ತೇಲಿಸಿದರು.

ಲವ್ ಮಾಕ್ಟೇಲ್–3

ಮುಂದುವರಿದ ಕಥೆ ಕದ್ದ ಆರೋಪ-ಪ್ರತ್ಯಾರೋಪ

ಡಾರ್ಲಿಂಗ್ ಕೃಷ್ಣ ನಟಿಸಿ, ನಿರ್ದೇಶಿಸಿರುವ 'ಲವ್ ಮಾಕ್ಟೇಲ್–3' ಯಶಸ್ವಿ ಪ್ರದರ್ಶನ ಕಾಣುತ್ತಿದೆ. ಈ ನಡುವೆಯೇ ಚಿತ್ರ ನಿರ್ದೇಶಕರ ವಿರುದ್ಧ ಕಥೆ ಕದ್ದ ಗಂಭೀರ ಆರೋಪ ಕೇಳಿಬಂದಿದೆ. ಅದು ಈಗ ನ್ಯಾಯಾಲಯದ ಮೆಟ್ಟಿಲು ಏರುವ ಹಂತಕ್ಕೆ ಬಂದು ನಿಂತಿದೆ.

'2023ರಲ್ಲಿ ಡಾರ್ಲಿಂಗ್ ಕೃಷ್ಣ ಅವರಿಗೆ ಕಥೆಯನ್ನು ನಿರ್ಮಾಪಕ ಗುರು ದೇಶಪಾಂಡೆ ಜತೆ ಹೋಗಿ ಹೇಳಿದ್ದೆ. ಆದರೆ ಅವರು ಆ ಕಥೆಯನ್ನು ಒಪ್ಪಿಕೊಂಡಿರಲಿಲ್ಲ. ಈಗ ನೋಡಿದರೆ 'ಲವ್ ಮಾಕ್ಟೇಲ್ 3' ಸಿನಿಮಾದಲ್ಲಿ ಅದೇ ಕಥೆ ಇದೆ. ಈ ಸಿನಿಮಾದ ದ್ವಿತೀಯಾರ್ಧ ಸಂಪೂರ್ಣ ನಮ್ಮ ಕಥೆಗೆ ಹತ್ತಿರವಾಗಿದೆ. ಹಿನ್ನೆಲೆ ಮತ್ತು ಪರಿಸರ ಬೇರೆ ಇದೆ. ಯಾವ ಬರಹಗಾರನಿಗೂ ಈ ರೀತಿ ಅನ್ಯಾಯವಾಗ ಬಾರದು' ಎಂದು ಬರಹಗಾರ, ನಿರ್ದೇಶಕ ರಾಘವೇಂದ್ರ ಎಂ. ನಾಯ್ಕ್ ಎರಡು ದಿನಗಳ ಹಿಂದೆ ಫೇಸ್‌ಬುಕ್‌ನಲ್ಲಿ ಬರೆದುಕೊಂಡಿದ್ದರು. ಇದು ವಿವಾದಕ್ಕೆ ಕಾರಣವಾಯಿತು.

ಕೃತಿಚೌರ್ಯ ಕುರಿತು ನಿರ್ಮಾಪಕ ಗುರು ದೇಶಪಾಂಡೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ದೂರು ದಾಖಲಿಸಿದ್ದಾರೆ. ಇನ್ನೊಂದೆಡೆ ಡಾರ್ಲಿಂಗ್ ಕೃಷ್ಣ ಹಾಗೂ ಮಿಲನಾ ನಾಗರಾಜ್ ಸುದ್ದಿಗೋಷ್ಠಿಯಲ್ಲಿ ಕಾನೂನು ಸಮರದ ಎಚ್ಚರಿಕೆ ನೀಡಿದ್ದಾರೆ.

'ನನಗಾದ ಅನ್ಯಾಯ ಹೇಳಿಕೊಂಡೆ'

ರಾಘವೇಂದ್ರ ಎಂ. ನಾಯ್ಕ್

'ನಾನು 15 ವರ್ಷಗಳಿಂದ ಚಿತ್ರರಂಗದಲ್ಲಿದ್ದೇನೆ. 'ಮಾರಿಗೋಲ್ಡ್' ಎಂಬ ಚಿತ್ರವನ್ನು ನಿರ್ದೇಶಿಸಿರುವೆ. ನನ್ನ ಫೇಸ್‌ಬುಕ್ ಪೋಸ್ಟ್‌ಗೆ ಚಿತ್ರರಂಗದ ಅನೇಕ ನಿರ್ದೇಶಕ, ತಂತ್ರಜ್ಞರು ಪ್ರತಿಕ್ರಿಯಿಸಿ ಬೆಂಬಲ ವ್ಯಕ್ತಪಡಿಸಿದ್ದಾರೆ. ನಾನು ಹಣದ ಆಸೆಗೋ, ಪ್ರಚಾರಕ್ಕಾಗಿಯೋ ಕಥೆ ಕದ್ದ ಆರೋಪ ಮಾಡಿದ್ದಲ್ಲ. ನನಗಾದ ಅನ್ಯಾಯವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ತೋಡಿಕೊಂಡೆ. ಅದು ಪ್ರಚಾರ ಪಡೆದು ಈ ಹಂತಕ್ಕೆ ಬಂದು ನಿಂತಿದೆ. ಈ ಘಟನೆ ಬೇರೆ ನಿರ್ದೇಶಕರುಗಳಿಗೊಂದು ಪಾಠದಂತಿದೆ. ಎಲ್ಲೇ ಕಥೆ ನೋಂದಾಯಿಸಿ, ದಾಖಲಿಸಿಕೊಂಡರೂ ಕಥೆಯ ಆತ್ಮವನ್ನು ತೆಗೆದುಕೊಂಡು ತಿರುಚಿದರೆ ಮೂಲ ಕಥೆಗಾರ ಏನೂ ಮಾಡುವಂತಿಲ್ಲ. ಇಲ್ಲಿ ನಂಬಿಕೆ, ವಿಶ್ವಾಸವಷ್ಟೇ ಮುಖ್ಯವಾಗುತ್ತದೆ' ಎಂದು ರಾಘವೇಂದ್ರ ಎಂ. ನಾಯ್ಕ್ ಹೇಳುತ್ತಾರೆ.

ಮಿಲನ ನಾಗರಾಜ್; ಡಾರ್ಲಿಂಗ್ ಕೃಷ್ಣ

ಕಾನೂನು ಸಮರ

ಈ ಆರೋಪಕ್ಕೆ ಚಿತ್ರದ ನಾಯಕ, ನಿರ್ದೇಶಕ, ನಿರ್ಮಾಪಕ ಡಾರ್ಲಿಂಗ್ ಕೃಷ್ಣ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದು, 'ಈ ರೀತಿ ಆರೋಪ ಮಾಡಿರುವ ನಿರ್ಮಾಪಕ ಗುರು ದೇಶಪಾಂಡೆ ಹಾಗೂ ನಿರ್ದೇಶಕ ರಾಘವೇಂದ್ರ ಎಂ. ನಾಯ್ಕ್ ವಿರುದ್ಧ ಕಾನೂನು ರೀತ್ಯ ಹೋರಾಡುತ್ತೇನೆ. ಮಾನನಷ್ಟ ಮೊಕದ್ದಮೆ ಹೂಡುತ್ತೇನೆ' ಎಂದು ಎಚ್ಚರಿಸಿದ್ದಾರೆ.

'ನಮಗಿರುವ ಮಾನ, ಆಗಿರುವ ಅವಮಾನ ಆಧರಿಸಿ ಎಷ್ಟು ಮೊತ್ತಕ್ಕೆ ಮೊಕದ್ದಮೆ ಹೂಡಬೇಕು ಎಂದು ನಿರ್ಧರಿಸುತ್ತೇವೆ. 'ಲವ್ ಮಾಕ್ಟೇಲ್' ಹಿಂದಿನ ಶ್ರಮ ನಮಗೆ ಗೊತ್ತಿದೆ. ಆ ಫ್ರಾಂಚೈಸಿ ಸುಮ್ಮನೆ ಬಂದಿಲ್ಲ. ರಾಘವೇಂದ್ರ ಅವರು ಹೇಳಿದಂತೆ ಯಾವ ನಿಜವಾದ ಬರಹಗಾರರಿಗೂ ಅನ್ಯಾಯವಾಗಬಾರದು. ನಾನು ಕೂಡ ಬರಹಗಾರ, ನಂತರ ನಿರ್ದೇಶಕ. ನಾಲ್ಕು ವರ್ಷ ಕುಳಿತು ಈ ಕಥೆ ಬರೆದಿದ್ದೇನೆ. ಗೂಗಲ್‌ನಲ್ಲಿ ಇರುವ ಕಥೆಯನ್ನು ನನಗೆ ನಾಲ್ಕು ವರ್ಷಗಳ ಹಿಂದೆ ಹೇಳಿ, ಈಗ ನಮ್ಮ ಕಥೆ ಎನ್ನುತ್ತಿದ್ದಾರೆ. ಅವರಿಗೆ ಸಾಮಾನ್ಯ ಜ್ಞಾನ ಇಲ್ಲ. ಅವರ ಸಮಸ್ಯೆ ಅರ್ಥವಾಗುತ್ತಿಲ್ಲ. ಅವರ ಸಿನಿಮಾಗಳು ಬರುತ್ತಿವೆ. ಅದಕ್ಕೆ ಪ್ರಚಾರ ಬೇಕು. ಹೀಗಾಗಿ ನಮ್ಮ ಸಿನಿಮಾದಿಂದ ಪ್ರಚಾರ ಪಡೆಯುತ್ತಿದ್ದಾರೆ' ಎಂದು ಕೃಷ್ಣ ಬೇಸರ ವ್ಯಕ್ತಪಡಿಸಿದ್ದಾರೆ.

'ಈ ಕಥೆ ಕುರಿತು ರಾಘವೇಂದ್ರ ಹೇಳಿದ್ದೆಲ್ಲ ನಿಜ. ಅವರು ಬಂದು ನನಗೆ ಕಥೆ ಹೇಳಿದ್ದರು. ಆದರೆ ಅದು ಗೂಗಲ್‌ನಿಂದ ತೆಗೆದುಕೊಂಡ ಕಥೆ. ಲಖನೌನಲ್ಲಿ ನಡೆದ ಒಂದು ಪ್ರಕರಣದ ಕುರಿತಾದ ಕಥೆಯಾಗಿತ್ತು. ಪತ್ನಿಯಿಲ್ಲದ ಪುರುಷ ಹುಡುಗಿಯನ್ನು ದತ್ತು ತೆಗೆದುಕೊಳ್ಳುವಂತಿಲ್ಲ ಎಂಬುದು ನಮ್ಮ ಸಿನಿಮಾ ಕಥೆ. ಈ ಎರಡೂ ಕಥೆಗಳು ಭಿನ್ನವಾಗಿವೆ. ಹೀಗಾಗಿ ಅಪಪ್ರಚಾರ ಮಾಡುತ್ತಿರುವವರು ಆಡುವ ಮಾತಿನಲ್ಲಿ ಯಾವುದೇ ಹುರುಳಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಬರುವುದೆಲ್ಲ ನಿಜ ಎಂದು ನಂಬಬೇಡಿ' ಎಂದರು.

ಚಿತ್ರೀಕರಿಸಿ ಕಥೆ ಹೇಳಬೇಕು

ಗುರು ದೇಶಪಾಂಡೆ

'ಡಾರ್ಲಿಂಗ್ ಕೃಷ್ಣ ನನ್ನನ್ನು, ರಾಘವೇಂದ್ರ ಅವರನ್ನು ಲೇವಡಿ ಮಾಡಿರುವುದನ್ನು ನೋಡಿದೆ. ಡಾರ್ಲಿಂಗ್ ಕೃಷ್ಣ ಅವರ ಮನೆಗೆ ಹೋಗಿ ನಾಲ್ಕು ತಾಸು ಕುಳಿತು ಕಥೆ ಹೇಳಿ ಬಂದಿದ್ದೇವೆ. ಹುಡುಕಿದರೆ ಇದಕ್ಕೆ ಸಾಕ್ಷ್ಯಗಳು ಸಿಗುತ್ತವೆ. ತಮ್ಮ ಚಿತ್ರದಲ್ಲಿ ನಮ್ಮ ಕಥೆ ಇಲ್ಲ ಎನ್ನುತ್ತಿದ್ದಾರೆ. ನಮ್ಮ ಚಿತ್ರದ ಸನ್ನಿವೇಶ, ಸಂಭಾಷಣೆ 'ಲವ್ ಮಾಕ್ಟೇಲ್–3' ಚಿತ್ರದಲ್ಲಿ ಇಲ್ಲದಿರಬಹುದು, ಆದರೆ ಕಥೆಯ ಆತ್ಮ ನಮ್ಮದೇ. ಮಗು ನಿಜವಾದ ಪಾಲಕರ ಪಾಲಾಗುತ್ತದೆಯಾ ಅಥವಾ ಸಾಕಿದ ಅಪ್ಪನ ಪಾಲಾಗುತ್ತದೆಯಾ ಎಂಬುದೇ 'ಲವ್ ಮಾಕ್ಟೇಲ್–3' ಚಿತ್ರದ ಕ್ಲೈಮ್ಯಾಕ್ಸ್ ಅಲ್ಲವೇ? ಅವರದ್ದು ಪತ್ನಿಯಿಲ್ಲದ ಪುರುಷ ಹುಡುಗಿಯನ್ನು ದತ್ತು ತೆಗೆದುಕೊಳ್ಳುವ ಕಥೆ ಎಂದಾದರೆ, ನಮ್ಮ ಚಿತ್ರದ ಕ್ಲೈಮ್ಯಾಕ್ಸ್ ಅನ್ನು ಏಕೆ ಇಟ್ಟುಕೊಂಡರು? ಆತ್ಮವನ್ನೇ ತೆಗೆದುಕೊಂಡರೆ ಕಥೆಯಲ್ಲಿ ಏನು ಉಳಿಯುತ್ತದೆ?' ಎಂದು ಪ್ರಶ್ನಿಸುತ್ತಾರೆ ಗುರು ದೇಶಪಾಂಡೆ.

'ಲವ್ ಮಾಕ್ಟೇಲ್' ಯಶಸ್ಸಿಗೂ ಮೊದಲು ಡಾರ್ಲಿಂಗ್ ಕೃಷ್ಣ ನನ್ನ ಸ್ನೇಹಿತರಾಗಿದ್ದರು ಎಂಬುದು ಎಲ್ಲರಿಗೂ ಗೊತ್ತಿದೆ. ನನಗೆ ಅವರು ಆಗ ಎಷ್ಟು ಸಲ ಕರೆ ಮಾಡುತ್ತಿದ್ದರು ಎಂಬುದಕ್ಕೆ ದಾಖಲೆಗಳಿವೆ. ಹಣ, ಯಶಸ್ಸನ್ನು ತಲೆಗೇರಿಸಿಕೊಂಡು ಇವತ್ತು ನಮ್ಮನ್ನು ಲೇವಡಿ ಮಾಡುತ್ತಿದ್ದಾರೆ. ಸ್ನೇಹಿತ ಎಂಬ ವಿಶ್ವಾಸದಲ್ಲಿ ಆಡಿಯೊ, ವಿಡಿಯೊ ಚಿತ್ರೀಕರಣ ಮಾಡಿಕೊಳ್ಳದೇ ಕಥೆ ಹೇಳಿದ್ದೆವು. ಇನ್ನು ಮುಂದೆ ಯಾವುದೇ ನಾಯಕನಿಗೆ ಕಥೆ ಹೇಳಬೇಕಾದರೂ ಸ್ಟುಡಿಯೊಗೆ ಕರೆದು, ವಿಡಿಯೊ ಚಿತ್ರೀಕರಣ ಮಾಡಿಕೊಂಡು ಕಥೆ ಹೇಳಬೇಕು ಎಂಬ ಪಾಠವನ್ನು ಡಾರ್ಲಿಂಗ್ ಕೃಷ್ಣ ಕಲಿಸಿದ್ದಾರೆ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಏಪ್ರಿಲ್ 10ಕ್ಕೆ 'ಪಳ್ಳಿಚಟ್ಟಂಬಿ' ತೆರೆಗೆ

ಮಲಯಾಳ ನಟ ಟೊವಿನೋ ಥಾಮಸ್ ನಟನೆಯ ಹೊಸ ಸಿನಿಮಾ 'ಪಳ್ಳಿಚಟ್ಟಂಬಿ' ಏ.10ರಂದು ಬಿಡುಗಡೆಯಾಗಲಿದೆ. ಈ ಹಿಂದೆ ಸಿನಿಮಾವು ಏ.9ರಂದು ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ತಿಳಿಸಿತ್ತು.

ಸಿನಿಮಾದ ಟೀಸರ್ ವಿಡಿಯೊದಲ್ಲಿ ಹೊಸ ಬಿಡುಗಡೆ ದಿನಾಂಕವನ್ನು ಘೋಷಿಸಲಾಗಿದೆ. ಚಿತ್ರದಲ್ಲಿ ಟೊವಿನೋಗೆ ಕಯಾದು ಲೋಹರ್ ಜೋಡಿಯಾಗಿದ್ದಾರೆ. ಆ್ಯಕ್ಷನ್ ಜಾನರ್‌ನ ಈ ಸಿನಿಮಾಗೆ ಡಿಜೋ ಜೋಸ್ ಆಂಟೋನಿ ಆ್ಯಕ್ಷನ್ ಕಟ್ ಹೇಳಿದ್ದಾರೆ. 50-60ರ ದಶಕದ ಕಥೆ ಸಿನಿಮಾದಲ್ಲಿದ್ದು, ಜಯರಾಘವನ್, ಸುಧೀರ್ ಕರಮನ, ಬಾಬುರಾಜ್, ವಿನೋದ್ ಕೆದಮಂಗಲಂ, ಪ್ರಶಾಂತ್ ಅಲೆಕ್ಸಾಂಡರ್ ಸೇರಿದಂತೆ ಹಲವಾರು ತಾರಾಗಣದಲ್ಲಿದ್ದಾರೆ. 'ಪಳ್ಳಿಚಟ್ಟಂಬಿ' ಸಿನಿಮಾ ಮಲಯಾಳ, ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ತೆರೆಕಾಣಲಿದೆ.

ವರ್ಲ್ಡ್ ವೈಡ್ ಫಿಲ್ಮ್ ಮತ್ತು ಸಿ ಕ್ಯೂಬ್ ಬ್ರದರ್ಸ್ ಎಂಟರ್‌ಟೇನ್ಮೆಂಟ್ ಬ್ಯಾನರ್‌ನಡಿ ಸಿನಿಮಾವನ್ನು ನೌಫಲ್ ಮತ್ತು ಬ್ರಿಜೇಶ್ ನಿರ್ಮಿಸಿದ್ದಾರೆ. ಟಿಜೊ ಟಾಮಿ ಛಾಯಾಚಿತ್ರಗ್ರಹಣ, ಜೇಕ್ಸ್ ಬಿಜಾಯ್ ಸಂಗೀತ ಸಂಯೋಜನೆ, ಶ್ರೀಜಿತ್ ಸಾರಂಗ್ ಸಂಕಲನ ಚಿತ್ರಕ್ಕಿದೆ. ಎಸ್.ಸುರೇಶ್ ಬಾಬು ಚಿತ್ರಕಥೆ ಬರೆದಿದ್ದಾರೆ.

ಮಾರ್ಚ್ 27ಕ್ಕೆ 'ಯಾವ ಮೋಹನ ಮುರಳಿ ಕರೆಯಿತು' ಬಿಡುಗಡೆ

ವಿಶ್ವಾಸ್ ಕೃಷ್ಣ ನಿರ್ದೇಶನದ, ಶರಣಪ್ಪ ಗೌರಮ್ಮ ನಿರ್ಮಾಣದ 'ಯಾವ ಮೋಹನ ಮುರಳಿ ಕರೆಯಿತು' ಸಿನಿಮಾ ಮಾರ್ಚ್ 27ರಂದು ತೆರೆಕಾಣಲಿದೆ.

ಪ್ರಕೃತಿ ಪ್ರೊಡಕ್ಷನ್ ಬ್ಯಾನರ್‌ನಡಿ ಈ ಸಿನಿಮಾ ನಿರ್ಮಾಣವಾಗಿದೆ. ವಿಶ್ವಾಸ್ ಅವರೇ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದಿದ್ದಾರೆ. ಸಿನಿಮಾ ಕುರಿತು ಮಾತನಾಡಿದ ವಿಶ್ವಾಸ್, 'ನನ್ನ ನಿರ್ದೇಶನದ ಮೊದಲ ಚಿತ್ರವಿದು. ಇದೊಂದು ಭಾವನಾತ್ಮಕ ಪಯಣದ ಕಥೆ. ಶ್ವಾನ ಪ್ರೇಮಿಗಳಿಗೆ ಬಹಳ ಇಷ್ಟವಾಗಲಿದೆ. ಚಿತ್ರದ ಮುಖ್ಯ ಪಾತ್ರದಲ್ಲಿ ನಿರ್ಮಾಪಕರ ಮಗಳು ಪ್ರಕೃತಿ ಅಭಿನಯಿಸಿದ್ದಾರೆ. ತಂದೆಯ ಪಾತ್ರದಲ್ಲಿ ಮಾಧವ, ತಾಯಿಯಾಗಿ ಸ್ವಪ್ನ ಶೆಟ್ಟಿಗಾರ ಬಣ್ಣಹಚ್ಚಿದ್ದಾರೆ. ರಾಣಾ ಹಾಗೂ ರಾಕಿ ಎಂಬ ಶ್ವಾನ ಸಿನಿಮಾದಲ್ಲಿ ಕಾಣಿಸಿಕೊಂಡಿವೆ' ಎಂದರು.

ಶರಣಪ್ಪ ಮಾತನಾಡಿ, 'ಭಾವನಾತ್ಮಕವಾದ ಕಥೆಯುಳ್ಳ ಈ ಸಿನಿಮಾದಲ್ಲಿ ಸಸ್ಪೆನ್ಸ್, ಥ್ರಿಲ್ಲರ್ ಅಂಶವಿದೆ. ಮುಂದಿನ ದಿನಗಳಲ್ಲಿ ಕಿಕ್ ಬಾಕ್ಸಿಂಗ್ ಕುರಿತಾದ ಸಿನಿಮಾ ಮಾಡುವ ಯೋಚನೆ ಇದೆ' ಎಂದರು. ಚಿತ್ರಕ್ಕೆ ಅನಿಲ್ ಸಿ.ಜೆ ಸಂಗೀತ ಹಾಗೂ ಕೀರ್ತನ್ ಪೂಜಾರಿ ಛಾಯಾಚಿತ್ರಗ್ರಹಣವಿದೆ.

ಮಾಧವ, ಪ್ರಕೃತಿ, ಸ್ವಪ್ನ

'ಅಖಾಡದಿಂದ ಹಿಂದೆ ಸರಿಯಲ್ಲ'

ದಾವಣಗೆರೆ ದಕ್ಷಿಣ: ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಸಾದಿಕ್ ಪೈಲ್ವಾನ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಉಪ ಚುನಾವಣೆ - 2026

ದಾವಣಗೆರೆ: 'ಉಪಚುನಾವಣೆ ಕಣದಿಂದ ನಾಮಪತ್ರ ಹಿಂಪಡೆಯುವಂತೆ ಮನವೊಲಿಸಲು ಮನೆಬಾಗಿಲಿಗೆ ಬರುವ ನಾಯಕರಿಗೆ ಗೋಬ್ಯಾಕ್ ಎಂದೇ ಹೇಳುತ್ತೇನೆ. ಯಾವುದೇ ಕಾರಣಕ್ಕೂ ಅಖಾಡದಿಂದ ಹಿಂದೆ ಸರಿಯುವುದಿಲ್ಲ' ಎಂದು ಕಾಂಗ್ರೆಸ್ ಪಕ್ಷದ ಬಂಡಾಯ ಅಭ್ಯರ್ಥಿ ಸಾದಿಕ್ ಪೈಲ್ವಾನ್ ತಿಳಿಸಿದರು.

'ನಾನು ನಾಮಪತ್ರ ಹಿಂಪಡೆಯುವೆ ಎಂದು ದಕ್ಷಿಣ ಕ್ಷೇತ್ರದಾದ್ಯಂತ ವದಂತಿ ಹರಡಲಾಗಿದೆ. ಅಲ್ಪಸಂಖ್ಯಾತರಿಗೆ ಮೋಸ ಮಾಡಿದ ಕಾಂಗ್ರೆಸ್‌ಗೆ ಪಾಠ ಕಲಿಸಲು ಸ್ಪರ್ಧಿಸಿದ್ದೇನೆ. ಬೆಂಬಲಿಗರು, ಸಮುದಾಯದ ಮತದಾರರು ವದಂತಿಗಳಿಗೆ ಕಿವಿಗೊಡಬೇಡಿ' ಎಂದು ಅವರು ಬುಧವಾರ ಸುದ್ದಿಗಾರರೆದುರು ಮನವಿ ಮಾಡಿದರು.

'ಟಿಕೆಟ್‌ಗೆ ಬೇಡಿಕೆ ಇರಿಸಿದ್ದ ಅಲ್ಪಸಂಖ್ಯಾತ ಸಮುದಾಯದ ರಾಜ್ಯಮಟ್ಟದ ನಾಯಕರಿಗೆ ಕಾಂಗ್ರೆಸ್ ಬೆಲೆ ಕೊಟ್ಟಿಲ್ಲ. ಅಲ್ಪಸಂಖ್ಯಾತರು, ಹಿಂದುಳಿದವರು, ದಲಿತರನ್ನು ಪೂರ್ಣವಾಗಿ ನಿರ್ಲಕ್ಷಿಸಿದೆ. ಮತದಾರರ ಬೆಂಬಲ ಇರುವಾಗ ನಾನೇಕೆ ಕಣದಿಂದ ಹಿಂದೆ ಸರಿಯಲಿ' ಎಂದೂ ಪ್ರಶ್ನಿಸಿದರು.

ಸಾದಿಕ್ ಪೈಲ್ವಾನ್

'ಅಲ್ಪಸಂಖ್ಯಾತ ಸಮುದಾಯದವರಿಗೆ ಟಿಕೆಟ್ ಸಿಗಬೇಕು ಎಂಬುದು ವೈಯಕ್ತಿಕ ಬೇಡಿಕೆಯಲ್ಲ. ಮೌಲ್ವಿಗಳು, ಸಮುದಾಯದ ನಾಯಕರು ಒಗ್ಗೂಡಿ ಕೈಗೊಂಡ ತೀರ್ಮಾನ. ಮೊದಲು ಅವರನ್ನು ವಿಶ್ವಾಸಕ್ಕೆ ಪಡೆಯುವ ಕೆಲಸವನ್ನು ಮಾಡಲಿ. ನಂತರ ನನ್ನ ಬಳಿಗೆ ಬರಲಿ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು.

'ಉಪಚುನಾವಣೆಗೆ 22 ಮುಸ್ಲಿಂ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ಬಹುತೇಕರು ನನ್ನ ಸಂಬಂಧಿಕರು. ಎಲ್ಲರ ಜೊತೆ ಸಂಪರ್ಕದಲ್ಲಿದ್ದೇನೆ. ಮತಗಳು ಚದುರಿ ಹೋಗದಂತೆ ಎಚ್ಚರವಹಿಸುವ ಅಗತ್ಯವಿದೆ. ಹೀಗಾಗಿ, ಎಲ್ಲರ ಮನವೊಲಿಸಿ ಸಮುದಾಯದ ಪ್ರತಿನಿಧಿಯಾಗಿ ನಾನೊಬ್ಬನೇ ಕಣದಲ್ಲಿ ಉಳಿಯುತ್ತೇನೆ' ಎಂದು ಸಾದಿಕ್ ಪೈಲ್ವಾನ್ ಅವರು ಹೇಳಿದರು.

ದಾಖಲೆ ಇಲ್ಲದ ₹ 8.65 ಲಕ್ಷ ವಶ

ದಾವಣಗೆರೆ/ಬಾಗಲಕೋಟೆ: ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಸಮರ್ಪಕ ದಾಖಲೆ ಇಲ್ಲದೆ ಸಾಗಿಸುತ್ತಿದ್ದ ಒಟ್ಟು ₹8.65 ಲಕ್ಷ ನಗದನ್ನು ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

ದಾವಣಗೆರೆ ದಕ್ಷಿಣ ಕ್ಷೇತ್ರ ವ್ಯಾಪ್ತಿಯ ವಿವಿಧ ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆ ವೇಳೆ ₹ 6.35 ಲಕ್ಷ ನಗದನ್ನು ಚುನಾವಣಾಧಿಕಾರಿಗಳು ಬುಧವಾರ ವಶಕ್ಕೆ ಪಡೆದಿದ್ದಾರೆ.

ಭೂಮಿಕಾನಗರ ಬಳಿಯ ಚೆಕ್‌ಪೋಸ್ಟ್‌ನಲ್ಲಿ ₹ 4 ಲಕ್ಷ, ಮಾಗನಹಳ್ಳಿ ಚೆಕ್‌ಪೋಸ್ಟ್‌ನಲ್ಲಿ ₹1.12 ಲಕ್ಷ, ಕಾರಿಗನೂರು ಚೆಕ್‌ಪೋಸ್ಟ್‌ನಲ್ಲಿ ₹1.15 ಲಕ್ಷ ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಾಗಲಕೋಟೆ ಕ್ಷೇತ್ರ ವ್ಯಾಪ್ತಿಯ ಗುಗ್ಗಲಮರಿ ಚೆಕ್‌ಪೋಸ್ಟ್ ಬಳಿ, ದಾಖಲೆಗಳಿಲ್ಲದೆ ಸಾಗಿಸುತ್ತಿದ್ದ ₹2.30 ಲಕ್ಷ ನಗದನ್ನು ಜಪ್ತಿ ಮಾಡಲಾಗಿದೆ.

ಕಿರಿಯ ಎಂಜಿನಿಯರ್ ಎಂ.ಎಚ್.ಕೋತ್ತವಾಲ ನೇತೃತ್ವದ ತಂಡ ತಪಾಸಣೆ ಮಾಡಿದಾಗ ಹಣ ಪತ್ತೆಯಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಎಡೆಯೂರು ರಥೋತ್ಸವ

ಪ್ರಜಾವಾಣಿ ಚಿತ್ರ

ಕುಣಿಗಲ್ ತಾಲ್ಲೂಕು ಎಡೆಯೂರಿನಲ್ಲಿ ಸಿದ್ಧಲಿಂಗೇಶ್ವರ ರಥೋತ್ಸವವು ಅಪಾರ ಭಕ್ತರ ಸಮ್ಮುಖ ಬುಧವಾರ ನಡೆಯಿತು

'ಸೌಂದರ್ಯ' ಮಾರಾಟ

ಆಲಪ್ಪುಳ (ಪಿಟಿಐ): 'ಹಾಲಿ ಶಾಸಕಿ, ಎಲ್‌ಡಿಎಫ್ ಅಭ್ಯರ್ಥಿಯು. ಪ್ರತಿಭಾ ಅವರು ಹ್ಯಾಟ್ರಿಕ್ ಗೆಲುವಿಗಾಗಿ, ತಮ್ಮ ವಾಕ್ಚಾತುರ್ಯ ಹಾಗೂ ಸೌಂದರ್ಯವನ್ನು ಮಾರಾಟ ಮಾಡುತ್ತಿದ್ದಾರೆ' ಎಂದು ಯುಡಿಎಫ್‌ನ ಮುಖಂಡರೊಬ್ಬರು ದೂರಿದ್ದಾರೆ.

ಭಾರತೀಯ ಯೂನಿಯನ್ ಮುಸ್ಲಿಂ ಲೀಗ್‌ನ (ಐಯುಎಂಎಲ್) ಮುಖಂಡರು ಹಾಗೂ ಕಾಯಂಕುಳಂನ ಯುಡಿಎಫ್ ಸಂಚಾಲಕರೂ ಆಗಿರುವ ಎ. ಇರ್ಷಾದ್ ಅವರು ಚುನಾವಣಾ ಪ್ರಚಾರದಲ್ಲಿ ಈ ಟೀಕೆ ಮಾಡಿದ್ದಾರೆ.

'ಶಾಸಕರು ತಮ್ಮ ಅಧಿಕಾರದ ಅವಧಿಯಲ್ಲಿ ಯಾವೊಂದು ಕೆಲಸ ಮಾಡಿಲ್ಲ' ಎಂದೂ ಆರೋಪಿಸಿದ್ದಾರೆ.

ಎಐಎಡಿಎಂಕೆಗೆ 169 ಕ್ಷೇತ್ರ

ಚೆನ್ನೈ: ತಮಿಳುನಾಡಿನ ಎನ್‌ಡಿಎ ಮೈತ್ರಿಕೂಟದ ಸೀಟು ಹಂಚಿಕೆ ಅಂತಿಮಗೊಂಡಿದ್ದು, ಎಐಎಡಿಎಂಕೆ 169 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಲಿದೆ.

65 ಕ್ಷೇತ್ರಗಳು ಮೈತ್ರಿ ಪಕ್ಷಗಳ ಪಾಲಾಗಿದ್ದು, ಬಿಜೆಪಿಗೆ 27, ಪಿಎಂಕೆಗೆ 18 ಸೀಟುಗಳು, ಟಿ.ಟಿ.ವಿ ದಿನಕರನ್ ಅವರ ಎಎಂಎಂಕೆಗೆ 11 ಕ್ಷೇತ್ರಗಳು ಹಂಚಿಕೆಯಾಗಿವೆ.

2024ರ ಲೋಕಸಭೆ ಚುನಾವಣೆಯಲ್ಲಿ ಕನ್ಯಾಕುಮಾರಿ ಕ್ಷೇತ್ರದಲ್ಲಿ ಎಐಎಡಿಎಂಕೆ ಠೇವಣಿ ಕಳೆದುಕೊಂಡಿತ್ತು. ಹೀಗಾಗಿ ಈ ವ್ಯಾಪ್ತಿಯ 6 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿಗೆ 4, ತಮಿಳು ಮಾನಿಲ ಕಾಂಗ್ರೆಸ್‌ಗೆ (ಟಿಎಂಸಿ) ಒಂದು ಕ್ಷೇತ್ರ ನೀಡಿದೆ.

ಚೆನ್ನೈನ 16 ಕ್ಷೇತ್ರಗಳ ಪೈಕಿ 13 ಕ್ಷೇತ್ರ ಉಳಿಸಿಕೊಂಡಿರುವ ಎಐಎಡಿಎಂಕೆ, ಮಾಯಲಾಪುರ್ ಕ್ಷೇತ್ರವನ್ನು ಬಿಜೆಪಿಗೆ, ಸೈದ್‌ಪೇಟ್ ಕ್ಷೇತ್ರವನ್ನು ಎಎಂಎಂಕೆಗೆ, ಪೆರಂಬೂರ್ ಕ್ಷೇತ್ರವನ್ನು ಪಿಎಂಕೆಗೆ ನೀಡಿದೆ.

ಪೆರಂಬೂರ್ ಕ್ಷೇತ್ರ ಡಿಎಂಕೆ ಭದ್ರಕೋಟೆ ಎನಿಸಿದೆ. ಇದೇ ಕ್ಷೇತ್ರದಿಂದ ಟಿವಿಕೆ ಸಂಸ್ಥಾಪಕ, ನಟ ವಿಜಯ್ ಸ್ಪರ್ಧೆ ಮಾಡುವ ಸಾಧ್ಯತೆ ಇದೆ.

ಕೊಯಮತ್ತೂರು ಮತ್ತು ಮಧುರೈ ಜಿಲ್ಲೆಗಳಲ್ಲಿ ಬಿಜೆಪಿ ತಲಾ ಒಂದು ಕ್ಷೇತ್ರದಲ್ಲಿ ಸ್ಪರ್ಧಿಸಲಿದೆ. ಡಿಎಂಕೆ ಸಚಿವರು ಪ್ರತಿನಿಧಿಸುತ್ತಿರುವ 14 ಕ್ಷೇತ್ರಗಳನ್ನು ಎಐಎಡಿಎಂಕೆ ತನ್ನ ಮೈತ್ರಿ ಪಕ್ಷಗಳಿಗೆ ನೀಡಿದೆ.

ಮಾಜಿ ಶಾಸಕನ ಪುತ್ರನ ಕೊಲೆ ಮೂವರು ಆರೋಪಿಗಳ ವಶ

ಧಾರವಾಡ: ತಾಲ್ಲೂಕಿನ ರಾಮಾಪುರ ಬಳಿ ಸುಟ್ಟಸ್ಥಿತಿಯಲ್ಲಿ ಮಾಜಿ ಶಾಸಕ ಬಾಬುರಾವ್ ಬೋಳಶೆಟ್ಟಿ ಅವರ ಪುತ್ರ ರಾಜು ಶವ ಪತ್ತೆಯಾಗಿದ್ದ ಪ್ರಕರಣ ಸಂಬಂಧ ಪೊಲೀಸರು ಮೂವರನ್ನು ವಶಕ್ಕೆ ಪಡೆದಿದ್ದಾರೆ.

'ಆರೋಪಿಗಳು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಉಡಿಕೇರಿಯವರು. ವೈಯಕ್ತಿಕ ದ್ವೇಷದಿಂದ ಹತ್ಯೆ ಮಾಡಲಾಗಿದೆ. ಉಡಿಕೇರಿಯಲ್ಲಿ ಕೃತ್ಯ ಎಸಗಿರುವುದು ಪ್ರಾಥಮಿಕ ವಿಚಾರಣೆ ವೇಳೆ ಗೊತ್ತಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

'ಉಡಿಕೇರಿಯಲ್ಲಿ ಕೃತ್ಯ ಎಸಗಿ, ಕಾರಿನಲ್ಲಿ ಶವ ತಂದು ತಡರಾತ್ರಿ ರಾಮಾಪುರ ಬಳಿ ಬೆಂಕಿ ಹಚ್ಚಿದ್ದಾರೆ. ಈ ಬಗ್ಗೆ ತನಿಖೆ ಮುಂದುವರಿದಿದೆ' ಎಂದು ತಿಳಿಸಿದರು.

ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನಲ್ಲಿ ಬುಧವಾರ ಸುರಿದ ಆಲಿಕಲ್ಲು ಮಳೆಯ ನೋಟ

ಕಿತ್ತೂರು, ಕಲ್ಯಾಣದ ವಿವಿಧೆಡೆ ವರ್ಷಧಾರೆ

ಪ್ರಜಾವಾಣಿ ವಾರ್ತೆ

ಕಲಬುರಗಿ/ಹುಬ್ಬಳ್ಳಿ: ಕಿತ್ತೂರು ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ವಿವಿಧೆಡೆ ಬುಧವಾರ ಉತ್ತಮ ಮಳೆಯಾಗಿದೆ. ಕೆಲವೆಡೆ ಆಲಿಕಲ್ಲು ಮಳೆಯಾಗಿದ್ದು, ಅಲ್ಲಲ್ಲಿ ತೋಟಗಾರಿಕೆ ಬೆಳೆಗಳಿಗೆ ಹಾನಿಯಾಗಿದೆ.

ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಐನಾಪುರ, ಗಡಿಲಿಂಗದಹಳ್ಳಿ, ಚಂದನಕೇರಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಿವಿಧೆಡೆ ಸಂಜೆ 1 ಗಂಟೆ ಕಾಲ ಆಲಿಕಲ್ಲು ಸಹಿತ ಧಾರಾಕಾರ ಮಳೆಯಾಗಿದೆ.

ಕೊಪ್ಪಳ ಜಿಲ್ಲೆಯ ಕುಕನೂರು ತಾಲ್ಲೂಕಿನಲ್ಲೂ ಆಲಿಕಲ್ಲು ಮಳೆಯಾಗಿದೆ. ಕುಷ್ಟಗಿ ತಾಲ್ಲೂಕಿನ ಹನುಮಸಾಗರ ಭಾಗದಲ್ಲಿಯೂ ಮಳೆ ಸುರಿದಿದೆ.

ಬೀದರ್ ಜಿಲ್ಲೆಯ ಹುಲಸೂರಿನಲ್ಲಿ ಬುಧವಾರ ಅರ್ಧ ಗಂಟೆಗೂ ಹೆಚ್ಚು ಸಮಯ ಮಳೆಯಾಗಿದೆ.

ಕಿತ್ತೂರು ಕರ್ನಾಟಕ; ಬಿರುಸಿನ ಮಳೆ ಹುಬ್ಬಳ್ಳಿ ವರದಿ: ಹುಬ್ಬಳ್ಳಿ–ಧಾರವಾಡ, ಹಾವೇರಿ, ಬೆಳಗಾವಿ ಸೇರಿ ಕಿತ್ತೂರು ಕರ್ನಾಟಕದ ವಿವಿಧೆಡೆ ಬುಧವಾರವೂ ಬಿರುಸಿನಿಂದ ಮಳೆ ಸುರಿಯಿತು.

ಹುಬ್ಬಳ್ಳಿಯಲ್ಲಿ ಮೇಲ್ಸೇತುವೆ ಕಾಮಗಾರಿಗಾಗಿ ರಸ್ತೆ ಅಗೆದಿರುವ ಕಡೆ ನೀರು ನಿಂತು ಸಂಚಾರಕ್ಕೆ ಅಡಚಣೆ ಉಂಟಾಯಿತು. ಕೆ.ಸಿ ಪಾರ್ಕ್ ಬಳಿ ಅರಣ್ಯ ಇಲಾಖೆ ಕಚೇರಿ ಪಕ್ಕ ಮರವೊಂದು ಉರುಳಿತು.

ಹಾವೇರಿ ತಾಲ್ಲೂಕಿನ ಕಳ್ಳಿಹಾಳ ಗ್ರಾಮದಲ್ಲಿ ಮಂಗಳವಾರ ಮಳೆ ಸುರಿದ ವೇಳೆ ವೃದ್ಧ ಫಕೀರಪ್ಪ ಅವರು ಶಂಕಾಸ್ಪದವಾಗಿ ಮೃತಪಟ್ಟಿದ್ದು, ಸಿಡಿಲು ಬಡಿದು ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ.

ವಿಜಯಪುರ ನಗರ, ದೇವರ ಹಿಪ್ಪರಗಿ, ಮುದ್ದೇಬಿಹಾಳ ಪಟ್ಟಣದ ವ್ಯಾಪ್ತಿಯಲ್ಲಿ ಮಂಗಳವಾರ ರಾತ್ರಿ ಹಾಗೂ ತಿಕೋಟಾ ತಾಲ್ಲೂಕಿನ ಬಾಬಾನಗರ ಸೇರಿ ವಿವಿಧೆಡೆ ಬುಧವಾರ ಸಂಜೆ ಧಾರಾಕಾರ ಮಳೆಯಾಗಿದೆ.

ತಿಕೋಟಾ ತಾಲ್ಲೂಕಿನ ಕೊಟ್ಯಾಳ ರಸ್ತೆಯಲ್ಲಿನ ಸೋಮನಿಂಗ ಬಸಪ್ಪ ಬಾಗಲಕೋಟ ಅವರಿಗೆ ಸೇರಿದ ಕಟಾವಿಗೆ ಬಂದಿದ್ದ ನಾಲ್ಕು ಎಕರೆ ಹಣ್ಣಾದ ದ್ರಾಕ್ಷಿ ಪಡ ನೆಲಕಚ್ಚಿದೆ. ಬಾಬಾನಗರ ಗ್ರಾಮದ ರೈತ ಶಿವಾನಂದ ಚಂದ್ರಪ್ಪ ನಾವಿ ಅವರ ಮೂರು ಟನ್‌ಗೂ ಅಧಿಕ ಒಣದ್ರಾಕ್ಷಿ ತೊಯ್ದು ಹೋಗಿದೆ.

ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲ್ಲೂಕಿನಲ್ಲಿ ಕಳೆದೆರಡು ದಿನಗಳಿಂದ ಸುರಿದ ಆಲಿಕಲ್ಲು ಮಳೆಗೆ ಗೋವಿನಜೋಳ ಬೆಳೆ ಹಾನಿಯಾಗಿದೆ. ಬೆಳಗಾವಿ ಮತ್ತು ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ತೋರಣಗಲ್ಲು ಹೋಬಳಿಯ ಕೆಲ ಗ್ರಾಮಗಳಲ್ಲಿ ಆಲಿಕಲ್ಲು ಸಹಿತ ಉತ್ತಮ ಮಳೆ ಸುರಿಯಿತು.

ಈಶಾನ್ಯ ಭಾರತದ ಹೆಬ್ಬಾಗಿಲು ಅಸ್ಸಾಂ ವಿಧಾನಸಭೆ ಚುನಾವಣೆ

ಗೊಗೊಯ್‌ಗಳು ಮ್ಯಾಜಿಕ್ ಮಾಡುವರೇ?

ಮಂಜುನಾಥ ಹೆಬ್ಬಾರ್

ನವದೆಹಲಿ: ಈಶಾನ್ಯ ಭಾರತದ ಹೆಬ್ಬಾಗಿಲು ಅಸ್ಸಾಂ ರಾಜ್ಯದಲ್ಲಿ ಮೂವರು ಗೊಗೊಯ್‌ಗಳು ಈ ಸಲ ಒಗ್ಗಟ್ಟು ಪ್ರದರ್ಶಿಸಿದ್ದಾರೆ. ಕಠಿಣ ಸವಾಲಿನ ಚುನಾವಣಾ ಕಣದಲ್ಲಿ ತ್ರಿಮೂರ್ತಿಗಳು ಮ್ಯಾಜಿಕ್ ಮಾಡುವರೇ?

ಅಸ್ಸಾಂನಲ್ಲಿ ಕಾಂಗ್ರೆಸ್‌ಗೆ ಪುನರುಜ್ಜೀವನ ನೀಡಿದವರು ತರುಣ್ ಗೊಗೊಯ್. ಅವರು 2001ರಿಂದ 2016ರವರೆಗೆ ಸುದೀರ್ಘ ಅವಧಿ ಮುಖ್ಯಮಂತ್ರಿ ಆಗಿದ್ದರು. ರಾಜ್ಯದಲ್ಲಿ ಅತೀ ಹೆಚ್ಚು ಕಾಲ ಮುಖ್ಯಮಂತ್ರಿಯಾಗಿದ್ದ ಹೆಗ್ಗಳಿಕೆ ಅವರಿಗೆ ಇದೆ. ಆಕ್ರಮಣಕಾರಿ ರಾಜಕಾರಣ ನಡೆಸಿರುವ ಬಿಜೆಪಿಯು 2016ರಿಂದ ಗೆಲ್ಲುತ್ತಲೇ ಬಂದಿದೆ. ಈ ಬಾರಿಯೂ ಕೇಸರಿ ಪಕ್ಷವು ದಿಗ್ವಿಜಯ ಸಾಧಿಸುವ ಹುಮ್ಮಸ್ಸು-ಆತ್ಮವಿಶ್ವಾಸದಲ್ಲಿದೆ.

ಪ್ರಧಾನಿ ನರೇಂದ್ರ ಮೋದಿ ಜನಪ್ರಿಯತೆ ಮತ್ತು ಸ್ಥಳೀಯ ಪಕ್ಷಗಳೊಂದಿಗೆ ಜಾಣತನದಿಂದ ಮೈತ್ರಿ ಬೆಳೆಸುವ ಹಾಗೂ ವಿರೋಧಿ ಬಣಗಳ ಅತೃಪ್ತ ನಾಯಕರನ್ನು ತನ್ನೆಡೆಗೆ ಸೆಳೆದುಕೊಳ್ಳುವ ಮೂಲಕ ಕಾಂಗ್ರೆಸ್ ಬೇರುಗಳನ್ನು ಕಿತ್ತೆಸೆಯುವ ಉಮೇದಿನಲ್ಲಿದೆ. ಪ್ರಮುಖ ನಾಯಕರ ಪಕ್ಷಾಂತರದಿಂದ ನಲುಗಿರುವ ಕೈ ಪಾಳಯವು ಮೂವರು ಗೊಗೊಯ್‌ಗಳನ್ನು ನೆಚ್ಚಿಕೊಂಡಿದೆ.

2021ರ ವಿಧಾನಸಭೆ ಚುನಾವಣೆಯಲ್ಲಿ ಈ ಮೂವರು ಗೊಗೊಯ್‌ಗಳು ಪ್ರತ್ಯೇಕವಾಗಿ ಚುನಾವಣೆಗೆ ಸ್ಪರ್ಧಿಸಿದ್ದರು. ಈ ಸಲ ಮೂವರು ಒಂದೇ ಮೈತ್ರಿಕೂಟದ ಅಡಿಗೆ ಬಂದಿದ್ದಾರೆ. ಅವರೇ ಅಸ್ಸಾಂ ಕಾಂಗ್ರೆಸ್‌ನ ಅಧ್ಯಕ್ಷ ಗೌರವ್ ಗೊಗೊಯ್, ಅಸ್ಸಾಂ ಜಾತೀಯ ಪರಿಷತ್‌ನ ಮುಖ್ಯಸ್ಥ ಲುರಿಂಜ್ಯೋತಿ ಗೊಗೊಯ್ ಮತ್ತು ರೈಜೋರ್ ದಳದ ಸ್ಥಾಪಕ ಅಖಿಲ್ ಗೊಗೊಯ್.

ತರುಣ್ ಗೊಗೊಯ್ ಪುತ್ರ ಗೌರವ್ ಗೊಗೊಯ್ ಮೂರು ಅವಧಿಯಿಂದ ಸಂಸದರಾಗಿದ್ದಾರೆ ಮತ್ತು ಲೋಕಸಭೆಯಲ್ಲಿ ಕಾಂಗ್ರೆಸ್ ಉಪನಾಯಕರೂ ಆಗಿದ್ದಾರೆ. ಮೊದಲ ಬಾರಿಗೆ ವಿಧಾನಸಭಾ ಚುನಾವಣೆಯ ಅಖಾಡಕ್ಕೆ ಇಳಿದಿದ್ದಾರೆ.

ರಾಜ್ಯದ ಪ್ರಮುಖ ಮಾಹಿತಿ ಹಕ್ಕು ಕಾರ್ಯಕರ್ತರಲ್ಲಿ ಒಬ್ಬರಾಗಿರುವ ಅಖಿಲ್ ಅವರು 2020 ರಲ್ಲಿ ರೈಜೋರ್ ದಳ ಸ್ಥಾಪಿಸಿದರು. 2021ರ ಚುನಾವಣೆಯಲ್ಲಿ ಶಿವಸಾಗರ್ ಕ್ಷೇತ್ರದಿಂದ ಆಯ್ಕೆಯಾದರು.

2019ರಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆ ಅಂಗೀಕಾರವಾದ ನಂತರ ಅಸ್ಸಾಂನಲ್ಲಿ ಪ್ರಾದೇಶಿಕ ಭಾವನೆಗಳು ಉತ್ತುಂಗಕ್ಕೇರುತ್ತಿದ್ದಂತೆ ಲುರಿಂ ಜ್ಯೋತಿ ಗೊಗೊಯ್ ಅವರ ಜನಪ್ರಿಯತೆ ಹೆಚ್ಚಿತು. ಈ ಕಾಯ್ದೆ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿ ಕಾಣಿಸಿಕೊಂಡರು. ಅಸ್ಸಾಂ ಜಾತಿಯ ಪರಿಷತ್ ಸ್ಥಾಪಿಸಿ, ಮರು ವರ್ಷ ಚುನಾವಣಾ ರಾಜಕಾರಣಕ್ಕೆ ಪದಾರ್ಪಣೆ ಮಾಡಿದರು.

ಈ ಮೂವರು ಗೊಗೊಯ್‌ಗಳ ಒಗ್ಗೂಡುವಿಕೆ ಯಿಂದಾಗಿ ಅಹೋಮ್ ಸಮುದಾಯವು ಗಣನೀಯ ಸಂಖ್ಯೆಯಲ್ಲಿರುವ 40–45 ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಭಾವ ಬೀರುವ ನಿರೀಕ್ಷೆ ಇದೆ. ಕಾಂಗ್ರೆಸ್ ಪಕ್ಷವು ರೈಜೋರ್ ದಳಕ್ಕೆ 11 ಕ್ಷೇತ್ರಗಳನ್ನು ಮತ್ತು ಅಸ್ಸಾಂ ಜಾತಿಯ ಪರಿಷತ್‌ಗೆ 10 ಕ್ಷೇತ್ರಗಳನ್ನು ಬಿಟ್ಟುಕೊಟ್ಟಿದೆ.

ಮತ ಧ್ರುವೀಕರಣದತ್ತ ಚಿತ್ತ: ಕಳೆದ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟವು ಶೇ 43.96 ರಷ್ಟು ಮತ ಗಳಿಸಿದರೆ, ಕಾಂಗ್ರೆಸ್ ಮೈತ್ರಿಕೂಟವು ಶೇ 42.33ರಷ್ಟು ಮತ ಪಡೆದಿತ್ತು. ಮತಗಳ ಅಂತರ ಶೇ 1.5 ರಷ್ಟಿದ್ದರೂ, ಕ್ಷೇತ್ರಗಳ ಅಂತರ 25 ಆಗಿತ್ತು. ಬಿಜೆಪಿಯೊಂದೇ 60 ಕ್ಷೇತ್ರಗಳಲ್ಲಿ ಗೆಲುವಿನ ನಗೆ ಬೀರಿತ್ತು. ಅಸ್ಸಾಂ ಜಾತಿಯ ಪರಿಷತ್ 82 ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಶೇ 3.7ರಷ್ಟು ಮತ ಪಡೆದಿದ್ದರೆ, ರೈಜೋರ್ ದಳ 29 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ನಿಲ್ಲಿಸಿ ಶೇ 1.5 ರಷ್ಟು ಮತ ಗಳಿಸಿತ್ತು. ಕಾಂಗ್ರೆಸ್ ಸೋತ 14 ಕ್ಷೇತ್ರಗಳಲ್ಲಿ, ಈ ಎರಡೂ ಪಕ್ಷಗಳು ಗೆಲುವಿನ ಅಂತರಕ್ಕಿಂತ ಹೆಚ್ಚಿನ ಮತಗಳನ್ನು ಗಳಿಸಿದ್ದವು.

ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟದಲ್ಲಿ ಬದ್ರುದ್ದೀನ್ ಅಜ್ಮಲ್ ಅವರ ಎಐಯುಡಿಎಫ್ ಪ್ರಮುಖ ಪಕ್ಷವಾಗಿತ್ತು. ಈ ಸಲ ಈ ಪಕ್ಷವು ಮೈತ್ರಿಕೂಟದಲ್ಲಿಲ್ಲ. ಅಜ್ಮಲ್ ಅವರಿಂದ ಅಂತರ ಕಾಯ್ದುಕೊಳ್ಳುವ ಮೂಲಕ ಮತಗಳ ಧ್ರುವೀಕರಣವನ್ನು ಪರಿಣಾಮಕಾರಿಯಾಗಿ ತಡೆಯಬಹುದು ಮತ್ತು ಅಸ್ಸಾಂನಲ್ಲಿ ಬುಡಕಟ್ಟು ಹಿಂದೂ ಮತಗಳನ್ನು ಆಕರ್ಷಿಸಬಹುದು ಎಂಬುದು ಕಾಂಗ್ರೆಸ್ ಲೆಕ್ಕಾಚಾರ.

ಹೀಗೊಂದು ಲೆಕ್ಕಾಚಾರ...

ರಾಜ್ಯದಲ್ಲಿ ಮುಸ್ಲಿಮರ ಜನಸಂಖ್ಯೆ ಶೇ 34.2ರಷ್ಟಿದೆ. ಶೇ 90ರಷ್ಟು ಮುಸ್ಲಿಮರು 14 ಜಿಲ್ಲೆಗಳಲ್ಲಿ ವಾಸಿಸುತ್ತಿದ್ದಾರೆ. ಈ ಜಿಲ್ಲೆಗಳಲ್ಲಿ 70 ವಿಧಾನಸಭಾ ಕ್ಷೇತ್ರಗಳಿವೆ. ಈ ಜಿಲ್ಲೆಗಳಲ್ಲಿ ಹಿಂದಿನ ಚುನಾವಣೆಗಳಲ್ಲಿ ಬಿಜೆಪಿ ಉತ್ತಮ ಸಾಧನೆ ಮಾಡಿಲ್ಲ. ಆದರೆ, ಉಳಿದ 13 ಜಿಲ್ಲೆಗಳಲ್ಲಿ ಸ್ಪಷ್ಟ ಮೇಲುಗೈ ಸಾಧಿಸಿದೆ.

2024ರ ಲೋಕಸಭಾ ಚುನಾವಣೆಯಲ್ಲಿ 13 ಜಿಲ್ಲೆಗಳ 56 ವಿಧಾನಸಭಾ ಕ್ಷೇತ್ರಗಳಲ್ಲಿ ಎನ್‌ಡಿಎ ಮೈತ್ರಿಕೂಟ 45ರಲ್ಲಿ ಮುನ್ನಡೆ ಸಾಧಿಸಿತ್ತು. ಮುಸ್ಲಿಂ ಬಾಹುಳ್ಯದ 70 ಕ್ಷೇತ್ರಗಳಲ್ಲಿ ಕಾಂಗ್ರೆಸ್ 30 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದ್ದರೆ, ಉಳಿದ 56 ಕ್ಷೇತ್ರಗಳಲ್ಲಿ 10ರಲ್ಲಿ ಮಾತ್ರ ಮೇಲುಗೈ ಪಡೆದಿತ್ತು.

ತರುಣ್ ಗೊಗೊಯ್ ಅವರು ಮುಸ್ಲಿಂ ಹಾಗೂ ಹಿಂದೂ ಮತಗಳ ಸಮೀಕರಣದ ನೆರವಿನಿಂದ ಮೂರು ಚುನಾವಣೆಗಳಲ್ಲಿ ಭರ್ಜರಿ ಗೆಲುವು ಸಾಧಿಸಿದ್ದರು. ಆದರೆ, ಹಿಂದೂ ಮತದಾರರನ್ನು ದೊಡ್ಡ ಪ್ರಮಾಣದಲ್ಲಿ ಬಿಜೆಪಿ ಸೆಳೆದುಕೊಂಡು ದಶಕವೇ ಕಳೆದಿದೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಉತ್ತಮನಾದವನು ಕಡಿಮೆ ಮಾತನಾಡುತ್ತಾನೆ; ಮಾತಿಗಿಂತ ಹೆಚ್ಚಾಗಿ ಕೆಲಸ ಮಾಡುತ್ತಾನೆ.

–ಕನ್‌ಫ್ಯೂಷಿಯಸ್

ಸಂಪಾದಕೀಯ

ದಯಾಮರಣಕ್ಕೆ ದೊರೆತ ಅನುಮತಿ ಸಮಗ್ರ ಕಾನೂನಿಗೆ ಪ್ರೇರಣೆಯಾಗಲಿ

ಹದಿಮೂರು ವರ್ಷಗಳಿಂದ ಕೋಮಾದಲ್ಲಿದ್ದ ಗಾಜಿಯಾಬಾದ್‌ನ 31 ವರ್ಷದ ಹರೀಶ್ ರಾಣಾ, ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ (ಏಮ್ಸ್) ಮಾರ್ಚ್ 24ರಂದು ನಿಧನರಾಗಿದ್ದಾರೆ. ದೇಶದಲ್ಲಿ ಪರೋಕ್ಷ ದಯಾಮರಣಕ್ಕೆ ಅವಕಾಶ ದೊರೆತ ಮೊದಲ ಪ್ರಕರಣ ಇದಾಗಿದೆ. ಈ ನಿದರ್ಶನವು, ದಯಾಮರಣಕ್ಕೆ ಸಂಬಂಧಿಸಿದಂತೆ ಸಮಗ್ರ ಕಾನೂನು ರೂಪುಗೊಳ್ಳಲು ಪ್ರೇರಣೆ ಆಗಬೇಕಾಗಿದೆ. ಪಂಜಾಬ್ ವಿಶ್ವವಿದ್ಯಾಲಯದ ಬಿ.ಟೆಕ್. ವಿದ್ಯಾರ್ಥಿಯಾಗಿದ್ದ ಹರೀಶ್, 2013ರಲ್ಲಿ ತಾವು ವಾಸವಿದ್ದ ವಸತಿಗೃಹದ ನಾಲ್ಕನೇ ಮಹಡಿಯಿಂದ ಬಿದ್ದಿದ್ದರು. ಆಗಿನಿಂದಲೂ ಅವರು ಕೋಮಾದಲ್ಲಿದ್ದರು. ಕೊಳವೆ ಮೂಲಕ ನೀಡಲಾಗುತ್ತಿರುವ ಪೌಷ್ಟಿಕಾಂಶಯುಕ್ತ ಆಹಾರದಿಂದಲೇ ಅವರ ಜೀವ ಉಳಿದಿದೆ ಎನ್ನುವುದನ್ನು ಪರಿಗಣಿಸಿದ್ದ ಸುಪ್ರೀಂ ಕೋರ್ಟ್, ಮಾರ್ಚ್ 11ರಂದು ಅವರಿಗೆ ದಯಾಮರಣಕ್ಕೆ ಅನುಮತಿ ನೀಡಿತ್ತು. ಜೀವರಕ್ಷಕ ವ್ಯವಸ್ಥೆಯನ್ನು ಹಿಂತೆಗೆದುಕೊಳ್ಳುವಂತೆ ಹಾಗೂ ಆ ಪ್ರಕ್ರಿಯೆಯನ್ನು ಮಾನವೀಯ ರೀತಿಯಲ್ಲಿ ನಿರ್ವಹಿಸುವಂತೆ 'ಏಮ್ಸ್'ಗೆ ನಿರ್ದೇಶಿಸಿತ್ತು. ದಯಾಮರಣಕ್ಕೆ ಸಂಬಂಧಿಸಿದ ಸುಪ್ರೀಂ ಕೋರ್ಟ್ ತೀರ್ಪು ಚಾರಿತ್ರಿಕವಾದುದು. ಈ ವಿಷಯಕ್ಕೆ ಸಂಬಂಧಿಸಿದಂತೆ ಸಮಗ್ರ ಕಾಯ್ದೆಯೊಂದನ್ನು ರೂಪಿಸುವಂತೆಯೂ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಕೆ.ವಿ. ವಿಶ್ವನಾಥನ್ ಅವರನ್ನೊಳಗೊಂಡ ವಿಭಾಗೀಯ ಪೀಠ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ. ದೈಹಿಕ ಸ್ವಾಯತ್ತತೆಯ ಹಕ್ಕು, ಜೀವನ ಮತ್ತು ಮರಣಕ್ಕೆ ಸಂಬಂಧಿಸಿದ ಘನತೆಯ ಹಕ್ಕು ಸೇರಿದಂತೆ ಹಲವು ಸಂಗತಿಗಳನ್ನು ದಯಾಮರಣವು ಒಳಗೊಂಡಿದೆ. ಮತ್ತೊಬ್ಬರ ಜೀವನವನ್ನು ನಿರ್ಧರಿಸುವುದಕ್ಕೆ ಸಂಬಂಧಿಸಿದಂತೆ ಕುಟುಂಬ ಹಾಗೂ ವೈದ್ಯರ ಹಕ್ಕುಗಳೂ ದಯಾಮರಣದೊಂದಿಗೆ ತಳಕು ಹಾಕಿಕೊಂಡಿವೆ. ನೈತಿಕತೆ, ಕಾನೂನು, ವೈದ್ಯಕೀಯ ಜ್ಞಾನ, ಸಾಮಾಜಿಕ ಬದ್ಧತೆ, ವೈಯಕ್ತಿಕ ಹಾಗೂ ಕೌಟುಂಬಿಕ ಮೌಲ್ಯಗಳೂ ಈ ವಿಷಯದಲ್ಲಿ ಅಡಕವಾಗಿವೆ.

ಹರೀಶ್ ರಾಣಾ ಅವರ ದಯಾಮರಣಕ್ಕೆ ಅನುಮತಿ ನೀಡಿದ ಸುಪ್ರೀಂ ಕೋರ್ಟ್ ತೀರ್ಪು ಅನುಷ್ಠಾನಕ್ಕೆ ಬಂದಿದೆ; ದಯಾಮರಣದ ಸಮಗ್ರ ಕಾನೂನು ರಚನೆಗೆ ಇದೀಗ ಕಾಲ ಸನ್ನಿಹಿತವಾಗಿದೆ.

ದಯಾಮರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ಅಭಿಪ್ರಾಯದಲ್ಲಿ ವಿಕಾಸವನ್ನು ಗುರ್ತಿಸಬಹುದು. ಜೀವ ರಕ್ಷಕ ವ್ಯವಸ್ಥೆಯನ್ನು ತೆಗೆದುಹಾಕಲು ಅನುಮತಿ ನೀಡುವಂತೆ ಹರೀಶ್ ರಾಣಾ ಅವರ ಪೋಷಕರು 2024ರಲ್ಲಿ ಮಾಡಿಕೊಂಡಿದ್ದ ಮನವಿಯನ್ನು ಕೋರ್ಟ್ ತಿರಸ್ಕರಿಸಿತ್ತು. ಕೊಳವೆ ಮೂಲಕ ಆಹಾರ ನೀಡುವುದನ್ನು ವೈದ್ಯಕೀಯ ಹಸ್ತಕ್ಷೇಪವೆಂದು ಪರಿಗಣಿಸಲು ಸಾಧ್ಯವಿಲ್ಲ ಎಂದೂ ಅಭಿಪ್ರಾಯಪಟ್ಟಿತ್ತು. 2011ರಲ್ಲಿ, ಅರುಣಾ ಶಾನಭಾಗ್ ಅವರಿಗೆ ದಯಾಮರಣದ ಅನುಮತಿ ನೀಡಲು ನಿರಾಕರಿಸಿದರೂ, ಕಠಿಣ ಪರಿಸ್ಥಿತಿಗಳಲ್ಲಿ ಪರೋಕ್ಷ ದಯಾಮರಣದ ಸಾಧ್ಯತೆಯನ್ನು ಕೋರ್ಟ್ ಗುರ್ತಿಸಿತ್ತು; 2018ರ 'ಕಾಮನ್ ಕಾಸ್ ವರ್ಸಸ್ ಕೇಂದ್ರ ಸರ್ಕಾರ' ಪ್ರಕರಣದಲ್ಲಿ ಆರ್ಟಿಕಲ್ 21ರ ಅನ್ವಯ 'ಘನತೆಯಿಂದ ಸಾಯುವ ಹಕ್ಕನ್ನು' ಮೂಲಭೂತ ಹಕ್ಕು ಎಂದೂ ಹೇಳಿತ್ತು. ಸಾವಿನ ಪ್ರಕ್ರಿಯೆಯನ್ನು ತೀವ್ರಗೊಳಿಸುವ ಮೂಲಕ ಘನತೆಯಿಂದ ಸಾಯುವ ಅವಕಾಶವನ್ನು ಕಲ್ಪಿಸಿಕೊಡಬಹುದೆನ್ನುವ ಅಭಿಪ್ರಾಯದೊಂದಿಗೆ, ದಯಾಮರಣಕ್ಕೆ ಅನುಮತಿಸುವ ಕಾನೂನಿನ ಚೌಕಟ್ಟು ರೂಪುಗೊಂಡಿತ್ತು. ಮಾನಸಿಕವಾಗಿ ಸದೃಢ ಪರಿಸ್ಥಿತಿಯಲ್ಲಿ ಇರುವ ರೋಗಿಯು ದಯಾಮರಣವನ್ನು ಆಯ್ಕೆ ಮಾಡಿಕೊಂಡಲ್ಲಿ, ಅದನ್ನು ಕಾರ್ಯಗತಗೊಳಿಸಲು ಅನುವು ಮಾಡಿಕೊಡುವ ಉಯಿಲಿನ ಪರಿಕಲ್ಪನೆಯನ್ನೂ ಕೋರ್ಟ್ ಒಪ್ಪಿಕೊಂಡಿತ್ತು.

ದಯಾಮರಣಕ್ಕೆ ಸಂಬಂಧಿಸಿದಂತೆ ಸಂಸತ್ತು ಕಾನೂನು ಜಾರಿಗೆ ತರುವವರೆಗೆ ಮಾತ್ರ ತನ್ನ ನಿರ್ದೇಶನಗಳು ಮಾನ್ಯವಾಗಿರುತ್ತವೆ ಎಂದು 2018ರ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಇತ್ತೀಚಿನ ತೀರ್ಪಿನಲ್ಲಿಯೂ, ಸಮಗ್ರ ಶಾಸನವನ್ನು ರೂಪಿಸುವಂತೆ ಸರ್ಕಾರಕ್ಕೆ ಸೂಚನೆ ನೀಡಿದೆ. ಸುಪ್ರೀಂ ಕೋರ್ಟ್‌ನ ತೀರ್ಪು ಹೇಳಿರುವಂತೆ, ಸಂಸತ್ತು ತನ್ನ ಪಾತ್ರವನ್ನು ನಿರ್ವಹಿಸುವ ಕ್ಷಣದವರೆಗೂ ಸಾಂವಿಧಾನಿಕ ಹಸ್ತಕ್ಷೇಪದ ರೂಪದಲ್ಲಿ ನ್ಯಾಯಾಂಗದ ನಿರ್ದೇಶನಗಳು ಕೆಲಸ ಮಾಡುತ್ತವೆ. ಆದರೆ, ನ್ಯಾಯಾಂಗ ಎಲ್ಲ ಮಾರ್ಗಸೂಚಿಗಳನ್ನೂ ಒದಗಿಸಿದ ನಂತರವೂ, ದುರುಪಯೋಗಕ್ಕೆ ಅವಕಾಶ ಇರಬಹುದು ಎನ್ನುವ ವಾದಗಳೂ ಇವೆ. ಮಾರ್ಗಸೂಚಿಗಳನ್ನು ಅನುಸರಿಸಿದ ಸಂದರ್ಭದಲ್ಲೂ ಕುಟುಂಬಗಳು ಹಾಗೂ ವೈದ್ಯಕೀಯ ಸೇವೆಗಳನ್ನು ಒದಗಿಸುವವರು ಕಾರ್ಯವಿಧಾನಕ್ಕೆ ಸಂಬಂಧಿಸಿದಂತೆ ಸಮಸ್ಯೆಗಳನ್ನು ಎದುರಿಸಬಹುದು. ದಯಾಮರಣಕ್ಕೆ ಸಂಬಂಧಿಸಿದಂತೆ ಹರೀಶ್ ರಾಣಾ ಅವರ ಪ್ರಕರಣವು ಸಮಗ್ರ ಕಾನೂನು ರೂಪುಗೊಳ್ಳಲು ಕಾರಣ ಆಗಬೇಕಾಗಿದೆ. ದಯಾಮರಣಕ್ಕೆ ಅನುಮತಿ ನೀಡುವುದಕ್ಕೆ ಸಂಬಂಧಿಸಿದ ಶಿಷ್ಟಾಚಾರ, ಸುರಕ್ಷತಾ ಕ್ರಮ, ವೈದ್ಯರ ಪಾತ್ರ, ಕುಟುಂಬದ ಸಮ್ಮತಿ ಮತ್ತು ಮೇಲ್ವಿಚಾರಣಾ ಕಾರ್ಯವಿಧಾನಗಳನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸುವ ಕಾನೂನು ರೂಪುಗೊಳ್ಳುವುದಕ್ಕೆ ಹರೀಶ್ ರಾಣಾ ಪ್ರಕರಣ ಉತ್ತಮ ಅವಕಾಶ ಕಲ್ಪಿಸಿದೆ.

ಜಾಲತಾಣ

ಮತ್ತೆ ಒಗ್ಗೂಡಲು ಸಾಧ್ಯವೆ?

ಕೊಲ್ಲಿ ಯುದ್ಧದ ಪರಿಣಾಮವು ಕೋವಿಡ್‌ನಷ್ಟೇ ದೀರ್ಘಕಾಲ ಕಾಡಲಿದೆ; ನಾವೆಲ್ಲ ಒಂದು ದೇಶವಾಗಿ ಅದನ್ನು ಹಿಮ್ಮೆಟ್ಟಿಸಬೇಕೆಂದು ಪ್ರಧಾನಿ ಮೋದಿ ಕರೆಯಿತ್ತಿದ್ದಾರೆ. ಹಿಂದೂ, ಮುಸ್ಲಿಂ ಮತ್ತು ಕ್ರಿಶ್ಚಿಯನ್‌ರ ನಡುವೆ ದ್ವೇಷ ಬಿತ್ತಿ ಎಂದಿಗೂ ಒಗ್ಗೂಡದಂತೆ ವಿಭಜಿಸಲಾಗಿದೆ. ಈಗ ಮತ್ತೆ ಒಂದಾಗಲು ಸಾಧ್ಯವೆ?



ಕಿಶೋರ್, ನಟ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರವು ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ. ಆ ಮೂಲಕ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತಿದೆ.

ಮಮತಾ ಬ್ಯಾನರ್ಜಿ, ಮುಖ್ಯಮಂತ್ರಿ, ಪಶ್ಚಿಮ ಬಂಗಾಳ

25 ವರ್ಷಗಳ ಹಿಂದೆ

• **ಬಿಡುವು**

ಯುಗಾದಿ ಹಬ್ಬದ ಪ್ರಯುಕ್ತ 25-3-2001ರ ಭಾನುವಾರ ಕಚೇರಿಗೆ ಬಿಡುವು ಇತ್ತು. ಹಾಗಾಗಿ, 26-3-2001ರ ಸೋಮವಾರದ ಸಂಚಿಕೆ ಪ್ರಕಟವಾಗಿಲ್ಲ.

75 ವರ್ಷಗಳ ಹಿಂದೆ

ಸೋಮವಾರ, 26-3-1951

• **ದೇಶದ ಏಳಿಗೆ ದೃಷ್ಟಿಯಿಂದಲೇ ಎಲ್ಲ ಒಂದಾಗಿ ಬಾಳಿ**

ತಿರುವನಂತಪುರ, ಮಾರ್ಚ್ 25– 'ನಮ್ಮ ದೇಶಕ್ಕಿಂದು ಶಾಂತಿ ಹಾಗೂ ಪ್ರಶಾಂತತೆಗಳಿಗಿಂತ ಹೆಚ್ಚಿಗೆ ಬೇಕಾದ್ದು ಯಾವುದೂ ಇಲ್ಲ; ಅಂದರೆ ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ನಮಗೆ ದೊರೆತಿರುವ ಅಧಿಕಾರಗಳನ್ನು ನಮ್ಮ ಜನತೆಯ ಅನುಕೂಲಕ್ಕಾಗಿ ಸಾಧ್ಯವಾದಷ್ಟು ಉತ್ತಮ ರೀತಿಯಲ್ಲಿ ಬಳಸಬಹುದು' ಎಂಬುದಾಗಿ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಈ ದಿನ ಸಾರಿದರು.

ತಿರುವನಂತಪುರದ ವಿಶ್ವವಿದ್ಯಾಲಯದ ಕ್ರೀಡಾಂಗಣದಲ್ಲಿ 25 ಸಹಸ್ರ ಮಂದಿಯ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತಾ ಪ್ರಸಾದರು, 'ನಮ್ಮಲ್ಲಿ ಶಾಂತಿ ಇರಬೇಕು ಎಂದಾಗ ದಂಗೆಯಾಗುತ್ತಿದೆ ಅಥವಾ ರಾಷ್ಟ್ರದಲ್ಲಿ ಸಾಮಾನ್ಯ ಗಲಭೆಯಾಗುತ್ತಿದೆ ಎಂದು ನನ್ನ ಭಾವನೆಯಲ್ಲ. ರಾಷ್ಟ್ರ ಅಭಿವೃದ್ಧಿ ಹೊಂದುವ ರೀತಿಯಲ್ಲಿ ನಾವೆಲ್ಲ ಒಗ್ಗಟ್ಟಿನ ಉತ್ತಮ ಬಾಳನ್ನು ಬಾಳಬೇಕು ಎಂಬ ದೃಢ ನಂಬುಗೆಯನ್ನು ಎಲ್ಲರ ಮನಸ್ಸಿನಲ್ಲೂ ಮೂಡಿಸುವ ಮೂಲಕ ಫಲಿಸುವ ನೈಜ ಶಾಂತಿಯನ್ನೇ ನಾನು ಬಯಸುವುದು' ಎಂದರು.

• **ನಿವೃತ್ತ ಸೈನಿಕರ ಪುನರ್‌ವ್ಯವಸ್ಥೆಗೆ ಕೇಂದ್ರದ ಪೂರ್ಣ ನೆರವು**

ಬೆಂಗಳೂರು, ಮಾರ್ಚ್ 25– ನಿವೃತ್ತ ಸೈನಿಕರ ಪುನರ್ ವ್ಯವಸ್ಥೆಯಲ್ಲಿ ಕೇಂದ್ರ ಸರಕಾರ ಪೂರ್ಣ ನೆರವು ನೀಡಲು ಸಿದ್ಧವಿರುವುದಾಗಿಯೂ, ಮೈಸೂರು ಸರಕಾರದಿಂದ ಉದ್ದಿಶ್ಯ ಸಾಧನೆಗೆ ಸಹಾಯಕವಾದ ಹಾಗೂ ತೃಪ್ತಿಕರವಾದ ಪುನರ್ ವ್ಯವಸ್ಥೆ ಯೋಜನೆಗಾಗಿ ಕಾದು ಕುಳಿತಿರುವುದಾಗಿಯೂ ಸಂಸ್ಥಾನಗಳ ಸಚಿವ ಶಾಖೆಯ ಕಾರ್ಯದರ್ಶಿ ವಿ.ಪಿ. ಮೆನನ್‌ರವರು ಇಂದು ಸಂಜೆ ರೆಸಿಡೆನ್ಸಿಯಲ್ಲಿ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ ತಿಳಿಸಿದರು.

ದಲಿತರು ಮತ್ತು ಬೌದ್ಧಧರ್ಮ

ವಿಶ್ಲೇಷಣೆ

ಹನೂರು ಚನ್ನಪ್ಪ

> ಅಂಬೇಡ್ಕರ್ ತೋರಿಸಿಕೊಟ್ಟ ಬೌದ್ಧಮಾರ್ಗದಲ್ಲಿ ಸಾಗಲು ದಲಿತರಿಗೆ ಇರುವ ಅಡೆತಡೆಗಳೇನು? ಈ ಪ್ರಶ್ನೆಗೆ ಉತ್ತರ ಹುಡುಕುತ್ತಾ ಹೋದರೆ, ಧರ್ಮದ ಬಗೆಗಿನ ಗೊಂದಲವೇ ದಲಿತರ ಧಾರ್ಮಿಕ ಅಭಿವ್ಯಕ್ತಿಯ ವೈವಿಧ್ಯಕ್ಕೆ ಕಾರಣವಾಗಿರುವುದು ಕಣ್ಣಿಗೆ ಕಟ್ಟುತ್ತದೆ; ಇಂಥ ವೈವಿಧ್ಯ ಬೇರಾವುದೇ ಸಮುದಾಯದಲ್ಲಿ ಇದ್ದಂತಿಲ್ಲ.

ಧಾರ್ಮಿಕ ಸಂಗತಿಗಳು ಒಂದು ಜನಾಂಗವನ್ನು ನಿಯಂತ್ರಿಸುವಷ್ಟು, ನಿರ್ದೇಶಿಸುವಷ್ಟು ಪ್ರಬಲವಾಗಿರುವ ವರ್ತಮಾನದಲ್ಲಿ ದಲಿತರ ಧಾರ್ಮಿಕ ವಿಚಾರಗಳನ್ನು ಪರಿಶೀಲಿಸುವ ತುರ್ತು ಅಗತ್ಯವಿದೆ.

ಸಮಾಜದಲ್ಲಿನ ಇತರೆ ವರ್ಗಗಳೊಂದಿಗೆ ಬೆರೆತು ರಾಜಕೀಯ, ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ತನ್ನದೇ ಆದ ರೀತಿಯಲ್ಲಿ ಸ್ಪಷ್ಟವಾಗಿ ದಾಖಲಿಸುತ್ತಿರುವ ದಲಿತವರ್ಗ ಧಾರ್ಮಿಕ ವಿಚಾರದಲ್ಲಿ ಗೊಂದಲಕ್ಕೆ ಒಳಗಾಗಿರುವಂತಿದೆ. ಧಾರ್ಮಿಕವಾಗಿ ದಲಿತರು ಯಾವ ಮಾರ್ಗದಲ್ಲಿ ಸಾಗಬೇಕು ಎಂಬುದನ್ನು ಸ್ಪಷ್ಟವಾಗಿ ಗ್ರಹಿಸಲಾಗುತ್ತಿಲ್ಲ. ಬಾಬಾ ಸಾಹೇಬ್ ಅಂಬೇಡ್ಕರ್ ಹಾಕಿಕೊಟ್ಟಿರುವ ಬೌದ್ಧ ಧರ್ಮದ ಹೆದ್ದಾರಿಯಲ್ಲಿ ದಲಿತರು ನಡೆಯಬೇಕೆಂದು ವಾದಿಸುವವರು ಸಹ ತಾವೇ ಕವಲುದಾರಿಯಲ್ಲಿ ತೆವಳುತ್ತಿದ್ದು, ಇನ್ನೂ ಮುಖ್ಯಮಾರ್ಗಕ್ಕೆ ಬಂದು ಸೇರಿಕೊಂಡಿಲ್ಲ.

ದಲಿತರಲ್ಲಿ ಹಿಂದೂ ಧರ್ಮದ ದೇವರುಗಳ ಆರಾಧಕರಿದ್ದಾರೆ; ಯಾವುದೇ ದೇವರನ್ನು ಪೂಜಿಸದ ನಾಸ್ತಿಕರೂ ಇದ್ದಾರೆ. ರಾಮ, ಕೃಷ್ಣ, ಶಿವ, ಗಣಪತಿಗಳಂತಹ ದೇವತೆಗಳ ಭಜನೆ ಮಾಡುವವರಂತೆ, ಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಮಾರಿಯಂತಹ ಪ್ರಾದೇಶಿಕ ದೇವರುಗಳನ್ನು ಪೂಜಿಸುವವರೂ ಇದ್ದಾರೆ. ಹಿಂದೂ ಧರ್ಮದ ಸಹವಾಸವೇ ಬೇಡ ಎಂದು ಕ್ರೈಸ್ತ ಧರ್ಮದತ್ತ ಜಿಗಿದಿರುವ ದಲಿತರ ಸಂಖ್ಯೆಯೂ ಕಡಿಮೆಯಿಲ್ಲ. ಕೆಲವರು ಪೂಜೆಗಾಗಿ ಚರ್ಚನ್ನು, ಸೌಲಭ್ಯಕ್ಕಾಗಿ ಹಿಂದೂ ಎಂಬ ದಾಖಲೆಗಳನ್ನು ಇಟ್ಟುಕೊಂಡಿರುವ ಸಂಗತಿಯೂ ಸುಳ್ಳಲ್ಲ. ವಿಶ್ವಮಾನವನಂತೆ ಹಿಂದೂ, ಕ್ರೈಸ್ತ, ಮುಸ್ಲಿಂ ದೇವರುಗಳ ಮೇಲೆಲ್ಲ ಭಕ್ತಿ ತೋರುವವರೂ ಇದ್ದಾರೆ. ಇವರ ನಡುವೆ ಅಷ್ಟಿಷ್ಟು ಓದಿಕೊಂಡಿರುವ, ಪ್ರಗತಿಪರ ಚಿಂತನೆಯ ಗುಂಪು, 'ಅಂಬೇಡ್ಕರ್ ತೋರಿದ, ಪಾಲಿಸಿದ ಮತ್ತು ಆದೇಶಿಸಿದ ಧರ್ಮ'ವೆಂಬ ಕಾರಣಕ್ಕೆ ನವಬೌದ್ಧರೆಂದು ಗುರ್ತಿಸಿಕೊಂಡಿದೆ. ಇನ್ನೊಂದು ಗುಂಪು ಬೌದ್ಧನಾಗ ಬೇಕೆಂದು ಹೊರಟು, ಮುಂದಕ್ಕೆ ಹೆಜ್ಜೆ ಇಡದೆ, ಹಿಂದಕ್ಕೂ ಸರಿಯದೆ ತ್ರಿಶಂಕು ಸ್ಥಿತಿಯಲ್ಲಿದೆ. ಮತ್ತೊಂದು ಗುಂಪು, ಅಂಬೇಡ್ಕರ್ ಕಾರಣಕ್ಕೆ ಬೌದ್ಧ ಧರ್ಮದೊಂದಿಗೆ ಸ್ಥಳೀಯ ದೇವತೆಗಳ ಹಬ್ಬ ಹರಿದಿನಗಳನ್ನೂ ಆಚರಿಸಿಕೊಂಡು ಸಮತೋಲನ ಸಾಧಿಸುತ್ತಿದೆ.

ಒಂದು ಜನಾಂಗ ತನ್ನ ಧಾರ್ಮಿಕ ನಂಬಿಕೆಯನ್ನು ಇಷ್ಟೊಂದು ವೈವಿಧ್ಯದಲ್ಲಿ ಅಭಿವ್ಯಕ್ತಿಸುತ್ತಿರುವುದನ್ನು ನೋಡಿದರೆ, ಇದು ದಲಿತರ ಪಾಲಿಗೆ ವರವೋ ಶಾಪವೋ ಎನ್ನುವುದನ್ನು ಕಾಲವೇ ಹೇಳಬೇಕಿದೆ.

ಕೆಲವು ಚಿಂತಕರು, 'ಗೊಂದಲವೇನಿದ್ದರೂ ನಿಮ್ಮಂತಹವರಿಗೆ, ಸಮುದಾಯಕ್ಕಲ್ಲ' ಎಂದು ವಾದಿಸುತ್ತಾರೆ. ಅವರ ಪ್ರಕಾರ, ಬಾಬಾಸಾಹೇಬರು ಸ್ವೀಕರಿಸಿರುವ ಬೌದ್ಧಧರ್ಮವೇ ದಲಿತರ ಏಕೈಕ ಮತ್ತು ಮೂಲಧರ್ಮ. 'ಭವಿಷ್ಯದಲ್ಲಿ ದಲಿತರೆಲ್ಲಾ ಇದೇ ಧರ್ಮವನ್ನು ಸ್ವೀಕರಿಸುತ್ತಾರೆ' ಎಂಬುದು ಇತ್ತೀಚೆಗೆ ಬೌದ್ಧಧರ್ಮ ಸ್ವೀಕರಿಸಿರುವ ಈ ಸ್ನೇಹಿತರ ನಂಬಿಕೆ. ನವಬೌದ್ಧರ ಈ ಹೇಳಿಕೆ ಪರಿಶೀಲಿಸೋಣ.

ದಲಿತರು ಅಂಬೇಡ್ಕರ್ ತೋರಿದ ಬೌದ್ಧಧರ್ಮದತ್ತ ನಿಜಕ್ಕೂ ಹೆಜ್ಜೆ ಹಾಕುತ್ತಿದ್ದಾರೆಯೆ? ದಲಿತರ ಭಾವನೆಗಳಿಗೆ ಸ್ಪಂದಿಸುವ ಹೊಸ ಸ್ವರೂಪವನ್ನು ಬೌದ್ಧಧರ್ಮ ಹೊಂದಿದೆಯೆ? ದಲಿತರೆಲ್ಲಾ ಬೌದ್ಧರಾದರೆ, ಬದಲಾವಣೆಯ ಗಾಳಿ ಹೇಗೆ ಬೀಸಬಹುದು? ಹಿಂದೂ, ಕ್ರೈಸ್ತ, ಬೌದ್ಧಧರ್ಮಗಳ ಹೆಸರಿನಲ್ಲಿ ಹಂಚಿಹೋಗುವ ಈ ಜನಾಂಗ ತನ್ನ ಅಸ್ಮಿತೆಯನ್ನು ಹೇಗೆ ಉಳಿಸಿಕೊಳ್ಳಬಲ್ಲದು? ಈ ಪ್ರಶ್ನೆಗಳೊಂದಿಗೆ ಕೆಳಗಿನ ಅಂಕಿಅಂಶ ಗಮನಿಸೋಣ.

ಕರ್ನಾಟಕವನ್ನು ಒಂದು ಘಟಕವೆಂದು ಪರಿಗಣಿಸುವುದಾದರೆ, ಇಲ್ಲಿ ಎಸ್‌ಸಿ-ಎಸ್‌ಟಿಗಳೆಂಬ ಎರಡು ಜಾತಿಗಳಿವೆ. ಎಸ್‌ಸಿಯಲ್ಲಿನ ದಲಿತರಲ್ಲಿ ಸ್ಪೃಶ್ಯ-ಅಸ್ಪೃಶ್ಯರೆಂಬ ವರ್ಗಗಳಿವೆ. ಇದರಲ್ಲಿ ಗಣನೀಯ ಜನಸಂಖ್ಯೆ ಹೊಂದಿರುವ ಅಸ್ಪೃಶ್ಯ ವರ್ಗವು ಬಲಗೈ-ಎಡಗೈ ಎಂಬ ಎರಡು ಪಂಗಡಗಳನ್ನು ಹೊಂದಿದೆ. ಈ ಪಂಗಡಗಳ ಒಟ್ಟು ಸಂಖ್ಯೆಯಲ್ಲಿ ಶೇ 50ರಷ್ಟು ಜನರು ಮಾತ್ರ ಅಕ್ಷರಸ್ಥರಿದ್ದಾರೆ. ಈ ಅಸ್ಪೃಶ್ಯ ಅಕ್ಷರಸ್ಥರಲ್ಲಿ ಧಾರ್ಮಿಕ ಆಲೋಚನೆಯನ್ನು ಹತ್ತಾರು ದಿಕ್ಕಿನಲ್ಲಿ ಚಿಂತಿಸುವ ಮತ್ತು ಪೂಜಿಸುವ ಹಲವು ಗುಂಪುಗಳಿವೆ. ಆಸ್ತಿಕರು, ನಾಸ್ತಿಕರು, ಕ್ರೈಸ್ತರು, ಬೌದ್ಧರು ಎಂದೆಲ್ಲಾ ವಿಂಗಡಿಸಿ, ತಲಾ ಶೇ 5ರಷ್ಟು ಜನರನ್ನು ಒಂದೊಂದು ಗುಂಪುಗಳಾಗಿಸಿದರೆ ಅದರಲ್ಲೊಂದು ನವಬೌದ್ಧರ ಗುಂಪು ಸಿಗುತ್ತದೆ. ಅರ್ಥಾತ್, ಕರ್ನಾಟಕದ ಅಸ್ಪೃಶ್ಯ ವರ್ಗದ ಅಕ್ಷರಸ್ಥರಲ್ಲಿ ಶೇ 5ರಷ್ಟು ಜನರನ್ನಷ್ಟೇ ನವಬೌದ್ಧರೆಂದು ಗುರ್ತಿಸಬಹುದಾಗಿದೆ ಮತ್ತು ಇದನ್ನು ಉದಾರವಾದ ಅಂದಾಜು ಎಂದು ಪರಿಗಣಿಸಬೇಕಾಗಿದೆ.

ಅಂಬೇಡ್ಕರ್ ಧಾರ್ಮಿಕ ಆಂದೋಲನಕ್ಕೆ 50 ವರ್ಷಗಳ ಇತಿಹಾಸವಿದ್ದರೂ, ದಲಿತರಲ್ಲಿ ಶೇ 5 ಅಥವಾ ಅದಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿ ಬೌದ್ಧ ಧರ್ಮೀಯರು ಇರುವುದಕ್ಕೆ ಕೆಲವು ಕಾರಣಗಳನ್ನು ಕೆಳಗಿನಂತೆ ಗುರ್ತಿಸಬಹುದು.

1. ದಲಿತ ಚಿಂತಕರಲ್ಲಿ ಬಹುತೇಕರು ಧಾರ್ಮಿಕ ವಾಗಿ ಅತಂತ್ರರು. ಬೌದ್ಧಧರ್ಮವನ್ನು ಮನಃಪೂರ್ವಕ ಸ್ವೀಕರಿಸಲಾಗದೆ, ಹಿಂದೂವಾಗಿಯೂ ಬದುಕಲೂ ಆಗದ ಸಂದಿಗ್ಧ ಸ್ಥಿತಿಯಲ್ಲಿರುವವರು.
2. ದಲಿತ ವರ್ಗದ ಗಣ್ಯರು ತಮ್ಮ ಇಳಿವಯಸ್ಸಿನಲ್ಲಿ ಅಥವಾ ನಿವೃತ್ತಿ ಸಮಯದಲ್ಲಿ ಮಾತ್ರ ಬುದ್ಧಧರ್ಮವನ್ನು ಸ್ವೀಕರಿಸಿ ಪುಳಕಗೊಂಡಿರುವುದುಂಟು.
3. ಸಭೆ, ಸಮಾರಂಭಗಳಲ್ಲಿ ಬುದ್ಧತತ್ತ್ವವನ್ನು ಸ್ಮರಿಸಿ, ಉಳಿದ ಸಂದರ್ಭದಲ್ಲಿ ಜಾಣಮರೆವು ಹೊಂದಿರುವ ಅನೇಕರು ಇದುವರೆಗೂ ಜಾತಿ ಕುರಿತಷ್ಟೇ ಮಾತನಾಡಿದ್ದಾರೆ. ಧರ್ಮದ ವಿಷಯದಲ್ಲಿ ಮೌನಕ್ಕೆ ಶರಣಾಗಿದ್ದಾರೆ.
4. ಬಹುತೇಕ ಶಿಕ್ಷಿತರು ಅಂಬೇಡ್ಕರ್ ಕಾರಣಕ್ಕೆ ಧರ್ಮಾಂತರ ಆಗಿರುವುದಿದೆ. ಅಂತಹವರು ಬುದ್ಧ ಮಾರ್ಗವನ್ನು ಗ್ರಹಿಸಲಾಗದೆ ಅತಂತ್ರರಾಗಿದ್ದಾರೆ.
5. ಬೌದ್ಧಧರ್ಮದ ಆಚರಣೆಗಳಿಗೆ ಬೌದ್ಧಾಲಯಗಳಾಗಲಿ, ಸೂಕ್ತ ವೇದಿಕೆಗಳಾಗಲಿ ಸಾಕಷ್ಟು ಇಲ್ಲ.
6. ಬೌದ್ಧಧರ್ಮಕ್ಕೆ ಮತಾಂತರ ಆಗುವುದರಿಂದ ಈಗಿರುವ ಮೀಸಲಾತಿ ಸೌಲಭ್ಯಕ್ಕೆ ಧಕ್ಕೆ ಬರಬಹುದೆಂಬ ಆತಂಕವಿರುವುದು.
7. ಅಂಬೇಡ್ಕರ್ ಬಿಟ್ಟರೆ ಬೌದ್ಧಧರ್ಮದತ್ತ ಸೆಳೆಯುವ ನಾಯಕತ್ವ ದಲಿತರಲ್ಲಿ ಇಲ್ಲದಿರುವುದು.
8. ಮಾದೇಶ್ವರ, ಮಂಟೇಸ್ವಾಮಿಗಳಂತಹ ಬೌದ್ಧ ಸಂವೇದನೆಯ ಚೈತನ್ಯಗಳು ತಳವರ್ಗಕ್ಕೆ ಶಕ್ತಿ ತುಂಬಿ ಇಂದಿಗೂ ಪ್ರಭಾವಿಸುತ್ತಿರುವುದು.

ಮೇಲಿನ ಕಾರಣಗಳೂ ಸೇರಿದಂತೆ ಹಲವು ಸಂಗತಿಗಳು ದಲಿತರು ಬೌದ್ಧಧರ್ಮವನ್ನು ಗಂಭೀರವಾಗಿ ಪರಿಗಣಿಸದಂತೆ ಮಾಡಿವೆ. ಹನ್ನೆರಡನೇ ಶತಮಾನದಲ್ಲಿ ಮತ್ತು ಬಿಜಾಪುರ ಸುಲ್ತಾನರ ಕಾಲದಲ್ಲಿ ಉತ್ತರ ಕರ್ನಾಟಕದ ಬಹುಸಂಖ್ಯೆಯ ದಲಿತರು ರೂಪಾಂತರಗೊಂಡಿರುವುದಿದೆ. ಬ್ರಿಟಿಷರ ಆಳ್ವಿಕೆಯ ತರುವಾಯ ದೊಡ್ಡ ಪ್ರಮಾಣದಲ್ಲಿ ದಲಿತರು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿದ್ದು ಅದು ಇಂದಿಗೂ ಮುಂದುವರಿದಂತಿದೆ. ಮತಾಂತರಕ್ಕೆ ಈ ಪರಿಯಲ್ಲಿ ಸ್ಪಂದಿಸುತ್ತಿರುವ ಜನಾಂಗವೊಂದು ಧರ್ಮದ ಹೆಸರಲ್ಲಿ ವಿಘಟನೆಗೊಳ್ಳುವುದು ವಿಪರ್ಯಾಸವೆನಿಸಿದರೂ, ತನ್ನ ವಿಮೋಚನಾ ಪುರುಷನು ತೋರಿರುವ ಹಾದಿಯಲ್ಲಿ ಸಾಗಬೇಕಾದ ಸಂದರ್ಭ ಬಂದಾಗ ಮಾತ್ರ ಇನ್ನಿಲ್ಲದ ತೊಡಕುಗಳನ್ನು ಎದುರಿಸುತ್ತಿದೆ. ಅಂಥ ಕೆಲವು ತೊಡಕುಗಳನ್ನು ಕೆಳಗಿನಂತೆ ಗಮನಿಸಬಹುದು:

'ಬಾಬಾಸಾಹೇಬರ ಅನುಯಾಯಿಯಾಗಿ ಅವರ ಋಣ ನಮ್ಮ ಹೆಗಲ ಮೇಲಿದೆ. ಹಾಗಾಗಿ ಬೌದ್ಧಧರ್ಮವನ್ನು ಸ್ವೀಕರಿಸುವುದು ಪ್ರತಿಯೊಬ್ಬ ದಲಿತನ ಕರ್ತವ್ಯ. ಆದರೆ, ಧರ್ಮದ ಆಚರಣೆಗಳನ್ನು ಕಂಡು ರೋಸಿಹೋಗಿರುವ ನಾನು ಒಬ್ಬ ನಾಸ್ತಿಕನಾಗಿ ರೂಪುಗೊಂಡಿದ್ದೇನೆ. ಈಗ ಬೌದ್ಧಧರ್ಮ ಸ್ವೀಕರಿಸಿದಾಕ್ಷಣ ಆಸ್ತಿಕನಾಗುವುದು ಹೇಗೆ ಎಂದು ತಿಳಿಯುತ್ತಿಲ್ಲ' ಎಂದು ಕೆಲವರು ತಮ್ಮ ಅಳಲು ತೋಡಿಕೊಳ್ಳುತ್ತಾರೆ.

'ಅಂಬೇಡ್ಕರ್ ಕಾರಣಕ್ಕೆ ಬೌದ್ಧಧರ್ಮೀಯನಾಗಲು ಸಿದ್ಧ. ಆದರೆ, ಮನೆಯ ಯಜಮಾನನಾಗಿ ನಾನೊಬ್ಬನೇ ಮತಾಂತರವಾಗುವುದೋ? ಇಡೀ ಕುಟುಂಬವನ್ನು ಒಪ್ಪಿಸಿ ಈ ಕಾರ್ಯವೆಸಗುವುದೋ? ಹಿರಿಯ ತಲೆಮಾರು ತಮ್ಮ ಧಾರ್ಮಿಕ ನಿಲುವಿನಲ್ಲಿ ಬದಲಾವಣೆ ಮಾಡಿಕೊಳ್ಳುವುದಿಲ್ಲ. ಐತಿಹಾಸಿಕ ಕಾರಣಕ್ಕೆ ನಮ್ಮಂತಹವರು ಬೌದ್ಧಧರ್ಮ ಸ್ವೀಕರಿಸುತ್ತೇವೆ ಎಂದುಕೊಂಡರೆ ಮಡದಿಯನ್ನು ಏನು ಮಾಡುವುದು? ಧಾರ್ಮಿಕ ಸ್ವಾತಂತ್ರ್ಯವನ್ನು ಗೌರವಿಸುವುದಾದರೆ ಅವಳು ಧರ್ಮಾಂತರವನ್ನು ಬಯಸುವುದಿಲ್ಲ. ಅಂಥ ಸಂದರ್ಭದಲ್ಲಿ, ಒಂದೇ ಮನೆಯಲ್ಲಿ ಅವಳದೊಂದು ಧರ್ಮ, ನನ್ನದೊಂದು ಧರ್ಮ! ಮಕ್ಕಳದು ಯಾವ ಧರ್ಮ?' ಎನ್ನುವ ಗೊಂದಲ ಕೆಲವರದು.

'ನಾನು ಬೌದ್ಧನಾಗುತ್ತೇನೆ, ನನ್ನ ಮಡದಿ, ಮಕ್ಕಳನ್ನೂ ಈ ಕಾರ್ಯಕ್ಕೆ ಒಪ್ಪಿಸುತ್ತೇನೆ. ಆದರೆ, ಅವರು ಪೂಜೆ ಮಾಡಲು ತಿಂಗಳಿಗೊಮ್ಮೆಯಾದರೂ ದೇವಾಲಯಕ್ಕೆ ಹೋಗಿ ಬರುವುದು ಹೇಗೆ? ಹತ್ತಿರದಲ್ಲಿ ಬೌದ್ಧ ದೇವಾಲಯಗಳು ಎಲ್ಲಿವೆ?' ಎನ್ನುವುದು ಶಿಕ್ಷಿತರೊಬ್ಬರ ಗೊಂದಲ. 'ಐದು ವರ್ಷಗಳಿಂದ ಬುದ್ಧನ ತತ್ತ್ವಗಳನ್ನು ಅಧ್ಯಯನ ಮಾಡುತ್ತಿದ್ದೇನೆ. ಮೌನ-ಧ್ಯಾನಕ್ಕೂ ಆದ್ಯತೆ ಕೊಡುತ್ತಿದ್ದೇನೆ. ಆದರೆ, ಹಿಂದೂ ಧರ್ಮದಲ್ಲಿದ್ದರೂ ಸಾತ್ವಿಕ ಪ್ರತಿರೋಧ ತೋರಿ ತಳವರ್ಗಕ್ಕೆ ಚೈತನ್ಯ ತುಂಬಿರುವ ಮಾದೇಶ್ವರ–ಮಂಟೇಸ್ವಾಮಿಯನ್ನು ಸಹ ಪೂಜಿಸುತ್ತೇನೆ. ನಮಗೆ ಎರಡೂ ಮುಖ್ಯ' ಎಂದು ಕಡ್ಡಿ ಮುರಿದ ಹಾಗೆ ಮಾತು ಮುಗಿಸುತ್ತಾರೆ ಒಬ್ಬ ಯುವಕವಿ.

ಹಿಂದೂ ಧಾರ್ಮಿಕ ಆಚರಣೆಗಳನ್ನು ಕಟುವಾಗಿ ವಿರೋಧಿಸುತ್ತಿದ್ದ ಬರಹಗಾರರೊಬ್ಬರು, ಬೌದ್ಧ ಧರ್ಮದ ಬಗ್ಗೆ ಗಂಭೀರ ಚಿಂತನೆ ನಡೆಸುತ್ತಿರುವವರು. ಅವರಿಗೆ ಮತಾಂತರಕ್ಕಿರುವ ಅಡ್ಡಿ ಏನೆಂದು ಪ್ರಶ್ನಿಸಿದಾಗ, ಅಮ್ಮನ ಬಗ್ಗೆ ಹೇಳಿದರು. 'ಸಾಯುವ ಮುನ್ನ ಒಂದೇ ಒಂದು ಸಲ ಉಡುಪಿ, ಧರ್ಮಸ್ಥಳವನ್ನು ತೋರಿಸಿಕೊಂಡು ಬಾ ಮಗನೆ' ಎನ್ನುವ ತಾಯಿಯ ಆಸೆ ಅವರನ್ನು ಕಂಗಾಲಾಗಿಸಿದೆ. ಅವ್ವಳನ್ನು ಇಚ್ಛಿಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಬಂದು ವರ್ಷವಾದರೂ ಅವರಿನ್ನೂ ಸುಧಾರಿಸಿಕೊಂಡಿಲ್ಲ!

ಈ ಬರಹ ಮುಗಿಸುವ ಹೊತ್ತಿಗೆ ಊರಿನಿಂದ ಫೋನು ಮಾಡಿದ ನನ್ನ ಅವ್ವ, 'ಮಾರಿಹಬ್ಬ ಮೂರು ದಿನ ಅಂತಾನೇ ಬಂದುಬಿಡು ಮಗನೇ... ನೀನಿಲ್ಲದೆ ನಾವು ಯಾವ ಹಬ್ಬ ಮಾಡಕ್ಕಾದದು' ಎಂದಳು. ಸಾಕಿ ಸಲಹಿ, ವಿವೇಕ ಕಲಿಸಿಕೊಟ್ಟ ಹೆತ್ತವಳಿಗೆ ಇಂದು ನಾನು ಏನೆಂದು ಉತ್ತರಿಸಲಿ?

ವಾಚಕರ ವಾಣಿ

ಸಮಾಜವಾದ: ಮಾತು ಸೋತ ಕಾಂಗ್ರೆಸ್

1956ರಲ್ಲಿ ತಮಿಳುನಾಡಿನ ಅವಡಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಅಂದಿನ ಪ್ರಧಾನಿ ಜವಾಹರಲಾಲ್ ನೆಹರೂ ಅವರು, 'ಸೋಷಲಿಸ್ಟ್ ಪ್ಯಾಟರ್ನ್ ಆಫ್ ಸೊಸೈಟಿ' ನಿರ್ಮಾಣವೇ ಕಾಂಗ್ರೆಸ್‌ನ ಗುರಿಯೆಂದು ಘೋಷಿಸಿದ್ದರು. 70 ವರ್ಷಗಳ ಹಿಂದೆ ಸಮಾಜವಾದಿ ಸಮಾಜದ ಬಗ್ಗೆ ಹೇಳಿದ್ದ ಕಾಂಗ್ರೆಸಿಗರು ಆ ದಿಸೆಯಲ್ಲಿ ಒಂದು ಹೆಜ್ಜೆಯೂ ಮುಂದೆ ಹೋಗಿಲ್ಲ. ಇದಕ್ಕೆ ದಾವಣಗೆರೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯೇ ನಿದರ್ಶನ.

ಶಾಮನೂರು ಶಿವಶಂಕರಪ್ಪನವರ ಮೊಮ್ಮಗ ಸಮರ್ಥ್ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ. ಶಾಮನೂರು ಕುಟುಂಬದ ಒಡೆತನದಲ್ಲಿ ಶಿಕ್ಷಣ ಸಂಸ್ಥೆಗಳು, ಸಕ್ಕರೆ ಕಾರ್ಖಾನೆಗಳು, ವೈದ್ಯಕೀಯ ಕಾಲೇಜುಗಳಿವೆ. ಸದ್ಯದ ರಾಜಕೀಯ ಸ್ಥಿತಿ ನೋಡಿದರೆ ದೇಶದಲ್ಲಿ ಸಮಾಜವಾದದ ಕಾಲ ಮುಗಿದುಹೋಗಿದೆಯೇ ಎನಿಸುತ್ತದೆ. ಕಾಂಗ್ರೆಸ್‌ನ ನಿಲುವಿನ ಬಗ್ಗೆ ಪ್ರಗತಿಪರರೂ ತುಟಿಬಿಚ್ಚುತ್ತಿಲ್ಲ. ಶ್ರೀಮಂತರ ಶ್ರೀಮಂತಿಕೆ ಕಡಿಮೆಯಾಗದೆ ಸಮಾಜವಾದ ಬರುವುದಿಲ್ಲ; ಈ ಕಟುಸತ್ಯ ಅರ್ಥ ಆಗುವುದು ಯಾವಾಗ?

ನಾಗೇಂದ್ರರಾವ್, ಬೆಂಗಳೂರು

ಶಿಕ್ಷಕರ ವರ್ಗಾವಣೆ: ಮಕ್ಕಳ ಹಿತವೇ ಮುಖ್ಯ

ಶಿಕ್ಷಕರ ವರ್ಗಾವಣೆ ಸ್ವರೂಪದಲ್ಲಿ ಆಮೂಲಾಗ್ರ ಬದಲಾವಣೆಗೆ ಅವಕಾಶ ಕಲ್ಪಿಸುವ ಮಸೂದೆಯನ್ನು ಸರ್ಕಾರ ರೂಪಿಸಿದೆ. ಶಿಕ್ಷಕರ ವರ್ಗಾವಣೆಯು ಮಕ್ಕಳ ಹಿತದೃಷ್ಟಿಯಿಂದ ನಡೆಯಬೇಕು. ಆದರೆ, ಬಹುತೇಕ ಶಾಲೆಗಳನ್ನು ಗಮನಿಸಿದರೆ ಶಿಕ್ಷಕರಿಗಷ್ಟೇ ಅನುಕೂಲ ಆಗುವಂತಿದೆ. ಐದಾರು ಮಕ್ಕಳಿರುವ ಕಡೆ ಇಬ್ಬರು ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಾರೆ. ಮಕ್ಕಳ ಸಂಖ್ಯೆ ಕಡಿಮೆಯಾದಾಗ ಕೊರತೆ ಇರುವ ಶಾಲೆಗೆ ಅವರನ್ನು ನಿಯೋಜಿಸುವುದಿಲ್ಲ. ಕೆಲವೆಡೆ ನಾಲ್ವರು ಕಾಯಂ ಶಿಕ್ಷಕರ ಅವಶ್ಯಕತೆ ಇದ್ದರೆ ಐವರು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಶಿಕ್ಷಣ ಇಲಾಖೆ ಇಂತಹ ಶಾಲೆಗಳನ್ನು ಗುರ್ತಿಸಿ ಕೊರತೆಯಿರುವ ಕಡೆಗೆ ಶಿಕ್ಷಕರನ್ನು ನಿಯೋಜಿಸಬೇಕು. ಇದರಿಂದ ಸರ್ಕಾರದ ಹೊರೆ ಕಡಿಮೆಯಾಗಲಿದೆ; ಮಕ್ಕಳಿಗೆ ಕಲಿಕೆಗೂ ಅನುಕೂಲ.

ಸಣ್ಣಮಾರಪ್ಪ ಚಂಗಾವರ, ಶಿರಾ

'ಇ-ಸ್ವತ್ತು' ಸೇವೆ ಪಡೆಯಲು ಪರದಾಟ

ಗ್ರಾಮ ಪಂಚಾಯಿತಿ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಕಚೇರಿಗಳಲ್ಲಿ ತಂತ್ರಾಂಶದ ಸಮಸ್ಯೆಯಿಂದಾಗಿ ಇ-ಸ್ವತ್ತು ನೀಡಿಕೆ ಪ್ರಕ್ರಿಯೆ ಸ್ಥಗಿತಗೊಂಡಿದೆ. ಇದರಿಂದ ನಿವೇಶನ ಖರೀದಿ ಮತ್ತು ಮಾರಾಟ ವ್ಯವಹಾರ ಸ್ಥಗಿತಗೊಂಡಿದೆ. ಸೆಟ್‌ಬ್ಯಾಕ್ ನೆಪದಲ್ಲಿ ಕಟ್ಟಿರುವ ಮನೆಗಳಿಗೆ ವಿದ್ಯುತ್ ಸಂಪರ್ಕ ಸಿಗುತ್ತಿಲ್ಲ. 30 × 40 ಅಡಿಗಿಂತ ಹೆಚ್ಚಿನ ವಿಸ್ತೀರ್ಣದ ನಿವೇಶನಗಳಲ್ಲಿ ಮನೆ ಕಟ್ಟುವವರಿಗೆ ತಾತ್ಕಾಲಿಕ ವಿದ್ಯುತ್ ಸಂಪರ್ಕ ನೀಡುತ್ತಿಲ್ಲ. ಇದರಿಂದಾಗಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಗೃಹ ನಿರ್ಮಾಣದ ಕೆಲಸಗಳು ಸ್ಥಗಿತಗೊಂಡಿವೆ. ಕೃಷಿ ಮತ್ತು ಕಟ್ಟಡದ ಕೆಲಸಗಳೂ ಸಿಗದೆ ಜನರು ಪರದಾಡುತ್ತಿದ್ದಾರೆ. ಜನರ ಸಂಕಷ್ಟ ಆಲಿಸುವುದು ಸರ್ಕಾರದ ಹೊಣೆ.

ಉದಂತ ಶಿವಕುಮಾರ, ಬೆಂಗಳೂರು

ಅನ್ಯಕಾರ್ಯದ ಹೊರೆ; ಮಕ್ಕಳ ಕಲಿಕೆಗೆ ಬರೆ

'ಬೋಧಕೇತರ ಹುದ್ದೆಗೆ ನಿರ್ಬಂಧ; ಶಾಲೆಗಳ ಸಬಲೀಕರಣದ ಯತ್ನ' ಕುರಿತ ಸಂಪಾದಕೀಯ (ಪ್ರ.ವಾ., ಮಾರ್ಚ್ 25) ಚಿಂತನಾರ್ಹವಾಗಿದೆ. ಶಿಕ್ಷಕರನ್ನು ಅನ್ಯ ಕಾರ್ಯಗಳಿಗೆ ನಿಯೋಜಿಸುವುದು ಸರ್ಕಾರಿ ಶಾಲೆಗಳ ಶಿಕ್ಷಣದ ಗುಣಮಟ್ಟ ಕುಸಿತಕ್ಕೆ ಮುಖ್ಯ ಕಾರಣಗಳಲ್ಲಿ ಒಂದಾಗಿದೆ. ಪ್ರಸ್ತುತ ಶಿಕ್ಷಕರು ಶಾಲೆಗಳಲ್ಲಿ ಕಚೇರಿ ಸಹಾಯಕ, ಪೌರಕಾರ್ಮಿಕ, ಗುಮಾಸ್ತ, ಮೊಟ್ಟೆ-ಬಾಳೆಹಣ್ಣು-ತರಕಾರಿ, ಸಿಲಿಂಡರ್ ತರುವವ, ಬಿಎಲ್‌ಒ – ಹೀಗೆ 'ಬಹುಮುಖಿ' ಕೆಲಸ ನಿರ್ವಹಿಸಬೇಕಿದೆ. ಕಡತಗಳ ಜೊತೆಗೆ ಕೆಲಸ ಮಾಡುವ ಇತರೆ ಇಲಾಖೆಯ ನೌಕರರಿಗೆ ಈ ರೀತಿಯ ವೃತ್ತಿ ಕಾರ್ಯ ಬಾಹುಳ್ಯ ಅಷ್ಟಾಗಿರುವುದಿಲ್ಲ. ಶಿಕ್ಷಕರು ಸಂತಸದಾಯಕ ಕಲಿಕೆಯಲ್ಲಿ ತೊಡಗಲು, ಕಲಿಕೆಗೆ ಪೂರಕವಾದ ಅಧ್ಯಯನ ಹಾಗೂ ಸರ್ಕಾರಿ ಶಾಲೆಗಳ ಸಬಲೀಕರಣದ ದೃಷ್ಟಿಯಿಂದ ಶಿಕ್ಷಕರನ್ನು ಅನ್ಯಕಾರ್ಯಗಳ ಒತ್ತಡದಿಂದ ಮುಕ್ತಗೊಳಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ.

ಟಿ. ಸತೀಶ್ ಜವರೇಗೌಡ, ಮಂಡ್ಯ

ಅಸ್ಪೃಶ್ಯತೆ ತಡೆ: ಧರ್ಮರಕ್ಷಕರ ಮೌನವೇಕೆ?

ರಾಜ್ಯದ ವಿವಿಧೆಡೆಗಳಲ್ಲಿ ಪರಿಶಿಷ್ಟ ಜಾತಿಯ ಜನರ ಮೇಲೆ ಹಲ್ಲೆ ಹಾಗೂ ಅಸ್ಪೃಶ್ಯತೆ ಆಚರಣೆ ನಡೆಸುವುದು ವರದಿಯಾಗುತ್ತಿದೆ. ಯಾದಗಿರಿಯಲ್ಲಿನ ದೇವಸ್ಥಾನ ಒಂದರ ಕಟ್ಟೆಯ ಮೇಲೆ ಕುಳಿತಿದ್ದ ಪರಿಶಿಷ್ಟ ವ್ಯಕ್ತಿಯ ಮೇಲೆ ಹಲ್ಲೆ ನಡೆಸಲಾಗಿದೆ. ಇಂಥ ಘಟನೆಗಳು ನಡೆದರೂ ತಥಾಕಥಿತ ಹಿಂದೂ ಧರ್ಮದ ರಕ್ಷಣೆಯ ಹೊಣೆ ಹೊತ್ತವರು ಜಾಣಕುರುಡುತನ ಪ್ರದರ್ಶಿಸುವುದು ಮುಂದುವರಿದಿದೆ. ಚುನಾವಣೆ, ಅಂತರಧರ್ಮದ ಕಲಹದ ಸಂದರ್ಭದಲ್ಲಷ್ಟೆ 'ನಾವೆಲ್ಲ ಹಿಂದೂ; ನಾವೆಲ್ಲ ಒಂದು' ಎನ್ನುವ ಒಣ ಘೋಷಣೆ ಮಾರ್ದನಿಸುತ್ತದೆ. ಮಂದಿರ, ಮಸೀದಿ, ಚರ್ಚ್‌ಗಳ ಪ್ರವೇಶಕ್ಕೆ ಎಲ್ಲರಿಗೂ ಮುಕ್ತ ಅವಕಾಶ ಕಲ್ಪಿಸುವ ನಿಯಮ ರೂಪಿಸಬೇಕಿದೆ. ಜಾತಿ ತಾರತಮ್ಯ ತೊಲಗದೆ ಸಮಸಮಾಜ ನಿರ್ಮಾಣ ಅಸಾಧ್ಯ.

ಗೋವಿಂದ ಎಸ್. ಭಟ್, ಶಿರಸಿ

ಮೃತರ ಕುಟುಂಬವರ್ಗಕ್ಕೆ ಗೌರವ ಸಲ್ಲಲಿ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಐಪಿಎಲ್ ಕ್ರಿಕೆಟ್ ಪಂದ್ಯಗಳ ಸಮಯದಲ್ಲಿ, ಕಳೆದ ವರ್ಷ ವಿಜಯೋತ್ಸವದ ಸಮಯದಲ್ಲಿ ಸಂಭವಿಸಿದ ಕಾಲ್ತುಳಿತದಿಂದ ಮೃತಪಟ್ಟ 11 ಅಭಿಮಾನಿಗಳ ಗೌರವಾರ್ಥವಾಗಿ 11 ಆಸನಗಳನ್ನು ಖಾಲಿ ಬಿಡುವುದಾಗಿ 'ಆರ್‌ಸಿಬಿ' ತಿಳಿಸಿದೆ. ಆಸನಗಳನ್ನು ಖಾಲಿ ಬಿಡುವ ಬದಲು ಮೃತರ ಕುಟುಂಬದವರನ್ನು ಆಹ್ವಾನಿಸಿ, ಆ ಆಸನಗಳಲ್ಲಿ ಕೂರಿಸಿ ಗೌರವಿಸುವುದು ಅರ್ಥಪೂರ್ಣ ಎನ್ನಿಸಬಹುದು. ಈ ಬಗ್ಗೆ ಆರ್‌ಸಿಬಿ ಚಿಂತನೆ ನಡೆಸಲಿ.

ವಿ.ಆರ್. ನಂದಕುಮಾರ್, ಬೆಂಗಳೂರು

ಚುರುಮುರಿ

ಬರಗಾಲದಲ್ಲಿ ಅಧಿಕಮಾಸ!

• ಗುರು ಪಿ.ಎಸ್.

'ರೀ... ಇಲ್ನೋಡ್ರೀ ಈ ಸುದ್ದಿ, ಎಲೆಕ್ಷನ್ ಕಮಿಷನ್ ಲೆಟರ್‌ನಲ್ಲಿ ಬಿಜೆಪಿ ಸೀಲ್ ಹಾಕಿದ್ರಂತೆ' ಪೇಪರ್ ಹಿಡಿದು ಬಂದಳು ಹೆಂಡತಿ.

'ಸತ್ಯವನ್ನು ಹೆಚ್ಚು ದಿನ ಮುಚ್ಚಿಡೋಕೆ ಆಗಲ್ಲ ಬಿಡು' ಎಂದೆ ನಗುತ್ತಾ.

'ಯಾವ ಸತ್ಯ ರೀ, ಏನಕ್ಕೆ ಬಿಜೆಪಿ ಸೀಲ್ ಹಾಕಿದ್ರಂತೆ?'

'ಏನಿಲ್ಲ, ಅದು ಕ್ಲರಿಕಲ್ ಎರರ್ ಅಂತೆ'.

'ಓಹ್, ಆ ಎರರ್ ಮಾಡಿರೋರ್ಯಾರೋ ತುಂಬಾ ಪ್ರಭಾವಿ ಕ್ಲರ್ಕೇ ಆಗಿರಬೇಕು' ಎಂದಳು ಎಲ್ಲವೂ ಹೊಳೆದಂತೆ.

'ಅದು ಹೋಗ್ಲಿ ಬಿಡು. ಗ್ಯಾಸ್ ಸಿಲಿಂಡರ್ ಬಂತಾ, ಇನ್ನೂ ಇಲ್ವಾ?'

'ಬಂದಿಲ್ಲ ರೀ... ಗ್ಯಾಸ್ ಸ್ಟಾಕ್ ಇಲ್ಲ ಅಂತಾರೆ. ಯಾವುದು ಸತ್ಯವೋ, ಯಾವುದು ಸುಳ್ಳೋ ಒಂದೂ ಗೊತ್ತಾಗ್ತಿಲ್ಲ'.

'ಅದರಲ್ಲೂ ಒಂದು ಟ್ವಿಸ್ಟ್ ಇದೆ. ಕಾಂಗ್ರೆಸ್‌ನವರ ಪ್ರಕಾರ ಗ್ಯಾಸ್ ಸಿಲಿಂಡರ್ ಸಿಗ್ತಿಲ್ಲ, ಬಿಜೆಪಿಯವರ ಪ್ರಕಾರ ಸಿಗ್ತಿದೆ'.

'ಅಲ್ಲ, ನಾವು ವಿಶ್ವಗುರುವಾಗಿ ಯಃಕಶ್ಚಿತ್ ಒಂದು ಗ್ಯಾಸ್ ಸಿಲಿಂಡರ್‌ಗೆ ಪರದಾಡುವಂತಾಗಿಬಿಡ್ತಲ್ಲ. ಇದು ಹೀಗೇ ಮುಂದುವರಿದು, ಪೆಟ್ರೋಲ್-ಡೀಸೆಲ್ ಸಿಗದೆ ಎಲ್ಲ ಸ್ತಬ್ಧ ಆಗಿ ಕೋವಿಡ್ ಲಾಕ್‌ಡೌನ್ ಸ್ಥಿತಿ ಬಂದುಬಿಟ್ಟರೆ ಹೇಗೆ?' ಆತಂಕದಿಂದ ಕೇಳಿದಳು.

'ಏನ್ ಮಾಡೋಕಾಗುತ್ತೆ, ಮನೆಯಲ್ಲೇ ತಟ್ಟೆ ತಟ್ಟುತ್ತಾ, ಗಂಟೆ ಬಾರಿಸುತ್ತಾ ಇದ್ದರಾಯ್ತು'.

'ಎಷ್ಟು ಕೂಲ್ ಆಗಿ ಹೇಳ್ತೀದಿರಲ್ರೀ, ನಿಮ್ ಕೆಲಸವೇ ಹೋಗಿಬಿಟ್ರೆ ಏನ್ ಮಾಡ್ತೀರಾ?'

'ಅದಕ್ಯಾಕಮ್ಮ ಯೋಚನೆ ಮಾಡ್ತೀಯ? ನಾವಿರೋದು ಕರ್ನಾಟಕದಲ್ಲಿ. ಇಲ್ಲಿರೋದು ಕಾಂಗ್ರೆಸ್ ಸರ್ಕಾರ. ತಿಂಗಳಿಗೆ ಆರು ಲಕ್ಷ ರೂಪಾಯಿ ಸಂಬಳದ ಕೆಲಸ ಕೊಡ್ತಾರೆ ನಂಗೆ'.

'ಅದ್ಯಾವುದು ರೀ, ತಿಂಗಳಿಗೆ ಆರು ಲಕ್ಷ ರೂಪಾಯಿ ಸಂಬಳ ಸಿಗೋ ಕೆಲಸ?' ಕುತೂಹಲದಿಂದ ಕೇಳಿದಳು ಹೆಂಡತಿ.

'ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಸ್ಥಾನವೆಂಬ ಸರ್ಕಾರಿ ಜಾಬ್' ಕಾಲರ್ ಮೇಲೇರಿಸಿಕೊಳ್ಳುತ್ತಾ ಹೇಳಿದೆ.

ಸಂಗತ

ಮರಳುಗಾಡಲ್ಲಿ ಅಂತಃಕರಣದ ಓಯಸಿಸ್

ಕೂಲಿಗೆ ಹೋಗಿದ್ದ ವಿದ್ಯಾರ್ಥಿನಿಯನ್ನು ಕರೆತಂದು ಅಧಿಕಾರಿಯೊಬ್ಬರು ಪರೀಕ್ಷೆ ಬರೆಸಿದ್ದಾರೆ. ಆದರೆ, ಅಸಂಖ್ಯ ಜನರ ಹಸಿವಿನ ಸಮಸ್ಯೆ–ಸಂಕಟಕ್ಕೆ ಎಲ್ಲಿದೆ ಉತ್ತರ?

• ಟಿ.ಎಸ್. ಗೊರವರ

ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಪೇಠಾಲೂರಿನಲ್ಲಿ ಕೂಲಿ ಕೆಲಸಕ್ಕೆ ಹೋಗಿದ್ದ ವಿದ್ಯಾರ್ಥಿನಿಯನ್ನು ಕರೆ ತಂದು ಪರೀಕ್ಷೆ ಬರೆಸಿದ ಕ್ಷೇತ್ರ ಶಿಕ್ಷಣಾಧಿಕಾರಿ (ಬಿಇಒ) ಅವರ ಸಹೃದಯತೆಯ ಬಗ್ಗೆ ಪತ್ರಿಕೆಯಲ್ಲಿ (ಪ್ರ.ವಾ., ಮಾರ್ಚ್ 24) ವರದಿಯಾಗಿದೆ. ಇದೊಂದು ವಿರಳ ಹಾಗೂ ಹೃದ್ಯ ವಿದ್ಯಮಾನ.

ಕನ್ನಡ ಪರೀಕ್ಷೆಗೆ ಹಾಜರಾಗಿದ್ದ ವಿದ್ಯಾರ್ಥಿನಿ ವಿಜ್ಞಾನ ಪರೀಕ್ಷೆಗೆ ಗೈರಾಗಿರುವುದು ಬಿಇಒ ಅವರ ಗಮನಕ್ಕೆ ಬಂದಿದೆ. ವಿದ್ಯಾರ್ಥಿನಿಯ ಬಗ್ಗೆ ವಿಚಾರಿಸಿದ ಅವರಿಗೆ, ಆಕೆ ದ್ರಾಕ್ಷಿ ತೋಟದಲ್ಲಿ ಕೂಲಿಗೆ ಹೋಗಿರುವುದು ತಿಳಿದಿದೆ. ತಕ್ಷಣವೇ ಅಲ್ಲಿಗೆ ತೆರಳಿದ ಅವರು, ವಿದ್ಯಾರ್ಥಿನಿಗೆ ಕಿವಿಮಾತು ಹೇಳಿ ತಮ್ಮ ಕಾರಿನಲ್ಲಿಯೇ ಪರೀಕ್ಷಾ ಕೇಂದ್ರಕ್ಕೆ ಕರೆ ತಂದು ಪರೀಕ್ಷೆ ಬರೆಸಿದ್ದಾರೆ. ಇಂಥ ನಡವಳಿಕೆ ನಿಜಕ್ಕೂ ಹೃದಯವಂತ ಅಧಿಕಾರಿಯಿಂದಷ್ಟೇ ಸಾಧ್ಯ. ಆ ಬಿಇಒ ಅವರನ್ನು ಮೆಚ್ಚಿಕೊಳ್ಳುತ್ತಲೇ, ಭವಿಷ್ಯ ರೂಪಿಸುವ ಪರೀಕ್ಷೆಯನ್ನೇ ತ್ಯಜಿಸಿ ಕೂಲಿಗೆ ತೆರಳಿದ ಬಡ ವಿದ್ಯಾರ್ಥಿನಿಯ ಅನಿವಾರ್ಯತೆಯ ಪಾಡನ್ನು ನೆನೆದು ಖೇದ ಉಂಟಾಗುತ್ತದೆ.

ಪೇಠಾಲೂರಿನ ಘಟನೆ, ಸಿನಿಮಾದಲ್ಲಿ ಮಾತ್ರ ಘಟಿಸಬಹುದಾದ ದೃಶ್ಯದಂತಿದೆ. ಯಾಕೆಂದರೆ, ವಾಸ್ತವವಾಗಿ ನಮ್ಮಲ್ಲಿನ ಅಧಿಕಾರಿಗಳಿಗೆ ಇಂಥ ಅಂತಃಕರಣವಿರುವುದು ಅಸಾಧ್ಯ ಎನ್ನುವಷ್ಟು ವಿರಳ. ಕಚೇರಿಗಳಿಗೆ ಹೋದ ಜನಸಾಮಾನ್ಯರನ್ನು ಕಡೆಗಣಿಸುವ ಅಧಿಕಾರಿಗಳ ವಿರುದ್ಧದ ದೂರುಗಳನ್ನು ಕೇಳುತ್ತಲೇ ಇರುತ್ತೇವೆ. ಅಂತಹುದರಲ್ಲಿ ಈ ಬಿಇಒ, ವಿದ್ಯಾರ್ಥಿನಿಯೊಬ್ಬಳು ಪರೀಕ್ಷೆಗೆ ಗೈರುಹಾಜರು ಆಗಿರುವುದನ್ನು ಗಮನಿಸಿರುವುದು ಮಾತ್ರವಲ್ಲದೆ, ಆ ವಿದ್ಯಾರ್ಥಿನಿ ಕೂಲಿ ಮಾಡಲು ಹೋದ ಹೊಲಕ್ಕೆ ತೆರಳಿ ಕರೆದುಕೊಂಡು ಬಂದು ಪರೀಕ್ಷೆ ಬರೆಸಿರುವುದು ಸಾಮಾನ್ಯ ಸಂಗತಿಯಲ್ಲ.

ಪರೀಕ್ಷೆಯಲ್ಲಿ ಒಂದು ವಿಷಯದ ಪತ್ರಿಕೆ ಬರೆದು, ಮತ್ತೊಂದು ವಿಷಯದ ಪತ್ರಿಕೆಯನ್ನು ವಿದ್ಯಾರ್ಥಿಗಳು ತಪ್ಪಿಸಿಕೊಳ್ಳುವುದು ಅಪರೂಪ. ಅದರಲ್ಲೂ ಹೆಣ್ಣುಮಕ್ಕಳು ಪರೀಕ್ಷೆ ತಪ್ಪಿಸಿಕೊಳ್ಳುವುದು ತೀರಾ ಕಡಿಮೆ. ಹೀಗಿರುವಾಗ, ಆ ವಿದ್ಯಾರ್ಥಿನಿ ಪರೀಕ್ಷೆ ಬರೆಯುವುದನ್ನು ಬಿಟ್ಟು ಕೂಲಿಗೆ ಹೋಗಲೇಬೇಕಾದ ಒತ್ತಡದ ಹಿಂದಿನ ಮನಃಸ್ಥಿತಿಯನ್ನು ಅರ್ಥೈಸಿಕೊಳ್ಳಬೇಕಿದೆ. ವಿದ್ಯಾರ್ಥಿನಿಯ ಕುಟುಂಬವನ್ನು ದೂರುವುದರಲ್ಲಿ ಹುರುಳಿಲ್ಲ. ಅಂಥ ಕುಟುಂಬದ ಅನಿವಾರ್ಯತೆ ನಮ್ಮ ಸುಲಭ ಲೆಕ್ಕಾಚಾರಗಳಿಗೆ ನಿಲುಕುವಂತೆ ಇರುವುದಿಲ್ಲ. ಬಡತನವೆಂಬುದು ಈ ದೇಶಕ್ಕೆ ಅಂಟಿದ ಮಹಾಶಾಪ. ಅದು ಎಂಥ ಪರೀಕ್ಷೆಯನ್ನೂ ಬಿಡಿಸಬಲ್ಲದು, ಅಗ್ನಿಕುಂಡಕ್ಕೆ ಜಿಗಿಸಿ ಆಹುತಿಯನ್ನೂ ಪಡೆಯಬಲ್ಲದು. ಬಡವರ ಬದುಕಿನಲ್ಲಿ ದುರಂತಗಳು ಯಾವಾಗಲೂ ಬಾಯಿ ತೆರೆದುಕೊಂಡು ಹೊಂಚು ಹಾಕುತ್ತಲೇ ಇರುತ್ತವೆ.

ಸ್ನೇಹಿತರೊಬ್ಬರು ಹೇಳಿದ ಅವರ ಬಾಲ್ಯದ ಬದುಕಿನ ದಾರುಣ ಹಸಿವಿನ ಅನುಭವದ ಪ್ರಸಂಗವೊಂದು ನೆನಪಾಗುತ್ತಿದೆ. ತಿಪ್ಪೆಯಲ್ಲಿ ಬಿದ್ದಿದ್ದ ಒಣ ವಸ್ತುವೊಂದನ್ನು ತೋರಿಸಿದ ಒಬ್ಬರು 'ಅದು ಸಂಡಿಗೆ' ಅಂದರಂತೆ. ಮೊದಲೇ ಹಸಿವಿನಿಂದ ಬಳಲುತ್ತಿದ್ದ ಹುಡುಗ, ಮೃಷ್ಟಾನ್ನ ಸಿಕ್ಕಂತಾಗಿ ಅದನ್ನು ತಿನ್ನತೊಡಗಿದನಂತೆ. ಯಾರೋ ಹಿರಿಯರು ಓಡಿ ಬಂದು ತಿನ್ನುತ್ತಿದ್ದ ವಸ್ತುವನ್ನು ಕಸಿದುಕೊಂಡರು. ಯಾಕೆಂದು ಅವರನ್ನು ಪ್ರಶ್ನಾರ್ಥಕವಾಗಿ ನೋಡಿದ. ಅವರು ಗಾಬರಿಯಿಂದ ಅದನ್ನು ದೂರ ಎಸೆದರು. ಹಸಿವೆಯಿಂದ ಕಂಗೆಟ್ಟ ಆತ ತಿನ್ನುತ್ತಿದ್ದುದು ಸಂಡಿಗೆ ಆಗಿರದೆ, ಸತ್ತ ಹಾವಿನ ಮುರುಟಿದ ದೇಹವಾಗಿತ್ತು. ಬಡವರ ಹಸಿವೆಂದರೆ ಹೀಗೆಯೇ ಇರುತ್ತದೆ. ಅದನ್ನು ಅನುಭವಿಸಿದವರಷ್ಟೇ ಬಲ್ಲರು. ಇಂಥ ಬಡವರ ಮಕ್ಕಳೇ ಅಲ್ಲವೇ ಶಾಲೆಯನ್ನು ಅರ್ಧಕ್ಕೇ ಮೊಟಕುಗೊಳಿಸುತ್ತಿರುವುದು?

ಉಚಿತ ಮತ್ತು ಕಡ್ಡಾಯ ಶಿಕ್ಷಣ ಜಾರಿಗೊಳಿಸಲಾಗಿದ್ದರೂ ಮಕ್ಕಳು ಯಾಕಾಗಿ ಶಾಲೆಯನ್ನು ಅರ್ಧಕ್ಕೆ ಬಿಡುತ್ತಿದ್ದಾರೆ? ಕೂಲಿಯನ್ನು ಬೆಂಬತ್ತಿ ಯಾಕೆ ಹೋಗುತ್ತಿದ್ದಾರೆ? ಯಾರ ಮಕ್ಕಳು ಶಿಕ್ಷಣದಿಂದ ವಂಚಿತಗೊಳ್ಳುತ್ತಿದ್ದಾರೆ ಎಂದು ಪರಿಶೀಲಿಸಿದರೆ– ಅವರೆಲ್ಲ ಅನಕ್ಷರಸ್ಥರು, ಕೃಷಿ ಕೂಲಿ ಕಾರ್ಮಿಕರು, ಕೊಳಚೆ ನಿವಾಸಿಗಳು, ಬಡವರ ಮಕ್ಕಳೇ ಆಗಿರುವುದು ತಿಳಿಯುತ್ತದೆ. ಇವರಿಗೆ ಶಾಲೆಯ ಕಲಿಕೆಗಿಂತ ಆ ದಿನದ ದುಡಿಮೆಯಿಂದ ಹೊಟ್ಟೆ ತುಂಬಿಸಿಕೊಳ್ಳುವುದೇ ಮುಖ್ಯವಾಗುತ್ತದೆ.

ತುಂಡು ಭೂಮಿಯಿಲ್ಲದ ಅದೆಷ್ಟೋ ಕೂಲಿ ಕುಟುಂಬಗಳು ನಮ್ಮಲ್ಲಿವೆ. ಬೇರೆಯವರ ಹೊಲಗಳಲ್ಲೋ, ಕಟ್ಟಡ ಕೆಲಸಗಾರರಾಗಿಯೋ ದುಡಿಯುವುದರಲ್ಲಿ ಅವರು ಜೀವನ ಸವೆಸುತ್ತಿದ್ದಾರೆ. ಕೂಲಿ ಹುಡುಕಿಕೊಂಡು ಮಹಾನಗರಗಳಿಗೆ ವಲಸೆ ಹೋಗುವವರಿದ್ದಾರೆ. ಇಂಥವರ ಆರ್ಥಿಕ ಅಭಿವೃದ್ಧಿಯಾಗುವುದು ಹೇಗೆ? ಅವರ ಮಕ್ಕಳು ಶಿಕ್ಷಣ ಕಲಿತು ವಿದ್ಯಾವಂತರಾಗುವುದು ಹೇಗೆ ಎಂಬ ಕುರಿತು ಸಮಾಜ-ಸರ್ಕಾರ ಯೋಚಿಸಬೇಕಿದೆ.

'ಭೂಮಿ'ಯ ಕನಸನ್ನು ಕಾಣುತ್ತಲೇ ಇಡೀ ಬದುಕಿನ ಗಳಿಗೆಗಳನ್ನು ಬೆವರಿನಲ್ಲಿಯೇ ತೋಯಿಸಿ ಕಣ್ಮರೆಯಾಗುವ ಅಸಂಖ್ಯ ಮುಗ್ಧ ಜೀವಗಳಿವೆ. ಶಿವರಾಮ ಕಾರಂತರ 'ಚೋಮನ ದುಡಿ' ಕಾದಂಬರಿಯ ಚೋಮ ಬಡತನ, ನೋವು, ಹಸಿವು, ನಿರಾಶೆಯಲ್ಲಿಯೇ ಜೀವನ ಕಳೆದವನು. ತನ್ನದೇ ಸ್ವಂತ ಭೂಮಿಯಲ್ಲಿ ಕೃಷಿ ಮಾಡಬೇಕೆಂಬ ಅವನ ಕನಸು ಕೊನೆಗೂ ಈಡೇರಲೇ ಇಲ್ಲ. ಅಂಥ ಸಾವಿರಾರು ಚೋಮಂದಿರು ನಮ್ಮ ನಡುವೆ ಇನ್ನೂ ಜೀವಂತ ಇದ್ದಾರೆ. ಅವರ ಮಕ್ಕಳು ಕೂಲಿ ಮಾಡಲು ವಲಸೆ ಹೋಗುತ್ತಿದ್ದಾರೆ.

ಬಡವರು ತಮ್ಮ ಮಕ್ಕಳನ್ನು ಓದಿಸುವಷ್ಟು ಆರ್ಥಿಕ ಶಕ್ತಿ ಬರುವಂತಾಗಲಿ. ಅವರಿಗೆ ಪ್ರೇರಣೆ, ನೈತಿಕ ಧೈರ್ಯವನ್ನು ತುಂಬಲು, ಗದಗ ಜಿಲ್ಲೆಯ ವಿದ್ಯಾರ್ಥಿನಿಗೆ ಪರೀಕ್ಷೆ ಬರೆಯಲು ನೆರವಾದ ಬಿಇಒ ಅವರಂಥ ಅಂತಃಕರಣದ ಅಧಿಕಾರಿಗಳ ಸಂಖ್ಯೆ ಸಹಸ್ರವಾಗಲಿ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಲಿಂಗತ್ವ ಅಲ್ಪಸಂಖ್ಯಾತರ ಹಕ್ಕು ಮೊಟಕು?

ಎಲ್‌ಜಿಬಿಟಿಕ್ಯು ಸಮುದಾಯದಲ್ಲಿ ಆತಂಕ ಮೂಡಿಸಿದ ಕೇಂದ್ರದ ನಡೆ

ಕೇಂದ್ರ ಸರ್ಕಾರವು ಲಿಂಗತ್ವ ಅಲ್ಪಸಂಖ್ಯಾತರ ಕಾಯ್ದೆ–2019ಕ್ಕೆ ತಿದ್ದುಪಡಿ ಮಾಡಲು ಮುಂದಾಗಿದೆ. ಈ ಸಂಬಂಧ ಲೋಕಸಭೆ, ರಾಜ್ಯಸಭೆಯಲ್ಲಿ ಮಸೂದೆ ಅಂಗೀಕಾರವೂ ಆಗಿದೆ. ನಿಜವಾದ ಸಂತ್ರಸ್ತರಿಗೆ ಕಾನೂನಿನ ನೆರವು ಸಿಗುವಂತೆ ಮಾಡುವ ಉದ್ದೇಶದಿಂದ ಮಸೂದೆ ರೂಪಿಸಲಾಗಿದೆ ಎಂದು ಕೇಂದ್ರ ಹೇಳಿದೆ. ಆದರೆ, ಲಿಂಗತ್ವ ಅಲ್ಪಸಂಖ್ಯಾತರು ಯಾರು ಎಂಬುದನ್ನು ಸಂಕುಚಿತವಾಗಿ ವ್ಯಾಖ್ಯಾನಿಸಲಾಗಿದೆ, ಅವರ ಲಿಂಗತ್ವದ ಗುರುತಿನ ಸ್ವಯಂಘೋಷಣೆ ಮತ್ತು ಇತರ ಹಕ್ಕುಗಳನ್ನು ಮೊಟಕುಗೊಳಿಸುವಂಥ ಅಂಶಗಳು ಮಸೂದೆಯಲ್ಲಿವೆ ಎಂದು ಸಂಘಟನೆಗಳು, ಹೋರಾಟಗಾರರು ವಿರೋಧ ವ್ಯಕ್ತಪಡಿಸಿದ್ದಾರೆ

• ಬಿ.ವಿ.ಶ್ರೀನಾಥ್

ಕೇಂದ್ರಸರ್ಕಾರವು ಲಿಂಗತ್ವ ಅಲ್ಪಸಂಖ್ಯಾತರ ಕಾಯ್ದೆ–2019ಕ್ಕೆ ಕೆಲವು ಬದಲಾವಣೆಗಳನ್ನು ಮಾಡಿ, ಲಿಂಗತ್ವ ಅಲ್ಪಸಂಖ್ಯಾತರ (ಹಕ್ಕುಗಳ ರಕ್ಷಣೆ) ತಿದ್ದುಪಡಿ ಮಸೂದೆ–2026ಕ್ಕೆ ಲೋಕಸಭೆಯಲ್ಲಿ ಅಂಗೀಕಾರ ಪಡೆದಿದೆ. ಬುಧವಾರ ರಾಜ್ಯಸಭೆಯಲ್ಲಿಯೂ ಅಂಗೀಕಾರ ಸಿಕ್ಕಿದೆ. ಲಿಂಗತ್ವ ಅಲ್ಪಸಂಖ್ಯಾತರ ಕುರಿತ ವ್ಯಾಖ್ಯಾನವು ಅಸ್ಪಷ್ಟವಾಗಿದ್ದು, ನಿಜವಾದ ಸಂತ್ರಸ್ತರನ್ನು ಗುರುತಿಸಿ, ಅವರಿಗೆ ಕಾಯ್ದೆಯ ಪ್ರಯೋಜನಗಳನ್ನು ದೊರಕಿಸುವುದು ಅಸಾಧ್ಯವಾಗಿದೆ, ತಮ್ಮ ಯಾವ ತಪ್ಪೂ ಇಲ್ಲದೇ ಜೈವಿಕ ಕಾರಣದಿಂದ ತೀವ್ರ ಸಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಿರುವಂಥವರ ಹಕ್ಕುಗಳನ್ನು ಮಾತ್ರವೇ ರಕ್ಷಣೆ ಮಾಡುವುದು ಮಸೂದೆಯ ಉದ್ದೇಶ ಎಂದು ಕೇಂದ್ರವು ಪ್ರತಿಪಾದಿಸಿದೆ.

2019ರ ಕಾಯ್ದೆಯ ಪ್ರಕಾರ, ಲಿಂಗತ್ವ ಅಲ್ಪಸಂಖ್ಯಾತರು ಎಂದರೆ, ಹುಟ್ಟಿನಿಂದ ದತ್ತವಾದ ಲಿಂಗತ್ವಕ್ಕಿಂತ ಭಿನ್ನವಾದ ಲಿಂಗತ್ವ ಹೊಂದಿರುವವರು. ಹುಟ್ಟಿದಾಗ ಗಂಡಾಗಿದ್ದು ನಂತರ ಹೆಣ್ಣಾಗಿರಬಹುದು (ಟ್ರಾನ್ಸ್ ವುಮನ್), ಹುಟ್ಟಿದಾಗ ಹೆಣ್ಣಾಗಿ ನಂತರ ಗಂಡಾಗಿರಬಹುದು (ಟ್ರಾನ್ಸ್ ಮೆನ್), ಅಂತರಲಿಂಗತ್ವ ಹೊಂದಿರಬಹುದು, ಇಲ್ಲವೇ ಕಿನ್ನರ್, ಹಿಜ್ರಾ, ಅರವಣಿ, ಮತ್ತು ಜೋಗತಿ–ಇಂಥ ಸಾಮಾಜಿಕ ಸಾಂಸ್ಕೃತಿಕ ಚಹರೆಗಳನ್ನು ಹೊಂದಿರುವವರು. ಲಿಂಗ ಬದಲಾವಣೆಯ ಶಸ್ತ್ರಚಿಕಿತ್ಸೆಗೆ, ಲೇಸರ್ ಥೆರಪಿ, ಹಾರ್ಮೋನ್ ಥೆರಪಿ ಇತ್ಯಾದಿಗಳಿಗೆ ಒಳಗಾಗಿರಬಹುದು ಇಲ್ಲದಿರಬಹುದು, ಎಲ್ಲರನ್ನೂ ವಿಶಾಲ ಅರ್ಥದಲ್ಲಿ ಲಿಂಗತ್ವ ಅಲ್ಪಸಂಖ್ಯಾತರು ಎಂದೇ ಗುರುತಿಸಲಾಗುತ್ತಿತ್ತು.

2019ರ ಕಾಯ್ದೆಯಲ್ಲಿನ ಕೆಲವು ವಿಚಾರಗಳಲ್ಲಿ ಗೊಂದಲಗಳಿದ್ದು, ಅವು ಕಾಯ್ದೆ ಜಾರಿಗೆ ಅಡ್ಡಿಯಾಗಿವೆ; ಲಿಂಗತ್ವ ಅಲ್ಪಸಂಖ್ಯಾತರು ಎಂದರೆ ಯಾರು, ಅವರನ್ನು ಹೇಗೆ ಗುರುತಿಸಲಾಗುತ್ತಿದೆ ಎನ್ನುವ ಅಂಶಗಳು ಕಾಯ್ದೆ ಜಾರಿಯಲ್ಲಿ ನಿರ್ಣಾಯಕವಾಗಿವೆ ಎಂದು ಕೇಂದ್ರವು ಹೇಳಿದೆ. ಈ ಅಂಶಗಳನ್ನು ಮಸೂದೆಯಲ್ಲಿ ಬದಲಾವಣೆ ಮಾಡಲಾಗಿದೆ. ಈ ಬದಲಾವಣೆಯ ಬಗ್ಗೆಯೇ ಲಿಂಗತ್ವ ಅಲ್ಪಸಂಖ್ಯಾತರು ಆಕ್ಷೇಪಣೆ ಎತ್ತಿರುವುದು.

ಮಸೂದೆ ವಿರೋಧಿಸಿ ಲಿಂಗತ್ವ ಅಲ್ಪಸಂಖ್ಯಾತರು 2026ರ ಮಾರ್ಚ್ 22ರಂದು ಅಹಮದಾಬಾದ್‌ನಲ್ಲಿ ಪ್ರತಿಭಟನೆ ನಡೆಸಿದರು ಎಎಫ್‌ಪಿ ಚಿತ್ರ

ಸ್ವಯಂ ಗುರುತಿಸಿಕೊಳ್ಳುವಿಕೆ ರದ್ದು: ಲಿಂಗತ್ವ ಅಲ್ಪಸಂಖ್ಯಾತರು ತಮ್ಮ ಲಿಂಗತ್ವದ ಗ್ರಹಿಕೆಯ ಆಧಾರದ ಮೇಲೆ ಲಿಂಗತ್ವ ಅಲ್ಪಸಂಖ್ಯಾತರೆಂದು ಸ್ವಯಂ ಗುರುತಿಸಿಕೊಳ್ಳಲು 2019ರ ಕಾಯ್ದೆಯ ಸೆಕ್ಷನ್ 4 (2) ಅವಕಾಶ ಕಲ್ಪಿಸಿತ್ತು. ತಿದ್ದುಪಡಿ ಮಸೂದೆಯಲ್ಲಿ ಈ ಅಂಶವನ್ನು ಕೈಬಿಡಲಾಗಿದೆ.

ತಿದ್ದುಪಡಿ ಮಸೂದೆಯಲ್ಲಿ ‘ಲಿಂಗತ್ವ ಅಲ್ಪಸಂಖ್ಯಾತ’ರು ಎಂದರೆ ಯಾರು ಎನ್ನುವುದನ್ನು ಸೀಮಿತವಾಗಿ ವ್ಯಾಖ್ಯಾನಿಸಲಾಗಿದೆ. ಲಿಂಗತ್ವ ಅಲ್ಪಸಂಖ್ಯಾತರು ಎಂದರೆ, ಜೈವಿಕ ಕಾರಣಗಳಿಂದ ಸಾಮಾಜಿಕ ಬಹಿಷ್ಕಾರಕ್ಕೊಳಗಾಗಿರುವ ಹಿಜ್ರಾ, ಕಿನ್ನರ್, ಅರವಾಣಿ, ಜೋಗತಿ ಮೊದಲಾದ ನಿರ್ದಿಷ್ಟ ಸಾಮಾಜಿಕ–ಸಾಂಸ್ಕೃತಿಕ ಸಮುದಾಯಗಳಿಗೆ ಸೇರಿದವರು, ಅಂತರಲಿಂಗಿಗಳು, ನಿರ್ದಿಷ್ಟ ದೈಹಿಕ ಚಹರೆಗಳನ್ನು ಹೊಂದಿರುವವರು, ಶಸ್ತ್ರಚಿಕಿತ್ಸೆಗೆ ಒಳಗಾದವರು.

ವೈದ್ಯಕೀಯ ಮಂಡಳಿ: ಸರ್ಕಾರದ ಯೋಜನೆಗಳ ನೆರವು ಪಡೆಯಲು ಲಿಂಗತ್ವ ಅಲ್ಪಸಂಖ್ಯಾತರು ಗುರುತಿನ ಚೀಟಿ ಹೊಂದಿರಬೇಕು. ಅದು ಅವರ ಗುರುತಿನ ಪ್ರಾಥಮಿಕ ದಾಖಲೆಯಾಗಿದೆ. ಒಬ್ಬ ವ್ಯಕ್ತಿ ತಾನು ಲಿಂಗತ್ವ ಅಲ್ಪಸಂಖ್ಯಾತ ಎಂದು ಗುರುತಿನ ಚೀಟಿ ಪಡೆಯಲು ಅರ್ಜಿ ಸಲ್ಲಿಸಿದರೆ, 2019ರ ಕಾಯ್ದೆ ಪ್ರಕಾರ, ಜಿಲ್ಲಾಧಿಕಾರಿ ಪ್ರಮಾಣ ಪತ್ರ ನೀಡುತ್ತಿದ್ದರು. ಅದಕ್ಕೆ ಯಾವುದೇ ವೈದ್ಯಕೀಯ ತಪಾಸಣೆಯ ಅಗತ್ಯವಿರಲಿಲ್ಲ. ಆದರೆ, ಈ ಅಂಶವನ್ನು 2026ರ ಮಸೂದೆಯಲ್ಲಿ ತಿದ್ದುಪಡಿ ಮಾಡಲಾಗಿದೆ.

ಲಿಂಗತ್ವ ಅಲ್ಪಸಂಖ್ಯಾತರ ಗುರುತಿನ ಚೀಟಿ ನೀಡಲು ‘ವೈದ್ಯಕೀಯ ಮಂಡಳಿ’ಯು ಅವರನ್ನು ತಪಾಸಣೆ ಮಾಡುತ್ತದೆ ಮತ್ತು ಅದರ ಆಧಾರದಲ್ಲಿ ಸರ್ಕಾರಕ್ಕೆ ಶಿಫಾರಸು ಮಾಡುತ್ತದೆ. ಜತೆಗೆ, ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಯು ಲಿಂಗ ಬದಲಾವಣೆ ಶಸ್ತ್ರಚಿಕಿತ್ಸೆಗೆ ಒಳಗಾಗಿರುವುದನ್ನು ದೃಢೀಕರಿಸುವ ಪ್ರಮಾಣಪತ್ರವನ್ನು ಜಿಲ್ಲಾಧಿಕಾರಿಗೆ ಸಲ್ಲಿಸಬೇಕು (ಸೆಕ್ಷನ್ 5 (1ಎ). ಅವುಗಳನ್ನು ಪರಿಶೀಲಿಸಿ ವ್ಯಕ್ತಿಗೆ ಗುರುತಿನ ಚೀಟಿ ನೀಡಬೇಕೇ ಅಥವಾ ಬೇಡವೇ ಎನ್ನುವ ಅಂತಿಮ ನಿರ್ಧಾರವನ್ನು ಜಿಲ್ಲಾಧಿಕಾರಿಗಳು ಕೈಗೊಳ್ಳುತ್ತಾರೆ.

ಅಪರಾಧ ವ್ಯಾಪ್ತಿ ವಿಸ್ತರಣೆ: ಲಿಂಗತ್ವ ಅಲ್ಪಸಂಖ್ಯಾತರನ್ನು ಒಲ್ಲದ ಕೆಲಸಕ್ಕೆ ಒಲವಂತಪಡಿಸುವುದು, ಸಾರ್ವಜನಿಕ ಸ್ಥಳ ಪ್ರವೇಶಿಸುವುದಕ್ಕೆ ಅಡ್ಡಿಪಡಿಸುವುದು, ಮನೆ/ಹಳ್ಳಿ ತೊರೆಯುವಂತೆ ಮಾಡುವುದು, ದೈಹಿಕ, ಮಾನಸಿಕ, ಲೈಂಗಿಕ ಕಿರುಕುಳ ನೀಡುವುದು ಇತ್ಯಾದಿಗಳನ್ನು ಅಪರಾಧ ಎಂದು ಪರಿಗಣಿಸಿ, ಶಿಕ್ಷೆ ವಿಧಿಸುವ ನಿಬಂಧನೆಗಳನ್ನು 2019ರ ಕಾಯ್ದೆಯು (ಸೆಕ್ಷನ್ 18) ಒಳಗೊಂಡಿದೆ. ಲಿಂಗತ್ವ ಅಲ್ಪಸಂಖ್ಯಾತರಿಗೆ ಕಿರುಕುಳ ನೀಡಿದರೆ, ಅದರ ಸ್ವರೂಪವನ್ನು ಆಧರಿಸಿ ಅವರಿಗೆ 6 ತಿಂಗಳಿನಿಂದ ಎರಡು ವರ್ಷದವರೆಗೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲು ಕಾಯ್ದೆ ಅವಕಾಶ ನೀಡಿದೆ.

ತಿದ್ದುಪಡಿ ಮಸೂದೆಯಲ್ಲಿ ಸೆಕ್ಷನ್ 18ಕ್ಕೆ ನಾಲ್ಕು ಉಪನಿಯಮಗಳನ್ನು ಸೇರಿಸಿ ಅಪರಾಧದ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ. ಲಿಂಗತ್ವ ಅಲ್ಪಸಂಖ್ಯಾತರು ಯಾವುದೇ ವಯಸ್ಕನನ್ನು/ಮಗುವನ್ನು ಬಲವಂತ, ಆಮಿಷ, ಪ್ರಲೋಭನೆ, ವಂಚನೆ, ಪ್ರಭಾವದಿಂದ ಅವರ ಒಪ್ಪಿಗೆ ಇಲ್ಲದೆಯೇ ಶಸ್ತ್ರಚಿಕಿತ್ಸೆ/ಹಾರ್ಮೋನ್ ಬದಲಾವಣೆ ಮೂಲಕ ಲಿಂಗತ್ವ ಅಲ್ಪಸಂಖ್ಯಾತರ ಗುರುತನ್ನು ಅಳವಡಿಸಿಕೊಳ್ಳುವಂತೆ ಒತ್ತಾಯಿಸಿದರೆ, ಅದನ್ನು ಅಪರಾಧ ಎಂದು ವರ್ಗೀಕರಿಸಲಾಗಿದೆ. ಇದಕ್ಕೆ, ಅಪರಾಧದ ಸ್ವರೂಪವನ್ನು ಆಧರಿಸಿ ₹1 ಲಕ್ಷದಿಂದ ಆರಂಭಿಸಿ ₹5 ಲಕ್ಷದವರೆಗೆ ದಂಡ ಮತ್ತು ಐದು ವರ್ಷಗಳಿಂದ ಜೀವಿತಾವಧಿವರೆಗೆ ಜೈಲು ಶಿಕ್ಷೆ ವಿಧಿಸಲು ಈ ಉಪನಿಯಮಗಳು ಅವಕಾಶ ಕಲ್ಪಿಸುತ್ತವೆ.

ಕಾಂಗ್ರೆಸ್, ಎಡಪಕ್ಷಗಳು, ಮಾನವ ಹಕ್ಕು ಸಂಘಟನೆಗಳು ಮಸೂದೆಯ ಬಗ್ಗೆ ಕಳವಳ ವ್ಯಕ್ತಪಡಿಸಿವೆ. ದಶಕಗಳ ಹೋರಾಟದಿಂದ ತಾವು ಪಡೆದಿದ್ದ ಹಕ್ಕುಗಳನ್ನು ಕಳೆದುಕೊಳ್ಳುವ ಸ್ಥಿತಿ ಉಂಟಾಗಿದ್ದು, ಮಸೂದೆಯನ್ನು ವಾಪಸ್ ಪಡೆಯಬೇಕು ಎಂದು ಲಿಂಗತ್ವ ಅಲ್ಪಸಂಖ್ಯಾತ ಸಂಘಟನೆಗಳು ಒತ್ತಾಯಿಸಿವೆ.

ಆಧಾರ: ಪಿಟಿಐ, ಲಿಂಗತ್ವ ಅಲ್ಪಸಂಖ್ಯಾತರ (ಹಕ್ಕುಗಳ ರಕ್ಷಣೆ) ತಿದ್ದುಪಡಿ ಮಸೂದೆ–2026, ಲಿಂಗತ್ವ ಅಲ್ಪಸಂಖ್ಯಾತರ ಕಾಯ್ದೆ–2019, ಮಾಧ್ಯಮ ವರದಿಗಳು

ನಲ್ಸಾ v/s ಭಾರತ ಸರ್ಕಾರ

ಲಿಂಗತ್ವ ಅಲ್ಪಸಂಖ್ಯಾತರನ್ನು ಅಧಿಕೃತವಾಗಿ ಗುರುತಿಸಲು ಕಾರಣವಾಗಿದ್ದು ನಲ್ಸಾ ಮತ್ತು ಭಾರತ ಸರ್ಕಾರದ ನಡುವಿನ ಪ್ರಕರಣಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್ 2014ರಲ್ಲಿ ನೀಡಿದ್ದ ತೀರ್ಪು. ಈ ತೀರ್ಪು ಎರಡು ಮುಖ್ಯ ಅಂಶಗಳನ್ನು ಒಳಗೊಂಡಿದೆ. ಒಂದು, ಹೆಣ್ಣು, ಗಂಡು ಇದ್ದಂತೆ ಲಿಂಗತ್ವ ಅಲ್ಪಸಂಖ್ಯಾತರು ತೃತೀಯ ಲಿಂಗಿಗಳಾಗಿದ್ದು, ಅವರಿಗೆ ಸಂವಿಧಾನದ ಎಲ್ಲ ಮೂಲಭೂತ ಹಕ್ಕುಗಳೂ ಇವೆ. ಎರಡು, ಒಬ್ಬ ವ್ಯಕ್ತಿ ತನ್ನನ್ನು ತಾನು ಹೆಣ್ಣು, ಗಂಡು, ಲಿಂಗತ್ವ ಅಲ್ಪಸಂಖ್ಯಾತ ಎಂದು ಸ್ವಯಂ ಗುರುತಿಸಿಕೊಳ್ಳಬಹುದು. ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳನ್ನು ಖಾತರಿಪಡಿಸುವುದಕ್ಕಾಗಿ ಮತ್ತು ಅವರ ಅಭ್ಯುದಯಕ್ಕಾಗಿ ಸೂಕ್ತ ಕಾನೂನು ರೂಪಿಸುವಂತೆಯೂ ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಸರ್ಕಾರಕ್ಕೆ ಸೂಚಿಸಿತ್ತು. ಲಿಂಗತ್ವ ಅಲ್ಪಸಂಖ್ಯಾತರ ಕಾಯ್ದೆ–2019 ಅಸ್ತಿತ್ವಕ್ಕೆ ಬರಲು ಇದೇ ಪ್ರಮುಖ ಕಾರಣವಾಗಿತ್ತು.

ವಿರೋಧ ಮಾಡುವವರ ವಾದವೇನು?

- ಮಸೂದೆಯು ಸುಪ್ರೀಂ ಕೋರ್ಟ್‌ನ ತೀರ್ಪನ್ನು ಉಲ್ಲಂಘಿಸುತ್ತದೆ, ಅಂತರರಾಷ್ಟ್ರೀಯ ಕಾನೂನಿನ ಮಾನದಂಡಗಳನ್ನು ನಿರ್ಲಕ್ಷಿಸುತ್ತದೆ ಮತ್ತು ಲಿಂಗತ್ವ ಅಲ್ಪಸಂಖ್ಯಾತ ಸಂಘಟನೆಗಳ ಆಶಯಕ್ಕೆ ವಿರುದ್ಧವಾಗಿದೆ
- ಸ್ವಯಂ ಗುರುತಿಸುವಿಕೆ ರದ್ದುಪಡಿಸಿರುವುದು ಲಿಂಗತ್ವ ಅಲ್ಪಸಂಖ್ಯಾತರ ಮೂಲಭೂತ ಹಕ್ಕಿನ ಉಲ್ಲಂಘನೆಯಾಗಿದೆ. ಗುರುತಿನ ಚೀಟಿ ಪಡೆಯಲು ಅವರು ಸಾಮಾಜಿಕ, ಆರ್ಥಿಕ ಸಂಕಷ್ಟ ಅನುಭವಿಸುವ ಜತೆಗೆ ದೈಹಿಕ ಪರೀಕ್ಷೆಯ ಮುಜುಗರ, ಆಡಳಿತಾತ್ಮಕ ಕಿರುಕುಳವನ್ನೂ ಎದುರಿಸಬೇಕು
- ಲಿಂಗತ್ವ ಅಲ್ಪಸಂಖ್ಯಾತರ ವ್ಯಾಖ್ಯಾನವು ಕೇವಲ ಜೈವಿಕ ಚಹರೆಗಳಿಗೆ ಸೀಮಿತವಾಗಿದೆ. ನಿರ್ದಿಷ್ಟ ಸಾಮಾಜಿಕ, ಸಾಂಸ್ಕೃತಿಕ ಗುಂಪುಗಳಿಗೆ ಹೊರತಾದವರು, ವಿಭಿನ್ನ ಸ್ವರೂಪದ ಲಿಂಗತ್ವ ಅಲ್ಪಸಂಖ್ಯಾತರನ್ನು ಮಸೂದೆ ಒಳಗೊಂಡಿಲ್ಲ. ಮಸೂದೆ ಕಾಯ್ದೆಯಾದರೆ, ಅವರೆಲ್ಲ ತಮ್ಮ ಗುರುತನ್ನು ಕಳೆದುಕೊಂಡು, ಸಮುದಾಯದಿಂದ ಹೊರಗುಳಿಯಬೇಕಾಗುತ್ತದೆ
- ಮಸೂದೆಯು ಲಿಂಗತ್ವ ಅಲ್ಪಸಂಖ್ಯಾತರಿಗೆ ಸಂವಿಧಾನವು ಖಾತರಿಪಡಿಸಿರುವ ಘನತೆ,

ಸ್ವಾಯತ್ತೆ ಮತ್ತು ರಕ್ಷಣೆಯನ್ನು ಕುಗ್ಗಿಸುತ್ತದೆ. 2019ರ ಕಾಯ್ದೆಯು ಸಮುದಾಯಕ್ಕೆ ನೀಡಿದ್ದ ಕೆಲವು ಹಕ್ಕುಗಳನ್ನು ತಿದ್ದುಪಡಿ ಮಸೂದೆಯು ಕಸಿದುಕೊಳ್ಳುತ್ತದೆ ಮತ್ತು ಅದರ ಉದ್ದೇಶವನ್ನೇ ಬುಡಮೇಲು ಮಾಡುತ್ತದೆ.
- ಮಸೂದೆಯ ಉದ್ದೇಶದಲ್ಲಿ ‘ನಿಜವಾದ ಸಂತ್ರಸ್ತರು ಮತ್ತು ರಕ್ಷಣೆಯ ನಿಜವಾದ ಅಗತ್ಯ ಇರುವವರು’ ಎಂದಿದೆ. ಆದರೆ, ಇದು ಅಸ್ಪಷ್ಟವಾಗಿದ್ದು, ಯಾವ ಮಾನದಂಡಗಳ ಆಧಾರದಲ್ಲಿ ಲಿಂಗತ್ವ ಅಲ್ಪಸಂಖ್ಯಾತರನ್ನು ವರ್ಗೀಕರಿಸಲಾಗಿದೆ ಎಂಬುದರ ಬಗ್ಗೆ ಸ್ಪಷ್ಟತೆಯಿಲ್ಲ
- ಲಿಂಗತ್ವ ಅಲ್ಪಸಂಖ್ಯಾತರನ್ನು ಅಪರಾಧೀಕರಣಗೊಳಿಸಲಾಗಿದೆ. ಲಿಂಗತ್ವ ಅಲ್ಪಸಂಖ್ಯಾತರಾಗಲು ವ್ಯಕ್ತಿಗಳನ್ನು/ಮಕ್ಕಳನ್ನು ಬಲವಂತಪಡಿಸುವ, ಆಮಿಷ ಒಡ್ಡುವಂಥ ನಡವಳಿಕೆಗಳು ಭಾರತದಲ್ಲಿ ಒಂದು ಸಾಮಾಜಿಕ ಮಾದರಿಯಾಗಿ ಅಸ್ತಿತ್ವದಲ್ಲಿವೆ ಎನ್ನುವುದಕ್ಕೆ ಯಾವುದೇ ವಿಶ್ವಾಸಾರ್ಹ ಪುರಾವೆಗಳಿಲ್ಲ. ಈ ನಿಬಂಧನೆಗಳು ದುರುಪಯೋಗವಾಗುವ ಸಂಭವ ಹೆಚ್ಚಾಗಿದೆ
- ಭಾರತೀಯ ಕಾನೂನುಗಳನ್ನು ವಸಾಹತುಶಾಹಿ ಧೋರಣೆಗಳಿಂದ ಮುಕ್ತಗೊಳಿಸುವ ಭಾರತದ ಆಶಯಕ್ಕೆ ಈ ಮಸೂದೆ ವಿರುದ್ಧವಾಗಿದೆ

ರಾಷ್ಟ್ರೀಯ

ಪರಿಷ್ಕೃತ ಉಡಾನ್ ಯೋಜನೆ ₹28,840 ಕೋಟಿ ಎತ್ತಿಟ್ಟ ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಾದೇಶಿಕ ವಿಮಾನ ಸಂಪರ್ಕವನ್ನು ಬಲಪಡಿಸುವ ಸಲುವಾಗಿ ‘ಪರಿಷ್ಕೃತ ಉಡಾನ್ ಯೋಜನೆ’ಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

ನಾಲ್ಕು ಕೋಟಿ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಒಟ್ಟು ₹28,840 ಕೋಟಿ ವೆಚ್ಚದಲ್ಲಿ 2026-27ನೇ ಹಣಕಾಸು ವರ್ಷದಿಂದ 2035-36ರವರೆಗೆ ಈ ಯೋಜನೆ ಜಾರಿಗೊಳಿಸಲಾಗುವುದು ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಯೋಜನೆಯಡಿ, ಪ್ರಾದೇಶಿಕ ಸಂಪರ್ಕ ಹೆಚ್ಚಿಸಲು ಪ್ರಸ್ತುತ ಬಳಕೆಯಲ್ಲಿಲ್ಲದ 100 ಏರ್ ಸ್ಟ್ರಿಪ್‌ಗಳನ್ನು ವಿಮಾನ ನಿಲ್ದಾಣಗಳನ್ನಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಇದಕ್ಕೆ ಮುಂದಿನ ಎಂಟು ವರ್ಷಗಳಲ್ಲಿ ₹12,159 ಕೋಟಿ ವೆಚ್ಚ ಮಾಡಲಾಗುವುದು ಎಂದು ಅವರು ಮಾಹಿತಿ ನೀಡಿದರು.

ಕೇವಲ ಪ್ರಾದೇಶಿಕ ಸಂಪರ್ಕ ಯೋಜನೆ ಅಡಿಯಲ್ಲಿ ಬರುವ ವಿಮಾನ ನಿಲ್ದಾಣಗಳಿಗೆ ಅಧಿಕ ನಿರ್ವಹಣಾ ವೆಚ್ಚ ತಗಲುತ್ತಿದೆ. ಆದರೆ, ಈ ನಿಲ್ದಾಣಗಳಿಗೆ ಸೀಮಿತ ಆದಾಯ ಇದೆ. ಹೀಗಾಗಿ ಈ ಯೋಜನೆಯಡಿ ವಿಮಾನ ನಿಲ್ದಾಣಗಳಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆ ಬೆಂಬಲ ನೀಡಲಾಗುತ್ತದೆ. ಪ್ರತಿ ವಿಮಾನ ನಿಲ್ದಾಣಕ್ಕೆ ವರ್ಷಕ್ಕೆ ಗರಿಷ್ಠ ₹3.06 ಕೋಟಿ ಮತ್ತು ಪ್ರತಿ ಹೆಲಿಪೋರ್ಟ್/ವಾಟರ್ ಏರೋಡ್ರೋಮ್‌ಗೆ ವರ್ಷಕ್ಕೆ ₹90 ಲಕ್ಷದಂತೆ ಮೂರು ವರ್ಷ ನೆರವು ನೀಡಲಾಗುತ್ತದೆ. 441 ನಿಲ್ದಾಣಗಳಿಗಾಗಿ ₹2,577 ಕೋಟಿ ಮೀಸಲಿಡಲಾಗಿದೆ ಎಂದರು.

ಗುಡ್ಡಗಾಡು, ದೂರದ ಪ್ರದೇಶಗಳು, ದ್ವೀಪಗಳು ಮತ್ತು ಅಭಿವೃದ್ಧಿ ಆಕಾಂಕ್ಷಿ ಜಿಲ್ಲೆಗಳಲ್ಲಿ ತಲಾ ₹15 ಕೋಟಿ ವೆಚ್ಚದಲ್ಲಿ 200 ಹೆಲಿಪ್ಯಾಡ್‌ಗಳನ್ನು ನಿರ್ಮಿಸಲಾಗುವುದು. ಇದಕ್ಕೆ ಎಂಟು ವರ್ಷಗಳಲ್ಲಿ ₹3,661 ಕೋಟಿ ವೆಚ್ಚ ಮಾಡಲಾಗುವುದು ಎಂದು ಅವರು ತಿಳಿಸಿದರು.

ವಿಮಾನಯಾನ ಸಂಸ್ಥೆಗಳು ನಿಗದಿತ ಮಾರ್ಗಗಳಲ್ಲಿ ಕಾರ್ಯನಿರ್ವಹಿಸಲು ಕಾರ್ಯಸಾಧ್ಯತಾ ಅಂತರ ನಿಧಿ (ವಿಜಿಎಫ್) ನೀಡಲಾಗುವುದು. ಮುಂದಿನ 10 ವರ್ಷಗಳಲ್ಲಿ ವಿಮಾನಯಾನ ಸಂಸ್ಥೆಗಳಿಗೆ ₹10,043 ಕೋಟಿ ನಿಧಿ ನೀಡಲು ಉದ್ದೇಶಿಸಲಾಗಿದೆ ಎಂದು ಅವರು ವಿವರ ನೀಡಿದರು.

ದೂರದ ಮತ್ತು ದುರ್ಗಮ ಭೂಪ್ರದೇಶಗಳಲ್ಲಿ ಕಾರ್ಯಾಚರಣೆ ನಡೆಸಲು ಅಗತ್ಯವಿರುವ ಸಣ್ಣ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳ ಕೊರತೆ ನೀಗಿಸಲು ಪವನ್ ಹನ್ಸ್ ಸಂಸ್ಥೆಗೆ ಎರಡು ‘ಎಚ್‌ಎಎಲ್ ಧ್ರುವ’ ಹೆಲಿಕಾಪ್ಟರ್‌ಗಳನ್ನು ಮತ್ತು ಅಲಯನ್ಸ್ ಏರ್ ಸಂಸ್ಥೆಗೆ ಎರಡು ‘ಎಚ್‌ಎಎಲ್ ಡಾರ್ನಿಯರ್’ ವಿಮಾನಗಳನ್ನು ಖರೀದಿಸಲು ಉದ್ದೇಶಿಸಲಾಗಿದೆ.

ಐವಿಎಫ್‌ಆರ್‌ಟಿ ಮುಂದುವರಿಕೆ: ವಲಸೆ, ವೀಸಾ, ವಿದೇಶಿಯರ ನೋಂದಣಿ ಮತ್ತು ಟ್ರ್ಯಾಕಿಂಗ್ (ಐವಿಎಫ್‌ಆರ್‌ಟಿ) ಯೋಜನೆಯನ್ನು 2031ರ ಮಾರ್ಚ್ ಅಂತ್ಯದವರೆಗೆ ಮುಂದುವರಿಸಲು ಕೇಂದ್ರ ಸಂಪುಟ ಒಪ್ಪಿಗೆ ನೀಡಲಾಗಿದೆ. ಇದಕ್ಕಾಗಿ ₹1,800 ಕೋಟಿ ಮೀಸಲಿಡಲಾಗಿದೆ ಎಂದರು.

ಐಷಾರಾಮಿ ಜೀವನ ನಡೆಸುತ್ತಿದ್ದ ಸ್ವಯಂ ಘೋಷಿತ ದೇವಮಾನವ

ಪ್ರಜಾವಾಣಿ ವಾರ್ತೆ

ಮುಂಬೈ: ವಿವಿಧ ಅತ್ಯಾಚಾರ ಪ್ರಕರಣಗಳಲ್ಲಿ ಬಂಧಿಸಲಾಗಿರುವ ಸ್ವಯಂ ಘೋಷಿತ ದೇವಮಾನವ ‘ಕ್ಯಾಪ್ಟನ್’ ಅಶೋಕ್ ಖರಾತ್, ರಾಜನಂತೆ ಐಷಾರಾಮಿ ಜೀವನ ನಡೆಸುತ್ತಿದ್ದರು ಎನ್ನಲಾಗಿದೆ.

ಮಹಾರಾಷ್ಟ್ರದ ನಾಸಿಕ್ ಮತ್ತು ಅಹಲ್ಯಾನಗರ ಜಿಲ್ಲೆಗಳಲ್ಲಿನ ಆಸ್ತಿಗಳ ಮೇಲೆ ಹೂಡಿಕೆ ಮಾಡಿದ್ದ ಖರಾತ್ ಬಳಿ ₹ 100 ಕೋಟಿಯಿಂದ ₹150 ಕೋಟಿ ಮೌಲ್ಯದ ಸಂಪತ್ತಿದೆ ಎಂದು ತನಿಖೆಯಿಂದ ಗೊತ್ತಾಗಿದೆ.

ಜ್ಯೋತಿಷಿ, ಸಂಖ್ಯಾಶಾಸ್ತ್ರಜ್ಞ, ಸಂಮೋಹನಶಾಸ್ತ್ರಜ್ಞ ಮತ್ತು ಕಾಸ್ಮೊಲಜಿಸ್ಟ್ ಎಂದು ಹೇಳಿಕೊಳ್ಳುವ ಖರಾತ್ (67) ವಿರುದ್ಧ ಲೈಂಗಿಕ ದೌರ್ಜನ್ಯ ಪ್ರಕರಣಗಳು ಸೇರಿದಂತೆ ಆರು ಎಫ್‌ಐಆರ್‌ಗಳು ದಾಖಲಾಗಿದ್ದು, ಈ ಪ್ರಕರಣಗಳನ್ನು ವಿಶೇಷ ತನಿಖಾ ತಂಡ (ಎಸ್‌ಐಟಿ) ತನಿಖೆ ನಡೆಸುತ್ತಿದೆ.

ಖರಾತ್ ಕಚೇರಿ, ತೋಟದ ಮನೆ ಮತ್ತು ಅವರಿಗೆ ಸೇರಿದ ವಿವಿಧ ಸ್ಥಳಗಳ ಮೇಲೆ ದಾಳಿ ನಡೆಸಿದ ಎಸ್‌ಐಟಿ ಅಧಿಕಾರಿಗಳು ₹ 6.53 ಲಕ್ಷ ನಗದು, ಎರಡು ಲ್ಯಾಪ್‌ಟಾಪ್‌ಗಳು, ಹಲವು ಮೊಬೈಲ್‌ಗಳು, ಒಂದು ಡಿವಿಆರ್ ಸೇರಿದಂತೆ ಆಸ್ತಿಗಳ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ.

ಎಸ್‌ಬಿಐ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಐಸಿಐಸಿಐ ಬ್ಯಾಂಕ್, ವಿಶ್ವಾಸ್ ಕೋ–ಆಪರೇಟಿವ್ ಬ್ಯಾಂಕ್ ಮತ್ತು ಸಾರಸ್ವತ ಬ್ಯಾಂಕ್‌ಗಳ ಖಾತೆಗಳಲ್ಲಿ ಖರಾತ್ ಒಟ್ಟು ₹ 40.87 ಕೋಟಿ ಠೇವಣಿ ಇರಿಸಿರುವುದು ಪತ್ತೆಯಾಗಿದೆ. ಪತ್ನಿ ಹೆಸರಲ್ಲಿ 20 ತೊಲ ಚಿನ್ನ ಮತ್ತು ಅವರ ಹೆಸರಿನಲ್ಲಿ 12 ತೊಲ ಚಿನ್ನವನ್ನು ಬ್ಯಾಂಕ್‌ಗಳಲ್ಲಿ ಇರಿಸಿದ್ದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಪುಷ್ಪಾ (@tan4u_) ಎನ್ನುವ ‘ಎಕ್ಸ್’ ಬಳಕೆದಾರರು ವಿಡಿಯೊ ಒಂದನ್ನು ಹಂಚಿಕೊಂಡಿದ್ದು, ಅದು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ‘ಬೈಕ್‌ನಲ್ಲಿ ಕೊಂಡೊಯ್ಯಲಾಗುತ್ತಿದ್ದ ಎಲ್‌ಪಿಜಿ ಸಿಲಿಂಡರ್ ಸ್ಫೋಟಗೊಂಡಿರುವ ಘಟನೆ ಉತ್ತರ ಪ್ರದೇಶದ ಮೀರತ್‌ನಲ್ಲಿ ನಡೆದಿದೆ. ಬೈಕ್ ಅನ್ನು ಬಿಸಿಲಿನಲ್ಲಿ ಬಹಳ ಹೊತ್ತು ನಿಲ್ಲಿಸಿದ್ದರಿಂದ ಸಿಲಿಂಡರ್‌ಗೆ ಹೆಚ್ಚು ಶಾಖ ತಗುಲಿ ಅದು ಸ್ಫೋಟಗೊಂಡಿದೆ’ ಎಂದು ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊದ ಕೀಫ್ರೇಮ್‌ಗಳನ್ನು ಇನ್‌ವಿಡ್ ಟೂಲ್ ಮೂಲಕ ಪ್ರತ್ಯೇಕಿಸಿ, ಒಂದು ಕೀಫ್ರೇಮ್ ಅನ್ನು ಗೂಗಲ್ ಲೆನ್ಸ್ ಮೂಲಕ ಪರಿಶೀಲನೆಗೊಳಪಡಿಸಿದಾಗ, ಇದೇ ವಿಡಿಯೊ ಅನ್ನು ಹಲವರು ಹಂಚಿಕೊಂಡಿರುವುದು ದೃಢಪಟ್ಟಿತು. ಈ ಹುಡುಕಾಟವು ‘ದಿ ಧುಮಕ್ಕಡ್’ ಎನ್ನುವ ಫೇಸ್‌ಬುಕ್ ಪುಟಕ್ಕೆ ಸಂಪರ್ಕ ಕಲ್ಪಿಸಿತು. ಅದರಲ್ಲಿ 2026ರ ಮಾರ್ಚ್ 17ರಂದು ವಿಡಿಯೊ ಅಪ್‌ಲೋಡ್ ಆಗಿದೆ. ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊ ಮೂಲ ಆ ಫೇಸ್‌ಬುಕ್ ಪುಟ ಎನ್ನುವುದು ಖಚಿತವಾಯಿತು. ವಿಡಿಯೊ ವಾಸ್ತವಿಕವಾದದ್ದಲ್ಲ; ಮನರಂಜನೆ ಮತ್ತು ಜಾಗೃತಿ ಮೂಡಿಸುವ ಸಲುವಾಗಿ ವಿಎಫ್‌ಎಕ್ಸ್ ಮತ್ತು ಎಡಿಟಿಂಗ್ ಸಾಧನ ಬಳಸಿ ರೂಪಿಸಲಾಗಿದೆ ಎಂದು ಉಲ್ಲೇಖಿಸಲಾಗಿದೆ. ಮನರಂಜನೆ ಮತ್ತು ಜಾಗೃತಿ ಮೂಡಿಸುವ ಸಲುವಾಗಿ ಆ ಫೇಸ್‌ಬುಕ್ ಪುಟದಲ್ಲಿ ಇಂಥ ಹಲವು ವಿಡಿಯೊಗಳನ್ನು ರೂಪಿಸಲಾಗಿದ್ದು, ಇವುಗಳನ್ನು ಗಂಭೀರವಾಗಿ ಪರಿಗಣಿಸಬೇಡಿ ಎಂದೂ ಉಲ್ಲೇಖಿಸಲಾಗಿದೆ. ಆದರೆ, ಕೆಲವರು ಈ ವಿಡಿಯೊ ಹಂಚಿಕೊಂಡು ಸುಳ್ಳು ಹರಡುತ್ತಿದ್ದಾರೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಪದಬಂಧ 6354

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬೇಸಾಯವನ್ನು ಹೀಗೂ ಹೇಳುವರು (3)
3.ಕವಿ ಕುಮಾರವ್ಯಾಸನು ಹುಟ್ಟಿದ ಜಿಲ್ಲೆ (3)
5.ರತ್ನಗಳ ಆಶ್ರಯಸ್ಥಾನ ಅಥವಾ ಸಮುದ್ರ (4)
6.ಈತ ಓದು ಬರಹ ಬಲ್ಲವನು (3)
10.ದೈನಂದಿನ ಸಮಾಚಾರವನ್ನು ತಿಳಿಸುವ ಪತ್ರಿಕೆ (7)
13.ಮಾದ ಎಸಗಿದ ತಪ್ಪು! (3)
15.ಸ್ವಂತವಾಗಿ ಗಳಿಸಿದ್ದು (4)
17.ಈತ ಕಬ್ಬಿಣದ ಕೆಲಸಗಾರ (3)
18.ಗುರುಗುಟ್ಟುತ್ತಿರುವ ಗಂಡು ಕುರಿ (3)

ಮೇಲಿಂದ ಕೆಳಕ್ಕೆ
1.ಕಷ್ಟಕಾಲಕ್ಕೆ ಒದಗುವ ಸಹಾಯಕ (4)
2.ಬಡಿವಾರ ತೋರುವಾಗ ಕ್ಷಾಮ ಬಂದಿತಲ್ಲಾ! (2)
3.ಪಗಡೆಯಾಟದ ದಾಳಗಳಿಂದ ಸೂಚಿತವಾಗುವ ಸಂಖ್ಯೆ (2)
4.ಬೆಳಕುಕಿಂಡಿ ಇಲ್ಲಿ ಕಾಣಿಸುತ್ತಿದೆ (3)
6.ಎಲ್ಲರಿಗೂ ಎಲ್ಲಕ್ಕೂ ಎಲ್ಲಕಾಲಕ್ಕೂ ಸಂಬಂಧಿಸಿದ್ದು (4)
7.ಪುಸ್ತಕದ ಮೇಲು ಹೊದಿಕೆ (2)
8.ದುಃಖಿತನಾದವನ ನಾದ! (4)
9.ಮಾನವುಳ್ಳ ಸ್ತ್ರೀ (3)
11.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ (2)
12.ಈ ಬಂದರು ನಗರ ದಕ್ಷಿಣಕನ್ನಡದ ಜಿಲ್ಲಾಕೇಂದ್ರ (4)
14.ಮಾಲಿಯ ಜೊತೆಗಿರುವ ಯಜಮಾನ (3)
15.ವರ್ಣಮಾಲೆಯಲ್ಲಿ ಇತರ ಅಕ್ಷರಗಳ ಸಹಾಯವಿಲ್ಲದೆ ಉಚ್ಚರಿಸಬಹುದಾದ ಅಕ್ಷರ (2)
16.ತಟಕ್ಕನೆ ತಲುಪಿದ ದಡ! (2)



6353ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4.ಪಾನು 5.ಚಂದನ
6.ಜನಜನಿತ 9.ಮಹರಾಜ
11.ಕಡಿತಲೆ 12.ಕಹಿನೆನಪು
15.ವಿಮಾನ 16.ರಾಜಿ

ಮೇಲಿಂದ ಕೆಳಕ್ಕೆ:
1.ಮನುಜ 2.ಅವನಿ
3.ಮಂದಮಾರುತ 7.ಜಲಜನಕ
8.ತಪ್ಪುಕಲ್ಪನೆ 10.ಹಾರಿಕೆಮಾತು
13.ಹಿಕ್ಮತ್ತು 14.ಪುರಾವೆ

ಸುಡೊಕು 6738

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

8		2		4		1		5
	1		8		9			
9		6			7	2		4
			1	6				7
	2			7	3	8		6
				8				
		8		9	2	5		1
1		5	7				4	
2		3		5	1	9		8

6737 ಸುಡೊಕು

2	8	3	5	7	9	1	4	6
5	1	4	6	2	8	7	3	9
7	6	9	4	1	3	8	5	2
3	2	8	1	9	4	6	7	5
6	5	1	7	3	2	9	8	4
4	9	7	8	5	6	3	2	1
9	4	2	3	6	7	5	1	8
1	3	6	2	8	5	4	9	7
8	7	5	9	4	1	2	6	3

ಪ್ರಯತ್ನವೇ ಫಲ

ನುಡಿ ಬೆಳಗು

ಪಿ.ಚಂದ್ರಿಕಾ

ಸೂಫಿಯೊಬ್ಬನಿಗೆ ಒಬ್ಬ ಗಂಟುಬಿದ್ದ, ‘ನಿನ್ನ ದೇವರನ್ನು ತೋರಿಸು. ನಾನೂ ನೋಡಬೇಕಿದೆ’ ಎಂದು. ‘ದೇವರು ತೋರುವ ವಸ್ತುವಲ್ಲ. ಪ್ರಯತ್ನದಿಂದ ಮಾತ್ರ ಅದನ್ನು ಸಾಧಿಸಬಲ್ಲ ಸ್ಥಿತಿ’ ಎಂದು ವಿವರಿಸಲು ನೋಡಿದ ಸೂಫಿ. ಆದರೆ, ಆ ವ್ಯಕ್ತಿ ತನ್ನ ಮೊಂಡುತನ ಬಿಡಲಿಲ್ಲ; ‘ಇದ್ದಾನೆ ಎಂದರೆ ತೋರಿಸು, ಇಲ್ಲದಿದರೆ ಇಲ್ಲ ಎಂದು ಒಪ್ಪಿಕೋ’ ಎಂದ.

ಇಬ್ಬರೂ ವಾದ ಮಾಡುತ್ತಾ ಬೆಳಿಗ್ಗೆ ಸಮುದ್ರದ ದಡಕ್ಕೆ ಬಂದರು. ಅಲ್ಲೊಬ್ಬ ಯಾರಿಗೋ ಕಾಯುತ್ತಾ ನಿಂತಿದ್ದ. ಮೀನುಗಾರರು ಮೀನನ್ನು ಹಿಡಿಯಲು ಹೊರಟರೆ, ಮುತ್ತುಗಳಿಗಾಗಿ ಶೋಧ ನಡೆಸುವವರ ದಂಡೂ ಸಮುದ್ರಕ್ಕಿಳಿಯುತ್ತಿತ್ತು. ನಿಂತಿದ್ದ ವ್ಯಕ್ತಿಯನ್ನು ನೋಡುತ್ತಾ ಇಬ್ಬರೂ ಮುಂದೆ ಹೋದರು. ವ್ಯಕ್ತಿ ಕೇಳಿದ, ‘ಅಯ್ಯಾ, ನೀನೊಬ್ಬ ಸೂಫಿ, ಅಂದರೆ ಬಲ್ಲವನು. ಆದರೆ, ನಾನು ಕೇಳಿದ ಒಂದಕ್ಕೂ ನಿನ್ನಲ್ಲಿ ಉತ್ತರವಿಲ್ಲ. ಅಂದರೆ, ನಿನಗೂ ದೇವರ ಇರುವಿನ ಬಗ್ಗೆ ತಿಳಿದಿಲ್ಲ ಎಂದು ನಾನು ನಂಬಬೇಕಾಗುತ್ತದೆ’ ಎಂದ. ‘ನನಗೆ ಗೊತ್ತಿರುವುದು ನನಗೆ ಮಾತ್ರ ಗೊತ್ತು, ನಿನಗೆ ಹೇಳಲಿಕ್ಕೆ ನನ್ನ ಬಳಿ ಪದವಿಲ್ಲ. ಯಾಕೆಂದರೆ, ದೇವರು ಒಂದು ಅನುಭವ. ಅದನ್ನು ನೀನೇ ಪಡೆದುಕೊಳ್ಳಬೇಕು’ ಎಂದ ಸೂಫಿ.

ವಾದ ಮುಗಿಯುತ್ತಿಲ್ಲ. ಸಂಜೆ ಮತ್ತೆ ಅವರು ಸಮುದ್ರದ ದಡದಲ್ಲಿ ಅಲೆಯುತ್ತಾ ಬಂದರು. ಮೀನುಗಾರರು ಬಲೆಯ ತುಂಬಾ ಮೀನು ತುಂಬಿ ತಂದರೆ, ಮುತ್ತುಗಾರರು ಮುತ್ತುಗಳ ಲೆಕ್ಕದಲ್ಲಿ ಸಂತೋಷದಲ್ಲಿದ್ದರು. ಈ ಗೌಜು ಗದ್ದಲದ ಮಧ್ಯೆ ಬೆಳಿಗ್ಗೆ ತಾವು ನೋಡಿದ ವ್ಯಕ್ತಿ ಇನ್ನೂ ಅಲ್ಲೇ ನಿಂತಿದ್ದನ್ನು ಗಮನಿಸಿ ಕುತೂಹಲದಿಂದ, ಕಾದು ನಿಂತವನ ಬಳಿಗೆ ಬಂದು, ‘ಅಣ್ಣ, ಬೆಳಿಗ್ಗೆ ಈ ದಾರಿಯಲ್ಲಿ ಹೋಗುವಾಗಲೂ ನೀನು ಇಲ್ಲೇ ನಿಂತಿದ್ದೆ. ಈಗಲೂ ಇಲ್ಲೇ ನಿಂತಿರುವೆ ಯಾಕೆ?’ ಎಂದ. ಕಾಯುತ್ತಿದ್ದವ ಆತಂಕದಿಂದ, ‘ನಾನು ಚರ್ಮದ ತೀವ್ರವಾದ ಕಾಯಿಲೆಯಿಂದ ನರಳುತ್ತಿರುವೆ. ವೈದ್ಯರು ಸಮುದ್ರ ಸ್ನಾನ ಎಲ್ಲಕ್ಕೂ ಪರಿಹಾರ ಎಂದಿದ್ದಾರೆ’ ಎಂದ. ‘ನಿನ್ನ ಮುಂದೆ ಅಗಾಧವಾದ ಸಮುದ್ರ ಭೋರ್ಗರೆಯುತ್ತಲೇ ಇದೆಯಲ್ಲ. ಸ್ನಾನ ಮಾಡಲಿಕ್ಕೆ ಇರುವ ಅಡ್ಡಿಯಾದರೂ ಏನು’ ಎಂದ ವ್ಯಕ್ತಿ. ಸಮುದ್ರದ ತಡದಲ್ಲಿ ನಿಂತವ ಹೇಳಿದ, ‘ಅದೇ ನನ್ನ ಸಮಸ್ಯೆ. ಬೆಳಿಗ್ಗೆಯಿಂದ ಕಾಯುತ್ತಲೇ ಇದ್ದೇನೆ, ಸಮುದ್ರದ ಅಲೆಗಳು ಸ್ವಲ್ಪವಾದರೂ ಕಡಿಮೆಯಾಗುತ್ತವೆಂದು. ಆದರೆ, ಸಂಜೆಯಾಗುತ್ತಾ ಅಲೆಗಳು ಜೋರಾಗುತ್ತಿವೆ’. ವ್ಯಕ್ತಿ ಅವನನ್ನು ಬಯ್ಯಲಿಕ್ಕೆ ಶುರು ಮಾಡಿದ, ‘ಬುದ್ಧಿ ಕೆಟ್ಟವನೇ, ಸ್ನಾನ ಮಾಡುವುದೇ ನಿನ್ನ ಉದ್ದೇಶವಾದರೆ, ಸಮುದ್ರಕ್ಕಿಳಿ’ ಎಂದ. ಇಬ್ಬರ ನಡುವೆ ಜಗಳ ಶುರುವಾಯಿತು. ಕೋಪಗೊಂಡ ವ್ಯಕ್ತಿ ಕಾಯುತ್ತಿದ್ದವನನ್ನು ಸಮುದ್ರಕ್ಕೆ ನೂಕಿಬಿಟ್ಟ.

ಸೂಫಿ ಕೇಳಿದ: ‘ಅದ್ಯಾಕೆ ಹಾಗೆ ಮಾಡಿದೆ?’. ‘ಮತ್ತಿನ್ನೇನು, ಪ್ರಯತ್ನವೇ ಇಲ್ಲದೆ ಸುಮ್ಮನೆ ನಿಂತರೆ ಸ್ನಾನ ಮಾಡಲಾದೀತೇ?’ ಎಂದ ವ್ಯಕ್ತಿ. ಸೂಫಿ ನಕ್ಕ, ‘ಅವನಿಗೆ ಸರಿಯಾಗಿಯೇ ಹೇಳಿದೆ. ನೀನು ಮಾತ್ರ ದಂಡೆಯಲ್ಲೇ ನಿಂತು ಯೋಚಿಸುತ್ತಿರುವೆ’. ‘ನಾನು ಅವನಷ್ಟು ಮೂರ್ಖ ಅಲ್ಲ’ ಎಂದ ಮುನಿಸಿನಿಂದ ವ್ಯಕ್ತಿ. ಸೂಫಿ ಅವನ ಕಣ್ಣಲ್ಲಿ ಕಣ್ಣಿಟ್ಟು ಕೇಳಿದ: ‘ಪ್ರಯತ್ನವಿಲ್ಲದೇ ಯಾವುದೂ ದಕ್ಕುವುದಿಲ್ಲ ಎನ್ನುವ ಸಾಮಾನ್ಯ ಜ್ಞಾನ ಇರುವ ನೀನು, ದೇವರನ್ನು ನೋಡಲು ನನ್ನ ಮೇಲೆ ಯಾಕೆ ಅವಲಂಬಿತನಾಗಿರುವೆ?’.

ನಮ್ಮ ಅರಿವು ಅನಂತದೊಂದಿಗೆ ಸಂಧಿಸುವ ಕ್ಷಣವೇ ಎಚ್ಚರ. ಅದನ್ನು ಪಡೆದುಕೊಳ್ಳಲು ನಮ್ಮ ಪ್ರಯತ್ನ ಇಲ್ಲದಿದ್ದರೆ ಹೇಗೆ ಅಲ್ಲವೇ? ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

26 ಮಾರ್ಚ್ 2026 ಗುರುವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ಅಷ್ಟಮಿ ಗಂ. 11-49 ನಕ್ಷತ್ರ: ಆರ್ದ್ರಾ ಗಂ. 16-19 ಯೋಗ: ಶೋಭನ ಗಂ. 24-32 ಕರಣ: ಬವ 11-49 ಮೀನ ಮಾಸದ 12 ನೇ ದಿನ. ಮಳೆ ನಕ್ಷತ್ರ : ಉತ್ತರಾಭಾದ್ರ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 01-30 - 03-00 ಸೂರ್ಯೋದಯ : 06-34 ಸೂರ್ಯಾಸ್ತ : 06-38, ಮುಸ್ಲಿಂ ದಿನಾಂಕ : 6 ಶವ್ವಾಲ್, ದಿನ ವಿಶೇಷ : ಅಶೋಕಾಷ್ಟಮಿ, ಅದೃಷ್ಟ ಸಂಖ್ಯೆ : 6, 2

ಮೇಷ: ಗಣ್ಯ ವ್ಯಕ್ತಿಗಳಿಗೆ ಸಮಾಜದಲ್ಲಿ ಅಥವಾ ರಾಜಕೀಯ ಕ್ಷೇತ್ರದಲ್ಲಿ ಪುರಸ್ಕಾರ ಲಭಿಸಲಿದೆ. ಔಷಧ ಪದಾರ್ಥಗಳ ಮಾರಾಟದಿಂದ ಲಾಭ. ವೈದ್ಯರು ಜಾಗ್ರತೆ ವಹಿಸಿ.

ವೃಷಭ: ಆಹಾರ ಪದಾರ್ಥಗಳ ವ್ಯಾಪಾರ ಮಾಡುವವರಿಗೆ ಶ್ರಮಕ್ಕೆ ತಕ್ಕಷ್ಟು ಆದಾಯ ಇರಲಿದೆ. ಭಾವನಾತ್ಮಕ ಸಂಬಂಧಗಳನ್ನು ಬೆಳೆಸಲು ಸಕಾಲ. ಮನಸ್ಸಿಗೆ ಹಿತವಾದ ಅನುಭವ ಸಿಗಲಿದೆ.

ಮಿಥುನ: ಅಂಕಣಕಾರರಿಗೆ ಅಥವಾ ವೃತ್ತಿ ಬರಹಗಾರರಿಗೆ ವಿಪುಲ ಅವಕಾಶಗಳು ದೊರೆಯಲಿವೆ. ಕೆಲಸ ಮುಗಿಯುವ ಹೊತ್ತಿಗೆ ಆಯಾಸ ಹೆಚ್ಚಲಿದೆ.

ಕರ್ಕಾಟಕ: ಉದ್ಯಮಿಗಳಿಗೆ ಕಾರ್ಮಿಕರ ಬದಲಾವಣೆ ವಿಷಯಗಳು ಹಲವು ರೀತಿಯಲ್ಲಿ ನಷ್ಟ ಉಂಟು ಮಾಡುತ್ತದೆ. ಮರ ಕೆತ್ತನೆಯ ಕೆಲಸಗಾರರಿಗೆ, ಕಟ್ಟಡ ಕಾರ್ಮಿಕರಿಗೆ ಅನುಕೂಲ ಇರಲಿದೆ.

ಸಿಂಹ: ಕೋರ್ಟ್ ವ್ಯವಹಾರಗಳು ಬಗೆಹರಿಯಬಹುದೆಂಬ ಆಲೋಚನೆ ಸರಿಯಾಗಿದೆ. ವಿದ್ಯುತ್‌ನಿಂದಾಗಿ ಅಥವಾ ಅಗ್ನಿಯಿಂದಾಗಲೀ ಅಪಘಾತಗಳು ಸಂಭವಿಸಬಹುದು.

ಕನ್ಯಾ: ರಾಜಕೀಯ ವ್ಯಕ್ತಿಗಳಿಗೆ ಪ್ರಗತಿ ಇದ್ದು ಸಾಮಾಜಿಕವಾಗಿ ಸ್ಥಾನಮಾನ ಹಾಗೂ ಗೌರವ ಪ್ರಾಪ್ತಿ. ಮುಂಜಾನೆಯಿಂದಲೇ ಅತಿ ಉತ್ಸಾಹ ತೋರಿಸುವಿರಿ. ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

ತುಲಾ: ಹೊಣೆಗಾರಿಕೆಯನ್ನು ಹೊರಲು ಸಿದ್ಧರಾಗಿರುವಿರಿ ಮತ್ತು ಶಕ್ತರಾಗಿರುವಿರಿ. ನೆರೆಯವರ ಸಹಾಯ ದೊರಕಲಿದೆ. ವೆಂಕಟೇಶ್ವರನ ಆರಾಧನೆಯಿಂದ ಯಶಸ್ಸು ಸಿಗಲಿದೆ.

ವೃಶ್ಚಿಕ: ಹೊಸ ಉದ್ಯಮ ಅಥವಾ ವ್ಯಾಪಾರ ಪ್ರಾರಂಭಿಸುವ ಆಲೋಚನೆಗಳು ಬರಲಿವೆ. ಅನಾರೋಗ್ಯವನ್ನು ನಿಯಮಿತ ಆಹಾರ ಸೇವನೆಯಿಂದ ಸರಿಪಡಿಸಿಕೊಳ್ಳಬಹುದು.

ಧನು: ವೃತ್ತಿರಂಗದಲ್ಲಿ ಅನವಶ್ಯಕವಾಗಿ ಇತರರ ಕೋಪಕ್ಕೆ ಗುರಿಯಾಗುವ ಸನ್ನಿವೇಶ ಇರಲಿದೆ. ಮಕ್ಕಳಿಗೆ ವಿದೇಶದಲ್ಲಿ ಶಿಕ್ಷಣ ಕೊಡಿಸಲು ಸಂಘಗಳು ನೆರವಾಗಲಿವೆ. ಕೊಟ್ಟ ಮಾತನ್ನು ಉಳಿಸಿ ಕೊಳ್ಳಿ.

ಮಕರ: ದುಡುಕು ಸ್ವಭಾವದಿಂದ ಅಣ್ಣ–ತಮ್ಮಂದಿರ ಬಾಂಧವ್ಯಕ್ಕೆ ಹಾನಿಯಾಗಬಹುದು. ಅಕ್ಕ-ಪಕ್ಕದವರ ಹಾವಭಾವಗಳಿಂದ ಬೇಸರಗೊಂಡು ಜೀವನ ಪಾಠವನ್ನು ಕಲಿಯಿರಿ.

ಕುಂಭ: ಕೈಗಾರಿಕೋದ್ಯಮಿಗಳು ಲಾಭದಾಯಕ ಅವಕಾಶಗಳನ್ನು ತಮ್ಮದಾಗಿಸಿಕೊಳ್ಳುವಲ್ಲಿ ಬುದ್ಧಿವಂತಿಕೆಯನ್ನು ಉಪಯೋಗಿಸುವುದು ಉತ್ತಮ. ಮಿತ ಆಹಾರ ಸೇವನೆಯಿಂದ ಆರೋಗ್ಯ ಉತ್ತಮವಾಗಿರುವುದು.

ಮೀನ: ಕುಟುಂಬಕ್ಕೆ ನವ ಶಿಶುವಿನ ಆಗಮನದಿಂದಾಗಿ ಅಪರಿಮಿತ ಸಂತೋಷ ಉಂಟಾಗಲಿದೆ. ಕಷ್ಟಗಳನ್ನು ಎದುರಿಸುವ ಆತ್ಮವಿಶ್ವಾಸವನ್ನು ಹೊಂದುವಿರಿ. ಅಬಕಾರಿ ಗುತ್ತಿಗೆದಾರರಿಗೆ ಆದಾಯ ಹೆಚ್ಚುವುದು.

ಗುಂಡಣ್ಣ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 22,912
ಇಂದಿನ ಅಂತ್ಯ: 23,306
ದಿನದ ಕನಿಷ್ಠ: 23,063
394

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹445
12 ಕ್ಕೆ ₹66
ಮೈಸೂರು: 100 ಕ್ಕೆ ₹447

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹425-777
ದ್ವಿತಳಿ (ಬಿ.ವಿ) ₹381-877

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹212.50
ಆರ್‌ಎಸ್‌ಎಸ್-5 ₹206.50
ಗುಡ್ ಲಾಟ್ ₹188.50

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1760 (1770)
ಸೋಯಾ (ರಿಫೈನ್ಡ್) ₹1540 (1550)
ಸೂರ್ಯಕಾಂತಿ (ರಿಫೈನ್ಡ್) ₹1720 (1730)
ಪಾಮೋಲಿನ್ ₹1435 (1440)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ತುಳ್ಳ ₹8000-8000
ಅರಸೀಕೆರೆ ₹10000-16500

ಶಾಂತಿಯ ನಿರೀಕ್ಷೆ, ಪೇಟೆಯಲ್ಲಿ ಚೇತರಿಕೆ

100 ಡಾಲರ್‌ಗಿಂತ ಕೆಳಕ್ಕೆ ಬಂದ ಕಚ್ಚಾ ತೈಲದ ಬೆಲೆ

ಮುಂಬೈ (ಪಿಟಿಐ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಇಳಿಕೆ ಹಾಗೂ ಜಾಗತಿಕ ಷೇರುಪೇಟೆಗಳಲ್ಲಿ ನಡೆದ ತೇಜಿ ವಹಿವಾಟಿನ ಪರಿಣಾಮವಾಗಿ ಭಾರತದ ಷೇರುಪೇಟೆಗಳು ಬುಧವಾರದ ವಹಿವಾಟಿನಲ್ಲಿ ಏರಿಕೆ ದಾಖಲಿಸಿದವು.

ಪಶ್ಚಿಮ ಏಷ್ಯಾದಲ್ಲಿ ಸಮರದ ತೀವ್ರತೆ ತಗ್ಗಬಹುದು ಎಂಬ ಆಶಾಭಾವನೆಯು ಷೇರುಗಳ ಖರೀದಿಗೆ ಹೂಡಿಕೆದಾರರು ಹೆಚ್ಚು ಗಮನ ನೀಡುವಂತೆ ಮಾಡಿತು ಎಂದು ವರ್ತಕರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 1,205 ಅಂಶ ಏರಿಕೆ ಕಂಡಿದೆ. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 394 ಅಂಶ ಜಿಗಿದಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರಲ್‌ಗೆ ಶೇ 5.07ರಷ್ಟು ಕಡಿಮೆ ಆಗಿ 99.19 ಡಾಲರ್‌ಗೆ ತಲುಪಿದೆ.

'ಮಂಗಳವಾರದ ವಹಿವಾಟಿನಲ್ಲಿ ಏರಿಕೆ ದಾಖಲಿಸಿದ್ದ ಷೇರುಪೇಟೆ ಸೂಚ್ಯಂಕಗಳು, ಬುಧವಾರವೂ ಏರುಗತಿಯಲ್ಲಿ ವಹಿವಾಟು ನಡೆಸಿದವು. ಜಾಗತಿಕ ಮಟ್ಟದಲ್ಲಿ ರಿಸ್ಕ್ ಕುರಿತಾದ ತಲೆಬಿಸಿ ಕಡಿಮೆ ಆಗಿದೆ, ಯುದ್ಧ ನಿಲ್ಲಬಹುದು ಎಂಬ ಆಸೆ ಮೂಡುತ್ತಿದೆ. ಅಮೆರಿಕ ಮತ್ತು ಇರಾನ್ ನಡುವೆ ಮಾತುಕತೆಯಲ್ಲಿ ಪ್ರಗತಿ ಸಾಧ್ಯವಾಗಬಹುದು ಎಂಬ ಕಾರಣಕ್ಕೆ ಕಚ್ಚಾ ತೈಲದ ಬೆಲೆಯು 100 ಡಾಲರ್‌ಗಿಂತ ಕಡಿಮೆ ಆಗಿದೆ. ಇದನ್ನು ಷೇರುಪೇಟೆಗಳು ಸ್ವಾಗತಿಸಿವೆ' ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬುಧವಾರ ಷೇರುಪೇಟೆಯ ಎಲ್ಲ ವಲಯಗಳ ಸೂಚ್ಯಂಕಗಳು ಏರಿಕೆ ಕಂಡಿವೆ.

ಏಷ್ಯಾದಲ್ಲಿ ದಕ್ಷಿಣ ಕೊರಿಯಾ, ಜಪಾನ್, ಚೀನಾದ ಶಾಂಘೈ, ಹಾಂಗ್ ಕಾಂಗ್‌ನ ಷೇರುಪೇಟೆಗಳು ಏರಿಕೆ ದಾಖಲಿಸಿವೆ.

'ಅಮೆರಿಕ ಮತ್ತು ಇರಾನ್ ನಡುವಿನ ಸಂಘರ್ಷವು ತಿಳಿಯಾಗಬಹುದು ಎಂಬ ಸೂಚನೆಗಳು ಸಿಕ್ಕಿರುವುದು ಹೂಡಿಕೆದಾರರಲ್ಲಿ ಭರವಸೆ ಮೂಡಲು ಮುಖ್ಯ ಕಾರಣ' ಎಂದು ಲಿವ್‌ಲಾಂಗ್ ವೆಲ್ತ್ ಸಂಸ್ಥೆಯ ಸಂಶೋಧನಾ ವಿಶ್ಲೇಷಕ ಹರಿಪ್ರಸಾದ್ ಕೆ. ಹೇಳಿದ್ದಾರೆ.

ಸಂಪತ್ತು ಮೌಲ್ಯ ಏರಿಕೆ, ರೂಪಾಯಿ ಇನ್ನಷ್ಟು ಕುಸಿತ

ನವದೆಹಲಿ/ಮುಂಬೈ (ಪಿಟಿಐ): ಎರಡು ದಿನಗಳಿಂದ ಷೇರುಪೇಟೆಗಳಲ್ಲಿ ತೇಜಿ ವಹಿವಾಟು ನಡೆದ ಪರಿಣಾಮವಾಗಿ ಹೂಡಿಕೆದಾರರ ಸಂಪತ್ತು ₹15.80 ಲಕ್ಷ ಕೋಟಿಯಷ್ಟು ಹೆಚ್ಚಾಗಿದೆ.

ಎರಡು ದಿನಗಳ ವಹಿವಾಟಿನಲ್ಲಿ ಸೆನ್ಸೆಕ್ಸ್ 2,577 ಅಂಶ ಜಿಗಿದಿದೆ. ಈಗ ಬಿಎಸ್‌ಇ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯವು ₹431 ಲಕ್ಷ ಕೋಟಿ ಆಗಿದೆ.

ಬುಧವಾರದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 20 ಪೈಸೆಯಷ್ಟು ಕುಸಿದು 93.96ಕ್ಕೆ ತಲುಪಿದೆ. ಇದು ಡಾಲರ್ ಎದುರು ರೂಪಾಯಿಯ ಈವರೆಗಿನ ಕನಿಷ್ಠ ಮಟ್ಟವಾಗಿದೆ.

ಜಾಗತಿಕ ಮಾರುಕಟ್ಟೆಗಳಲ್ಲಿ ಕಚ್ಚಾ ತೈಲದ ಬೆಲೆ ಇಳಿಕೆ, ಡಾಲರ್ ದುರ್ಬಲಗೊಂಡಿದ್ದು ಹಾಗೂ ದೇಶದ ಷೇರುಪೇಟೆಗಳಲ್ಲಿ ತೇಜಿ ವಹಿವಾಟು ನಡೆದರೂ ರೂಪಾಯಿ ಮೌಲ್ಯ ಕುಸಿತ ತಡೆಯಲು ಆಗಿಲ್ಲ ಎಂದು ವರ್ತಕರು ತಿಳಿಸಿದ್ದಾರೆ.

'ಹೂಡಿಕೆಗೆ ಮುಂದಾದ ಎನ್‌ಆರ್‌ಐಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ಏಷ್ಯಾದಲ್ಲಿ ಯುದ್ಧ ಆರಂಭವಾದ ನಂತರದಲ್ಲಿ ಆ ಪ್ರದೇಶಗಳಲ್ಲಿನ ಅನಿವಾಸಿ ಭಾರತೀಯರು (ಎನ್‌ಆರ್‌ಐ) ಇಲ್ಲಿನ ರಿಯಲ್ ಎಸ್ಟೇಟ್ ವಲಯದಲ್ಲಿ ಹೂಡಿಕೆಗೆ ಅವಕಾಶ ಅರಸಿ ಸಂಪರ್ಕಿಸುವುದು ಹೆಚ್ಚಾಗಿದೆ ಎಂದು ಪುರವಂಕರ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಆಶಿಷ್ ಪುರವಂಕರ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಭಾರತದಲ್ಲಿ ಹೂಡಿಕೆ ಮಾಡುವ ಉದ್ದೇಶದೊಂದಿಗೆ ಮಾಹಿತಿ ಪಡೆಯಲು, ವಿಚಾರಿಸಲು ಮಾಡುವ ಕರೆಗಳು ಶೇ 50ರಷ್ಟು ಹೆಚ್ಚಾಗಿದೆ. ದಿನಕ್ಕೆ 200ಕ್ಕೂ ಹೆಚ್ಚು ಕರೆಗಳು ಬರುತ್ತಿವೆ' ಎಂದರು ತಿಳಿಸಿದರು.

ಯುದ್ಧದ ಕಾರಣದಿಂದಾಗಿ ಕಚ್ಚಾ ತೈಲದ ಬೆಲೆಯಲ್ಲಿ ಆಗಿರುವ ಏರಿಕೆ ಹಾಗೂ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ಪರಿಣಾಮದ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, 'ಯುದ್ಧದಿಂದಾಗಿ ನಿರ್ಮಾಣ ಕೆಲಸಗಳಲ್ಲಿ ಬಳಕೆ ಮಾಡುವ ಬೇರೆ ಬೇರೆ ಉತ್ಪನ್ನಗಳ ಬೆಲೆ ಹೆಚ್ಚಳ ಆಗುತ್ತಿದೆ. ಹೀಗಾಗಿ ಮಾರಾಟಕ್ಕೆ ಇರುವ ಆಸ್ತಿಗಳ ಬೆಲೆ ಹೆಚ್ಚಳದ ಬಗ್ಗೆ ಪರಿಶೀಲನೆ ನಡೆಸಲಾಗುತ್ತದೆ' ಎಂದು ತಿಳಿಸಿದರು.

ಕಂಪನಿಯು ಮುಂದಿನ ಎರಡು ವರ್ಷಗಳಲ್ಲಿ ಒಟ್ಟು 30 ವಸತಿ ಯೋಜನೆಗಳನ್ನು ದೇಶದ ದಕ್ಷಿಣ ಹಾಗೂ ಪಶ್ಚಿಮ ಭಾಗಗಳಲ್ಲಿ ಆರಂಭಿಸಲಿದೆ, ಇದರಿಂದ ಅಂದಾಜು ₹35 ಸಾವಿರ ಕೋಟಿ ವರಮಾನದ ನಿರೀಕ್ಷೆ ಇದೆ ಎಂದು ಕೂಡ ಅವರು ಹೇಳಿದರು.

ಮುಂಬೈ ಧಾರಣೆ (ಶೇಂಗಾ)
25-03-2026

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800

ಪರಮಾಣು ದುರಂತ: ಸಂಯಮದಿಂದ ಇರಲು ಸಲಹೆ

ಅಣ್ವಸ್ತ್ರ ಬಲ ಹೆಚ್ಚಿಸಿಕೊಂಡ ಇಸ್ರೇಲ್

ಕ್ವೀನ್ಸ್‌ಲ್ಯಾಂಡ್ (ಎಪಿ): ಇರಾನ್‌ನ ಪರಮಾಣು ಕಾರ್ಯಕ್ರಮವನ್ನು ನಾಶಮಾಡುವ ನಿಟ್ಟಿನಲ್ಲಿ ಯುದ್ಧ ಮುಂದುವರಿಸಿರುವುದಾಗಿ ಇಸ್ರೇಲ್ ವಾದಿಸುತ್ತಿದೆ. ಆದರೆ, ಸ್ವತಃ ಇಸ್ರೇಲ್ ತನ್ನ ಅಣ್ವಸ್ತ್ರ ಬಲವನ್ನು ಎರಡು ಪಟ್ಟು ಹೆಚ್ಚಿಸಿಕೊಂಡಿದೆ ಎಂಬ ವಿಶ್ಲೇಷಣೆಗಳು ನಡೆಯುತ್ತಿವೆ.

'ಇಸ್ರೇಲ್ ಅಪಾರ ಪ್ರಮಾಣದಲ್ಲಿ ಅಣ್ವಸ್ತ್ರ ಸಂಗ್ರಹ ಹೊಂದಿದೆ. ಇದು ಪರಮಾಣು ರಾಜಕೀಯ ಜಗತ್ತಿನ ಅತಿ ಕೆಟ್ಟ ರಹಸ್ಯ. 1950ರ ದಶಕದಿಂದಲೇ ಇಸ್ರೇಲ್ ಪರಮಾಣು ಶಸ್ತ್ರಾಸ್ತ್ರಗಳ ಅಭಿವೃದ್ಧಿಯಲ್ಲಿ ತೊಡಗಿದ್ದು, 1960ರ ವೇಳೆಗಾಗಲೇ ಸಂಪೂರ್ಣ ಅಣ್ವಸ್ತ್ರ ಸಾಮರ್ಥ್ಯ ಹೊಂದಿದ ದೇಶವಾಗಿತ್ತು' ಎಂದು ಮೂಲಗಳು ಹೇಳಿವೆ.

ಇಸ್ರೇಲ್ ತನ್ನ ಅಣ್ವಸ್ತ್ರ ಬಲವನ್ನು ಇದುವರೆಗೆ ಖಚಿತಪಡಿಸಿಲ್ಲ, ತಳ್ಳಿಹಾಕಿಯೂ ಇಲ್ಲ. ಅಣ್ವಸ್ತ್ರ ನಿಯಂತ್ರಣ ಸಂಸ್ಥೆಗಳ ಲೆಕ್ಕಾಚಾರದಂತೆ ಇಸ್ರೇಲ್ ಬಳಿ 80ರಿಂದ 90ರಷ್ಟು ಅಣ್ವಸ್ತ್ರಗಳಿವೆ.

'ಪರಮಾಣು ದುರಂತವನ್ನು ತಪ್ಪಿಸಲು ರಾಷ್ಟ್ರಗಳು ಸಂಯಮ ದಿಂದ ಇರಬೇಕು' ಎಂದು ಅಂತರರಾಷ್ಟ್ರೀಯ ಅಣುಶಕ್ತಿ ಸಂಸ್ಥೆ ಕರೆ ನೀಡಿದೆ. 2015ರಲ್ಲಿ ಇರಾನ್ ಪರಮಾಣು ಒಪ್ಪಂದಕ್ಕೆ ಸಹಿ ಹಾಕಿತು. ಅಮೆರಿಕ, ರಷ್ಯಾ, ಚೀನಾ, ಫ್ರಾನ್ಸ್, ಬ್ರಿಟನ್ ಮತ್ತು ಜರ್ಮನಿ ಜತೆಗೆ, ಪರಮಾಣು ಕಾರ್ಯಕ್ರಮದ ಜಂಟಿ ಸಮಗ್ರ ಕ್ರಿಯಾ ಯೋಜನೆಗೆ ಸಹಿ ಹಾಕಿದೆ.

> **ಪಶ್ಚಿಮ ಏಷ್ಯಾ ಸಂಘರ್ಷವು ನಿಯಂತ್ರಣ ಮೀರಿದೆ. ಗಾಜಾಪಟ್ಟಿಯ ಮಾದರಿಯನ್ನು ಲೆಬನಾನ್‌ನಲ್ಲಿ ಪುನರಾವರ್ತಿಸಬಾರದು**
> **ಆಂಟನಿಯೊ ಗುಟೆರಸ್,** ವಿಶ್ವಸಂಸ್ಥೆಯ ಮಹಾಪ್ರಧಾನಕಾರ್ಯದರ್ಶಿ

ಒಪ್ಪಂದದ ಪ್ರಸ್ತಾವ ತಿರಸ್ಕರಿಸಿದ ಇರಾನ್

ಒಂದನೇ ಪುಟದಿಂದ...

ಶುಕ್ರವಾರದ ಒಳಗೆ, ಪಾಕಿಸ್ತಾನದಲ್ಲಿ ಇರಾನ್ ಮತ್ತು ಅಮೆರಿಕ ನಡುವೆ ನೇರ ಮಾತುಕತೆಗೆ ಮಧ್ಯಸ್ಥಿಕೆದಾರರು ಪ್ರಯತ್ನಿಸುತ್ತಿದ್ದಾರೆ ಎಂದು ಈಜಿಪ್ಟ್ ಮತ್ತು ಪಾಕಿಸ್ತಾನದ ಅಧಿಕಾರಿಗಳಿಬ್ಬರು ಹೇಳಿದ್ದಾರೆ.

'ಸೋಲನ್ನು ಒಪ್ಪಂದ ಎನ್ನಬೇಡಿ'

ದುಬೈ (ಎಪಿ): 'ನಿಮ್ಮ ಸೋಲನ್ನು ಕದನ ವಿರಾಮ ಒಪ್ಪಂದ ಎಂದು ಕರೆಯಬೇಡಿ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಗೇಲಿ ಮಾಡಿರುವ ಇರಾನ್ ಸೇನೆ, 'ಯುದ್ಧ ಕೊನೆಗೊಳಿಸುವ ನಿಟ್ಟಿನಲ್ಲಿ ಮಾತುಕತೆ ನಡೆದೇ ಇಲ್ಲ' ಎಂದು ಸ್ಪಷ್ಟಪಡಿಸಿದೆ.

'ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗಾಣಿಸುವ ನಿಟ್ಟಿನಲ್ಲಿ 15 ಅಂಶಗಳ ಯೋಜನೆಯೊಂದಿಗೆ ಅಮೆರಿಕದ ಅಧಿಕಾರಿಗಳು ಇರಾನ್ ಜತೆಗೆ ಮಾತುಕತೆ ನಡೆಸಿದ್ದಾರೆ' ಎಂಬ ಟ್ರಂಪ್ ಹೇಳಿಕೆಗೆ ಇರಾನ್ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದೆ.

'ಯುದ್ಧ ಆರಂಭಗೊಂಡ ಮೊದಲ ದಿನದಿಂದಲೂ ನಮ್ಮ ಮೊದಲ ಮತ್ತು ಕೊನೆಯ ಮಾತು ಒಂದೇ ಆಗಿದೆ. ಮುಂದೆಯೂ ಅದು ಹಾಗೆಯೇ ಇರುತ್ತದೆ. ನಮ್ಮಂಥವರು ನಿಮ್ಮ ತರಹದ ದೇಶದೊಂದಿಗೆ ಎಂದಿಗೂ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ. ಈಗ ಮಾತ್ರವಲ್ಲ, ಮುಂದೆಂದೂ ಇಲ್ಲ' ಎಂದು ಇರಾನ್ ಸೇನೆಯ ವಕ್ತಾರ ಇಬ್ರಾಹಿಂ ಜೋಲ್ಫಾಘರಿ ಹೇಳಿದ್ದಾರೆ.

ಕದನ ವಿರಾಮ: ಹೆಚ್ಚಿದ ಅನಿಶ್ಚಿತತೆ

ಒಂದನೇ ಪುಟದಿಂದ...

ಮಧ್ಯಸ್ಥಿಕೆಗೆ ಮುಂದಾದ ಪಾಕಿಸ್ತಾನ

:'ಅಂತರರಾಷ್ಟ್ರೀಯ ಅಣುಶಕ್ತಿ ಸಂಸ್ಥೆ (ಐಎಇಎ) ನಿಗಾದಲ್ಲಿ ಇರಾನ್ ಪರಮಾಣು ಯೋಜನೆ ಕೈಗೆತ್ತಿಕೊಳ್ಳುವುದು, ಹೊರ್ಮುಜ್ ಜಲಸಂಧಿಯ ಮೂಲಕ ತೈಲ ಹಡಗುಗಳ ಮುಕ್ತ ಸಂಚಾರಕ್ಕೆ ಅನುಮತಿ ನೀಡುವುದು, ಕ್ಷಿಪಣಿ ತಯಾರಿಕೆಯನ್ನು ಸೀಮಿತಗೊಳಿಸುವುದು ಸೇರಿದಂತೆ ಹಲವು ಅಂಶಗಳು ಅಮೆರಿಕದ ಪ್ರಸ್ತಾವದಲ್ಲಿವೆ' ಎಂದು ಮೂಲಗಳು ಹೇಳಿವೆ.

ಪಾಕಿಸ್ತಾನದಲ್ಲಿರುವ ಇರಾನ್‌ನ ರಾಯಭಾರ ಅಧಿಕಾರಿ ರೆಜಾ ಅಮೀರಿ ಮೊಗದಂ, 'ಅಮೆರಿಕವು ಇದುವರೆಗೆ ನೇರವಾಗಿ ಅಥವಾ ಪರೋಕ್ಷವಾಗಿ ಇರಾನ್ ಜತೆಗೆ ಯಾವುದೇ ಮಾತುಕತೆ ನಡೆಸಿಲ್ಲ' ಎಂದಿದ್ದಾರೆ.

ಸುದ್ದಿ 2 ನಿಮಿಷ

ವಾರಸುದಾರರಿಲ್ಲದ ಹಣ ಆರ್‌ಬಿಐಗೆ ವರ್ಗಾವಣೆ

ನವದೆಹಲಿ (ಪಿಟಿಐ): 'ಪ್ರಸಕ್ತ ವರ್ಷದ ಜನವರಿ ಅಂತ್ಯದ ವೇಳೆಗೆ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ವಾರಸುದಾರರಿಲ್ಲದ ₹60,518 ಕೋಟಿಯಷ್ಟು ಮೊತ್ತವನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿಗೆ (ಡಿಇಎ) ವರ್ಗಾಯಿಸಿವೆ' ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ರಾಜ್ಯಸಭೆಗೆ ಮಂಗಳವಾರ ತಿಳಿಸಿದ್ದಾರೆ.

ಫೆಬ್ರುವರಿ ಅಂತ್ಯದ ವೇಳೆಗೆ ವಿಮಾ ಕಂಪನಿಗಳ ಬಳಿ ಕ್ಲೇಮ್ ಮಾಡದ ವಿಮಾ ಮೊತ್ತ ₹8,973 ಕೋಟಿಯಷ್ಟಿದ್ದರೆ, ಸೆಬಿ ಬಳಿ ಮ್ಯೂಚುವಲ್ ಫಂಡ್‌ನಲ್ಲಿನ ಕ್ಲೇಮ್ ಮಾಡದ ₹3,749 ಕೋಟಿಯಷ್ಟಿದೆ ಎಂದು ಹೇಳಿದ್ದಾರೆ.



ಹಕ್ಕುದಾರರನ್ನು ಗುರುತಿಸಿ, ಅವರಿಗೆ ಮೊತ್ತವನ್ನು ವಿತರಿಸಲಾಗುತ್ತಿದೆ. ಇದಕ್ಕಾಗಿ, ಹಲವಾರು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಪಾಕಿಸ್ತಾನ: ಅಹ್ಮದೀಯರ ಆಚರಣೆಗೆ ನಿರ್ಬಂಧ

ಲಾಹೋರ್ (ಪಿಟಿಐ): ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಹಲವು ಜಿಲ್ಲೆಗಳಲ್ಲಿ ಅಲ್ಪಸಂಖ್ಯಾತ ಅಹ್ಮದಿ ಸಮುದಾಯದ ಜನರು ಈದ್ ಹಬ್ಬದಂದು ತಮ್ಮ ಆಚರಣೆಗಳನ್ನು ನಡೆಸದಂತೆ ಪೊಲೀಸರು ನಿರ್ಬಂಧಿಸಿದ್ದಾರೆ ಎಂದು ಜಮಾತ್ ಅಹ್ಮದೀಯ ಪಾಕಿಸ್ತಾನ (ಜೆಎಪಿ) ಬುಧವಾರ ಆರೋಪಿಸಿದೆ.

ಗುಜ್ರನ್‌ವಾಲಾ, ಸೈಲ್‌ಕೋಟ್, ಫೈಸಲಾಬಾದ್, ಸರ್ಗೋದಾ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿರುವ ಅಹ್ಮದೀಯರ ಪ್ರಾರ್ಥನಾ ಸ್ಥಳಗಳನ್ನು ಸರ್ಕಾರದ ಆದೇಶದ ಮೇರೆಗೆ ಪೊಲೀಸರು ಬಲವಂತವಾಗಿ ಮುಚ್ಚಿಸಿದ್ದಾರೆ. ಈ ಮೂಲಕ ಪಾಕಿಸ್ತಾನದ ಸಂವಿಧಾನ ಮತ್ತು ಸುಪ್ರೀಂ ಕೋರ್ಟ್ ಆದೇಶಗಳನ್ನು ಉಲ್ಲಂಘಿಸಲಾಗಿದೆ ಎಂದು ಜೆಎಪಿ ವಕ್ತಾರ ಆಮಿರ್ ಮೊಹಮ್ಮದ್ ಹೇಳಿದ್ದಾರೆ. ಶಾಂತಿಯುತ ಸಮುದಾಯವೊಂದು ತನ್ನ ನಂಬಿಕೆಯನ್ನು ಪಾಲಿಸದಂತೆ ತಡೆಯುವ ಮೂಲಕ ಪಾಕಿಸ್ತಾನದ ಜಾಗತಿಕ ಮಟ್ಟದ ಪ್ರತಿಷ್ಠೆಗೆ ಧಕ್ಕೆ ತಂದಿದ್ದಾರೆ ಎಂದೂ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅಡಿಕೆ ಧಾರಣೆ

ಕುಮಟಾ		ಗೊರಬಲು	19005-32000	ತಟ್ಟಿಬೆಟ್ಟೆ	38099-48469
ಚಿಪ್ಪು	32200-39496	**ಸಿದ್ದಾಪುರ**		**ಶಿರಸಿ**	
ಕೋಕ	23111-29699	ಬಿಳಿಗೋಟು	28109-37269	ಬೆಟ್ಟೆ	40521-51099
ಹೊಸಚಾಲಿ	44097-45198	ಚಾಲಿ	41099-48139	ಬಿಳಿಗೋಟು	28699-40299
ಶಿವಮೊಗ್ಗ		ಕೋಕ	23599-34169	ಚಾಲಿ	44698-48899
ಬೆಟ್ಟೆ	65009-65009	ಕೆಂಪುಗೋಟು	27819-35889	ಕೆಂಪುಗೋಟು	27100-36499
ರಾಶಿಇಡಿ	46589-52399	ರಾಶಿ	49099-53229	ರಾಶಿ	49009-54618

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs
ತಕ್ಷಣ ಬೇಕಾಗಿದ್ದಾರೆ ಕಂಪನಿಗಳಿಗೆ ಮನೆಯಿಂದಲೇ ಕೆಲಸ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ, ವಯಸ್ಕರಿಗೆ ಮೊದಲ ಆದ್ಯತೆ 19,000-25,000 ಸಂಪಾದಿಸಿ ಕೊರಿಯರ್ ಸೌಲಭ್ಯವಿದೆ. 9964322833.

Drivers
ಡ್ರೈವರ್: ಬೆಂಗಳೂರು ಎಲ್ಲಾ ತಿಳಿದಿರುವ ಹಿಂದೂ 35ವರ್ಷ ಒಳಗಿನ ಉತ್ತಮ ಗುಣ ನಡತೆಯ High End ಗಾಡಿಗಳು ಗೊತ್ತಿರುವ, ಸ್ವಲ್ಪ ಇಂಗ್ಲೀಷ್ ಬರುವ, ಮನೆಯಲ್ಲಿ ಇರಬಯಸುವವರು ಬೇಕಾಗಿದ್ದಾರೆ. ಉತ್ತಮ ವೇತನ, ವಸತಿ ನೀಡಲಾಗುವುದು. Ph: 8861145911

General
ತಕ್ಷಣ ಬೇಕಾಗಿದ್ದಾರೆ: ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೇಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು ವೃದ್ದರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ. ಬೆಂಗಳೂರು-76 ಸಂಬಳ: 17,000/- ರಿಂದ 25,000/- ತಕ್ಷಣ ಸಂಪರ್ಕಿಸಿ: 9008835841, 9148525233

Wanted
ಫೀಲ್ಡ್ ಆಫೀಸರ್ ಮತ್ತು ಸೆಕ್ಯುರಿಟಿ ಗಾರ್ಡ್, ಸೂಪರ್‌ವೈಸರ್, ITI ಸಹಾಯಕ ಕೆಲಸಕ್ಕೆ ಬೇಕಾಗಿದ್ದಾರೆ. ಸ್ಥಳ: ಕುಂಬಳಗೂಡು, ಬಿಡದಿ. 7259511666/ 9611248555

ವ್ಯಾಪಾರ

Business Offers

General
BIOMASS BRIQUETTE from Saw Dust, GroundNut Husk and Wood Chips- Monthly 500MT available. Contact: 9845444066

ಪ್ರವಾಸ

Travel Agencies
ಸಿಂಗಾಪುರ ಮಲೇಶಿಯಾ ಮತ್ತು ಥೈಲ್ಯಾಂಡ್ ಪ್ರವಾಸ 11 ದಿನಗಳು 22/4/26, ಲಕ್ಷದೀಪ ಪ್ರವಾಸ 4 ದಿನಗಳು 22/5/26. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಸುವರ್ಣಯಾತ್ರ 9019462508/ 6360146483

Travel
ನೇಪಾಳ ಮುಕ್ತಿನಾಥ ಯಾತ್ರಾ ಮೇನಲ್ಲಿ 8 ದಿನಗಳು. ಅಮರನಾಥಯಾತ್ರಾ ಜುಲೈನಲ್ಲಿ 11ದಿನಗಳು. ನವಶಕ್ತಿಪೀಠ ಯಾತ್ರಾ ಅಗಸ್ಟ್ ನಲ್ಲಿ 10ದಿನಗಳು.ಚಾರ್ ಧಾಮ್ ಮತ್ತು ದೋಧಾಮ್ ಯಾತ್ರಾಸಂಪರ್ಕಿಸಿ: ವಿಜಯ ಟ್ರಾವೆಲ್ಸ್ ಮಲ್ಲೇಶ್ವರಂ ಬೆಂಗಳೂರು-03, 9448294477

ವೈಯಕ್ತಿಕ

Change of Name
I, VISHWAS Ramesh, R/at No 8 Sree Balarama Vihar, SM Road 3rd A cross, Jalahalli west, Bangalore North, Bangalore -560015, have changed my daughter's name from Impana Vishwas Potti to Impana V vide affidavit dated 18/03/2026 sworn before Notary V.Anjanappa, Bengaluru.

ರಿಯಲ್ ಎಸ್ಟೇಟ್ ಬೈಯಿಂಗ್

Farm House/ Land/ Resorts

General
ಬೆಂಗಳೂರಿನ ಸುತ್ತಮುತ್ತ ಗೋದಾಮು ನಿರ್ಮಿಸಲು ಲಾರಿ ಪ್ರವೇಶ ರಸ್ತೆ ಸೌಲಭ್ಯದೊಂದಿಗೆ Rs 1000/ Sqft ಗೆ ಖರೀದಿಸಲು 7500 sqft ಭೂಮಿ ಬೇಕಾಗಿದೆ. 9003912275

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವಿಮಾನವಾಹಕ ನೌಕೆ ಮೇಲೆ ದಾಳಿ

ಒಂದನೇ ಪುಟದಿಂದ...

'ಹಿಜ್ಬುಲ್ಲಾ ಬಂಡುಕೋರರನ್ನು ಗುರಿಯಾಗಿಸಿ ಬೈರೂತ್‌ನ ದಕ್ಷಿಣ ಉಪನಗರಗಳ ಮೇಲೆ ಇಸ್ರೇಲ್ ಸೇನೆ ಬುಧವಾರ ಬಾಂಬ್ ಸುರಿಮಳೆಗರೆದಿದೆ. ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಲೆಬನಾನ್‌ನಲ್ಲಿ ಇದುವರೆಗೆ 1 ಸಾವಿರಕ್ಕೂ ಹೆಚ್ಚುಮಂದಿ ಮೃತಪಟ್ಟಿದ್ದಾರೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

'ಇಸ್ರೇಲ್ ಜತೆಗೆ ಮಾತುಕತೆ ನಡೆಸುವುದು ಎಂದರೆ, ಲೆಬನಾನ್ ಮೇಲೆ ಬಲವಂತಾಗಿ ಶರಣಾಗತಿ ಹೇರಿದಂತೆ' ಎಂದು ಹಿಜ್ಬುಲ್ಲಾ ಮುಖಂಡ ನಯೀಂ ಖಾಸಿಂ ಹೇಳಿದ್ದಾರೆ.

'ಲೆಬನಾನ್ ಸರ್ಕಾರ ಹಿಜ್ಬುಲ್ಲಾ ಮಿಲಿಟರಿ ಚಟುವಟಿಕೆಗಳ ಮೇಲೆ ಹೇರಿರುವ ನಿಷೇಧವನ್ನು ವಾಪಸ್ ಪಡೆಯಬೇಕು' ಎಂದು ಅವರು ಒತ್ತಾಯಿಸಿದ್ದಾರೆ. ಕುವೈತ್‌ನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಭಾರಿ ದಾಳಿ ನಡೆದಿದೆ. ವಿಮಾನ ನಿಲ್ದಾಣದ ಆವರಣದಿಂದ ದಟ್ಟ ಹೊಗೆ ಮತ್ತು ಬೆಂಕಿ ಮೇಲಕ್ಕೆ ಎದ್ದಿದೆ ಎಂದು ಸುದ್ದಿಸಂಸ್ಥೆ ವರದಿ ಮಾಡಿದೆ.

ಪಾಕ್‌ನಂತೆ ನಮ್ಮದು ದಲ್ಲಾಳಿ ದೇಶವಲ್ಲ'

ಒಂದನೇ ಪುಟದಿಂದ...

'ಪಶ್ಚಿಮ ಏಷ್ಯಾದಲ್ಲಿನ ಪರಿಸ್ಥಿತಿ ಕುರಿತು ಭಾರತ ಮೌನ ತಾಳಿದೆ' ಎಂಬ ವಿರೋಧ ಪಕ್ಷಗಳ ಆರೋಪಗಳನ್ನು ಜೈಶಂಕರ್ ತಳ್ಳಿ ಹಾಕಿದರು. ಅಲ್ಲಿನ ಪರಿಸ್ಥಿತಿ ಹಾಗೂ ಬೆಳವಣಿಗೆಗಳ ಕುರಿತು ಭಾರತ ಪ್ರತಿಕ್ರಿಯಿಸುತ್ತಿದೆ ಎಂಬುದಾಗಿ ಹೇಳಿದರು' ಎಂದೂ ತಿಳಿಸಿವೆ.

'ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದ್ದಾರೆ. ಯುದ್ಧ ನಿಲ್ಲಬೇಕು. ಇದು ಜಗತ್ತಿನ ಪ್ರತಿಯೊಬ್ಬರನ್ನೂ ಬಾಧಿಸುತ್ತಿದೆ ಎಂಬುದಾಗಿ ಮೋದಿ ಸ್ಪಷ್ಟ ಮಾತುಗಳಲ್ಲಿ ಭಾರತದ ನಿಲುವನ್ನು ವಿವರಿಸಿದರು' ಎಂದು ಮೂಲಗಳು ಹೇಳಿವೆ.

'ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಖಮೇನಿ ಅವರ ಸಾವಿಗೆ ಭಾರತ ಸಂತಾಪ ಸೂಚಿಸಲಿಲ್ಲ. ಇಂಥ ನಡೆ ಮೂಲಕ, ಭಾರತ ತನ್ನ ನೈತಿಕ ದೌರ್ಬಲ್ಯ ಪ್ರದರ್ಶಿಸಿತು ಎಂಬ ವಿಪಕ್ಷಗಳ ಆರೋಪಗಳನ್ನು ಕೇಂದ್ರ ಸರ್ಕಾರ ತಳ್ಳಿ ಹಾಕಿತು'.

'ನಾವು ಎತ್ತಿದ ಪ್ರಶ್ನೆಗಳಿಗೆ ಸರ್ಕಾರ ನೀಡಿರುವ ಉತ್ತರಗಳು ತೃಪ್ತಿದಾಯಕವಾಗಿಲ್ಲ. ಪಶ್ಚಿಮ ಏಷ್ಯಾ ಪರಿಸ್ಥಿತಿ ಕುರಿತು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಚರ್ಚೆ ನಡೆಯಬೇಕು ಎಂಬುದಾಗಿ ವಿರೋಧ ಪಕ್ಷಗಳ ಪಾಳಯ ಸಭೆಗೆ ತಿಳಿಸಿತು' ಎನ್ನಲಾಗಿದೆ.

ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರು ಸಭೆಗೆ ಮಾಹಿತಿ ನೀಡಿದರು.

ಭದ್ರತೆ ಕುರಿತ ಸಂಸದೀಯ ಸಮಿತಿ(ಸಿಸಿಎಸ್) ಸದಸ್ಯರು ಹಾಗೂ ಕೇಂದ್ರ ಸಚಿವರೂ ಆದ ರಾಜನಾಥ್ ಸಿಂಗ್, ಅಮಿತ್ ಶಾ, ನಿರ್ಮಲಾ ಸೀತಾರಾಮನ್, ಜೆ.ಪಿ. ನಡ್ಡಾ, ಕಿರಣ್ ರಿಜಿಜು ಸರ್ಕಾರವನ್ನು ಪ್ರತಿನಿಧಿಸಿದ್ದರು.

ಸಂಕ್ಷಿಪ್ತ ಸುದ್ದಿ

389 ಡ್ರೋನ್ ಹೊಡೆದು ಉರುಳಿಸಿದ ರಷ್ಯಾ

ಮಾಸ್ಕೊ (ಎಪಿ): ಉಕ್ರೇನ್‌ನ 389 ಡ್ರೋನ್‌ಗಳನ್ನು ಹೊಡೆದು ಉರುಳಿಸಲಾಗಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಬುಧವಾರ ತಿಳಿಸಿದೆ.

ಈ ದಾಳಿಯು ಉಕ್ರೇನ್ ದೇಶೀಯವಾಗಿ ಅಭಿವೃದ್ಧಿಪಡಿಸಿದ ಮತ್ತು ತಯಾರಿಸಿದ ಡ್ರೋನ್‌ಗಳ ಸಾಮರ್ಥ್ಯವನ್ನು ಪ್ರದರ್ಶಿಸಿದೆ.

ಉಕ್ರೇನ್‌ನ ನಾಗರಿಕ ಪ್ರದೇಶಗಳ ಮೇಲೆ ರಷ್ಯಾವು 948 ಡ್ರೋನ್‌ಗಳು ಹಾಗೂ 34 ಕ್ಷಿಪಣಿಗಳನ್ನು ಹಾರಿಸಿದ ಒಂದು ದಿನದ ಬಳಿಕ, ಉಕ್ರೇನ್ ಪ್ರತಿದಾಳಿ ನಡೆಸಿದೆ.

ರಷ್ಯಾ ನಡೆಸಿದ ದಾಳಿಯಲ್ಲಿ ಕನಿಷ್ಠ ಆರು ಜನರು ಮೃತಪಟ್ಟಿದ್ದು, 50 ಜನರು ಗಾಯಗೊಂಡಿದ್ದಾರೆ ಎಂದು ಉಕ್ರೇನ್ ಅಧಿಕಾರಿಗಳು ತಿಳಿಸಿದ್ದಾರೆ.

ದಾಳಿ: 20 ಲಕ್ಷ ಜನರ ಮೇಲೆ ಪರಿಣಾಮ

ಕೈರೊ (ಎಪಿ): ಸುಡಾನ್‌ನ ದಾರ್‌ಫುರ್ ಪ್ರಾಂತ್ಯದಲ್ಲಿ ಕಳೆದ ವಾರ ನಡೆದ ಡ್ರೋನ್ ದಾಳಿಯಿಂದಾಗಿ ಪ್ರಮುಖ ಆಸ್ಪತ್ರೆಯೊಂದಕ್ಕೆ ತೀವ್ರ ಹಾನಿಯಾಗಿ ಸೇವೆ ಸ್ಥಗಿತಗೊಳಿಸಿದೆ. ಇದರಿಂದಾಗಿ ಸುಮಾರು 20 ಲಕ್ಷಕ್ಕೂ ಹೆಚ್ಚು ಜನರಿಗೆ ಸರಿಯಾದ ವೈದ್ಯಕೀಯ ಸೌಲಭ್ಯವಿಲ್ಲದಂತಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಮತ್ತು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸುಡಾನ್ ಭದ್ರತಾ ಪಡೆಗಳು ನಡೆಸಿವೆ ಎಂದು ಪ್ರತಿಪಾದಿಸಲಾದ ದಾಳಿಯಲ್ಲಿ 70 ಜನರು ಮೃತಪಟ್ಟಿದ್ದರು. ಜೊತೆಗೆ ಪೂರ್ವ ದಾರ್‌ಫುರ್ ಪ್ರಾಂತ್ಯದಾದ್ಯಂತ ಜನರಿಗೆ ಸೇವೆ ಒದಗಿಸುತ್ತಿದ್ದ ಅಲ್ ದೈನ್ ಬೋಧನಾ ಆಸ್ಪತ್ರೆಯನ್ನು ಧ್ವಂಸಗೊಳಿಸಲಾಯಿತು. ದಾಳಿಯಿಂದ ಆಸ್ಪತ್ರೆಗೆ ವ್ಯಾಪಕ ಹಾನಿಯಾಗಿರುವುದು ಬುಧವಾರ ಬಿಡುಗಡೆಯಾದ ಉಪಗ್ರಹ ಚಿತ್ರಗಳಲ್ಲಿ ದೃಢಪಟ್ಟಿದೆ.

'ಆಸ್ಪತ್ರೆಯನ್ನು ಗುರಿಯಾಗಿಸಿ ದಾಳಿ ಮಾಡಿಲ್ಲ' ಎಂದು ಭದ್ರತಾ ಪಡೆ ಹೇಳಿದೆ. ಅರೆಸೇನಾ ಪಡೆಯಾದ ರ್‍ಯಾಪಿಡ್ ಸಪೋರ್ಟ್ ಫೋರ್ಸಸ್ (ಆರ್‌ಎಸ್‌ಎಫ್) ನಿಯಂತ್ರಣದ ಪ್ರದೇಶದಲ್ಲಿ ಈ ಆಸ್ಪತ್ರೆಯಿದೆ. 2023ರ ಏಪ್ರಿಲ್‌ನಿಂದ ಆರ್‌ಎಸ್‌ಎಫ್ ಮತ್ತು ಸುಡಾನ್ ಭದ್ರತಾ ಪಡೆ ಮಧ್ಯೆ ಸಂಘರ್ಷ ನಡೆಯುತ್ತಿದೆ. ಈ ಯುದ್ಧದಿಂದಾಗಿ ದೇಶದ ಕೆಲವು ಪ್ರದೇಶಗಳಲ್ಲಿ ಕ್ಷಾಮ ಉಂಟಾಗಿದ್ದು, ವ್ಯಾಪಕ ಹಿಂಸಾಚಾರಗಳು ನಡೆಯುತ್ತಿವೆ.

ಮೊದಲ ಮಹಿಳಾ ಆರ್ಚ್‌ಬಿಷಪ್ ಆಗಿ ಸಾರಾ ನೇಮಕ

ಲಂಡನ್ (ಪಿಟಿಐ): ಬ್ರಿಟನ್‌ನ ಕ್ಯಾಂಟರ್‌ಬರಿಯಲ್ಲಿರುವ 'ಚರ್ಚ್ ಆಫ್ ಇಂಗ್ಲೆಂಡ್'ನ ಮೊದಲ ಮಹಿಳಾ ಆರ್ಚ್‌ಬಿಷಪ್ ಆಗಿ ಸಾರಾ ಮುಲ್ಲಾಲ್ಲಿ (63) ಅವರು ಬುಧವಾರದಿಂದ ಸೇವೆ ಆರಂಭಿಸಿದರು.


ಸಾರಾ ಮುಲ್ಲಾಲ್ಲಿ

ಚರ್ಚ್ ಆಫ್ ಇಂಗ್ಲೆಂಡ್‌ನ ಮುಖ್ಯಸ್ಥೆ ಹಾಗೂ ವಿಶ್ವದಾದ್ಯಂತದ 'ಆಂಗ್ಲಿಕನ್ ಕಮ್ಯುನಿಯನ್'ನ ಆಧ್ಯಾತ್ಮಿಕ ನಾಯಕಿ ಆಗಿ ಇವರು ಕಾರ್ಯನಿರ್ವಹಿಸಲಿದ್ದಾರೆ. ಅಮೆರಿಕದಲ್ಲಿರುವ ಎಪಿಸ್ಕೋಪಲ್ ಚರ್ಚ್ ಸೇರಿದಂತೆ ಸ್ವತಂತ್ರ ಚರ್ಚ್‌ಗಳ ಸಂಘವಾಗಿರುವ ಕಮ್ಯುನಿಯನ್, ಒಟ್ಟು 10 ಕೋಟಿ ಸದಸ್ಯರನ್ನು ಹೊಂದಿದೆ.

ಈ ಹಿಂದೆ ಶುಶ್ರೂಷಕಿಯಾಗಿ, ಕ್ಯಾನ್ಸರ್ ರೋಗಿಗಳ ಆರೈಕೆ ಮಾಡಿದ್ದ ಸಾರಾ, 40ನೇ ವಯಸ್ಸಿಗೆ ಪಾದ್ರಿಯಾದರು. ಜನವರಿಯಲ್ಲಿ ಇವರನ್ನು ಆರ್ಚ್‌ಬಿಷಪ್ ಆಗಿ ಅಧಿಕೃತವಾಗಿ ಆಯ್ಕೆ ಮಾಡಲಾಗಿತ್ತು.

ಬುಧವಾರ ನಡೆದ ಕಾರ್ಯಕ್ರಮದಲ್ಲಿ ಅವರು ಅಧಿಕೃತವಾಗಿ ಸೇವೆ ಆರಂಭಿಸಿದರು. ರಾಜಕುಮಾರ ವಿಲಿಯಂ, ರಾಜಕುಮಾರಿ ಕ್ಯಾಥರೀನ್, ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಹಾಗೂ ಕಮ್ಯುನಿಯನ್‌ನ 42 ಸದಸ್ಯ ಚರ್ಚ್‌ಗಳ ಪ್ರತಿನಿಧಿಗಳು ಹಾಜರಿದ್ದರು.

ನೈಜತೆ ಪರಿಶೀಲಿಸದೇ ಪ್ರಾಂಶುಪಾಲರ ನೇಮಕ

ಒಂದನೇ ಪುಟದಿಂದ...

ಪ್ರಾಧ್ಯಾಪಕರ ಒತ್ತಾಯಕ್ಕೆ ಸ್ಪಂದಿಸದ ಇಲಾಖೆ ಅಂತಿಮ ಆಯ್ಕೆ ಪಟ್ಟಿಯಲ್ಲಿದ್ದ ಅಭ್ಯರ್ಥಿಗಳನ್ನು ಮೂರು ತಂಡಗಳಾಗಿ ವಿಂಗಡಿಸಿ ತರಬೇತಿ ನೀಡುತ್ತಿದ್ದು, ಮಾರ್ಚ್ ಅಂತ್ಯದ ಒಳಗೆ ಸ್ಥಳ ನಿಯುಕ್ತಿ ಮಾಡಲು ಪ್ರಕ್ರಿಯೆ ಆರಂಭಿಸಿದೆ.

'ವಿಶ್ವವಿದ್ಯಾಲಯ ಅನುದಾನ ಆಯೋಗದ ಮಾನ್ಯತೆ ಪಡೆಯದ ಉನ್ನತ ಶಿಕ್ಷಣ ಸಂಸ್ಥೆಗಳು, ನಕಲಿ ವಿಶ್ವವಿದ್ಯಾಲಯಗಳು ಹಾಗೂ ಪಿಎಚ್.ಡಿ ನಿಯಮಗಳನ್ನೇ ಪಾಲಿಸದ ಹೊರ ರಾಜ್ಯದ ವಿಶ್ವವಿದ್ಯಾಲಯಗಳಿಂದ ಪಡೆದ ಪ್ರಮಾಣ ಪತ್ರಗಳನ್ನು ಹಲವು ಅಭ್ಯರ್ಥಿಗಳು ಸಲ್ಲಿಸಿದ್ದಾರೆ. ಇಂತಹ ನಕಲಿ ಪಿಎಚ್.ಡಿ ಪ್ರಮಾಣ ಪತ್ರಗಳ ನೈಜತೆ ಪರಿಶೀಲನೆಯನ್ನೇ ಇಲಾಖೆ ಮಾಡಿಲ್ಲ. ಕಾರ್ಯಭಾರ ಕಡಿಮೆ ಆದಾಗ ಕೆಲಸ ಕಳೆದುಕೊಳ್ಳುವ, ಕೆಲಸದ ಭದ್ರತೆಯೇ ಇಲ್ಲದ ಅತಿಥಿ ಉಪನ್ಯಾಸಕರಿಗೆ ಎಸ್‌ಒಪಿ ಅನ್ವಯಿಸಿದೆ. ಕಾಯಂ ಪ್ರಾಂಶುಪಾಲರ ಹುದ್ದೆಗೆ ಏಕಿಲ್ಲ' ಎನ್ನುವುದು ಪ್ರಥಮ ದರ್ಜೆ ಕಾಲೇಜುಗಳ ಪ್ರಾಧ್ಯಾಪಕರ ಪ್ರಶ್ನೆ.

> **ಪ್ರಾಂಶುಪಾಲರ ನೇಮಕಾತಿ ಪ್ರಕ್ರಿಯೆಯೇ ದೋಷಪೂರ್ಣವಾಗಿದೆ. 4 ವರ್ಷಗಳಿಂದ ಮುಗಿದಿಲ್ಲ. ಶೇ 50ರಷ್ಟು ಹುದ್ದೆಗಳನ್ನು ಬಡ್ತಿಗೆ ಮೀಸಲಿಡಬೇಕು.**
> **ರಾಮಲಿಂಗಪ್ಪ ಟಿ.ಬೇಗೂರು,** ಉನ್ನತಶಿಕ್ಷಣ ಚಿಂತನಾ ವೇದಿಕೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮಾರ್ಚ್ 2022ರಲ್ಲಿ ಅಧಿಸೂಚನೆ ಹೊರಡಿಸಿತ್ತು. ತಾಂತ್ರಿಕ ಕಾರಣಗಳಿಂದ ನಿಗದಿಯಾಗಿದ್ದ ಪರೀಕ್ಷೆಗಳನ್ನು 2 ಬಾರಿ ಮುಂದೂಡಲಾಗಿತ್ತು.

'ಎಂಜಿನಿಯರಿಂಗ್ ಸೇರಿದಂತೆ ಬಹುತೇಕ ಖಾಸಗಿ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಅಭ್ಯರ್ಥಿಗಳಿಗೆ ಪೂರ್ಣ ಕಾಲಿಕ ಬೋಧಕರಾಗಿ ಕೆಲಸ ಮಾಡಿದ ಅನುಭವವಿಲ್ಲ. ಬಹಳಷ್ಟು ಅಧ್ಯಾಪಕರು ಒಂದೇ ಕಾಲೇಜಿಗೆ ಸೀಮಿತವಾಗಿಲ್ಲ. ಅವರು ಪ್ರಾಂಶುಪಾಲ ಹುದ್ದೆಗೆ ಆಯ್ಕೆಯಾದರೆ ಐದು ವರ್ಷಗಳ ನಂತರ ಏನು ಮಾಡಬೇಕು ಎಂಬ ಅತಂತ್ರ ಸ್ಥಿತಿಯನ್ನು ಉನ್ನತ ಶಿಕ್ಷಣ ಇಲಾಖೆ ಸೃಷ್ಟಿಸಿದೆ' ಎಂದು ತಜ್ಞರು ವಿರೋಧ ವ್ಯಕ್ತಪಡಿಸಿದ್ದಾರೆ.

ಎನ್‌ಎಂಪಿಎಗೆ ಬಂದ ಹಡಗು

ಮಂಗಳೂರು: ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ತುಂಬಿರುವ 'ಅಪೋಲೊ ಓಷೀನ್' ಹಡಗು ನವಮಂಗಳೂರು ಬಂದರಿಗೆ ಬುಧವಾರ ರಾತ್ರಿ ತಲುಪಿದೆ.

ಈ ಹಡಗಿನಲ್ಲಿರುವ 17,300 ಟನ್ ಎಲ್‌ಪಿಜಿಯನ್ನು ಬಂದರಿನಲ್ಲಿ ಇಳಿಸಲಾಗುತ್ತಿದೆ ಎಂದು ನವಮಂಗಳೂರು ಬಂದರು ಪ್ರಾಧಿಕಾರ (ಎನ್‌ಎಂಪಿಎ)ದ ಮೂಲಗಳು ತಿಳಿಸಿವೆ.

ಹಡಗಿನಲ್ಲಿ ಬಂದ 14,600 ಟನ್ ಎಲ್‌ಪಿಜಿಯನ್ನು ಮಂಗಳೂರು ಎಲ್‌ಪಿಜಿ ಆಮದು ಸೌಲಭ್ಯ (ಎಂಎಲ್‌ಐಎಫ್) ದಲ್ಲಿ ಇಳಿಸಲಾಗುತ್ತದೆ. ಇದು, ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿಎಲ್), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ (ಬಿಪಿಸಿಎಲ್) ಕಂಪನಿಗಳಿಗೆ ಹಂಚಿಕೆ ಆಗಿದೆ. ಉಳಿದ 3000 ಟನ್ ಎಲ್‌ಪಿಜಿ ಏಜಿಸ್ ಸಂಸ್ಥೆಯದು' ಎಂದು ಎನ್‌ಎಂಪಿಎ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಪಿಎನ್‌ಜಿ ಪಡೆಯದಿದ್ದರೆ ಎಲ್‌ಪಿಜಿ ಬಂದ್:

ಒಂದನೇ ಪುಟದಿಂದ...

ಪಿಎನ್‌ಜಿ ಸಂಪರ್ಕ ಹೊಂದಿದವರಿಗೆ ಕೊಳವೆ ಮೂಲಕ ಅಡುಗೆ ಅನಿಲದ ಪೂರೈಕೆ ಆಗುತ್ತದೆ.ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು 'ನೈಸರ್ಗಿಕ ಅನಿಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ವಿತರಣೆ ಆದೇಶ 2026'ರ ಮೂಲಕ ಹೊಸ ಸೂಚನೆಯನ್ನು ನೀಡಿದೆ. ಮಂಗಳವಾರ ಈ ಆದೇಶ ಹೊರಬಿದ್ದಿದೆ.

ಪಿಎನ್‌ಜಿ ಸೌಲಭ್ಯವು ಲಭ್ಯವಿದ್ದರೂ ಕುಟುಂಬಗಳು ಅದನ್ನು ಪಡೆದುಕೊಳ್ಳದಿದ್ದರೆ ಎಲ್‌ಪಿಜಿ ಪೂರೈಕೆಯು 'ಮೂರು ತಿಂಗಳ ನಂತರ ಸ್ಥಗಿತಗೊಳ್ಳಲಿದೆ' ಎಂದು ಆದೇಶದಲ್ಲಿ ಹೇಳಲಾಗಿದೆ. ಆದರೆ ಪಿಎನ್‌ಜಿ ಸೌಲಭ್ಯ ಕಲ್ಪಿಸಲು 'ತಾಂತ್ರಿಕವಾಗಿ ಸಾಧ್ಯವಾಗದೆ' ಇರುವಲ್ಲಿ ಎಲ್‌ಪಿಜಿ ಬಳಕೆ ಮುಂದುವರಿಸಲು ಅಡ್ಡಿ ಇಲ್ಲ.

ಪಿಎನ್‌ಜಿ ಜಾಲ ಇರುವ ಕಡೆಗಳಿಂದ ಎಲ್‌ಪಿಜಿ ಪೂರೈಕೆಯನ್ನು, ಈ ಸೌಲಭ್ಯ ಇರದ ಕಡೆಗಳಿಗೆ ತಿರುಗಿಸುವ ಉದ್ದೇಶದಿಂದ ಆದೇಶ ಹೊರಡಿಸಲಾಗಿದೆ. ಅಲ್ಲದೆ, ಜಾಗತಿಕ ಮಟ್ಟದಲ್ಲಿ ಪೂರೈಕೆ ವ್ಯವಸ್ಥೆಗೆ ಧಕ್ಕೆ ಆಗಿರುವ ಈ ಹೊತ್ತಿನಲ್ಲಿ 'ಇಂಧನ ಮೂಲಗಳನ್ನು ಹೆಚ್ಚು ಮಾಡಿಕೊಳ್ಳುವ' ಉದ್ದೇಶವನ್ನು ಕೂಡ ಇದು ಹೊಂದಿದೆ.

ಪಿಎನ್‌ಜಿ ಕೆಲಸಕ್ಕೆ ವೇಗ

'ಅಗತ್ಯ ವಸ್ತುಗಳ ಕಾಯ್ದೆ'ಯ ಅಡಿಯಲ್ಲಿ ಹೊಸ ಆದೇಶ ಹೊರಡಿಸಲಾಗಿದೆ. ಪಿಎನ್‌ಜಿ ಸೌಲಭ್ಯ ಕಲ್ಪಿಸುವ ಕೆಲಸಕ್ಕೆ ವೇಗ ನೀಡಲು ಸಂಬಂಧಪಟ್ಟ ಪ್ರಾಧಿಕಾರಗಳು ಅಗತ್ಯ ಅನುಮತಿಯನ್ನು ಸಮಯಮಿತಿಯಲ್ಲಿ ನೀಡಬೇಕು, ಇಲ್ಲದಿದ್ದರೆ ಅನುಮತಿ ನೀಡಲಾಗಿದೆ ಎಂದು ಭಾವಿಸಲಾಗುತ್ತದೆ ಎಂದು ಆದೇಶವು ತಿಳಿಸಿದೆ.

ವಸತಿ ಪ್ರದೇಶಗಳಲ್ಲಿ ಸಂಬಂಧಪಟ್ಟ ಪ್ರಾಧಿಕಾರಗಳು ಅನುಮತಿಯನ್ನು ಮೂರು ಕೆಲಸದ ದಿನಗಳಲ್ಲಿ ನೀಡಬೇಕು, ಕೊನೆಯ ಹಂತದ ಪಿಎನ್‌ಜಿ ಸಂಪರ್ಕಕ್ಕೆ ಅಗತ್ಯವಿರುವ ಒಪ್ಪಿಗೆಯನ್ನು 48 ಗಂಟೆಗಳಲ್ಲಿ ಒದಗಿಸಬೇಕು. ಇಂತಹ ಪ್ರದೇಶಗಳಲ್ಲಿ ಪಿಎನ್‌ಜಿ ಸಂಪರ್ಕ ಕೋರಿ ಸಲ್ಲಿಕೆಯಾಗುವ ಅರ್ಜಿಗಳನ್ನು ತಿರಸ್ಕರಿಸಲು ಅವಕಾಶವಿಲ್ಲ.

ಅಗತ್ಯ ಅನುಮತಿಗಳು ಸಿಕ್ಕಿದ ನಾಲ್ಕು ತಿಂಗಳಲ್ಲಿ ಕೊಳವೆ ಅಳವಡಿಕೆ ಕೆಲಸವನ್ನು ಸಂಬಂಧಪಟ್ಟವರು ಶುರು ಮಾಡಬೇಕು. ಇಲ್ಲದಿದ್ದರೆ ದಂಡ ಪಾವತಿ ಮಾಡಬೇಕಾಗುತ್ತದೆ ಎಂದು ಆದೇಶವು ಹೇಳಿದೆ.

ನೋಟಿಸ್ ನೀಡಲಾಗುತ್ತದೆ: ಸುಜಾತಾ

ಪಿಎನ್‌ಜಿ ಸೌಲಭ್ಯ ಇರುವ ಪ್ರದೇಶಗಳಲ್ಲಿ ಎಲ್‌ಪಿಜಿ ಬಳಕೆ ಮಾಡುತ್ತಿರುವವರಿಗೆ ಸಿಎನ್‌ಜಿ, ಪಿಎನ್‌ಜಿ ಸೇವೆ ಒದಗಿಸಲು ಪರವಾನಗಿ ಪಡೆದಿರುವ ಕಂಪನಿಗಳು ನೋಟಿಸ್ ಕಳುಹಿಸಲಿವೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ತಿಳಿಸಿದರು.

ನೋಟಿಸ್ ಪಡೆದವರು ಪಿಎನ್‌ಜಿ ಸೌಲಭ್ಯವನ್ನು ಮೂರು ತಿಂಗಳಲ್ಲಿ ಪಡೆದುಕೊಳ್ಳಬೇಕು. ಇಲ್ಲದಿದ್ದರೆ ಅವರು ಪಡೆದಿರುವ ಎಲ್‌ಪಿಜಿ ಸಂಪರ್ಕ ರದ್ದಾಗುತ್ತದೆ ಎಂದು ಸುಜಾತಾ ಅವರು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಹೆಚ್ಚುವರಿ ಸಂಪರ್ಕ ತಾತ್ಕಾಲಿಕ ಸ್ಥಗಿತ

ಒಂದನೇ ಪುಟದಿಂದ...

'ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯು ಒಎಂಸಿ ಮಾಡುವ ಹಂಚಿಕೆಯನ್ನು ಅವಲಂಬಿಸಿದೆ. ಪ್ರಸ್ತುತ ಬೇಡಿಕೆಗೆ ತಕ್ಕಂತೆ ಪೂರೈಕೆ ಆಗುತ್ತಿಲ್ಲ. ಇದರ ಜೊತೆಗೆ ಸಾಫ್ಟ್‌ವೇರ್ ಹಾಗೂ ಸರ್ವರ್ ಸಮಸ್ಯೆ ಇದೆ. ಗ್ರಾಹಕರು ಯಾವುದೇ ರೀತಿಯ ವದಂತಿಗಳಿಗೆ ಕಿವಿಗೊಡಬಾರದು' ಎಂದರು.

'ಎಲ್ಲ ಗ್ರಾಹಕರು ಕಡ್ಡಾಯವಾಗಿ ಇ-ಕೆವೈಸಿ ಮಾಡಿಕೊಳ್ಳಬೇಕು. ಉಜ್ವಲ ಯೋಜನೆಯ ಫಲಾನುಭವಿಗಳು ಪ್ರತಿ ಏಳು ರಿಫಿಲ್‌ಗಳ ನಂತರ ಮರು ಇ-ಕೆವೈಸಿ ಮಾಡಿಕೊಳ್ಳಬೇಕು. ನೋಂದಾಯಿತ ಮೊಬೈಲ್ ಸಂಖ್ಯೆಯಿಂದ ಮಾತ್ರ ಬುಕ್ಕಿಂಗ್ ಮಾಡಬೇಕು. ಒಟಿಪಿಯನ್ನು ಮುಂಚಿತವಾಗಿ ಹಂಚಿಕೊಳ್ಳಬಾರದು' ಎಂದು ಸಲಹೆ ನೀಡಿದರು.

ವಿತರಣಾ ಸಮಯ: 'ರಾಜ್ಯದಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳನ್ನು ಬುಕ್ಕಿಂಗ್ ಮಾಡಿದ ನಂತರ ಸರಾಸರಿ 8ರಿಂದ 10 ದಿನಗಳ ನಂತರ ವಿತರಿಸಲಾಗುತ್ತಿದೆ' ಎಂದರು.

ಬುಕ್ಕಿಂಗ್ ವಿಧಾನ

'ಐವಿಆರ್‌ಎಸ್ ಮತ್ತು ವಾಟ್ಸ್‌ಆ್ಯಪ್ ಮೂಲಕ ಸಿಲಿಂಡರ್‌ಗಳನ್ನು ಬುಕ್ಕಿಂಗ್ ಮಾಡಬಹುದು. ಇಂಡೇನ್-ಇಂಡಿಯನ್ ಆಯಿಲ್ ಒನ್, ಎಚ್‌ಪಿಸಿಎಲ್-ಎಚ್‌ಪಿ ಪೇ, ಬಿಪಿಸಿಎಲ್-ಹಲೊ ಬಿಪಿಸಿಎಲ್‌ನಂತಹ ಅಧಿಕೃತ ಮೊಬೈಲ್ ಆ್ಯಪ್‌ಗಳ ಮೂಲಕ ಸಿಲಿಂಡರ್‌ಗಳನ್ನು ಬುಕ್ ಮಾಡಬಹುದು' ಎಂದು ರಾಧಾಕೃಷ್ಣ ತಿಳಿಸಿದರು. 'ಎಲ್ಲ ಪ್ರೀಪೇಯ್ಡ್ ಬುಕ್ಕಿಂಗ್‌ಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಗೂಗಲ್ ಪೇ, ಫೋನ್‌ಪೇ ಹಾಗೂ ಅಮೇಜಾನ್ ಪೇ ಮೂಲಕ ಮಾಡುವ ಬುಕ್ಕಿಂಗ್‌ಗಳನ್ನು ಸ್ಥಗಿತಗೊಳಿಸಲಾಗಿದೆ' ಎಂದರು.

ಸಿಲಿಂಡರ್ ರಿಫಿಲ್ ಬುಕ್ಕಿಂಗ್ ಅಂತರ

ತೂಕ	ಅಂತರ
ಸಿಂಗಲ್ ಸಿಲಿಂಡರ್ ಸಂಪರ್ಕ	
14.2 ಕೆ.ಜಿ	25 ದಿನ
5 ಕೆ.ಜಿ	9 ದಿನ
10 ಕೆ.ಜಿ. ಕಾಂಪೊಸಿಟ್	18 ದಿನ
ಡಬಲ್ ಸಿಲಿಂಡರ್ ಸಂಪರ್ಕ	
14.2 ಕೆ.ಜಿ	35 ದಿನ
5 ಕೆ.ಜಿ.	12 ದಿನ
10 ಕೆ.ಜಿ. ಕಾಂಪೊಸಿಟ್	25 ದಿನ
ಉಜ್ವಲ ಯೋಜನೆ ಸಂಪರ್ಕ	
14.2 ಕೆ.ಜಿ	45 ದಿನ
5 ಕೆ.ಜಿ	16 ದಿನ

'ವಾಣಿಜ್ಯ ಬಳಕೆಯ ಗ್ರಾಹಕರು ತಮ್ಮ ಹತ್ತಿರದ ಏಜೆನ್ಸಿಯಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಅನಧಿಕೃತ ಮಾರಾಟಗಾರರು ಅಥವಾ ಮಧ್ಯವರ್ತಿಗಳಿಂದ ಸಿಲಿಂಡರ್‌ಗಳನ್ನು ಖರೀದಿ ಮಾಡಬಾರದು. ಪ್ರತಿಯೊಂದು ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ನ ವಿತರಣೆಗೆ ನಗದು ರಸೀದಿ ಪಡೆಯಬೇಕು' ಎಂದು ಸಲಹೆ ನೀಡಿದರು.

ಹರಿಯಾಣ ಪೊಲೀಸರ ವಿರುದ್ಧ 'ಸುಪ್ರೀಂ' ಕಿಡಿ

ಬಾಲಕಿ ಮೇಲಿನ ಅತ್ಯಾಚಾರ ಪ್ರಕರಣ • ತನಿಖೆಗೆ ಮಹಿಳಾ ಐಪಿಎಸ್ ಅಧಿಕಾರಿಗಳನ್ನೂ ಒಳಗೊಂಡ ಎಸ್ಐಟಿ ರಚನೆ • ಹೇಳಿಕೆ ತಿರುಚಿದ ವೈದ್ಯೆಗೂ ಛೀಮಾರಿ

ನವದೆಹಲಿ(ಪಿಟಿಐ): ಗುರುಗ್ರಾಮದಲ್ಲಿ ಮೂರು ವರ್ಷದ ಬಾಲಕಿ ಮೇಲೆ ನಡೆದ ಅತ್ಯಾಚಾರ ಕುರಿತು ತನಿಖೆ ನಡೆಸುತ್ತಿರುವ ಹರಿಯಾಣ ಪೊಲೀಸರ ವರ್ತನೆ 'ನಾಚಿಕೆಗೇಡಿ'ನದು ಹಾಗೂ 'ಸಂವೇದನಾರಹಿತ'ವಾದುದು ಎಂದು ಸುಪ್ರೀಂ ಕೋರ್ಟ್ ಬುಧವಾರ ಛೀಮಾರಿ ಹಾಕಿದೆ.

ಬಾಲಕಿ ಮೇಲಿನ ಅತ್ಯಾಚಾರ ಕುರಿತಂತೆ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದಿರುವ ಸುಪ್ರೀಂ ಕೋರ್ಟ್, ಇದಕ್ಕಾಗಿ ಮಹಿಳಾ ಐಪಿಎಸ್ ಅಧಿಕಾರಿಗಳನ್ನು ಒಳಗೊಂಡ ವಿಶೇಷ ತನಿಖಾತಂಡವನ್ನು(ಎಸ್ಐಟಿ) ರಚಿಸಿದೆ.

ಈ ಕುರಿತ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಮೂವರು ಸದಸ್ಯರಿರುವ ನ್ಯಾಯಪೀಠ, ಎಸ್ಐಟಿ ರಚನೆ ಕುರಿತು ಕೂಡಲೇ ಅಧಿಸೂಚನೆ ಹೊರಡಿಸುವಂತೆ ಹರಿಯಾಣ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಅಲ್ಲದೇ, ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಎಸ್ಐಟಿಗೆ ಹಸ್ತಾಂತರಿಸುವಂತೆ ಗುರುಗ್ರಾಮ ಪೊಲೀಸರಿಗೂ ಸೂಚನೆ ನೀಡಿದೆ.

ನ್ಯಾಯಮೂರ್ತಿಗಳಾದ ಜಾಯ್ ಮಾಲ್ಯ ಬಾಗ್ಚಿ ಹಾಗೂ ವಿಪುಲ್ ಎಂ.ಪಂಚೋಲಿ ಈ ಪೀಠದಲ್ಲಿದ್ದಾರೆ.

'ಈ ಪ್ರಕರಣದಲ್ಲಿ ಎಸಲಾಗಿರುವ ಅಪರಾಧ ಘೋರವಾದುದು. ಆದರೆ, ಹರಿಯಾಣ ಪೊಲೀಸರು ಪ್ರಕರಣವನ್ನು ಲಘುವಾಗಿ ಪರಿಗಣಿಸಿದ್ದಾರೆ. ಪೋಕ್ಸೊ ಕಾಯ್ದೆಯ ಕಠಿಣ ಅವಕಾಶಗಳ ಬದಲು ಸೌಮ್ಯ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿದ್ದಾರೆ' ಎಂದು ಹರಿಯಾಣ ಪೊಲೀಸರನ್ನು ಪೀಠ ತರಾಟೆಗೆ ತೆಗೆದುಕೊಂಡಿದೆ.

ಸಂತ್ರಸ್ತ ಬಾಲಕಿಯ ಹೇಳಿಕೆಯನ್ನು ಸಂಪೂರ್ಣವಾಗಿ ಬದಲಿಸಿ ವರದಿ ನೀಡಿರುವ ಖಾಸಗಿ ಆಸ್ಪತ್ರೆಯ ವೈದ್ಯೆಯನ್ನು ಕೂಡ ತರಾಟೆಗೆ ತೆಗೆದುಕೊಂಡ ಪೀಠ, 'ಒಬ್ಬ ವೈದ್ಯೆಯಾಗಿ ಈ ರೀತಿ ಮಾಡಿರುವುದು ನಾಚಿಕೆಗೇಡಿನದು' ಎಂದು ಟೀಕಿಸಿದೆ.

'ಪ್ರಕರಣ ಕುರಿತು ಕಳಪೆ ಮಟ್ಟದ ತನಿಖೆ ನಡೆಸಿದ್ದಕ್ಕಾಗಿ ನಿಮ್ಮ ವಿರುದ್ಧ ಕ್ರಮ ಕೈಗೊಳ್ಳಬಾರದೇಕೆ?' ಎಂದು ಗುರುಗ್ರಾಮ ಪೊಲೀಸರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದೆ.

'ಸಮಿತಿಯನ್ನು ರದ್ದು ಮಾಡಬಾರದೇಕೆ?' ಎಂದು ಗುರುಗ್ರಾಮ ಮಕ್ಕಳ ಕಲ್ಯಾಣ ಸಮಿತಿಗೂ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದೆ.

'ಈ ಪ್ರಕರಣದ ವಿಚಾರಣೆಯನ್ನು ಪೋಕ್ಸೊ ನ್ಯಾಯಾಲಯದ ಹಿರಿಯ ಮಹಿಳಾ ನ್ಯಾಯಿಕ ಅಧಿಕಾರಿಯೊಬ್ಬರಿಗೆ ವಹಿಸಬೇಕು' ಎಂದು ಗುರುಗ್ರಾಮ ಜಿಲ್ಲಾ ನ್ಯಾಯಾಧೀಶರಿಗೆ ನಿರ್ದೇಶನ ನೀಡಿದೆ.

ಪ್ರಕರಣ: 'ಗುರುಗ್ರಾಮದ ಸೆಕ್ಟರ್ 54ರ ಮನೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಮಹಿಳೆಯರು ಹಾಗೂ ಪುರುಷನೊಬ್ಬ, ಎರಡು ತಿಂಗಳ ಹಿಂದೆ ಮೂರು ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಕಳೆದ ವರ್ಷ ಡಿಸೆಂಬರ್ ಹಾಗೂ 2026ರ ಜನವರಿ ನಡುವೆ ಈ ಘಟನೆ ನಡೆದಿದೆ. ತಾನು ಅನುಭವಿಸುತ್ತಿರುವ ಯಾತನೆ ಕುರಿತು ಬಾಲಕಿಯು ತಾಯಿಗೆ ಇತ್ತೀಚೆಗೆ ತಿಳಿಸಿದ್ದಾಳೆ. ನಂತರ ಬಾಲಕಿಯ ಪಾಲಕರು ನೀಡಿದ ದೂರಿನ ಮೇರೆಗೆ ಫೆಬ್ರುವರಿ 4ರಂದು ಆರೋಪಿಗಳ ವಿರುದ್ಧ ಎಫ್ಐಆರ್ ದಾಖಲಿಸಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

'ಪರಿಹಾರ: ಹಣಕಾಸು ಹೊರೆ ಆಧಾರದ ಮೇಲೆ ನಿರ್ಧರಿಸುವಂತಿಲ್ಲ'

ಭೂ ಸ್ವಾಧೀನ ಪ್ರಕರಣದಲ್ಲಿ ರೈತರಿಗೆ ನೀಡುವ ಪರಿಹಾರ ಹಾಗೂ ಬಡ್ಡಿ ಮೊತ್ತವನ್ನು ಸಂಬಂಧಪಟ್ಟ ಸಂಸ್ಥೆ ಮೇಲೆ ಆಗಬಹುದಾದ ಹಣಕಾಸು ಹೊರೆಯ ಪ್ರಮಾಣದ ಆಧಾರದ ಮೇಲೆ ನಿರ್ಧರಿಸಲಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಸಮ್ಮತ ಪರಿಹಾರವು ಸಾಂವಿಧಾನಿಕ ಗ್ಯಾರಂಟಿ ಆಗಿದ್ದು, ಇದನ್ನು ದುರ್ಬಲಗೊಳಿಸಲು ಸಾಧ್ಯ ಇಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿ ಉಜ್ಜಲ್ ಭುಯಾನ್ ಅವರು ಇದ್ದ ನ್ಯಾಯಪೀಠ ಹೇಳಿದೆ. ಭೂಮಿ ಕಳೆದುಕೊಂಡವರಿಗೆ ಭೂಸ್ವಾಧೀನ ಕಾಯ್ದೆಯ ಪ್ರಕಾರ ಶೇ9ರಷ್ಟು ಬಡ್ಡಿ ಪಾವತಿಸಬೇಕೇ ಹೊರತು ಎನ್ಎಚ್ಎಐ ಕಾಯ್ದೆಯಡಿ ನೀಡುವ ಶೇ5ರ ದರದಲ್ಲಿ ಅಲ್ಲ ಎಂದೂ ಪೀಠ ಸ್ಪಷ್ಟಪಡಿಸಿದೆ.

ಎನ್ಎಚ್ಎಐ ಕಾಯ್ದೆಯಡಿ ಸ್ವಾಧೀನಪಡಿಸಿಕೊಂಡ ಭೂಮಿಗೆ ಸಂಬಂಧಿಸಿದ ಪರಿಹಾರಧನ ಮತ್ತು ಬಡಿಯನ್ನು ಪೂರ್ವಾನ್ವಯವಾಗುವಂತೆ ರೈತರಿಗೆ ಪಾವತಿಸಬೇಕು ಎಂದು 2025ರ ಫೆಬ್ರುವರಿ 4ರಂದು ನೀಡಿದ್ದ ತನ್ನ ತೀರ್ಪನ್ನು ಮರುಪರಿಶೀಲಿಸುವಂತೆ ಕೋರಿ ಭಾರತ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ(ಎನ್ಎಚ್ಎಐ) ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಪೀಠ ಈ ಮಾತು ಹೇಳಿದೆ. ಭೂಸ್ವಾಧೀನಕ್ಕೆ ಸಂಬಂಧಿಸಿ ನೀಡುವ ಪರಿಹಾರಧನ ಹಾಗೂ ಬಡ್ಡಿ ಮೊತ್ತದಿಂದಾಗಿ ಪ್ರಾಧಿಕಾರಕ್ಕೆ ₹100 ಕೋಟಿ ಹೊರೆಯಾಗುತ್ತದೆ ಎಂದು ಈ ಮೊದಲು ತಿಳಿಸಲಾಗಿತ್ತು. ಆದರೆ, ಈ ಹೊರೆ ಪ್ರಮಾಣ ₹29 ಸಾವಿರ ಕೋಟಿಯಷ್ಟಾಗಲಿದೆ. ಹೀಗಾಗಿ ತೀರ್ಪನ್ನು ಮರುಪಶೀಲಿಸಬೇಕು ಎಂದು ಎನ್ಎಚ್ಎಐ ಕೋರಿತ್ತು.

ಸಹೋದರಗೆ ಕರೆ: ಅರ್ಜಿದಾರರ ತಂದೆಗೆ ಸಿಜೆಐ ಛೀಮಾರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ವೈದ್ಯಕೀಯ ಕೋರ್ಸ್ ಪ್ರವೇಶಾತಿ ಪ್ರಕರಣ ಕುರಿತಂತೆ ತಾವು ಹೊರಡಿಸಿದ್ದ ಆದೇಶಕ್ಕೆ ಸಂಬಂಧಿಸಿ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರ ಸಹೋದರಗೆ ಕರೆ ಮಾಡಿದ್ದಕ್ಕಾಗಿ ಸಿಜೆಐ ನೇತೃತ್ವದ ಪೀಠವು ಅರ್ಜಿದಾರರ ತಂದೆಗೆ ಬುಧವಾರ ಛೀಮಾರಿ ಹಾಕಿತು.

ಸೂರ್ಯ ಕಾಂತ್

'ಯಾವತ್ತೂ ಇಂಥ ಸಾಹಸ ಮಾಡಬೇಡಿ' ಎಂದು ಕಟು ಮಾತುಗಳಲ್ಲಿ ಹೇಳಿದ ಸಿಜೆಐ ಸೂರ್ಯ ಕಾಂತ್, 'ನಿಮ್ಮ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಬೇಕಾಗುತ್ತದೆ' ಎಂದು ಆ ವ್ಯಕ್ತಿಗೆ ಎಚ್ಚರಿಕೆ ನೀಡಿದರು.

ಸಾಮಾನ್ಯ ವರ್ಗಕ್ಕೆ ಸೇರಿದ ಇಬ್ಬರು ಅಭ್ಯರ್ಥಿಗಳು (ಅರ್ಜಿದಾರರು) ಬೌದ್ಧ ಸಂಸ್ಥೆಗೆ ಸೇರಿದ ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶ ಕೋರಿದ್ದಕ್ಕೆ ಸಂಬಂಧಿಸಿದ ಪ್ರಕರಣದ ವಿಚಾರಣೆಯನ್ನು ಪೀಠವು ನಡೆಸಿತು. ವಿಚಾರಣೆ ವೇಳೆ,'ಅರ್ಜಿದಾರರ ತಂದೆ ನನ್ನ ಸಹೋದರಗೆ ಕರೆ ಮಾಡಿದ್ದಾರೆ. ನಾನು ಈ ಆದೇಶವನ್ನು ಹೇಗೆ ಹೊರಡಿಸಿದೆ ಎಂದು ಪ್ರಶ್ನಿಸಿದ್ದಾರೆ' ಎಂದ ಸಿಜೆಐ,'ನಾನು ಹೇಗೆ ಆದೇಶಿಸಬೇಕು ಎಂಬ ಬಗ್ಗೆ ಅವರು ನಿರ್ದೇಶನ ನೀಡುತ್ತಾರಾ' ಎಂದು ಅರ್ಜಿದಾರರ ಪರ ವಕೀಲರನ್ನು ಉದ್ದೇಶಿಸಿ ಹೇಳಿದ್ದಾರೆ.

'ನಿಮ್ಮ ಕಕ್ಷಿದಾರರ ತಂದೆ ವಿರುದ್ಧ ನ್ಯಾಯಾಂಗ ನಿಂದನೆ ಕ್ರಮ ಕೈಗೊಳ್ಳಬಾರದೇಕೆ? ಅವರು ಎಂಥ ಕೆಲಸ ಮಾಡಿದ್ದಾರೆ ಎಂಬ ಅರಿವು ನಿಮಗೆ ಇದೆಯೇ' ಎಂದು ಪ್ರಶ್ನಿಸಿದ್ದಾರೆ.

'ಇಂಥ ವ್ಯಕ್ತಿಗಳನ್ನು ಹೇಗೆ ನಿಭಾಯಿಸಬೇಕು ಎಂಬುದು ನನಗೆ ಗೊತ್ತು. ಅವರು ವಿದೇಶದಲ್ಲಿ ಅಡಗಿದರೂ ಸರಿ ಅವರ ವಿರುದ್ಧ ಕ್ರಮ ಕೈಗೊಳ್ಳುವುದು ಹೇಗೆಂಬುದು ಗೊತ್ತು' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಅರ್ಜಿದಾರರ ಪರ ವಕೀಲ,'ನನ್ನ ಕಕ್ಷಿದಾರರ ತಂದೆ ಈ ರೀತಿ ಮಾತನಾಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಇದಕ್ಕಾಗಿ ಕ್ಷಮೆ ಯಾಚಿಸುತ್ತೇನೆ' ಎಂದರು. ನಂತರ, ಅರ್ಜಿಯನ್ನು ವಿಚಾರಣೆ ಪಟ್ಟಿಗೆ ಹೊಸದಾಗಿ ಸೇರಿಸಿ, ಪೀಠ ಆದೇಶಿಸಿತು.

'ವಂದೇ ಮಾತರಂ' ಹಾಡಲೇಬೇಕು ಎಂಬ ಕಡ್ಡಾಯವಿಲ್ಲ: ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಸರ್ಕಾರದ ಎಲ್ಲ ಅಧಿಕೃತ ಕಾರ್ಯಕ್ರಮಗಳಲ್ಲಿ, ಶಾಲೆಗಳಲ್ಲಿ ರಾಷ್ಟ್ರೀಯ ಗೀತೆಯಾದ 'ವಂದೇ ಮಾತರಂ' ಹಾಡುವ ಕುರಿತು ಕೇಂದ್ರ ಗೃಹ ಸಚಿವಾಲಯ ಇದೇ ಜನವರಿಯಲ್ಲಿ ಹೊರಡಿಸಿದ್ದ ಸುತ್ತೋಲೆಯ ವಿರುದ್ಧ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಬುಧವಾರ ವಜಾ ಮಾಡಿತು. 'ವಂದೇ ಮಾತರಂ' ಹಾಡುವುದು ಕಡ್ಡಾಯ ಎಂದು ಹೇಳಲಾಗಿಲ್ಲ' ಎಂದು ನ್ಯಾಯಾಲಯ ಹೇಳಿತು.

ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜಾಯ್ ಮಲ್ಯಾ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರ ಪೀಠವು ಅರ್ಜಿಯ ವಿಚಾರಣೆ ನಡೆಸಿತು. ಮೊಹಮ್ಮದ್ ಸೈಯದ್ ನೂರಿ ಎಂಬುವರು ಅರ್ಜಿ ಸಲ್ಲಿಸಿದ್ದರು. ಅರ್ಜಿದಾರರ ಪರ ಹಿರಿಯ ವಕೀಲ ಸಂಜಯ್ ಹೆಗಡೆ ವಾದಿಸಿದರು.

'ವಂದೇ ಮಾತರಂ' ಹಾಡಲೇಬೇಕು ಎನ್ನುವುದು ಕಡ್ಡಾಯ ಎಂಬಂತೆ ಸುತ್ತೋಲೆಯಲ್ಲಿ ಎಲ್ಲೂ ಇಲ್ಲ. ಒಂದು ವೇಳೆ ಹಾಡಲಿಲ್ಲ ಎಂದಾದರೆ, ಅದಕ್ಕೆ ಶಿಕ್ಷೆಯನ್ನೂ ಹೇಳಲಾಗಿಲ್ಲ. ಆದ್ದರಿಂದ, ಇಲ್ಲದೇ ಇರುವ ಆತಂಕವನ್ನು ಸೃಷ್ಟಿಸಿಕೊಂಡು ಅರ್ಜಿ ಸಲ್ಲಿಸಲಾಗಿದೆ' ಎಂದು ನ್ಯಾ. ಪಂಚೋಲಿ ಅಭಿಪ್ರಾಯಪಟ್ಟರು.

'ಸುತ್ತೋಲೆಯಲ್ಲಿ ಹಾಡ ಬಹುದು ಎಂದಿದೆ. ಇದು ಸಲಹೆಯಷ್ಟೆ. ಹಾಡದಿದ್ದಲ್ಲಿ ಯಾರಾದರೂ ಶಿಕ್ಷೆ ನೀಡಿದರೆ ನಮ್ಮ ಬಳಿ ಬನ್ನಿ ಎಂದರು.

'ತಾರತಮ್ಯಕ್ಕೆ ದಾರಿ ಮಾಡಿಕೊಡುತ್ತದೆ': 'ಸುತ್ತೋಲೆಯಲ್ಲಿ ಕಡ್ಡಾಯವಾಗಿ 'ವಂದೇ ಮಾತರಂ' ಹಾಡಬೇಕು ಎಂದಿಲ್ಲ. ಆದರೂ, ಈ ಸಲಹೆಯು ಈ ಹಾಡನ್ನು ಹಾಡಲೇಬೇಕು ಎಂಬ ಒತ್ತಡ ಸೃಷ್ಟಿಸುತ್ತದೆ. ಒಂದು ವೇಳೆ ಹಾಡು ಹಾಡಲಿಲ್ಲ ಎಂದರೆ, ಹಾಡದವರಿಗೆ ಬೆದರಿಕೆ ಒಡ್ಡಲಾಗುತ್ತದೆ. ತಾರತಮ್ಯದಿಂದ ನೋಡಲಾಗುತ್ತದೆ' ಎಂದು ವಕೀಲ ಸಂಜಯ್ ಹೆಗಡೆ ವಾದಿಸಿದರು.

'ರಾಷ್ಟ್ರೀಯ ಗೀತೆಯನ್ನು ಗೌರವಿಸಿ ಎಂದು ಯಾರಾದರೂ ಸಲಹೆ ನೀಡಬೇಕೇ' ಎಂದು ಬೇರೊಂದು ಪ್ರಕರಣ ಸಂಬಂಧ ಇದೇ ಕೊಠಡಿಯಲ್ಲಿದ್ದ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು.

ಜೈಪುರದಲ್ಲಿ ಬುಧವಾರ ಮಹಿಳಾ ಕಾಂಗ್ರೆಸ್ ಕಾರ್ಯಕರ್ತರು ಎಲ್‌ಪಿಜಿ ಬಿಕ್ಕಟ್ಟಿನ ವಿರುದ್ಧ ಪ್ರತಿಭಟಿಸಿದರು – ಪಿಟಿಐ ಚಿತ್ರ

ಆದೇಶ ಧಿಕ್ಕರಿಸಿದ ಕೆಎಸ್‌ಒಯು

ಒಂದನೇ ಪುಟದಿಂದ...

ವರ್ಚ್ಯುವಲ್ ಮೂಲಕ ಮಾತನಾಡಿದ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್, 'ಕೆಎಸ್‌ಒಯು ಸಹಭಾಗಿತ್ವದಲ್ಲಿ, ಏಕಾತ್ಮ ಮಾನವ ದರ್ಶನ ತತ್ವದಲ್ಲಿಯೇ ಆಯೋಜಿಸಿರುವ ಸಮ್ಮೇಳನವು ಯಶಸ್ವಿಯಾಗಲಿ' ಎಂದರು.

'ಸಮ್ಮೇಳನಕ್ಕೆ ನೋಂದಾಯಿಸಿದ್ದ ದೇಶದ 640 ಮಂದಿ ಪೈಕಿ 423 ಮಂದಿ ಭಾಗಿಯಾಗಿದ್ದು, 118 ತಜ್ಞರು ಪ್ರಬಂಧ ಮಂಡಿಸುತ್ತಿದ್ದಾರೆ' ಎಂದು ಪ್ರಜ್ಞಾ ಪ್ರವಾಹ ಸಂಸ್ಥೆಯ ಪ್ರದೀಪ್ ಭಾರದ್ವಾಜ್ ಹೇಳಿದರು. ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪಾಲ್ಗೊಂಡಿದ್ದರು. ವಿಶ್ವ ವಿದ್ಯಾಲಯದ ಸಹಭಾಗಿತ್ವದ ಲೋಗೊ ಅನ್ನು ವೇದಿಕೆಯ ಬ್ಯಾನರ್‌ನಿಂದ ತೆಗೆಯಲಾಗಿತ್ತು. ಹೊರ ಆವರಣದ ಫ್ಲೆಕ್ಸ್‌ನಲ್ಲಿ ಹಾಗೆಯೇ ಇತ್ತು.

'ಶಿಷ್ಟಾಚಾರ ಉಲ್ಲಂಘಿಸಿ ಖಾಸಗಿ ಕಾರ್ಯಕ್ರಮಕ್ಕೆ ಕೆಎಸ್‌ಒಯು ಅನುಮತಿ ನೀಡಿದ್ದನ್ನು ಒಪ್ಪಲಾಗದು. ಕಾರ್ಯಕ್ರಮ ರದ್ದುಗೊಳಿಸಬೇಕು' ಎಂದು ಉನ್ನತ ಶಿಕ್ಷಣ ಇಲಾಖೆ ಆದೇಶ ಹೊರಡಿಸಿತ್ತು.

ಪೌರತ್ವ ಸಹ ಕಸಿಯುತ್ತಾರೆ: ಮಮತಾ

ಮೈನಾಗುರಿ(ಪಿಟಿಐ): ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಬುಧವಾರ ಬಿಜೆಪಿ, ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗ ಈಗ ಮತದಾನದ ಹಕ್ಕನ್ನು ಕಸಿದುಕೊಳ್ಳುತ್ತಿದೆ. ಮುಂದೆ ಪೌರತ್ವವನ್ನೂ ಕಸಿಯುತ್ತಾರೆ ಎಂದು ಆರೋಪಿಸಿದರು.

ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತ ನಾಡಿದ ಅವರು, 'ಎಸ್ಐಆರ್ ಮೂಲಕ ಕೆಲವು ಸಮುದಾಯಗಳನ್ನು ಚುನಾವಣಾ ಪ್ರಕ್ರಿಯೆಗಳಿಂದ ಹೊರಗಿಡಲಾಗುತ್ತಿದೆ. ಮುಂದೆ ಎನ್‌ಆರ್‌ಸಿ ಹೇರುವ ಮೂಲಕ ಪೌರತ್ವ ಕಸಿದುಕೊಳ್ಳುವ ಪ್ರಯತ್ನ ನಡೆಸುತ್ತದೆ' ಎಂದು ಎಚ್ಚರಿಸಿದರು.

ಆನ್‌ಲೈನ್‌ನಲ್ಲಿ ಮೂಲಭೂತವಾದ: ವ್ಯಕ್ತಿ ಸೆರೆ

ಬಳ್ಳಾರಿ: ಸಾಮಾಜಿಕ ಜಾಲತಾಣಗಳ ಮೂಲಕ ಮೂಲಭೂತವಾದ ಪ್ರಚಾರ ಮತ್ತು ನಿಷೇಧಿತ ಸಂಘಟನೆಗಳೊಂದಿಗೆ ನಂಟು ಹೊಂದಿರುವ ಆರೋಪದ ಮೇಲೆ ಬಳ್ಳಾರಿಯ ಅಬ್ದುಲ್ ಸಲಾಮ್ (36) ಎಂಬಾತನನ್ನು ಆಂಧ್ರಪ್ರದೇಶ ಪೊಲೀಸರು ಮಂಗಳವಾರ ರಾತ್ರಿ ಬಂಧಿಸಿದ್ದಾರೆ.

ವಿಜಯವಾಡ ಸೆಕೆಂಡ್ ಟೌನ್ ಠಾಣೆಯಲ್ಲಿ ಮಾರ್ಚ್ 23ರಂದು ದಾಖಲಾಗಿದ್ದ ಪ್ರಕರಣದ ಪ್ರಮುಖ ಆರೋಪಿ ನೀಡಿದ ಮಾಹಿತಿ ಆಧರಿಸಿ ಅಬ್ದುಲ್ ಸಲಾಮ್‌ನನ್ನು ಬಂಧಿಸಲಾಗಿದೆ. ಮಂಗಳವಾರವೇ ನ್ಯಾಯಾಲಯಕ್ಕೆ ಹಾಜರುಪಡಿಸಿ ಆಂಧ್ರಪ್ರದೇಶಕ್ಕೆ ಕರೆದೊಯ್ಯಲಾಯಿತು ಎಂದು ಗೊತ್ತಾಗಿದೆ.

'ಈತ ಇನ್‌ಸ್ಟಾಗ್ರಾಮ್ ಖಾತೆ ಮೂಲಕ ಇಸ್ಲಾಂ ಮೂಲಭೂತ ವಾದಿಗಳ ಜೊತೆ ಸಂಪರ್ಕ ಸಾಧಿಸಿದ್ದ. ಇಸ್ಲಾಮೀಕರಣ ಪರ ವಿಡಿಯೊಗಳನ್ನು ಹಂಚಿಕೊಳ್ಳುತ್ತಿದ್ದ. ವಿಧ್ವಂಸಕ ಕೃತ್ಯದ ಇಚ್ಛೆ ಹೊಂದಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕರ್ನಾಟಕ ಸೇರಿ ಹಲವೆಡೆ ಆಂಧ್ರ ಪೊಲೀಸರ ಕಾರ್ಯಾಚರಣೆ

ಭಯೋತ್ಪಾದನೆ ನಂಟು: 12 ಮಂದಿ ಬಂಧನ

ಅಮರಾವತಿ (ಪಿಟಿಐ): ಭಯೋತ್ಪಾದನೆ ನಂಟು ಹೊಂದಿರುವ ಶಂಕೆಯಡಿ ಕರ್ನಾಟಕದ ಯುವಕ ಸೇರಿದಂತೆ ವಿವಿಧ ರಾಜ್ಯಗಳ 12 ಮಂದಿಯನ್ನು ಆಂಧ್ರ ಪ್ರದೇಶ ಪೊಲೀಸರು ಬಂಧಿಸಿದ್ದಾರೆ.

'ಶಂಕಿತರನ್ನು ಸೆರೆ ಹಿಡಿಯುವ ಕಾರ್ಯಾಚರಣೆಗೆ ಬಿಹಾರ, ಕರ್ನಾಟಕ, ದೆಹಲಿ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ತೆಲಂಗಾಣ ಮತ್ತು ರಾಜಸ್ಥಾನಗಳಲ್ಲಿ ವಿಶೇಷ ತಂಡಗಳನ್ನು ನಿಯೋಜಿಸಲಾಗಿತ್ತು' ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

'ಬಂಧಿತರಲ್ಲಿ ಮೂವರು ಆಂಧ್ರಪ್ರದೇಶದ ವಿಜಯವಾಡ ದವರು. ಈ ಮೂವರು ಉಗ್ರಗಾಮಿ ಸಿದ್ಧಾಂತಗಳನ್ನು ಪ್ರಚುರಪಡಿಸುತ್ತಿದ್ದರು ಮತ್ತು ನಿಷೇಧಿತ ಭಯೋತ್ಪಾದಕ ಸಂಘಟನೆಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದರು. ಯುವಕರನ್ನು ಪ್ರೇರೆಪಿಸಲು, ಜಿಹಾದ್ ಚಟುವಟಿಕೆಗಳನ್ನು ಕೈಗೊಳ್ಳಲು ಮತ್ತು ತಮ್ಮ ಜಾಲವನ್ನು ದೇಶಾದ್ಯಂತ ವಿಸ್ತರಿಸಲು ಅವರು 'ಅಲ್ ಮಲಿಕ್ ಇಸ್ಲಾಮಿಕ್ ಯೂತ್' ಎಂಬ ಹೆಸರಿನಲ್ಲಿ ತಂಡವನ್ನು ಕಟ್ಟಿಕೊಂಡಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಮೂವರು ಅಲ್ ಕೈದಾ ಮತ್ತು ಐಎಸ್ ಸಂಘಟನೆಗಳಿಗೆ ಸಂಬಂಧಿಸಿದ ವಿದೇಶಿ ನಿರ್ವಾಹಕರೊಂದಿಗೆ ಸಂಪರ್ಕದಲ್ಲಿದ್ದರು ಮತ್ತು ರಾಷ್ಟ್ರವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿದ್ದರು. 'ಘ ಜ್ವಾ – ಇ – ಹಿಂದ್' (ಭಾರತದ ವಿರುದ್ಧದ ಯುದ್ಧ) ಎನ್ನುವ ಕಲ್ಪನೆಯೊಂದಿಗೆ ಅವರು ಕೆಲಸ ಮಾಡುತ್ತಿದ್ದರು' ಎಂದು ತಿಳಿಸಿದ್ದಾರೆ.

ಬೈಕ್ ಟ್ಯಾಕ್ಸಿ ಚಾಲಕನಾಗಿರುವ ಮೊಹಮ್ಮದ್ ರಹಮತುಲ್ಲಾ ಷರೀಫ್ ಅಂತರರಾಷ್ಟ್ರೀಯ ಭಯೋತ್ಪಾದಕ ನಾಯಕರ ದ್ವೇಷ ಭಾಷಣದಿಂದ ಪ್ರೇರಿತನಾಗಿದ್ದ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಉಗ್ರಗಾಮಿ ಸಿದ್ಧಾಂತಗಳನ್ನು ಬೆಂಬಲಿಸುತ್ತಿದ್ದ ಮತ್ತು ಪ್ರಚುರಪಡಿಸುತ್ತಿದ್ದ. ಲೇಸರ್ ಮಾರ್ಕಿಂಗ್ ಕಾರ್ಮಿಕನಾಗಿದ್ದ ಸೋಹೈಲ್ ಬೇಗ್ ಕೂಡಾ ಇದೇ ರೀತಿಯ ಕೃತ್ಯಗಳನ್ನು ನಡೆಸುತ್ತಿದ್ದ ಎಂಬುವುದು ತನಿಖೆಯಲ್ಲಿ ಪತ್ತೆಯಾಗಿದೆ. ರಹಮತುಲ್ಲಾ ಸಾಮಾಜಿಕ ಜಾಲತಾಣದ ಮೂಲಕ ವಿದೇಶಿ ವ್ಯಕ್ತಿ ಅಲ್-ಹಕೀಮ್ ಶುಕೂರ್ ಜೊತೆ ಸಂಪರ್ಕ ಸಾಧಿಸಿದ್ದ. ಅತನ ನಿರ್ದೇಶನದಂತೆ ಬಿಹಾರದ ಶದ್‌ಮನ್ ದಿಲ್‌ಕುಶ್ ಮತ್ತು ಹೈದರಾಬಾದ್‌ನ ಸೈದಾ ಬೇಗಂ ಪರಿಚಯಮಾಡಿಕೊಂಡಿದ್ದ.

ತರಬೇತಿಗೆ ಪಾಕ್‌ಗೆ ತೆರಳಲು ಸಿದ್ಧತೆ

'ಆಂಧ್ರಪ್ರದೇಶದ ಮೂವರು ಶಂಕಿತರು ಒಂದು ತಿಂಗಳೊಳಗೆ ಪಾಕಿಸ್ತಾನಕ್ಕೆ ತೆರಳಿ ತರಬೇತಿಯಲ್ಲಿ ಪಾಲ್ಗೊಳ್ಳಲು ಸಿದ್ಧತೆ ಮಾಡಿಕೊಳ್ಳುತ್ತಿದ್ದರು ಹಾಗೂ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನದಲ್ಲಿ ತರಬೇತಿ ಪಡೆಯುವಂತೆ ಯುವಕರನ್ನು ಪ್ರೇರೇಪಿಸುತ್ತಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಮೂವರು ತಮ್ಮನ್ನು ಮುಜಾಹಿದ್ದೀನ್‌ಗಳು ಎಂದು ಬಿಂಬಿಸಿಕೊಳ್ಳುವ ವಿಡಿಯೊ ಪೋಸ್ಟ್ ಮಾಡಿದ್ದಾರೆ. ಒಸಾಮಾ ಬಿನ್ ಲಾಡೆನ್ ವಿಡಿಯೊಗಳನ್ನು ನೋಡಿ, ಆತನನ್ನು ಆರೋಪಿಗಳು ಅನುಕರಿಸುತ್ತಿದ್ದರು' ಎಂದು ಪೊಲೀಸರು ಹೇಳಿದ್ದಾರೆ.

'ಆನ್‌ಲೈನ್ ಪೋಸ್ಟ್‌ಗಳಲ್ಲಿ ರಾಷ್ಟ್ರಧ್ವಜದ ಬದಲಿಗೆ ಐಎಸ್ ಧ್ವಜ ವನ್ನು ಹಾಕಿದ್ದಾರೆ, ರಾಷ್ಟ್ರಗೀತೆ ಅಣಕಿಸಿದ್ದಾರೆ, ರಾಷ್ಟ್ರಧ್ವಜವನ್ನು ಸುಟ್ಟುಹಾಕಿದ್ದಾರೆ, ಐಎಸ್ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಮತ್ತು ಅದರ ವಿರುದ್ಧ ಇರು ವವರ ಬಗ್ಗೆ ದ್ವೇಷ ಹರಡಿ, ಭಾರತವನ್ನು ಇಸ್ಲಾಮಿಕ್ ಸ್ಟೇಟ್ ಆಗಿ ಪರಿವರ್ತಿಸುವ ಉದ್ದೇಶ ಹೊಂದಿ ದ್ದಾರೆ ಹೇಳಿಕೊಂಡಿದ್ದಾರೆ' ಎಂದಿದ್ದಾರೆ.

'ಪರವಾನಗಿ ರದ್ದುಗೊಂಡ ಎನ್‌ಜಿಒ ಸ್ವತ್ತು ನಿರ್ವಹಣೆಗೆ ಹೊಸ ಪ್ರಾಧಿಕಾರ'

ಮಸೂದೆ ಮಂಡನೆ

ನವದೆಹಲಿ(ಪಿಟಿಐ): ವಿದೇಶಗಳಿಂದ ದೇಣಿಗೆ ಪಡೆಯುವ ಎನ್‌ಜಿಒಗಳ ಮೇಲಿನ ಮೇಲ್ವಿಚಾರಣೆಯನ್ನು ಮತ್ತಷ್ಟು ಬಿಗಿಗೊಳಿಸುವುದು ಹಾಗೂ ಪರವಾನಗಿ ರದ್ದು ಗೊಂಡ ಎನ್‌ಜಿಒಗಳ ಸ್ವತ್ತುಗಳ ಜಪ್ತಿ ಮತ್ತು ನಿರ್ವಹಣೆಗೆ ಹೊಸ ಪ್ರಾಧಿಕಾರ ರಚನೆ ಸೇರಿ ಹಲವು ಅವಕಾಶಗಳನ್ನು ಒಳಗೊಂಡ ತಿದ್ದುಪಡಿ ಮಸೂದೆಯನ್ನು ಲೋಕಸಭೆಯಲ್ಲಿ ಬುಧವಾರ ಮಂಡಿಸಲಾಯಿತು.

ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಅವರು 'ವಿದೇಶಿ ದೇಣಿಗೆ (ನಿಯಂತ್ರಣ) ತಿದ್ದುಪಡಿ ಮಸೂದೆ–2026'ಅನ್ನು ಲೋಕಸಭೆಯಲ್ಲಿ ಮಂಡಿಸಿದರು.

ವಿದೇಶಗಳಿಂದ ಪಡೆಯುವ ದೇಣಿಗೆಗಳ ಮೇಲ್ವಿಚಾರಣೆ, ನಿರ್ವಹಣೆಗೆ 'ಉದ್ದೇಶಿತ ಪ್ರಾಧಿಕಾರ'ದ ಮೂಲಕ ಸಮಗ್ರ ಚೌಕಟ್ಟು ರೂಪಿಸುವ ಅವಕಾಶಗಳನ್ನು ಈ ಮಸೂದೆ ಒಳಗೊಂಡಿದೆ ಎಂದು ಸಚಿವ ರಾಯ್ ಸದನಕ್ಕೆ ತಿಳಿಸಿದರು.

'ಎನ್‌ಜಿಒಗಳ ನೋಂದಣಿ ರದ್ದು ಗೊಂಡ ಅಥವಾ ಒಪ್ಪಿಸಿದ ಸಂದರ್ಭ ಗಳಲ್ಲಿ, ಅವುಗಳು ಪಡೆಯು ತ್ತಿದ್ದ ವಿದೇಶಿ ದೇಣಿಗೆಗಳು ಹಾಗೂ ಅವುಗಳಿಂದ ಸೃಜಿಸಲಾದ ಆಸ್ತಿಗಳ ನಿರ್ವಹಣೆಗೆ ಸಂಬಂಧಿಸಿ ಕೆಲ ಕಾನೂನಾತ್ಮಕ ನ್ಯೂನತೆ ಗಳಿರುವುದನ್ನು ಗುರುತಿಸಲಾಗಿದೆ' ಎಂದೂ ಅವರು ಹೇಳಿದರು.

'ಪೂರ್ವಾನುಮತಿ ಪಡೆದ ಬಳಿಕ ವಿದೇಶಿ ದೇಣಿಗೆಗಳನ್ನು ಸ್ವೀಕರಿಸಲು ಹಾಗೂ ಬಳಕೆ ಮಾಡಿಕೊಳ್ಳುವುದಕ್ಕೆ ಕಾಲಮಿತಿ ನಿಗದಿ ಮಾಡುವ ಅವಕಾಶಗಳನ್ನು ಈ ಮಸೂದೆ ಒಳಗೊಂಡಿದೆ. ಪರವಾನಗಿ ಅವಧಿ ಮುಕ್ತಾಯಗೊಂಡ ಸಂದರ್ಭದಲ್ಲಿ, ಎನ್‌ಜಿಒಗಳ ಕಾರ್ಯಾಚರಣೆ ಸಮಾಪ್ತಿಗೊಳಿಸುವ ಪ್ರಕ್ರಿಯೆ ನೆರವೇರಿಸುವುದು, ನವೀಕರಣ, ದಂಡಗಳನ್ನು ತರ್ಕಬದ್ಧಗೊಳಿಸುವುದು ಹಾಗೂ ತನಿಖೆ ಆರಂಭಕ್ಕೂ ಮುನ್ನ ಕೇಂದ್ರ ಸರ್ಕಾರದ ಅನುಮೋದನೆ ಪಡೆಯಬೇಕು ಎಂಬ ಹಲವಾರು ಅವಕಾಶಗಳು ಕೂಡ ಮಸೂದೆಯಲ್ಲಿವೆ' ಎಂದು ವಿವರಿಸಿದರು.

'ಬಲವಂತದ ಮತಾಂತರಕ್ಕೆ ಹಾಗೂ ವೈಯಕ್ತಿಕ ಲಾಭಕ್ಕಾಗಿ ವಿದೇಶಿ ದೇಣಿಗೆಗಳನ್ನು ಬಳಸುವವರಿಗೆ ಖಂಡಿತವಾಗಿ ಈ ಮಸೂದೆ ಅಪಾಯಕಾರಿ' ಎಂದರು.

ಪ್ರಮುಖ ಅಂಶಗಳು

- ವಿದೇಶಿ ದೇಣಿ ನಿಯಂತ್ರಣ ಕಾಯ್ದೆ(ಎಫ್‌ಸಿಆರ್‌ಎ) 2010 ಅನ್ನು 2011ರ ಮೇ 1ರಂದು ಜಾರಿಗೊಳಿಸಲಾಯಿತು. 2016, 2018 ಹಾಗೂ 2020ರಲ್ಲಿ ಈ ಕಾಯ್ದೆಗೆ ತಿದ್ದುಪಡಿ ತರಲಾಗಿದೆ
- ಎಫ್‌ಸಿಆರ್‌ಎ ಅಡಿ ದೇಶದಲ್ಲಿ ಪ್ರಸ್ತುತ 16 ಸಾವಿರ ಎನ್‌ಜಿಒಗಳು ನೋಂದಣಿ ಮಾಡಿಸಿವೆ
- ಈ ಎನ್‌ಜಿಒಗಳು ವಾರ್ಷಿಕ ಅಂದಾಜು ₹22 ಸಾವಿರ ಕೋಟಿಗೂ ಅಧಿಕ ವಿದೇಶಿ ದೇಣಿಗೆ ಪಡೆಯುತ್ತಿವೆ

ಎರಡನೇ ಚಿನ್ನ ಗೆದ್ದ ಪ್ರಿಯಾಂಕಾ

ಒಳಾಂಗಣ ಅಥ್ಲೆಟಿಕ್ಸ್: ಉನ್ನತಿಗೆ 2 ಪದಕ
● ಅನಿಮೇಶ್ ಕುಜೂರ್ ಅನರ್ಹ

ಕರ್ನಾಟಕದ ಉನ್ನತಿ ಅಯ್ಯಪ್ಪ (ಎಡ) 'ಎಕ್ಸ್' ಚಿತ್ರ

ಭುವನೇಶ್ವರ (ಪಿಟಿಐ): ಕರ್ನಾಟಕದ ಪ್ರಿಯಾಂಕಾ ಸಿ. ಅವರು ಚೊಚ್ಚಲ ರಾಷ್ಟ್ರೀಯ ಒಳಾಂಗಣ ಅಥ್ಲೆಟಿಕ್ ಚಾಂಪಿಯನ್‌ಷಿಪ್ಸ್‌ನ ಎರಡನೇ ಹಾಗೂ ಅಂತಿಮ ದಿನವಾದ ಬುಧವಾರ ತಮ್ಮ ಎರಡನೇ ಚಿನ್ನ ಗೆದ್ದುಕೊಂಡರು. ವೇಗದ ಓಟಗಾರ್ತಿ ಉನ್ನತಿ ಅಯ್ಯಪ್ಪ ಒಂದು ಬೆಳ್ಳಿ ಮತ್ತು ಒಂದು ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಕಳಿಂಗ ಕ್ರೀಡಾ ಸಂಕೀರ್ಣದಲ್ಲಿ ಮಂಗಳವಾರ 3,000 ಮೀ. ಓಟದಲ್ಲಿ 'ಚಿನ್ನದ ಓಟ' ಓಡಿದ್ದ ಪ್ರಿಯಾಂಕಾ ಎರಡನೇ ದಿನ ತಮ್ಮ ನೆಚ್ಚಿನ ರೇಸ್ ಆದ 1,500 ಮೀ. ಓಟವನ್ನು 4ನಿ.34.31 ಸೆ.ಗಳಲ್ಲಿ ಕ್ರಮಿಸಿ ಅಗ್ರಸ್ಥಾನ ಪಡೆದರು. ಮಂಡ್ಯದ ಓಟಗಾರ್ತಿ ಸೀನಿಯರ್ ಮಟ್ಟದಲ್ಲಿ ಇದೇ ಮೊದಲ ಸಲ ಎರಡು ಚಿನ್ನ ಜಯಿಸಿದ್ದಾರೆ.

ಬೆಂಗಳೂರಿನ ರಾಷ್ಟ್ರೀಯ ಶ್ರೇಷ್ಠತಾ ಕೇಂದ್ರದಲ್ಲಿ ಒ.ಪಿ.ಜೈಶಾ ಅವರಿಂದ ತರಬೇತಿ ಪಡೆಯುತ್ತಿರುವ 22 ವರ್ಷ ವಯಸ್ಸಿನ ಪ್ರಿಯಾಂಕಾ ಅವರು ಏಷ್ಯಾ 23 ವರ್ಷದೊಳಗಿನವರ ಕೂಟದಲ್ಲಿ ಭಾಗವಹಿಸುವ ಗುರಿ ಹೊಂದಿದ್ದಾರೆ. ಈ ಕೂಟ ಜುಲೈ ತಿಂಗಳಲ್ಲಿ ಚೀನಾದಲ್ಲಿ ನಡೆಯಲಿದೆ.

ಮಹಿಳೆಯರ 60 ಮೀ. ಓಟದಲ್ಲಿ, 21 ವರ್ಷ ವಯಸ್ಸಿ ಉನ್ನತಿ ಅಯ್ಯಪ್ಪ ಅವರು 'ಫೋಟೊ ಫಿನಿಷ್'ನಲ್ಲಿ ಬೆಳ್ಳಿಗೆ ಸಮಾಧಾನಪಟ್ಟುಕೊಳ್ಳಬೇಕಾಯಿತು. ಮಹಾರಾಷ್ಟ್ರದ ಹರಿತಾ ಭದ್ರಾ 7.32 ಸೆ.ಗಳೊಡನೆ ಮೊದಲಿಗರಾದರೆ, ಉನ್ನತಿ 7.46 ಸೆಕೆಂಡುಗಳನ್ನು ತೆಗೆದುಕೊಂಡರು.

ಇದಕ್ಕೆ ಮೊದಲು, ಮೊದಲ ಸಲ 400 ಮೀ. ಓಟದಲ್ಲಿ ಭಾಗವಹಿಸಿದ್ದ ಉನ್ನತಿ ಕಂಚಿನ ಪದಕ ಗೆದ್ದಿದ್ದರು. ಉತ್ತರ ಪ್ರದೇಶದ ಸಲೋನಿ ನಾಗರ್ (53.73 ಸೆ.) ಚಿನ್ನ ಜಯಿಸಿದರು. ಉನ್ನತಿ 56.45 ಸೆಕೆಂಡುಗಳಲ್ಲಿ ಓಟ ಪೂರೈಸಿದರು.

ಅನಿಮೇಶ್ ಅನರ್ಹ: 60 ಮೀ. ಓಟದಲ್ಲಿ ಸ್ಪ್ರಿಂಟರ್ ಗುರಿಂದರ್‌ವೀರ್ ಸಿಂಗ್ ಮತ್ತು ಪೋಲ್‌ವಾಲ್ಟ್‌ನಲ್ಲಿ ರೀಗನ್ ಜಿ. ರಾಷ್ಟ್ರೀಯ ದಾಖಲೆಗಳನ್ನು ಸ್ಥಾಪಿಸಿದ್ದು ದಿನದ ವಿಶೇಷ ಎನಿಸಿತು.

ಪಂಜಾಬ್‌ನ ವೇಗದ ಓಟಗಾರ ಗುರಿಂದರ್‌ವೀರ್ ಸಿಂಗ್ 60 ಮೀ. ಓಟದಲ್ಲಿ ರಾಷ್ಟ್ರೀಯ ದಾಖಲೆ ಅವಧಿಯೊಳಗೆ ಓಡಿದರು. ಆದರೆ ಈ ರೇಸ್ ಗೆಲ್ಲುವ ನೆಚ್ಚಿನ ಸ್ಪರ್ಧಿಯಾಗಿದ್ದ ಅನಿಮೇಶ್ ಕುಜೂರ್ ಅವರು ನಾಟಕೀಯ ಫೈನಲ್‌ನಲ್ಲಿ ಅನರ್ಹಗೊಂಡರು.

ರಿಲಯನ್ಸ್ ಪ್ರತಿಷ್ಠಾನ ಪ್ರತಿನಿಧಿಸಿರುವ 25 ವರ್ಷ ವಯಸ್ಸಿನ ಈ ಓಟಗಾರ ತಮ್ಮ ಮೊದಲ ಒಳಾಂಗಣ ರೇಸ್‌ಅನ್ನು 6.60 ಸೆ.ಗಳಲ್ಲಿ ಕ್ರಮಿಸಿದರು. ಈ ಹಿಂದಿನ ದಾಖಲೆ ಇಲಾಕ್ಯ ದಾಸನ್ (6.67 ಸೆ., 2018ರಲ್ಲಿ) ಹೆಸರಿನಲ್ಲಿತ್ತು. ಆದರೆ ಭಾರತ ಅಥ್ಲೆಟಿಕ್ ಫೆಡರೇಷನ್, ರಾಷ್ಟ್ರೀಯ ಒಳಾಂಗಣ ದಾಖಲೆಗಳ ಅಧಿಕೃತ ಪಟ್ಟಿ ಹೊಂದಿಲ್ಲ.

ಈ ರೇಸ್ ಮೂರು ಬಾರಿ 'ಫಾಲ್ಸ್ ಸ್ಟಾರ್ಟ್' ಕಂಡು ಸ್ಥಳೀಯರೇ ಆದ ಅಂತರರಾಷ್ಟ್ರೀಯ ಓಟಗಾರ ಅನಿಮೇಶ್ ಕುಜೂರ್ ಅನರ್ಹರಾಗಬೇಕಾಯಿತು. 100 ಮೀ. ಮತ್ತು 200 ಮೀ. ಓಟದಲ್ಲಿ ಹಾಲಿ ರಾಷ್ಟ್ರೀಯ ಚಾಂಪಿಯನ್ ಆಗಿರುವ ಅನಿಮೇಶ್ ನಿರಾಶೆಯಿಂದ ಒಳಾಂಗಣ ತೊರೆದರು. ಆ ವೇಳೆ ಕಳಿಂಗ ಕ್ರೀಡಾ ಸಂಕೀರ್ಣ ಮೌನವಾಯಿತು.

ಒಡಿಶಾದ ಲಾಲು ಪ್ರಸಾದ್ ಭೋಯಿ (6.65 ಸೆ.) ಮತ್ತು ಹರಿಯಾಣದ ನುರ್ಶುತ್ (6.71 ಸೆ.) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು.

ಅನಿಮೇಶ್ ಅವರಂತೆ ಒಡಿಶಾದ ದಂಡಪತಿ ಮೃತ್ಯಮ್ ಮತ್ತು ಕರ್ನಾಟಕದ ನೇಹಲ್ ಸಾಗರ್ ಅವರೂ ಅನರ್ಹಗೊಂಡರು.

'ಅನಿಮೇಶ್ ಅವರಿಗೆ ಪ್ರತಿಭಟನಾರ್ಥ ಓಟಕ್ಕೆ ಅವಕಾಶ ನೀಡಬೇಕಿತ್ತು. ನನಗೆ ಆಗ ಕಠಿಣ ಸ್ಪರ್ಧೆ ಎದುರಾಗುತಿತ್ತು' ಎಂದು ಗುರಿಂದರ್‌ವೀರ್ ಓಟದ ನಂತರ ಪ್ರತಿಕ್ರಿಯಿಸಿದರು. ಗುರಿಂದರ್ ಅವರು 2025ರ ಆರಂಭದಲ್ಲಿ 100 ಮೀ. ಓಟದಲ್ಲಿ ರಾಷ್ಟ್ರೀಯ ದಾಖಲೆ ಸ್ಥಾಪಿಸಿದ್ದರು. ಆದರೆ ನಂತರ ಸ್ಥಿರ ಪ್ರದರ್ಶನ ನೀಡಲು ವಿಫಲರಾಗಿದ್ದರು.

ತಮಿಳುನಾಡಿನ ಸಿ.ರೀಗನ್ ಅವರು ಪೋಲ್‌ವಾಲ್ಟ್‌ನಲ್ಲಿ 5.30 ಮೀ. ಜಿಗಿದು ಒಳಾಂಗಣ ದಾಖಲೆ ಸುಧಾರಿಸಿದರು. 25 ವರ್ಷ ವಯಸ್ಸಿನ ರೀಗನ್ ರಾಷ್ಟ್ರೀಯ ದಾಖಲೆ (ಒಳಾಂಗಣ ಮತ್ತು ಹೊರಾಂಗಣ ಸೇರಿ) 5.40 ಮೀ. ದಾಟಲು ಯತ್ನಿಸಿದರು. ಆದರೆ ಯಶಸ್ಸು ಪಡೆಯಲಿಲ್ಲ. ಮಧ್ಯ ಪ್ರದೇಶದ ದೇವ್ ಮೀನಾ (5.40 ಮೀ.) ರಾಷ್ಟ್ರೀಯ ದಾಖಲೆ ವೀರ ಎನಿಸಿದ್ದಾರೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಆವರಣದಲ್ಲಿ ಗೌರವ

ಆರ್‌ಸಿಬಿ ಅಭಿಮಾನಿಗಳ ಸ್ಮಾರಕ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋದ ವರ್ಷ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಜಯೋತ್ಸವದ ಸಂದರ್ಭದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಸಾವಿಗೀಡಾದ 11 ಅಭಿಮಾನಿಗಳ ಗೌರವಾರ್ಥ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಮುಖ್ಯ ಕಟ್ಟಡದ ಬಳಿ ಸ್ಮಾರಕ ನಿರ್ಮಿಸಲಾಗಿದೆ.

ಕಪ್ಪು ಶಿಲೆಯಲ್ಲಿ ನಿರ್ಮಾಣ ಮಾಡಲಾಗಿರುವ ಸ್ಮಾರಕದಲ್ಲಿ ಬಿಳಿ ಬಣ್ಣದ ಇಂಗ್ಲಿಷ್ ಅಕ್ಷರಗಳಲ್ಲಿ 'ಇನ್ ಮೆಮೊರಿ ಆಫ್ ಅವರ್ ಕ್ರಿಕೆಟ್ ಫ್ಯಾನ್ಸ್. 04 ಜೂನ್ 2025' ಎಂದು ಉಲ್ಲೇಖಿಸಲಾಗಿದೆ.

ಬುಧವಾರ ಈ ಸ್ಮಾರಕ ಅನಾವರಣಗೊಳಿಸಿದ ಗೃಹ ಸಚಿವ ಡಾ. ಜಿ. ಪರಮೇಶ್ವರ, 'ಹೋದ ವರ್ಷ ಈ ಕ್ರೀಡಾಂಗಣದ ಬಳಿ ದುರಂತ ನಡೆದಿತ್ತು. ಆಗ ಸರ್ಕಾರ, ಕೆಎಸ್‌ಸಿಎ ಬಹಳಷ್ಟು ಟೀಕೆಗಳಿಗೆ ಗುರಿಯಾಗಿದ್ದವು. ಆ ಸಂದರ್ಭದಲ್ಲಿ ಸರ್ಕಾರವು ಮಧ್ಯಪ್ರವೇಶ ಮಾಡಿ ಹಲವು ಕ್ರಮಗಳನ್ನು ಕೈಗೊಂಡಿತು. ಮೃತಪಟ್ಟ ಯುವಕ, ಯುವತಿಯರ ಕುಟುಂಬಗಳಿಗೆ ಸರ್ಕಾರ, ಕೆಎಸ್‌ಸಿಎ ಮತ್ತು ಆರ್‌ಸಿಬಿ ಸಂತಾಪ ಸೂಚಿಸಿದ್ದವು. ಇಂತಹ ಘಟನೆ ಆಗಬಾರದಿತ್ತು. ಇದಕ್ಕೆ ಕಾರಣವಾದ ಲೋಪಗಳನ್ನು ಗುರುತಿಸಲು ನ್ಯಾಯಮೂರ್ತಿ ಡಿ ಕುನ್ಹಾ ಅವರ ನಿಯೋಗ ರಚಿಸಲಾಗಿತ್ತು. ಅವರು ನೀಡಿದ ಶಿಫಾರಸುಗಳನ್ನು ಜಾರಿಗೊಳಿಸಲು ಸೂಚಿಸಿದ್ದೆವು. ಅದರ ಪ್ರಕಾರ ಅಲ್ಪಾವಧಿ ಮತ್ತು ದೀರ್ಘಾವಧಿ ಶಿಫಾರಸುಗಳನ್ನು ಜಾರಿ ಮಾಡಲಾಗಿದೆ' ಎಂದು ಹೇಳಿದರು.

'ಇದೇ 28ರಂದು ಐಪಿಎಲ್ ಇಲ್ಲಿ ಪಂದ್ಯ ಆಯೋಜನೆಗೊಳ್ಳಲಿದೆ. ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಎಲ್ಲ ರೀತಿಯ ಕ್ರಮಗಳನ್ನು ಕೆಎಸ್‌ಸಿಎ, ಆರ್‌ಸಿಬಿ ಮತ್ತು ಪೊಲೀಸ್ ಇಲಾಖೆ ಸೇರಿದಂತೆ ಎಲ್ಲರೂ ತೆಗೆದುಕೊಂಡಿದ್ದಾರೆ. ಎಲ್ಲವೂ ಉತ್ತಮವಾಗಿ ನಡೆಯುವ ಭರವಸೆ ಇದೆ' ಎಂದರು.

'ಮುಂದಿನ ದಿನಗಳಲ್ಲಿ ಏನೇ ಆದರೂ ಕೆಎಸ್‌ಸಿಎ ಮತ್ತು ಆರ್‌ಸಿಬಿ ಇಬ್ಬರೂ ಬಾಧ್ಯಸ್ಥರು. ಪ್ರೇಕ್ಷಕರ ಸುರಕ್ಷತೆಗೆ ಆದ್ಯತೆ ನೀಡಬೇಕು' ಎಂದೂ ಹೇಳಿದರು.

ಈ ಸಂದರ್ಭದಲ್ಲಿ ಶಾಸಕ ಎಂ.ಎ. ಹ್ಯಾರಿಸ್, ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್, ಉಪಾಧ್ಯಕ್ಷ ಸುಜಿತ್ ಸೋಮಸುಂದರ, ಕಾರ್ಯದರ್ಶಿ ಸಂತೋಷ್ ಮೆನನ್ ಹಾಜರಿದ್ದರು.

ಸ್ಮಾರಕ ಅನಾವರಣಕ್ಕೂ ಮುನ್ನ ಹಿಂದೂ, ಮುಸ್ಲಿಂ, ಕ್ರೈಸ್ತ ಹಾಗೂ ಸಿಖ್ ಧರ್ಮಗುರುಗಳಿಂದ ಪ್ರಾರ್ಥನೆಗಳು ನಡೆದವು. ಬೆಳಿಗ್ಗೆ ಗಣಹೋಮ ಮತ್ತು ವಿಶೇಷ ಪೂಜೆಗಳು ನೆರವೇರಿದವು.

ಹೋದ ವರ್ಷ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಜಯೋತ್ಸವದ ಸಂದರ್ಭದಲ್ಲಿ ಸಂಭವಿಸಿದ್ದ ಕಾಲ್ತುಳಿತದಲ್ಲಿ ಮೃತರಾದ 11 ಅಭಿಮಾನಿಗಳ ಗೌರವಾರ್ಥ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಆವರಣದಲ್ಲಿ ನಿರ್ಮಿಸಲಾಗಿರುವ ಸ್ಮಾರಕವನ್ನು ಗೃಹ ಸಚಿವ ಜಿ.ಪರಮೇಶ್ವರ ಅನಾವರಣಗೊಳಿಸಿದರು. ವಕ್ತಾರ ವಿನಯ್ ಮೃತ್ಯುಂಜಯ, ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎನ್‌.ಎ.ಹ್ಯಾರಿಸ್ ಹಾಜರಿದ್ದರು ಪ್ರಜಾವಾಣಿ ಚಿತ್ರ

ಪಿ1 ಸ್ಟ್ಯಾಂಡ್‌ನಲ್ಲಿ 11 ಆಸನ ಖಾಲಿ

ಹೋದ ವರ್ಷ ಕಾಲ್ತುಳಿತದಲ್ಲಿ ಸಾವಿಗೀಡಾದವರ ಗೌರವಕ್ಕಾಗಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆಯುವಾಗ 11 ಆಸನಗಳನ್ನು ಖಾಲಿ ಉಳಿಸಲು ನಿರ್ಧರಿಸಲಾಗಿದೆ. ಪಿ1 ಸ್ಟ್ಯಾಂಡ್‌ನಲ್ಲಿನ ಆಸನಗಳನ್ನು ಖಾಲಿ ಬಿಡಲಾಗುವುದು.

'ಅದೊಂದು ದುರದೃಷ್ಟಕರ ಘಟನೆ. ಅದರಲ್ಲಿ ಮೃತರಾದವರಿಗೆ ನಮ್ಮ ಸಂಸ್ಥೆಯಿಂದ ಸಕಲ ರೀತಿಯಲ್ಲಿಯೂ ಗೌರವ ಸೂಚಿಸಲಾಗುತ್ತಿದೆ. ಅದರ ಭಾಗವಾಗಿ ಪಿ1 ಸ್ಟ್ಯಾಂಡ್‌ನಲ್ಲಿ 11 ಆಸನಗಳನ್ನು ಖಾಲಿ ಇಡಲಾಗುವುದು' ಎಂದು ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ಸುದ್ದಿಗಾರರಿಗೆ ತಿಳಿಸಿದರು.

ಬುಧವಾರ ನಡೆದ ಸ್ಮಾರಕ ಅನಾವರಣದ ಸಂದರ್ಭದಲ್ಲಿ ಮೃತರ ಕುಟುಂಬಗಳ ಅನುಪಸ್ಥಿತಿಯ ಕುರಿತು ಪ್ರತಿಕ್ರಿಯಿಸಿದ ಅವರು, 'ಸರಳ ಸಮಾರಂಭ ಮಾಡಿದ್ದೇವೆ. ಮೃತಪಟ್ಟ ಅಭಿಮಾನಿಗಳ ಪಾಲಕರ ಬಗ್ಗೆ ನಮಗೆ ಸಂಪೂರ್ಣ ಸಹಾನುಭೂತಿ ಇದೆ. ಅವರನ್ನು ಇಲ್ಲಿಗೆ ಕರೆಸುವ ಕುರಿತು ನಮ್ಮ ಸಮಿತಿಯಲ್ಲಿ ಬಹಳಷ್ಟು ಮಾತುಕತೆಯೂ ನಡೆಯಿತು. ಈ ಸಂದರ್ಭದಲ್ಲಿ ಕರೆಸುವುದರಿಂದ ಅವರಲ್ಲಿ ಮತ್ತೆ ನೋವು ಮರುಕಳಿಸುವ ಸಾಧ್ಯತೆಯಿದೆ. ಆದ್ದರಿಂದ ಈ ಕಾರ್ಯಕ್ರಮಕ್ಕೆ ಅವರನ್ನು ಆಹ್ವಾನಿಸಲಿಲ್ಲ. ಮುಂದಿನ ದಿನಗಳಲ್ಲಿ ಸೂಕ್ತ ಸಮಯದಲ್ಲಿ ಆಹ್ವಾನಿಸಲಾಗುವುದು' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಚಿಟಿಕೆ ಸುದ್ದಿ

ಅಂತರ ವಿ.ವಿ. ಕೊಕ್ಕೊ ಇಂದಿನಿಂದ

ದಾವಣಗೆರೆ: ಇಲ್ಲಿನ ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಭಾರತೀಯ ವಿಶ್ವವಿದ್ಯಾಲಯಗಳ ಒಕ್ಕೂಟದ ಸಹಯೋಗದಲ್ಲಿ ಮಾರ್ಚ್ 26ರಿಂದ ಏಪ್ರಿಲ್ 4ರವರೆಗೆ 2025–26ನೇ ಸಾಲಿನ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯಗಳ ಪುರುಷ ಮತ್ತು ಮಹಿಳಾ ಕೊಕ್ಕೊ ಟೂರ್ನಿ ಆಯೋಜಿಸಲಾಗಿದೆ.

ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಪುದುಚೇರಿ ಹಾಗೂ ಕೇರಳದ ಒಟ್ಟು 178 ತಂಡಗಳ 3 ಸಾವಿರಕ್ಕೂ ಹೆಚ್ಚಿನ ಕ್ರೀಡಾಪಟುಗಳು ಟೂರ್ನಿಯಲ್ಲಿ ಭಾಗವಹಿಸುತ್ತಿದ್ದಾರೆ.

ಮಾರ್ಚ್ 26ರಿಂದ 29ರವರೆಗೆ ಪುರುಷರ ವಿಭಾಗದ ಪಂದ್ಯಗಳು, ಏಪ್ರಿಲ್ 1ರಿಂದ 4ರವರೆಗೆ ಮಹಿಳಾ ವಿಭಾಗದ ಪಂದ್ಯಗಳು ನಡೆಯಲಿವೆ. ಎರಡೂ ವಿಭಾಗಗಳಲ್ಲಿ ತಲಾ 89 ತಂಡಗಳು ಪಾಲ್ಗೊಳ್ಳಲಿವೆ. 4 ಮಣ್ಣಿನ ಅಂಕಣಗಳನ್ನು ಸಿದ್ಧಗೊಳಿಸಲಾಗಿದ್ದು, ಈ ಪೈಕಿ ಒಂದರಲ್ಲಿ ಹೊನಲು ಬೆಳಕಿನ ಪಂದ್ಯಗಳು ನಡೆಯಲಿವೆ.

ಕ್ವಾರ್ಟರ್‌ಫೈನಲ್‌ಗೆ ರಾಜ್ಯ ಬಾಲಕರ ತಂಡ

ಬೆಂಗಳೂರು: ಕರ್ನಾಟಕ ಬಾಲಕರ ತಂಡವು ಉತ್ತರಪ್ರದೇಶದ ಮೀರತ್‌ನಲ್ಲಿ ಬುಧವಾರ ಆರಂಭಗೊಂಡ 38ನೇ ಜೂನಿಯರ್ ರಾಷ್ಟ್ರೀಯ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿತು.

ಬಿ. ಮನೋಜ್ ಗೌಡ ನಾಯಕತ್ವದ ರಾಜ್ಯ ತಂಡವು ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 32–26 ರಿಂದ ಪಂಜಾಬ್ ತಂಡದ ವಿರುದ್ಧ ರೋಚಕ ಜಯ ಸಾಧಿಸಿತು. ಮನೋಜ್ 22 ಅಂಕ ಗಳಿಸಿದರೆ, ಉಪನಾಯಕ ಸಂತೋಷ್‌ಕುಮಾರ್ 10 ಅಂಕ ಗಳಿಸಿ ಉತ್ತಮ ಜೊತೆ ನೀಡಿದರು.

ಇದಕ್ಕೆ ಮೊದಲು ನಡೆದ ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಕರ್ನಾಟಕ ತಂಡವು 27–23ರಿಂದ ರಾಜಸ್ಥಾನ ವಿರುದ್ಧ ಹಾಗೂ 33–20ರಿಂದ ಪುದುಚೇರಿ ತಂಡಗಳ ವಿರುದ್ಧ ಜಯಿಸಿತ್ತು.

ಬಾಲಕಿಯರ ತಂಡವು ಪ್ರಿಕ್ವಾರ್ಟರ್ ಫೈನಲ್ ಸುತ್ತಿಗೆ ಮುನ್ನಡೆಯಿತು. ತನುಷಾ ನಾಯಕತ್ವದ ರಾಜ್ಯ ತಂಡವು ಅರ್ಹತಾ ಸುತ್ತಿನ ಪಂದ್ಯಗಳಲ್ಲಿ 25–15ರಿಂದ ಮೇಘಾಲಯ ವಿರುದ್ಧ ಹಾಗೂ 29-20ರಿಂದ ಒಡಿಶಾ ವಿರುದ್ಧ ಜಯ ಸಾಧಿಸಿತು.

ಹೆಬ್ಬಾಳ ತಂಡಕ್ಕೆ ಜಯ

ಬೆಂಗಳೂರು: ಸಂಘಟಿತ ಪ್ರದರ್ಶನ ನೀಡಿದ ಹೆಬ್ಬಾಳ ತಂಡವು ಸಿ.ಎಂ ಕಪ್ ಫುಟ್‌ಬಾಲ್ ಟೂರ್ನಿಯ ಸಿ ಗುಂಪಿನ ಪಂದ್ಯದಲ್ಲಿ ಬುಧವಾರ 10–0ಯಿಂದ ಯಲಹಂಕ ತಂಡವನ್ನು ಏಕಪಕ್ಷೀಯವಾಗಿ ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಹೆಬ್ಬಾಳ ತಂಡದ ಜಿ.ಉದಿತಿ (18ನೇ, 29ನೇ ಹಾಗೂ 62ನೇ ನಿ.) ಮೂರು ಗೋಲು ಗಳಿಸಿ ಮಿಂಚಿದರು. ಅಶ್ವಿನ್ ಚಕ್ರವರ್ತಿ (24ನೇ ಹಾಗೂ 48ನೇ ನಿ.), ವಿಶಾಲ್ ವಿಲ್ಲಾ (47ನೇ ಹಾಗೂ 79ನೇ ನಿ.) ಮತ್ತು ಮೊಹಮ್ಮದ್ ಅಮೀನುದ್ದೀನ್ (53ನೇ ಹಾಗೂ 67ನೇ ನಿ.) ತಲಾ ಎರಡು ಗೋಲು ಹೊಡೆದರೆ, ಮೊಹಮ್ಮದ್ ಅಹ್ಮದ್ (64ನೇ ನಿ.) ಒಂದು ಗೋಲು ಗಳಿಸಿದರು.

ಡಿ ಗುಂಪಿನ ಪಂದ್ಯದಲ್ಲಿ ಕೆ.ಆರ್.ಪುರ ತಂಡವು 3–0ಯಿಂದ ಯಶವಂತಪುರ ತಂಡದ ವಿರುದ್ಧ ಜಯ ಸಾಧಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸನ್‌ರೈಸರ್ಸ್ ಅಭ್ಯಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ಸಂಜೆ ಸನ್‌ರೈಸರ್ಸ್ ಹೈದರಾಬಾದ್ ತಂಡದ ಆಟಗಾರರು ಅಭ್ಯಾಸ ಮಾಡಿದರು.

ಇದೇ 28ರಂದು ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಸನ್‌ರೈಸರ್ಸ್ ತಂಡವು ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಕಣಕ್ಕಿಳಿಯಲಿದೆ. ತಂಡದ ನಾಯಕ, ಆಸ್ಟ್ರೇಲಿಯಾದ ಪ್ಯಾಟ್ ಕಮಿನ್ಸ್ ಕೂಡ ಅಭ್ಯಾಸ ನಡೆಸಿದರು. ಆದರೆ ಅವರು ಪಂದ್ಯ ಆಡುವಷ್ಟು ಫಿಟ್ ಆಗಿರುವುದು ಇನ್ನೂ ಖಚಿತವಾಗಿಲ್ಲ. ಟೂರ್ನಿಯ ಮೊದಲ ಎರಡು ಪಂದ್ಯಗಳಿಗೆ ಸನ್‌ರೈಸರ್ಸ್ ತಂಡವನ್ನು ಹಂಗಾಮಿ ನಾಯಕ ಇಶಾನ್ ಕಿಶನ್ ಮುನ್ನಡೆಸಲಿದ್ದಾರೆ.

ಇಶಾನ್ ಅವರು ಮುಂಬೈನಲ್ಲಿ ನಡೆದ ಐಪಿಎಲ್ ತಂಡಗಳ ನಾಯಕರ ಸಭೆಯಲ್ಲಿ ಭಾಗವಹಿಸಿದ್ದರಿಂದ ಅಭ್ಯಾಸಕ್ಕೆ ಲಭ್ಯವಿರಲಿಲ್ಲ.

ಸ್ಫೋಟಕ ಶೈಲಿಯ ಬ್ಯಾಟರ್ ಟ್ರಾವಿಸ್ ಹೆಡ್, ಅಭಿಷೇಕ್ ಶರ್ಮಾ, ಹೆನ್ರಿಚ್ ಕ್ಲಾಸೆನ್, ನಿತೀಶ್ ಕುಮಾರ್ ರೆಡ್ಡಿ, ಲಿಯಾಮ್ ಲಿವಿಂಗ್‌ಸ್ಟೋನ್, ಹರ್ಷಲ್ ಪಟೇಲ್ ಮತ್ತಿತರರು ತಾಲೀಮು ನಡೆಸಿದರು.

ಆರ್‌ಸಿಬಿ ತಂಡದ ಆಟಗಾರರು ವಿಶ್ರಾಂತಿ ಪಡೆದರು.



ಲಿಯಾಮ್ ಲಿವಿಂಗ್‌ಸ್ಟೋನ್ ಅವರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ಅಭ್ಯಾಸ ನಡೆಸಿದರು 'ಎಕ್ಸ್' ಚಿತ್ರ

ಇಂಪ್ಯಾಕ್ಟ್ ಪ್ಲೇಯರ್ ನಿಯಮ ನಾಯಕರ ಅಸಮಾಧಾನ

ನವದೆಹಲಿ (ಪಿಟಿಐ): ಇಂಪ್ಯಾಕ್ಟ್ ಪ್ಲೇಯರ್ ನಿಯಮದ ಕುರಿತು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಬಹುತೇಕ ಎಲ್ಲ ತಂಡಗಳ ನಾಯಕರೂ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

2023ರಿಂದ ಜಾರಿಯಾಗಿರುವ ಈ ನಿಯಮದ ಕುರಿತು ಭಿನ್ನಾಭಿಪ್ರಾಯಗಳು ವ್ಯಕ್ತವಾಗುತ್ತಲೇ ಇವೆ. ಆದರೂ 2024ರಲ್ಲಿ ಮತ್ತೆ ಅದನ್ನು ವಿಸ್ತರಿಸಲಾಯಿತು. ಈ ವರ್ಷದ ಟೂರ್ನಿಯಲ್ಲಿಯೂ ಇರಲಿದೆ. ಬುಧವಾರ ಮುಂಬೈನಲ್ಲಿ ನಡೆದ ಐಪಿಎಲ್ ನಾಯಕರ ಸಭೆಯಲ್ಲಿ ಈ ಕುರಿತು ಚರ್ಚೆ ನಡೆಯಿತು.

'10 ತಂಡಗಳ ನಾಯಕರು ಭಾಗವಹಿಸಿದ್ದರು. ಬಹುತೇಕ ಎಲ್ಲರೂ ಈ ಇಂಪ್ಯಾಕ್ಟ್ ಪ್ಲೇಯರ್ ನಿಯಮದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. 2027ರ ಆವೃತ್ತಿಯಲ್ಲಿಯಾದರೂ ನಿಯಮದ ವಿಶ್ಲೇಷಣೆ ನಡೆಯಬೇಕು ಎಂಬ ಆಗ್ರಹ ಕೇಳಿಬಂತು' ಎಂದು ಐಪಿಎಲ್ ಮೂಲಗಳು ತಿಳಿಸಿವೆ.

ಈಚೆಗೆ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕ ಅಕ್ಷರ್ ಪಟೇಲ್ ಅವರು ಕೂಡ ಈ ನಿಯಮವನ್ನು ಟೀಕಿಸಿದ್ದರು. ಈ ಹಿಂದೆ ರೋಹಿತ್ ಶರ್ಮಾ ಕೂಡ ನಿಯಮದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು.

'ನಾನೊಬ್ಬ ಆಲ್‌ರೌಂಡರ್ ಆಗಿರುವೆ. ಆದರೆ ಈ ನಿಯಮ ನನಗೆ ಇಷ್ಟವಿಲ್ಲ. ಮೊದಲಿಗೆ ತಂಡಗಳು ಇಂಪ್ಯಾಕ್ಟ್ ಪ್ಲೇಯರ್ ಆಗಿ ಆಲ್‌ರೌಂಡರ್‌ಗಳನ್ನೇ ಆಯ್ಕೆ ಮಾಡುತ್ತಿದ್ದವು. ಕ್ರಮೇಣ ಫ್ರ್ಯಾಂಚೈಸಿಗಳು ಇಂಪ್ಯಾಕ್ಟ್ ನಿಯಮದಲ್ಲಿ ಬ್ಯಾಟರ್ ಅಥವಾ ಬೌಲರ್‌ಗಳನ್ನೇ ಕಣಕ್ಕಿಳಿಸುತ್ತಿವೆ. ಆಲ್‌ರೌಂಡರ್ ಬೇಕಿಲ್ಲವೆಂದು ಹೇಳುತ್ತಿವೆ' ಎಂದು ಅಕ್ಷರ್ ಹೇಳಿದ್ದರು.


ಅಕ್ಷರ್ ಪಟೇಲ್

ಇಂಡಿಯನ್ ಪ್ರೀಮಿಯರ್ ಲೀಗ್

ವಿದೇಶಿ ಆಟಗಾರ ಗ್ಲೆನ್ ಫಿಲಿಪ್ಸ್ ಅವರೂ ಈ ಹಿಂದೆ, 'ಈ ನಿಯಮವು ಆಲ್‌ರೌಂಡರ್‌ಗಳಿಗೆ ಮಾರಕವಾಗಲಿದೆ' ಎಂದಿದ್ದರು.

ಸಭೆಯಲ್ಲಿದ್ದ ನಾಯಕರು ಮೊದಲ ಇನಿಂಗ್ಸ್‌ನಲ್ಲಿ 10 ಓವರ್‌ಗಳ ಚೆಂಡು ಬದಲಾವಣೆ ಮಾಡುವ ನಿಯಮ ಬೇಕು ಎಂದು ಹೇಳಿದರು.

ಆರ್‌ಸಿಬಿಗೆ ಕೆಎಂಎಫ್ ಪ್ರಾಯೋಜಕತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಹಾಲು ಮಹಾಮಂಡಳಿಯು ನಂದಿನಿ ಉತ್ಪನ್ನಗಳ ಪ್ರಚಾರದ ಭಾಗವಾಗಿ ಐಪಿಎಲ್–2026 ಲೀಗ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ಪ್ರಾಯೋಜಕತ್ವ ವಹಿಸಲಿದೆ.

ಎರಡು ವರ್ಷದ ಹಿಂದೆ ಸ್ಕಾಟ್ಲೆಂಡ್, ಐರ್ಲೆಂಡ್ ತಂಡಗಳಿಗೆ ಕೆಎಂಎಫ್ ಪ್ರಾಯೋಜಕತ್ವ ನೀಡಿತ್ತು. ಈ ಬಾರಿ ಆರ್‌ಸಿಬಿ ತಂಡದ ಅಧಿಕೃತ ಪಾಲುದಾರರಾಗಿ ಕಾರ್ಯನಿರ್ವಹಿಸಲಿದ್ದು, ಇದಕ್ಕಾಗಿ ₹4.80 ಕೋಟಿ ವಿನಿಯೋಗ ಮಾಡಲಿದೆ.

'ಕ್ರೀಡೆ ಮತ್ತು ಯುವಜನರನ್ನು ಪ್ರೋತ್ಸಾಹಿಸುವ ಧ್ಯೇಯವನ್ನು ನಂದಿನಿ ಬ್ರ್ಯಾಂಡ್ ಹೊಂದಿದೆ. ಕರ್ನಾಟಕದ ಹೆಮ್ಮೆಯ ಎರಡು ಪ್ರತಿಷ್ಠಿತ ಬ್ರ್ಯಾಂಡ್‌ಗಳಾದ 'ನಂದಿನಿ' ಮತ್ತು 'ಆರ್‌ಸಿಬಿ' ಒಂದಾಗಿರುವುದು ಸಂತೋಷದ ವಿಷಯ. ಆರ್‌ಸಿಬಿ ಅಭಿಮಾನಿಗಳೊಂದಿಗೆ ನಂಟನ್ನು ವಿಸ್ತರಿಸಿ ಲೀಗ್‌ನಲ್ಲಿ ಸಂಭ್ರಮಿಸಲು ಎದುರು ನೋಡುತ್ತಿದ್ದೇವೆ' ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ತಿಳಿಸಿದ್ದಾರೆ.

'ನಂದಿನಿ ಬ್ರ್ಯಾಂಡ್‌ನ ಯಾವುದೇ ಜಾಹೀರಾತು ಕ್ರೀಡಾಂಗಣದಲ್ಲಿ ಪ್ರಕಟವಾಗುವುದಿಲ್ಲ. ಆಟಗಾರರ ಜರ್ಸಿಗಳ ಮೇಲೂ ನಂದಿನಿ ಲಾಂಛನ ಇರುವುದಿಲ್ಲ. ಬದಲಿಗೆ ನಂದಿನಿ ಉತ್ಪನ್ನಗಳ ಜಾಹೀರಾತಿನಲ್ಲಿ ಆರ್‌ಸಿಬಿ ಆಟಗಾರರಾದ ವಿರಾಟ್ ಕೊಹ್ಲಿ, ರಜತ್ ಪಾಟೀದಾರ್, ದೇವದತ್ತ ಪಡಿಕಲ್ ಅವರ ಭಾವಚಿತ್ರ ಬಳಸಿಕೊಳ್ಳಲು ಅವಕಾಶ ಇರಲಿದೆ' ಎಂದು ಹೇಳಿದ್ದಾರೆ.

ಆಗ ಆಟಗಾರ; ಈಗ ಮಾಲೀಕ!

ಪ್ರಜಾವಾಣಿ ವಾರ್ತೆ

ಆರ್ಯಮನ್ ಬಿರ್ಲಾ

ಬೆಂಗಳೂರು: ಎಂಟು ವರ್ಷಗಳ ಹಿಂದಷ್ಟೇ ರಜತ್ ಪಾಟೀದಾರ್ ಮತ್ತು ವೆಂಕಟೇಶ್ ಅಯ್ಯರ್ ಅವರೊಂದಿಗೆ ಮಧ್ಯಪ್ರದೇಶ ರಾಜ್ಯ ಕ್ರಿಕೆಟ್ ತಂಡದಲ್ಲಿ ಆಡಿದ್ದವರು ಆರ್ಯಮನ್ ವಿಕ್ರಮ್ ಬಿರ್ಲಾ. ಅವರಿಬ್ಬರೊಂದಿಗೆ ಡ್ರೆಸಿಂಗ್ ರೂಮ್ ಹಂಚಿಕೊಂಡಿದ್ದರು.

ಇದೀಗ ಅದೇ ಆರ್ಯಮನ್ ಅವರು ರಜತ್ ನಾಯಕರಾಗಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸಹಮಾಲೀಕರಾಗಿದ್ದಾರೆ. ವೆಂಕಟೇಶ್ ಕೂಡ ಈ ವರ್ಷ ಆರ್‌ಸಿಬಿಯಲ್ಲಿ ಸ್ಥಾನ ಪಡೆದಿದ್ದಾರೆ.

ಶ್ರೀಮಂತ ಉದ್ಯಮಿ ಕುಮಾರ ಮಂಗಲಂ ಬಿರ್ಲಾ ಅವರ ಮಗ ಆರ್ಯಮನ್. ಬಾಲ್ಯದಿಂದಲೂ ಕ್ರಿಕೆಟ್ ಬಗ್ಗೆ ಒಲವು. ಮಧ್ಯಪ್ರದೇಶ ತಂಡದಲ್ಲಿ 9 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದರು. ಆರಂಭಿಕ ಬ್ಯಾಟರ್ ಆಗಿದ್ದ ಅವರು ಒಂದು ಅಜೇಯ ಶತಕ ಸೇರಿದಂತೆ 414 ರನ್ ಗಳಿಸಿದ್ದರು. 4 ಲಿಸ್ಟ್ ಎ ಪಂದ್ಯಗಳನ್ನೂ ಆಡಿದ್ದರು.

2018ರಲ್ಲಿ ಐಪಿಎಲ್ ಟೂರ್ನಿಯ ರಾಜಸ್ಥಾನ ರಾಯಲ್ಸ್ ತಂಡವು ಅವರನ್ನು ₹30 ಲಕ್ಷ ಮೌಲ್ಯಕ್ಕೆ ಖರೀದಿಸಿತ್ತು. ಆದರೆ ಅವರಿಗೆ ಒಂದು ಪಂದ್ಯದಲ್ಲಿಯೂ ಆಡುವ ಅವಕಾಶ ದೊರೆತಿರಲಿಲ್ಲ. 2020ರಿಂದ ಅವರು ಪೂರ್ಣಪ್ರಮಾಣದಲ್ಲಿ ತಮ್ಮ ಉದ್ಯಮದತ್ತ ಒಲವು ತೋರಿದರು. ಅದರಿಂದಾಗಿ ಕ್ರಿಕೆಟ್‌ನಲ್ಲಿ ಕಾಣಿಸಿಕೊಳ್ಳಲಿಲ್ಲ.

ಮಂಗಳವಾರ ನಡೆದ ಬಿಡ್‌ನಲ್ಲಿ ಆದಿತ್ಯ ಬಿರ್ಲಾ ಒಕ್ಕೂಟ ₹16700 ಕೋಟಿಗೆ ಆರ್‌ಸಿಬಿ ತಂಡವನ್ನು ಖರೀದಿಸಿತು. ಆರ್ಯಮನ್ ಅವರು ಫ್ರ್ಯಾಂಚೈಸಿಯ ಅಧ್ಯಕ್ಷರಾದರು.

ಈಜು: 5 ಚಿನ್ನ ಬಾಚಿದ ಕರ್ನಾಟಕ

ಚೊಚ್ಚಲ 'ಖೇಲೊ ಇಂಡಿಯಾ' ಆದಿವಾಸಿ ಕ್ರೀಡಾಕೂಟ

ರಾಯಪುರ (ಪಿಟಿಐ): ಈಜಿನಲ್ಲಿ 'ಪವರ್‌ಹೌಸ್' ಎನಿಸಿರುವ ಕರ್ನಾಟಕ ತಂಡದ ಸ್ಪರ್ಧಿಗಳು, ಬುಧವಾರ ಆರಂಭವಾದ ಮೊತ್ತಮೊದಲ ಖೇಲೊ ಇಂಡಿಯಾ ಆದಿವಾಸಿ ಕ್ರೀಡಾಕೂಟದಲ್ಲಿ ಸಂಪೂರ್ಣ ಮೇಲುಗೈ ಸಾಧಿಸಿದರು. ಪಣಕ್ಕಿದ್ದ ಆರು ಚಿನ್ನದ ಪದಕಗಳಲ್ಲಿ ಐದನ್ನು ಬಾಚಿಕೊಂಡರು. ಕರ್ನಾಟಕದ ಧೋನೀಶ್ ಎನ್. ಪುರುಷರ 200 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಗಮನ ಸೆಳೆದರು.

ಕರ್ನಾಟಕದ ಮಣಿಕಂಠ ಮತ್ತು ಮೆಹಂಜಲಿ ತಲಾ ಎರಡು ಚಿನ್ನದ ಪದಕಗಳನ್ನು ಗೆದ್ದರು.

ಧೋನೀಶ್ 3ನಿ.03.55 ಸೆ.ಗಳಲ್ಲಿ ಗುರಿತಲುಪಿದರು. ಕರ್ನಾಟಕದ ಇನ್ನೊಬ್ಬ ಸ್ಪರ್ಧಿ ಕೀರ್ತನ್ ಶರತ್ (2ನಿ:10.99) ಸುಮಾರು ಏಳು ಸೆಕೆಂಡುಗಳು ಅಂತರದಲ್ಲಿ ಹಿಂದೆಬಿದ್ದು ಬೆಳ್ಳಿ ಗೆದ್ದರು. ಮಹಾರಾಷ್ಟ್ರದ ಭಕ್ತೀಶ್ ಕುಮ್ರೆ (2ನಿ:14.73 ಸೆ.) ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಮೊದಲ ದಿನದ ಸ್ಪರ್ಧೆಗಳ ನಂತರ ಕರ್ನಾಟಕ ಪದಕ ಪಟ್ಟಿಯಲ್ಲಿ (5 ಚಿನ್ನ ಸಹಿತ 7 ಪದಕ) ಅಗ್ರಸ್ಥಾನದಲ್ಲಿದೆ. ಒಡಿಶಾ (1 ಚಿನ್ನ ಸೇರಿ 4 ಪದಕ) ಎರಡನೇ ಮತ್ತು ಆತಿಥೇಯ ಛತ್ತೀಸಗಢ (2 ಪದಕ) ನಾಲ್ಕನೇ ಸ್ಥಾನದಲ್ಲಿದೆ.

ಒಡಿಶಾದ ಅಂಜಲಿ ಮುಂಡಾ ಮಹಿಳೆಯರ 200 ಮೀ ಫ್ರೀಸ್ಟೈಲ್ ಸ್ಪರ್ಧೆಯನ್ನು 2ನಿ.39.02 ಸೆ.ಗಳಲ್ಲಿ ಜಯಿಸಿ ಕರ್ನಾಟಕದ ಏಕಸ್ವಾಮ್ಯ ತಡೆದರು. ಕೂದಲೆಳೆ ಅಂತರದಲ್ಲಿ ಹಿಂದೆಬಿದ್ದ ಕರ್ನಾಟಕದ ನಿಧಿ ಎಸ್. (2:39.09 ಸೆ.) ಎರಡನೇ ಸ್ಥಾನ ಮತ್ತು ಒಡಿಶಾದ ಶ್ರೀಯಾ ಪದಿಯಾಮಿ (2:49.04) ಮೂರನೇ ಸ್ಥಾನ ಗಳಿಸಿದರು.

ಪುರುಷರ 100 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಮಣಿಕಂಠ 1ನಿ.07.41 ಸೆ.ಗಳಲ್ಲಿ ಗುರಿತಲುಪಿದರೆ, ಮಹಾರಾಷ್ಟ್ರದ ಪಲಾಶ್ ಠಾಕೂರ್ (1:11.69 ಸೆ.) ನಾಲ್ಕು ಸೆಕೆಂಡುಗಳ ಅಂತರದಲ್ಲಿ ಎರಡನೇ ಸ್ಥಾನಕ್ಕೆ ಸರಿದರು.

ಚಿನ್ನ ಗೆದ್ದ ಕರ್ನಾಟಕದ ಧೋನೀಶ್ ಎನ್. 'ಎಸ್‌ಎಐ' ಚಿತ್ರ

ಮಣಿಕಂಠ ಅವರು 50 ಮೀ. ಬಟರ್‌ಫ್ಲೈನಲ್ಲೂ 27.60 ಸೆ.ಗಳ ಅವಧಿಯೊಡನೆ ಚಿನ್ನ ಗೆದ್ದರು. ಅಸ್ಸಾಮಿನ ಫಿಮಿನೊ ಇಮೋನ್‌ಲಾಲುಂಗ್ (27.69 ಸೆ.) ಎರಡನೇ ಸ್ಥಾನ ಗಳಿಸಿದರು.

ಮಹಿಳೆಯರ ವಿಭಾಗದಲ್ಲಿ ಮೆಹಂಜಲಿ ಸಾಧನೆ ಎದ್ದುಕಂಡಿತು. 100 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ 1ನಿ.25.81 ಸೆ.ಗಳಲ್ಲಿ ಗುರಿತಲುಪಿದ ಅವರು ಮೊದಲಿಗರಾದರು. ಛತ್ತೀಸಗಢದ ಅನುಷ್ಕಾ ಭಗತ್ (1:29.10) ಎರಡನೇ ಸ್ಥಾನ ಗಳಿಸಿದರು. ಅವರು ನಂತರ 50 ಮೀ. ಬಟರ್‌ಫ್ಲೈ ಸ್ಪರ್ಧೆಯನ್ನು 34.67 ಸೆ.ಗಳಲ್ಲಿ ಕ್ರಮಿಸಿ ಚಿನ್ನ ಗೆದ್ದರು.

ಕಾನರ್ ಅರ್ಧಶತಕ; ದಕ್ಷಿಣ ಆಫ್ರಿಕಾಕ್ಕೆ ಟಿ20 ಸರಣಿ

ಕ್ರೈಸ್ಟ್‌ಚರ್ಚ್ (ಎಪಿ): ಮಧ್ಯಮ ಕ್ರಮಾಂಕದ ಬ್ಯಾಟರ್ ಕಾನರ್ ಎಸ್ಟರ್‌ಹುಯಿಝೆನ್ (75; 33ಎ, 4x5, 6x6) ಅವರ ಮಿಂಚಿನ ಅರ್ಧಶತಕದ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡ ಬುಧವಾರ ನಡೆದ ಐದನೇ ಹಾಗೂ ಅಂತಿಮ ಟಿ20 ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು 33 ರನ್‌ಗಳಿಂದ ಸೋಲಿಸಿತು. ಇದರ ಜೊತೆಯಲ್ಲೇ ಐದು ಪಂದ್ಯಗಳ ಸರಣಿಯನ್ನು 3–2 ರಿಂದ ಗೆದ್ದುಕೊಂಡಿತು.

ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ದಕ್ಷಿಣ ಆಫ್ರಿಕಾ 4 ವಿಕೆಟ್‌ಗೆ 187 ರನ್ ಗಳಿಸಿತು. ಉತ್ತರವಾಗಿ ನ್ಯೂಜಿಲೆಂಡ್ 8 ವಿಕೆಟ್‌ಗೆ 154 ರನ್ ಗಳಿಸಲಷ್ಟೇ ಶಕ್ತವಾಯಿತು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 20 ಓವರುಗಳಲ್ಲಿ 4 ವಿಕೆಟ್‌ಗೆ 187 (ವಿಯಾನ್ ಮುಲ್ಡರ್ 31, ರುಬಿನ್ ಹರ್ಮನ್ 39, ಕಾನರ್ ಎಸ್ಟರ್‌ಹುಯಿಝೆನ್ 75; ಬೆನ್ ಸಿಯರ್ಸ್ 37ಕ್ಕೆ2); ನ್ಯೂಜಿಲೆಂಡ್: 20 ಓವರುಗಳಲ್ಲಿ 8 ವಿಕೆಟ್‌ಗೆ 154 (ಬೆವನ್ ಜೇಕಬ್ಸ್ 36; ಜೆರಾಲ್ಡ್ ಕೊಟ್ಜಿಯಾ 21ಕ್ಕೆ2, ವಿಯಾನ್ ಮುಲ್ಡರ್ 28ಕ್ಕೆ2). **ಪಂದ್ಯ ಶ್ರೇಷ್ಠ ಮತ್ತು ಸರಣಿ ಶ್ರೇಷ್ಠ:** ಕಾನರ್ ಎಸ್ಟರ್‌ಹುಯಿಝೆನ್.

ವಿಶ್ವ ರ್‍ಯಾಲಿ: ಮಸ್ಕರೇನಾಸ್– ಗಗನ್ ಕಣಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಜೋಡಿ ಡೀನ್ ಮಸ್ಕರೇನಾಸ್ ಮತ್ತು ಗಗನ್ ಕರುಂಬಯ್ಯ ಅವರು ಸ್ಪೇನ್‌ನ ಕೆನರಿ ದ್ವೀಪದಲ್ಲಿ ಏಪ್ರಿಲ್‌ನಲ್ಲಿ ನಡೆಯಲಿರುವ ವಿಶ್ವ ರ್‍ಯಾಲಿ ಚಾಂಪಿಯನ್‌ಷಿಪ್‌ನ (ಡಬ್ಲ್ಯುಆರ್‌ಸಿ) ಐದನೇ ಸುತ್ತಿನಲ್ಲಿ ಭಾಗವಹಿಸಲಿದ್ದಾರೆ.

ಮಂಗಳೂರಿನ ಮಸ್ಕರೇನಾಸ್ ಅವರು ಚಾಲಕರಾಗಿ ಹಾಗೂ ಕೊಡಗಿನ ಗಗನ್ ಅವರು ಸಹಚಾಲಕರಾಗಿ ಕಣಕ್ಕಿಳಿಯಲಿದ್ದಾರೆ. ನರೇನ್‌ಕುಮಾರ್ ಹಾಗೂ ಗೌರವ್ ಗಿಲ್ ಅವರ ಬಳಿಕ ಪ್ರತಿಷ್ಠಿತ ರ್‍ಯಾಲಿಯಲ್ಲಿ ಭಾಗವಹಿಸುತ್ತಿರುವ ಭಾರತದ ಮೂರನೇ ಚಾಲಕ ಎಂಬ ಗೌರವಕ್ಕೆ ಮಸ್ಕರೇನಾಸ್ ಪಾತ್ರರಾಗಿದ್ದಾರೆ.

(ಎಡದಿಂದ) ವಿಶ್ವ ರ್‍ಯಾಲಿ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸುತ್ತಿರುವ ಭಾರತದ ಚಾಲಕ ಡೀನ್ ಮಸ್ಕರೇನಾಸ್, ಎಂಜಿನಿಯರ್ ಕರ್ಣ ಕಡೂರು ಹಾಗೂ ಸಹಚಾಲಕ ಗಗನ್ ಕರುಂಬಯ್ಯ

ಮಸ್ಕರೇನಾಸ್ ಅವರು ಯುರೋಪ್ ಮೂಲದ 'ಪಿಎಚ್ ಸ್ಪೋರ್ಟ್ಸ್' ಸಂಸ್ಥೆ ಸಿದ್ಧಪಡಿಸಿದ ಫೋರ್ಡ್ ಫಿಯೆಸ್ಟಾ ರ್‍ಯಾಲಿ–3 ಕಾರನ್ನು ಚಲಾಯಿಸಲಿದ್ದಾರೆ.

'ನಮ್ಮ ಸಂಪೂರ್ಣ ಗಮನ ಡಬ್ಲ್ಯುಆರ್‌ಸಿ ಮೇಲಿದೆ. ಹೀಗಾಗಿ, 2026ನೇ ಸಾಲಿನ ರಾಷ್ಟ್ರೀಯ ರ್‍ಯಾಲಿ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿಯದಿರಲು ಮಸ್ಕರೇನಾಸ್ ಮತ್ತು ಗಗನ್ ನಿರ್ಧರಿಸಿದ್ದಾರೆ' ಎಂದು ಸಿದ್ವಿನ್ ಎನರ್ಜಿ ಎಂಜಿನಿಯರಿಂಗ್ ಮುಖ್ಯಸ್ಥ ಮೋಹನ್ ನಾಗರಾಜನ್ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಹೇಳಿದರು. ಎಂಜಿನಿಯರ್ ಕರ್ಣ ಕಡೂರು ಅವರು ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿದ್ದರು.

ಟಿಎಸ್‌ಐ ರೇಸಿಂಗ್ ತಂಡದ ಈ ಜೋಡಿಯು 2025ನೇ ಸಾಲಿನ ರಾಷ್ಟ್ರೀಯ ರ್‍ಯಾಲಿ ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಚಾಂಪಿಯನ್ ಆಗಿತ್ತು.

ಸ್ಯಾಫ್ ಫುಟ್‌ಬಾಲ್: ಭಾರತ ತಂಡಕ್ಕೆ ಪಾಕ್ ಸವಾಲು ಇಂದು

ಮಾಲೆ (ಮಾಲ್ದೀವ್ಸ್, ಪಿಟಿಐ): ಬದ್ಧ ಪ್ರತಿಸ್ಪರ್ಧಿಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳು ಇಲ್ಲಿ ನಡೆಯುತ್ತಿರುವ ಸ್ಯಾಫ್ 20 ವರ್ಷದೊಳಗಿನರ ಫುಟ್‌ಬಾಲ್ ಟೂರ್ನಿಯ ಗುಂಪು ಹಂತದ ಪಂದ್ಯದಲ್ಲಿ ಗುರುವಾರ ಮುಖಾಮುಖಿಯಾಗಲಿವೆ.

ಪಾಕಿಸ್ತಾನ ತಂಡವು ಮಂಗಳವಾರ ನಡೆದ ಬಿ ಗುಂಪಿನ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶದ ವಿರುದ್ಧ 2–0ಯಿಂದ ಸೋತಿದೆ. ಹೀಗಾಗಿ, ಗುರುವಾರ ನಡೆಯಲಿರುವ ಪಂದ್ಯವು ಪಾಕ್ ತಂಡಕ್ಕೆ 'ಮಾಡು ಇಲ್ಲವೇ ಮಡಿ' ಎಂಬಂತಾಗಿದೆ.

ಸಂವಿಧಾನವೇ ಬೆಳಕು

ಪ್ರಜಾವಾಣಿ

ಗುರುವಾರ • ಮಾರ್ಚ್ 26, 2026

ಭವ್ಯ ಭಾರತದ ಆತ್ಮವೇ ಆಗಿರುವ ಸಂವಿಧಾನವು ಕೈದೀವಿಗೆಯಂತೆ ದೇಶದ ಜನರನ್ನು ಮುನ್ನಡೆಸುತ್ತಿದೆ. ಶ್ರೇಣೀಕೃತ ವ್ಯವಸ್ಥೆ, ಕರ್ಮಠ ಜಾತಿ ಪದ್ಧತಿ, ಧರ್ಮ ದ್ವೇಷಗಳು ತಾಂಡವವಾಡುತ್ತಿರುವ ಹೊತ್ತಿನೊಳಗೆ ಅಶಕ್ತರು, ಅಬಲರ ಪಾಲಿಗೆ ಆರದ ದೀಪದಂತೆ ಬೆಳಕನ್ನು ಹೊರಚೆಲ್ಲುತ್ತಲೇ ಇದೆ.

ಅದೊಂದು ಗ್ರಂಥವಾಗಿ ಉಳಿದಿಲ್ಲ. ಕೆಲವೊಮ್ಮೆ ಗುರಾಣಿಯೂ, ಶಸ್ತ್ರವೂ ಆಗಿದ್ದಿದೆ. ಹಲವು ತಿದ್ದುಪಡಿಗಳಿಗೆ ಸಂವಿಧಾನವನ್ನು ಒಳಗು ಮಾಡಲಾಗಿದೆಯಾದರೂ ಅವು ಯಾವುವೂ ಸಂವಿಧಾನದ ಮೂಲ ಸ್ವರೂಪವನ್ನು ದುರ್ಬಲಗೊಳಿಸಲು ಸಾಧ್ಯವಾಗದಷ್ಟು ಬಿಗುವಿನಿಂದ ಕೂಡಿದೆ. ಅಷ್ಟರ ಮಟ್ಟಿಗೆ ಸಂವಿಧಾನ ನಿರ್ಮಾತೃಗಳು ಸಂಶೋಧಿಸಿ, ವಿಶ್ಲೇಷಿಸಿ ಅದನ್ನು ಕಡೆದುಕೊಟ್ಟಿದ್ದಾರೆ. ಹೀಗಾಗಿಯೇ, ತಳಸ್ತರದ ಜನಕ್ಷೇಮವನ್ನು ಆತ್ಯಂತಿಕವಾಗಿ ಅದು ಪ್ರತಿಪಾದಿಸುತ್ತಲೇ ಇದೆ.

ಸಂವಿಧಾನದ ದೀಪದಿಂದ ಸಹಸ್ರಾರು ದೀಪ ಮುಡಿಸುವ, ಬೆಳಕು ಬಿತ್ತರಿಸುವುದರ ಭಾಗವಾಗಿಯೇ 'ಸಂವಿಧಾನವೇ ಬೆಳಕು' ಎಂಬ ಅಭಿಯಾನವು ರೂಪುದಳೆಯಿತು. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ, ಡಾ. ಎಚ್.ಸಿ. ಮಹದೇವಪ್ಪ ಸಾರಥ್ಯದ ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ 'ಪ್ರಜಾವಾಣಿ'ಯು ನಾಡಿನ ಚತುರ್ದಿಕ್ಕುಗಳಲ್ಲಿ ನಡೆಸಿದ ಅಕ್ಷರ, ಆಶಯದ ಆಂದೋಲನವು ನಾಡಿನಾದ್ಯಂತ ಅರ್ಥಪೂರ್ಣವಾಗಿ ನಡೆಯಿತು. ಸಂವಿಧಾನವನ್ನು ಸರಳವಾಗಿ ಪರಿಚಯಿಸುವ ನಾಲ್ಕು ಲೇಖನಗಳು, ನಾಲ್ಕು ವಿಚಾರ ಸಂಕಿರಣಗಳು, ನಾಲ್ಕು ವಾಕಥಾನ್‌ಗಳು ಸಂವಿಧಾನದ ಬೆಳಕನ್ನು ನಾಡವರ ಎದೆಗೆ ತುಂಬಿಸುವಲ್ಲಿ ಸಂಪನ್ನಗೊಂಡವು. ಈ ಅಭಿಯಾನದ ಸೊಬಗು, ಸಂಭ್ರಮವನ್ನು ಕಟ್ಟಿಕೊಡುವ ಯತ್ನ ಇಲ್ಲಿದೆ.

ಸಂವಿಧಾನವೇ ಬೆಳಕು

Curated by

DH DECCAN HERALD | ಪ್ರಜಾವಾಣಿ

ಸಮಾಜ ಕಲ್ಯಾಣ ಸಚಿವ ಡಾ. ಎಚ್. ಸಿ. ಮಹದೇವಪ್ಪ ಅವರು ಸಂವಿಧಾನವೇ ಬೆಳಕು ಅಭಿಯಾನಕ್ಕೆ ಚಾಲನೆ ನೀಡಿದ ಸಂದರ್ಭ. ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಸಿಒಒ ಕಿರಣ್ ಸುಂದರ್ ರಾಜನ್, ನಿರ್ದೇಶಕಿ ಕೆ.ಟಿ. ಸೌಭಾಗ್ಯ ಲಕ್ಷ್ಮಿ, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಮತ್ತು ಕೆಪಿಸಿಸಿ ಉಪಾಧ್ಯಕ್ಷ ಎಂ.ಸಿ. ವೇಣುಗೋಪಾಲ್ ಹಾಜರಿದ್ದರು

ಅಭಿವ್ಯಕ್ತಿಯ ರಕ್ಷಕ

ದೇಶದ ಪ್ರತಿಯೊಬ್ಬ ಪ್ರಜೆಯೂ ತನ್ನ ಅನಿಸಿಕೆಯನ್ನು ಮುಕ್ತವಾಗಿ ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನು ಸಂವಿಧಾನ ನೀಡಿದೆ. ಸಂವಿಧಾನದ 19(1)(ಎ) ವಿಧಿಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ವ್ಯಾಖ್ಯಾನಿಸಲಾಗಿದೆ. ಈ ಸ್ವಾತಂತ್ರ್ಯದ ಅಡಿಯಲ್ಲಿ ದೇಶದ ಎಲ್ಲ ನಾಗರಿಕರೂ ಮಾತನಾಡುವ, ಬರೆಯುವ ಮತ್ತು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸುವ ಹಕ್ಕನ್ನು ಪಡೆದಿದ್ದಾರೆ ಎಂಬುದರ ಕುರಿತಾಗಿ 'ಪ್ರಜಾವಾಣಿ' ಬೆಂಗಳೂರು ಕಚೇರಿಯಲ್ಲಿ ನಡೆದ ಸಂವಾದದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ವಿವಿಧ ಮಜಲುಗಳು ಮುನ್ನೆಲೆಗೆ ಬಂದವು.

ಸಂವಿಧಾನವು ನಮಗೆ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯವು ಪರಿಪೂರ್ಣವಲ್ಲ. ಅಂದರೆ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ನಿರ್ಬಂಧಗಳಿವೆ. ದೇಶದ ಭದ್ರತೆ, ಸಾರ್ವಭೌಮತ್ವ, ಏಕತೆ, ಮಿತ್ರ ದೇಶಗಳ ಜತೆಗಿನ ಸಂಬಂಧ, ಶಾಂತಿ, ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ತರುವ ಹಾಗೂ ಇತರರ ಮಾನಕ್ಕೆ ಹಾನಿಯುಂಟು ಮಾಡುವಂತಹ ಯಾವುದೇ ರೀತಿಯ ಅಭಿವ್ಯಕ್ತಿಗೆ ನಿರ್ಬಂಧವಿದೆ. ಭಾರತದ ಸಂದರ್ಭದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ನಿರ್ಬಂಧಗಳು ಬ್ರಿಟಿಷ್ ಆಳ್ವಿಕೆಯಲ್ಲಿಯೇ ಆರಂಭವಾಗಿದೆ. ಸ್ವಾತಂತ್ರ್ಯ ಹೋರಾಟಗಾರರನ್ನು ಹತ್ತಿಕ್ಕಲು ಬ್ರಿಟಿಷರು ದೇಶದ್ರೋಹ (ಭಾರತೀಯ ದಂಡ ಸಂಹಿತೆಯ 124ಎ) ಕಾನೂನು ಜಾರಿಗೆ ತಂದಿದ್ದರು. ಅಂತಹ ದಬ್ಬಾಳಿಕೆಗಳ ಅನುಭವವಿದ್ದ ಕಾರಣಕ್ಕೇ, ಸಂವಿಧಾನ ರೂಪಿಸಿದ ನಮ್ಮ ಪೂರ್ವಜರು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಮಗೆಲ್ಲಾ ನೀಡಿದ್ದಾರೆ. ಪ್ರಭುತ್ವವು ಇಂದಿಗೂ ಈ ಕಾನೂನುಗಳನ್ನು ಉಳಿಸಿಕೊಂಡು, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಿಯಂತ್ರಿಸುತ್ತಿವೆ ಎಂಬುದರ ಬಗ್ಗೆ ಕಳವಳ ವ್ಯಕ್ತವಾಯಿತು.

ಅಭಿವ್ಯಕ್ತಿ ಸ್ವಾತಂತ್ರ್ಯವೇ ಪತ್ರಿಕಾ ಸ್ವಾತಂತ್ರ್ಯವನ್ನೂ ಒಳಗೊಂಡಿದೆ ಎಂದು ಸುಪ್ರೀಂ ಕೋರ್ಟ್ ವ್ಯಾಖ್ಯಾನಿಸಿದೆ. ಹೀಗಾಗಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ನಿರ್ಬಂಧಗಳು ಮಾಧ್ಯಮಕ್ಕೂ ಅನ್ವಯ ಎಂದು ತಜ್ಞರು ವಿವರಿಸಿದರು.

ಸಂವಿಧಾನದ ಬಗ್ಗೆ ಸಾಮಾನ್ಯ ಜನರಲ್ಲೂ ಅರಿವು, ಜಾಗೃತಿ ಮೂಡಿಸಲು ಸಮಾಜ ಕಲ್ಯಾಣ ಇಲಾಖೆ ನಿರಂತರ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಇಂತಹ ಕಾರ್ಯದಲ್ಲಿ 'ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್' ಸಹ ಕೈಜೋಡಿಸಿರುವುದು ಸಂವಿಧಾನದ ಆಶಯಗಳನ್ನು ರಾಜ್ಯದ ಎಲ್ಲರಿಗೂ ತಲುಪಿಸುವಲ್ಲಿ ಸಹಕಾರಿಯಾಗಿವೆ. ಸಂವಿಧಾನದ ಪ್ರಸ್ತಾವನೆ ಓದುವುದನ್ನು ಶಾಲಾ–ಕಾಲೇಜುಗಳಲ್ಲಿ ಕಡ್ಡಾಯಗೊಳಿಸಲಾಗಿದೆ. ವಿಧಾನಮಂಡಲ ಅಧಿವೇಶನದ ಮೊದಲ ದಿನ ಎರಡೂ ಸದನಗಳಲ್ಲಿ ಸಂವಿಧಾನದ ಪ್ರಸ್ತಾವನೆ ಓದಲಾಗುತ್ತಿದೆ. ಸಂವಿಧಾನವನ್ನೇ ಪ್ರಧಾನವಾಗಿ ಇಟ್ಟುಕೊಂಡು ಹಲವು ಅಭಿಯಾನ, ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಅಂತರರಾಷ್ಟ್ರೀಯ ಪ್ರಜಾಪ್ರಭುತ್ವದ ದಿನ ರಾಜ್ಯದ ಉದ್ದಗಲಕ್ಕೂ ಮೂಡಿಸಿದ ಜಾಗೃತಿ ಕಾರ್ಯಕ್ರಮ ವಿಶ್ವ ದಾಖಲೆ ಬರೆದಿದೆ.

ಡಾ. ಎಚ್.ಸಿ. ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ

ಬೆಳಕಿನೆಡೆಗೆ ನಡಿಗೆ

ಜನರ ಹಿತ, ದೇಶದ ಉನ್ನತಿಯಲ್ಲಿ ಸಂವಿಧಾನದ ಮಹತ್ವವನ್ನು ತಿಳಿದುಕೊಂಡ ನೂರಾರು ವಿದ್ಯಾರ್ಥಿಗಳು, ಯುವಜನರು 'ಸಂವಿಧಾನ'ದ ಕಡೆಗೆ ದಿಟ್ಟ ಹೆಜ್ಜೆ ಇಟ್ಟರು. ಹಸಿರಿನಿಂದ ಕಂಗೊಳಿಸುವ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿಯ ರಸ್ತೆಗಳಲ್ಲಿ ಸಾಗಿ ಅರಿವಿನ ಹಸಿರನ್ನು ಪಸರಿಸಿದರು. 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಸಮೂಹವು ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಸಹಯೋಗ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಸಹಕಾರದಲ್ಲಿ 'ಸಂವಿಧಾನವೇ ಬೆಳಕು–ಹೆಜ್ಜೆಯಿಡು ಬೆಂಗಳೂರು' ಅಭಿಯಾನದಡಿ ಹಮ್ಮಿಕೊಂಡಿದ್ದ 'ಸಂವಿಧಾನ' ಕುರಿತ ವಿಚಾರ ಸಂಕಿರಣ ಹಾಗೂ ವಾಕಥಾನ್ ಇದಕ್ಕೆ ಸಾಕ್ಷಿಯಾಯಿತು. 'ಸಂವಿಧಾನವೇ ಬೆಳಕು– ಹೆಜ್ಜೆಯಿಡು ಬೆಂಗಳೂರು' ಸಂವಿಧಾನ ನಡಿಗೆಯಲ್ಲಿ ಉತ್ಸಾಹದಿಂದ ಹೆಜ್ಜೆ ಹಾಕಿದರು. ಹಸಿರು ಹೊದ್ದಿರುವ, ಜ್ಞಾನ ದೀವಿಗೆಯ ಬೆಳಕು ಚೆಲ್ಲುವ ವಿಶ್ವವಿದ್ಯಾಲಯದ ವಾತಾವರಣದಲ್ಲಿ ಸಂವಿಧಾನದ ಜಾಗೃತಿಯ ಕಂಪು ಹರಡಿದರು.

'ಕೇಳುವ, ಕೇಳಿಸಿಕೊಳ್ಳುವ ಸ್ವಾತಂತ್ರ್ಯ'

ಅಭಿವ್ಯಕ್ತಿ ಸ್ವಾತಂತ್ರ್ಯ ಎಂಬುದು ತಮ್ಮ ಅಭಿಪ್ರಾಯವನ್ನು ಹೇಳುವ ಸ್ವಾತಂತ್ರ್ಯವಷ್ಟೇ ಅಲ್ಲ. ಬದಲಿಗೆ ಇನ್ನೊಬ್ಬರ ಮಾತು ಮತ್ತು ಅಭಿಪ್ರಾಯವನ್ನು ಕೇಳಿಸಿಕೊಳ್ಳುವ ಸ್ವಾತಂತ್ರ್ಯವೂ ಹೌದು.

ಈ ಸ್ವಾಂತಂತ್ರ್ಯ ಹೇಳುವ ಮತ್ತು ಕೇಳಿಸಿಕೊಳ್ಳುವ ಕ್ರಿಯೆ ಅಥವಾ ಮನಃಸ್ಥಿತಿಗಷ್ಟೇ ಸೀಮಿತವಲ್ಲ. ಬದಲಿಗೆ ನಮ್ಮ ಎದುರು ಇರುವ ವ್ಯಕ್ತಿಯ ಅಭಿಪ್ರಾಯಕ್ಕಿಂತ ಭಿನ್ನವಾದ ಅಭಿಪ್ರಾಯವನ್ನು ಹೊಂದುವ ಸ್ವಾತಂತ್ರ್ಯವೂ ಹೌದು. ಒಬ್ಬರ ಅಭಿಪ್ರಾಯವನ್ನು ನಾವು ಹೇಗೆ ನಿರಾಕರಿಸಲಾಗದೋ ಹಾಗೆಯೇ, ಅವರ ಅಭಿಪ್ರಾಯವನ್ನು ಒಪ್ಪಿಕೊಳ್ಳದೇ ಇರುವ ಸ್ವಾತಂತ್ರ್ಯವನ್ನೂ ಸಂವಿಧಾನವು ನಮಗೆ ನೀಡಿದೆ.

ಫ್ರೆಂಚ್ ಚಿಂತಕ ವೋಲ್ಟೇರ್ ಹೇಳುವಂತೆ, 'ನಿನ್ನ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ಆದರೆ ಅದನ್ನು ಹೇಳುವ ಹಕ್ಕು ನಿನಗಿದೆ ಎಂಬುದಕ್ಕೆ ನಾನು ಕಡೆಯ ತನಕ ಬದ್ಧವಾಗಿರುತ್ತೇನೆ' ಎಂಬುದೇ ಅಭಿವ್ಯಕ್ತಿ ಸ್ವಾತಂತ್ರ್ಯ. ಅಂದರೆ ಇನ್ನೊಬ್ಬರ ವಿಚಾರವನ್ನು ಒಪ್ಪದಿದ್ದರೂ, ಅದನ್ನು ಹೇಳುವ ಅವರ ಸ್ವಾತಂತ್ರ್ಯವನ್ನು ನಾನು ಕಾಪಾಡುತ್ತೇನೆ ಅಥವಾ ಗೌರವಿಸುತ್ತೇನೆ ಎಂಬುದು ವೋಲ್ಟೇರ್‌ನ ಈ ಮಾತಿನ ಹೂರಣ.

ಮಾಹಿತಿಯನ್ನು ಪಡೆದುಕೊಳ್ಳುವುದು ಸಹ ಅಭಿವ್ಯಕ್ತಿ ಸ್ವಾತಂತ್ರ್ಯದ ಒಂದು ಭಾಗ. ಸರ್ಕಾರದಿಂದ ಮಾಹಿತಿಯನ್ನು ಪಡೆದುಕೊಳ್ಳುವುದು, ಮಾಹಿತಿ ನೀಡಿರೆಂದು ಕೇಳುವುದು, ಆ ಮಾಹಿತಿಯನ್ನು ವಿಶ್ಲೇಷಿಸುವುದು, ಅದರ ಆಧಾರದಲ್ಲಿ ಟೀಕೆ–ಟಿಪ್ಪಣಿ ಮಾಡುವುದು, ಕಡೆಗೆ ಸರ್ಕಾರವನ್ನು ಪ್ರಶ್ನಿಸುವುದು ಸಹ ಅಭಿವ್ಯಕ್ತಿ ಸ್ವಾತಂತ್ರ್ಯದ ಅವಿಭಾಜ್ಯ ಅಂಗವೇ ಆಗಿದೆ. ಸರ್ಕಾರವನ್ನು ಕಟುಮಾತುಗಳಲ್ಲಿ ಟೀಕಿಸುವುದು ಅಭಿವ್ಯಕ್ತಿ ಸ್ವಾತಂತ್ರ್ಯದ ಪರಿಮಿತಿಯಲ್ಲಿಯೇ ಬರುತ್ತದೆ.

ಬ್ರಿಟಿಷ್ ಆಳ್ವಿಕೆಯ ಸಂದರ್ಭದಲ್ಲಿ ನಮ್ಮ ಪೂರ್ವಜರು, ಬ್ರಿಟಿಷರ ದಬ್ಬಾಳಿಕೆಯ ವಿರುದ್ಧ ದನಿ ಎತ್ತುತ್ತಿದ್ದರು. ಆ ದನಿಯನ್ನು ಹತ್ತಿಕ್ಕಲೆಂದೇ ಹಲವು ದಮನಕಾರಿ ಕಾನೂನುಗಳನ್ನು ಬ್ರಿಟಿಷರು ಜಾರಿಗೆ ತಂದಿದ್ದರು. ಅವುಗಳನ್ನು ಅನುಭವಿಸಿದ್ದ ಕಾರಣಕ್ಕೇ ನಮ್ಮ ಸಂವಿಧಾನ ಶಿಲ್ಪಿಗಳು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಅತ್ಯಂತ ಸ್ಪಷ್ಟ ಮತ್ತು ವಿಶಾಲಾರ್ಥದಲ್ಲಿ ನಮ್ಮ ಸಂವಿಧಾನದಲ್ಲಿ ಅಡಕವಾಗಿಸಿದ್ದಾರೆ.

ನ್ಯಾ. ಎಚ್.ಎನ್.ನಾಗಮೋಹನದಾಸ್

'ಕೇಡು ಬಯಸದಿರುವುದೇ ಮೂಲತತ್ವ'

'ಯಾವುದೇ ಹಕ್ಕು ಇಲ್ಲದೇ ಸಮಾಜದಲ್ಲಿ ಸಹಜವಾಗಿ ಜೀವನ ಮಾಡಲು ಸಾಧ್ಯವಿಲ್ಲವೋ, ಅವು ಮೂಲಭೂತ ಹಕ್ಕುಗಳು. ಎಲ್ಲರಿಗೂ ಎಲ್ಲ ಸ್ವಾತಂತ್ರ್ಯವೂ ಇರಬೇಕು. ಆದರೆ, ಅದು ಇನ್ನೊಬ್ಬರಿಗೆ ತೊಂದರೆಯನ್ನುಂಟು ಮಾಡಬಾರದು ಎಂಬುದೇ ಸಂವಿಧಾನದ ತತ್ವ' ಎಂದು ಎಚ್. ಕಾಂತರಾಜ ಹೇಳಿದರು. 'ಸಂವಿಧಾನ ಬೆಳಕು: ಹೆಜ್ಜೆಯಿಡು ಬೆಂಗಳೂರು' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಎಚ್. ಕಾಂತರಾಜ

'ಈ ದೇಶ ಕೆಲವರಿಗಷ್ಟೇ ಸೇರಿದ್ದಲ್ಲ, ಅದು ಎಲ್ಲರಿಗೂ ಸೇರಿದ್ದು ಎಂದು ಹೇಳಿದ ಕಾರಣಕ್ಕೆ ಮಹಾತ್ಮ ಗಾಂಧೀಜಿ ಅವರನ್ನು ಹತ್ಯೆ ಮಾಡಲಾಯಿತು. ಇದೇ ಆಶಯವನ್ನು ಡಾ. ಬಿ.ಆರ್. ಅಂಬೇಡ್ಕರ್ ಬರೆದಿರುವ ಸಂವಿಧಾನ ಹೊಂದಿದೆ. ಎಲ್ಲ ಕಾನೂನುಗಳ ತಾಯಿ ನಮ್ಮ ಸಂವಿಧಾನ. ಸಂವಿಧಾನಕ್ಕೆ ವಿರುದ್ಧವಾಗಿ ವಿಧಾನ ಸಭೆಯಲ್ಲಾಗಲಿ, ಸಂಸತ್ತಿನಲ್ಲಾಗಲಿ ಶಾಸನಗಳನ್ನು ಮಾಡಲು ಸಾಧ್ಯವಿಲ್ಲ. ಸಂವಿಧಾನದ ಚೌಕಟ್ಟು ಮೀರಿ ಕಾನೂನು ಮಾಡಿದರೆ ಅದನ್ನು ಪ್ರಶ್ನಿಸಿ ನ್ಯಾಯ ಪಡೆಯಲು ನ್ಯಾಯಾಂಗ ವ್ಯವಸ್ಥೆ ಇದೆ' ಎಂದು ತಿಳಿಸಿದರು.

'ದೇಶದಲ್ಲಿ ಅನೇಕ ಪರಿವರ್ತನೆಗಳಿಗೆ ಸಂವಿಧಾನ ಕಾರಣವಾಗಿದೆ. ಮತದಾನದ ಹಕ್ಕಿನ ಮೂಲಕ ನಮಗೆ ಬೇಕಾದವರನ್ನು ಆಯ್ಕೆ ಮಾಡುವ, ಸಂವಿಧಾನಕ್ಕೆ ವಿರುದ್ಧವಾಗಿರುವ ಸರ್ಕಾರಗಳನ್ನು ಸೋಲಿಸುವ ಅವಕಾಶ ಸಿಕ್ಕಿದೆ. ಅದು ಪರಿಣಾಮಕಾರಿಯಾಗಿ ಮಾಡಿಲ್ಲ ಅಂದರೆ ಹಕ್ಕು ಚಲಾಯಿಸುವಲ್ಲಿ ಸೋತಂತಾಗುತ್ತದೆ. ಮತದಾನದ ಹಕ್ಕು ಒಂದು ವರ. ಅದನ್ನು ಸರಿಯಾಗಿ ಬಳಸದೇ ಇದ್ದರೆ ಅದುವೇ ಶಾಪವಾಗಲಿದೆ' ಎಂದು ಕಾಂತರಾಜ ಎಚ್ಚರಿಸಿದರು. 'ಎರಡು ರೀತಿಯ ಜನರು ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ. ಒಂದು ನಮ್ಮ ಸಂವಿಧಾನದ ಬಗ್ಗೆ ಏನೂ ಅರಿವಿಲ್ಲದೇ ಇರುವವರು, ಇನ್ನೊಂದು ಸಂವಿಧಾನದ ಬಗ್ಗೆ ಎಲ್ಲಾ ಗೊತ್ತಿದ್ದು, ಒಪ್ಪಿಕೊಳ್ಳದೇ ಇರುವವರು. ಮೊದಲನೇ ವರ್ಗಕ್ಕೆ ಸಂವಿಧಾನದ ಜಾಗೃತಿ ಮೂಡಿಸುವ ಮೂಲಕ ಸರಿಪಡಿಸಬಹುದು. ಎರಡನೇ ವರ್ಗದಿಂದಲೇ ತೊಂದರೆಯಾಗುತ್ತಿದ್ದು, ಹಾಗಾಗದಂತೆ ನೋಡಿಕೊಳ್ಳಬೇಕು' ಎಂದು ಎಚ್. ಕಾಂತರಾಜ ಪ್ರತಿಪಾದಿಸಿದರು.

'ಸಾಮಾಜಿಕ ನ್ಯಾಯದ ಬಗ್ಗೆ ನಮ್ಮ ಸಂವಿಧಾನದಲ್ಲಿ ಇರುವಷ್ಟು ಅಂಶಗಳು ಮತ್ಯಾವ ದೇಶದ ಸಂವಿಧಾನದಲ್ಲೂ ಇಲ್ಲ' ಎಂದು ವಿವರಿಸಿದರು.

'ಭಾರತದ ಸಂವಿಧಾನ 6–7 ವರ್ಷ ಉಳಿಯಲ್ಲ ಎಂದು ವಿಲಿಯಂ ಐವರ್ ಜೆನ್ನಿಂಗ್ಸ್‌ನಂಥ ತಜ್ಞರು ಅಭಿಪ್ರಾಯ ಪಟ್ಟಿದ್ದರು. 77 ವರ್ಷಗಳ ಬಳಿಕವೂ ನಮ್ಮ ಸಂವಿಧಾನ ಉಳಿದಿದೆ' ಎಂದು ಹೇಳಿದರು.

'ದನಿಯಿಲ್ಲದವರ ದನಿ'

ಅಭಿವ್ಯಕ್ತಿ ಸ್ವಾತಂತ್ರ್ಯದ ಕುರುಹುಗಳು ವಚನ ಚಳವಳಿಯಲ್ಲಿಯೇ ಕಂಡುಬರುತ್ತವೆ. ಬಸವಣ್ಣ, ಆನು ಒಲಿದಂತೆ ಹಾಡುವೆನು ಎಂದು ಹೇಳಿದ್ದು ಅಭಿವ್ಯಕ್ತಿ ಸ್ವಾತಂತ್ರ್ಯವೇ. ಒಮ್ಮೆ ಪಿ.ಲಂಕೇಶರ ಒಟ್ಟಿಗೆ ಈ ಬಗ್ಗೆ ಮಾತನಾಡುತ್ತಿದ್ದೆ. ಅವರು, ಬಸವಣ್ಣನಿಗೆ ನಿಜಕ್ಕೂ ಬೇಕಾಗಿದ್ದದ್ದು ಒಂದು ಪ್ರಿಂಟಿಂಗ್ ಪ್ರೆಸ್ ಎಂದಿದ್ದರು. ತನಗೆ ಅನಿಸಿದ್ದನ್ನು ಎಲ್ಲರಿಗೂ ಹೇಳುವ ಮತ್ತು ಇತರರು ಹೇಳುವುದನ್ನು ಕೇಳಿಸಿಕೊಳ್ಳುವ ಒಂದು ವೇದಿಕೆ ಬಸವಣ್ಣನಿಗೆ ಬೇಕಾಗಿತ್ತು ಎಂಬುದು ಅದರ ಅರ್ಥ. ಅಂತಹ ವೇದಿಕೆಯನ್ನು ಅನುಭವ ಮಂಟಪ ಒದಗಿಸಿಕೊಟ್ಟಿತು.

ಬಸವಣ್ಣನ ಆ ವಚನ ಏಕೆ ಮುಖ್ಯವಾಗುತ್ತದೆ ಅಂದರೆ, ತನಗೆ ಅನಿಸಿದ್ದನ್ನು ಹೇಳುವುದು ಮಾತ್ರವಲ್ಲ. ಬದಲಿಗೆ ತನಗೆ ಅನಿಸಿದ ರೀತಿಯಲ್ಲಿ ಬದುಕುವ ಸ್ವಾತಂತ್ರ್ಯವೂ ಇದೆ ಎಂಬುದನ್ನು ಆ ವಚನ ಪ್ರತಿಪಾದಿಸುತ್ತದೆ. ಈ ನಿಟ್ಟಿನಲ್ಲಿ ಒಬ್ಬ ಸೃಜನಶೀಲ ಬರಹಗಾರನಾಗಿ ಅಭಿವ್ಯಕ್ತಿ ಸ್ವಾತಂತ್ರ್ಯ ನನಗೆ ಬಹಳ ಮುಖ್ಯವಾಗುತ್ತದೆ. ಪತ್ರಕರ್ತನಿಗೂ ಅದು ಅನ್ವಯವಾಗುತ್ತದೆ.

ಒಬ್ಬ ಬರಹಗಾರ ತನ್ನ ಅಭಿಪ್ರಾಯವನ್ನಷ್ಟೇ ಹೇಳುತ್ತಿರುವುದಿಲ್ಲ. ಬದಲಿಗೆ ದನಿಯಿಲ್ಲದವರ ಪರವಾಗಿಯೂ ಮಾತನಾಡುತ್ತಿರುತ್ತಾನೆ. ಶಿವರಾಮ ಕಾರಂತರು ಕೇವಲ ತಮ್ಮ ಅಭಿಪ್ರಾಯವನ್ನು ಹೇಳುತ್ತಿರುವುದಿಲ್ಲ. ಬದಲಿಗೆ, 'ಭೂಮಿ ಹೊಂದಬೇಕು' ಎಂಬ ಚೋಮನ ಅಭಿಪ್ರಾಯಕ್ಕೂ ಅವರು ದನಿಯಾಗುತ್ತಾರೆ. ಹಾಗೆಯೇ ದನಿ ಎತ್ತಲಾಗದ ಜನ ಸಮುದಾಯದ ಅಭಿಪ್ರಾಯಕ್ಕೆ, ಒಬ್ಬ ಪತ್ರಕರ್ತ ದನಿಯಾಗುತ್ತಾನೆ. ಬರಹಗಾರ ಮತ್ತು ಪತ್ರಕರ್ತನ ದನಿ ಅಡಗಿಸುವುದು, ದನಿ ಇಲ್ಲದವರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಸಿದುಕೊಂಡಂತೆ.

ಬರಹಗಾರರ, ಪತ್ರಕರ್ತರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಯತ್ನಗಳು ಪ್ರಭುತ್ವದಿಂದ ನಡೆದುಕೊಂಡೇ ಬಂದಿವೆ. ಹಲವರು ಇದರ ವಿರುದ್ಧ ಹೋರಾಡಿ, ಈಗ ಸುಮ್ಮನಾಗಿಬಿಟ್ಟಿದ್ದಾರೆ. ಆದರೆ, ಹೊಸ ತಲೆಮಾರಿನಲ್ಲಿ ಕೆಲವರು ಈ ಹೋರಾಟವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಕಮೀಡಿಯನ್‌ಗಳೂ ಈ ಹೋರಾಟದಲ್ಲಿ ಇದ್ದಾರೆ ಎಂಬುದು ಗಮನಾರ್ಹ.

ಪ್ರೊ.ನಟರಾಜ್ ಹುಳಿಯಾರ್, ಬೆಂಗಳೂರು ವಿಶ್ವವಿದ್ಯಾಲಯ

'ಸಂವಿಧಾನ ಪ್ರಸ್ತಾವನೆ ಪರಿಚಯವೇ ಮೊದಲ ಹೆಜ್ಜೆ'

ಶಾಲಾ ಮಕ್ಕಳಿಗೆ ಸಂವಿಧಾನದ ಪರಿಚಯ ಮಾಡಬೇಕು ಎಂಬ ಪ್ರಯತ್ನದ ಭಾಗವಾಗಿಯೇ 'ಸಂವಿಧಾನ ಪ್ರಸ್ತಾವನೆ'ಯ ಓದನ್ನು ಶಾಲೆಗಳಲ್ಲಿ ಪರಿಚಯಿಸಲಾಯಿತು. ಸಂವಿಧಾನ ನಮಗೆ ಏನು ನೀಡಿದೆ, ಅದು ನಮಗೆ ಕೊಡಮಾಡಿರುವ ಹಕ್ಕು ಮತ್ತು ಕರ್ತವ್ಯಗಳನ್ನು ಮಕ್ಕಳಿಗೆ ಪರಿಚಯಿಸಿದರೆ, ಅವರು ದೊಡ್ಡವರಾದ ನಂತರ ಅವುಗಳನ್ನು ಅಳವಡಿಸಿಕೊಳ್ಳುವ ಸಾಧ್ಯತೆ ಅತ್ಯಧಿಕವಾಗಿರುತ್ತದೆ.

ಸಾಮಾಜಿಕ ನ್ಯಾಯ, ಧಾರ್ಮಿಕ ಸ್ವಾತಂತ್ರ್ಯ, ಅನ್ಯಧರ್ಮ ಸಹಿಷ್ಣುತೆಯನ್ನು ಶಾಲಾ ಮಕ್ಕಳಿಗೆ ಪರಿಚಯಿಸಬೇಕಿತ್ತು. ಹೀಗಾಗಿ ಮೊದಲ ಹಂತದಲ್ಲಿ ಪಠ್ಯಪುಸ್ತಕಗಳಲ್ಲಿ ಸಂವಿಧಾನದ ಪ್ರಸ್ತಾವನೆಯನ್ನು ಮುದ್ರಿಸಲಾಯಿತು ಮತ್ತು ಮಕ್ಕಳಿಂದ ಅದನ್ನು ಓದಿಸುವ ಕೆಲಸವನ್ನೂ ಆರಂಭಿಸಲಾಯಿತು. ಈ ಯತ್ನದ ಭಾಗವಾಗಿ ರಾಜ್ಯದ ಶಾಲಾ ಮಕ್ಕಳಿಗೆ ಸಂವಿಧಾನದ ಪ್ರಸ್ತಾವನೆ, ಅದರಲ್ಲಿರುವ ವಿಚಾರಗಳು ಹಾಗೂ ಅವುಗಳ ಪ್ರಾಮುಖ್ಯತೆಯ ಬಗ್ಗೆ ಅರಿವು ಮೂಡಿದೆ. ಶಿಕ್ಷಕರಿಗೂ ಅದು ಪರಿಚಯವಾದಂತಾಗಿದೆ.

ಈಗ ಅದನ್ನು ಓದಿಸಲಾಗುತ್ತಿದೆ ಅಷ್ಟೆ. ಮುಂದಿನ ದಿನಗಳಲ್ಲಿ ಸಂವಿಧಾನದ ಪ್ರಸ್ತಾವನೆಯನ್ನು ಮಕ್ಕಳಿಗೆ ಅರ್ಥಮಾಡಿಸುವ ಕೆಲಸ ನಡೆಯಲಿದೆ. ಪ್ರಸ್ತಾವನೆಯಲ್ಲಿರುವ ವಿಚಾರಗಳನ್ನು ಅರ್ಥಮಾಡಿಕೊಂಡು ಅವರು ಬದುಕಿನಲ್ಲಿ ಅಳವಡಿಸಿಕೊಂಡರೆ, ಈಗಿನ ಸಮಾಜವು ಎದುರಿಸುತ್ತಿರುವ ಹಲವು ಸಮಸ್ಯೆಗಳು ಬಗೆಹರಿಯಲಿವೆ. ಈ ದಿಸೆಯಲ್ಲಿ ನಮ್ಮ ಪ್ರಯತ್ನಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯ ಎಂದರೇನು ಮತ್ತು ಅದು ಏಕೆ ಅಗತ್ಯ ಎಂಬುದರ ಬಗ್ಗೆಯ ಮಕ್ಕಳಲ್ಲಿ ಅರಿವು ಮೂಡಿಸುವ ಅಗತ್ಯವಿದೆ.



ಕ್ಯಾ.ಪಿ.ಮಣಿವಣ್ಣನ್, ಆಯುಕ್ತ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಮಾಜ ಕಲ್ಯಾಣ ಇಲಾಖೆ, 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಸಮೂಹ ಸಂಸ್ಥೆಯ ಸಹಯೋಗದಲ್ಲಿ ನಡೆದ 'ಸಂವಿಧಾನವೇ ಬೆಳಕು: ಹೆಜ್ಜೆಯಿಡು ಬೆಂಗಳೂರು' ವಾಕಥಾನ್‌ನ ಒಂದು ನೋಟ

'ಕಳವಳಕಾರಿ ಸ್ಥಿತಿ ಬದಲಾಗಲಿ'

ಮಹಿಳೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ವಿಚಾರವು ಸಾಮಾಜಿಕ ಜಾಲತಾಣಗಳೇ ಪ್ರಧಾನವಾಗುತ್ತಿರುವ ಈ ಹೊತ್ತಿನಲ್ಲಿ ಇನ್ನಷ್ಟು ಸೂಕ್ಷ್ಮವಾಗಿದೆ. ಒಬ್ಬ ಸಾಮಾನ್ಯ ಮಹಿಳೆ ಸಾಮಾಜಿಕ ಜಾಲತಾಣದಲ್ಲಿ ತಾನೊಂದು ಮಾತು ಹೇಳಿ (ಪ್ರಕಟಿಸಿ, ಪೋಸ್ಟ್ ಮಾಡಿ), ದಕ್ಕಿಸಿಕೊಳ್ಳಲಾಗದ ಕಳವಳಕಾರಿ ಸ್ಥಿತಿ ಇದೆ. ಈ ಪರಿಸ್ಥಿತಿ ಬದಲಾಗಬೇಕಿದೆ.

ಒಬ್ಬರ ಅಭಿವ್ಯಕ್ತಿ ಸ್ವಾತಂತ್ರ್ಯವು, ಮತ್ತೊಬ್ಬರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವಂತಿರಬಾರದು. ಈ ಆಶಯಕ್ಕೆ ಅಪವಾದವಾದಂತಹ ಸಾವಿರಾರು ನಿದರ್ಶನಗಳು ಸಾಮಾಜಿಕ ಜಾಲತಾಣಗಳಲ್ಲಿ ಸಿಗುತ್ತವೆ. ಮಹಿಳೆಯೊಬ್ಬಳು ಒಂದು ಪೋಸ್ಟ್ ಮಾಡಿದರೆ ಅಥವಾ ಮತ್ತೊಬ್ಬರ ಪೋಸ್ಟ್‌ಗೆ ಪ್ರತಿಕ್ರಿಯೆ ನೀಡಿದರೆ ಮುಗಿಯಿತು. ಅದಕ್ಕೆ ಅತ್ಯಂತ ಕೆಳಮಟ್ಟದಲ್ಲಿ, ದಮನಕಾರಿಯಾಗಿ ಪ್ರತಿಕ್ರಿಯೆಗಳನ್ನು ನೀಡುವವರು ಸಾವಿರಾರು ಮಂದಿ ಇರುತ್ತಾರೆ. ಯಾಕಾದರೂ ಪೋಸ್ಟ್ ಮಾಡಿದೆನೋ, ಪ್ರತಿಕ್ರಿಯೆ ನೀಡಿದೆನೋ ಎಂದು ಆ ಮಹಿಳೆ ಖಿನ್ನಳಾಗಿ ಹೋಗುವಂತೆ ಮಾಡುತ್ತಾರೆ. ಇದು ಅಪಾಯಕಾರಿ ಬೆಳವಣಿಗೆ.

ನಟಿ ರಮ್ಯಾ ಅವರು ಮಾಡಿದ್ದ ಪೋಸ್ಟ್ ಒಂದಕ್ಕೆ ಬಂದ ಪ್ರತಿಕ್ರಿಯೆಗಳನ್ನೇ ನಿದರ್ಶನವಾಗಿ ತೆಗೆದುಕೊಳ್ಳಬಹುದು. ಆಕೆ ಧೈರ್ಯವಾಗಿ ಮುಂದೆ ಬಂದು, ಕಾನೂನು ಹೋರಾಟ ನಡೆಸಿದರು. ಆದರೆ ಅಂತಹ ಧೈರ್ಯ ಎಲ್ಲರಿಗೂ ಇರುವುದಿಲ್ಲ. ಯಾರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೂ ಧಕ್ಕೆ ಬರದೇ ಇರುವ ರೀತಿಯಲ್ಲಿ ಇಂತಹ ದಬ್ಬಾಳಿಕೆಗಳನ್ನು ನಿಯಂತ್ರಿಸುವ ಕೆಲಸ ಸರ್ಕಾರದಿಂದಲೇ ಆಗಬೇಕು.



ಮಂಜುಳಾದೇವಿ,
ಹೈಕೋರ್ಟ್ ಹಿರಿಯ ವಕೀಲೆ

ಅಭಿವ್ಯಕ್ತಿ ಸ್ವಾತಂತ್ರ್ಯ, ಪ್ರಭುತ್ವ: ಸಂವಾದ

'**ಅಭಿವ್ಯಕ್ತಿ ಸ್ವಾತಂತ್ರ್ಯ**, ಪ್ರಭುತ್ವ ಮತ್ತು ಸಂವಿಧಾನ' ಎಂಬ ವಿಷಯದ ಕುರಿತು ಸಮಾಜ ಕಲ್ಯಾಣ ಇಲಾಖೆ ಹಾಗೂ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಸಮೂಹ ಸಂಸ್ಥೆಯ ಸಹಯೋಗದಲ್ಲಿ ಬೆಂಗಳೂರಿನಲ್ಲಿ ಸಂವಾದ ನಡೆಯಿತು. 'ಸಂವಿಧಾನವೇ ಬೆಳಕು–ಒಂದು ಚರ್ಚೆ' ವಿಷಯದ ಭಾಗವಾಗಿ ನಡೆದ ಸಂವಾದದಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿವೃತ್ತ ಪ್ರಾಧ್ಯಾಪಕ ನಟರಾಜ್ ಹುಳಿಯಾರ್, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಕ್ಯಾಪ್ಟನ್ ಪಿ.ಮಣಿವಣ್ಣನ್ ಮತ್ತು ಹೈಕೋರ್ಟ್‌ನ ಹಿರಿಯ ವಕೀಲರಾದ ಮಂಜುಳಾದೇವಿ ಪಾಲ್ಗೊಂಡಿದ್ದರು. 'ಪ್ರಜಾವಾಣಿ' ವರದಿಗಾರರ ವಿಭಾಗದ ಮುಖ್ಯಸ್ಥ ವೈ.ಗ.ಜಗದೀಶ್ ಸಂವಾದ ನಡೆಸಿಕೊಟ್ಟರು.

ಕಲೆ: ಸಂತೋಷ ಸಸಿಹಿತ್ಲು

An Initiative by:

SOCIAL WELFARE DEPARTMENT
For the Educational, Social & Economic Upliftment of Scheduled Castes

In Association with:

ಸುಭದ್ರ ಭಾರತಕ್ಕೆ ಸಮರ್ಥ ಬುನಾದಿ

ದಾವಣಗೆರೆಯ ವಿಶ್ವವಿದ್ಯಾಲಯದ ಆವರಣದಲ್ಲಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಬಳಗ ಏರ್ಪಡಿಸಿದ್ದ 'ಸಂವಿಧಾನವೇ ಬೆಳಕು' ವಾಕಥಾನ್‌ನಲ್ಲಿ ವಿದ್ಯಾರ್ಥಿಗಳು ಹಾಗೂ ಗಣ್ಯರು ಹೆಜ್ಜೆಹಾಕಿದ ಕ್ಷಣ

ಸಂವಿಧಾನವೇ ಬೆಳಕು

Curated by DH DECCAN HERALD | ಪ್ರಜಾವಾಣಿ

'ಸ್ವಾತಂತ್ರ್ಯ ಸಿಕ್ಕಾಗ ದೇಶದಲ್ಲಿ 570ಕ್ಕೂ ಅಧಿಕ ಸಂಸ್ಥಾನಗಳು ಅಸ್ತಿತ್ವದಲ್ಲಿದ್ದವು. ಭಾರತದ ಮೊದಲ ಗೃಹ ಸಚಿವ ಸರ್ದಾರ್ ವಲ್ಲಭಭಾಯಿ ಪಟೇಲ್ ಎಲ್ಲ ಸಂಸ್ಥಾನಗಳನ್ನು ಒಗ್ಗೂಡಿಸಲು ಶ್ರಮಿಸಿದರು. ಇದಕ್ಕೆ ಸ್ಪಷ್ಟ ದಿಕ್ಕು ತೋರಿ ಬುನಾದಿ ನಿರ್ಮಿಸಿದ್ದು ಭಾರತೀಯ ಸಂವಿಧಾನ' ಎಂದು ದಾವಣಗೆರೆ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಡಿ. ಕುಂಬಾರ ಅಭಿಪ್ರಾಯಪಟ್ಟರು.

'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಬಳಗವು ಸಮಾಜ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ, ವಿಶ್ವವಿದ್ಯಾಲಯ ಹಾಗೂ ವಿ.ವಿ.ಯ ರಾಜ್ಯಶಾಸ್ತ್ರ ವಿಭಾಗದ ಸಹಕಾರದೊಂದಿಗೆ 'ಸಂವಿಧಾನವೇ ಬೆಳಕು' ಅಭಿಯಾನದಡಿ ದಾವಣಗೆರೆ ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿಸಿದ್ದ 'ವಿಚಾರ ಸಂಕಿರಣ ಹಾಗೂ ವಾಕಥಾನ್'ಗೆ ಚಾಲನೆ ನೀಡಿ ಅವರು ಮಾತನಾಡಿದರು.

'ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನ ರಚಿಸದೇ ಇದ್ದಿದ್ದರೆ ಭಾರತ ಪರಿಸ್ಥಿತಿ ಭಿನ್ನವಾಗಿರುತ್ತಿತ್ತು. ಗುಲಾಮಗಿರಿ, ಶೋಷಣೆ, ವರ್ಣ ವ್ಯವಸ್ಥೆಯನ್ನು ಇನ್ನೂ ಜೀವಂತವಾಗಿ ಕಾಣಬೇಕಾಗುತ್ತಿತ್ತು. ನಾನು ಕೂಡ ಕುಲಪತಿ ಹುದ್ದೆಗೆ ಏರುತ್ತಿರಲಿಲ್ಲ. ಬಹುತೇಕರು ಶಿಕ್ಷಣದ ಹಕ್ಕಿನಿಂದ ವಂಚಿತರಾಗುತ್ತಿದ್ದರು. ದೇಶವನ್ನು ಗುಲಾಮಗಿರಿ ವ್ಯವಸ್ಥೆಯಿಂದ ಮುಕ್ತಿಗೊಳಿಸಿದ್ದು ಅಂಬೇಡ್ಕರ್ ಮತ್ತು ಅವರು ರೂಪಿಸಿದ ಸಂವಿಧಾನ' ಎಂದು ಪ್ರತಿಪಾದಿಸಿದರು.

'ವಿಶ್ವದ ಸರ್ವಶ್ರೇಷ್ಠ ಸಂವಿಧಾನವನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕು. ಹುದ್ದೆ, ಉದ್ಯೋಗ ಯಾವುದೇ ಆಗಿರಲಿ ಸಂವಿಧಾನದ ಅರಿವು ಅತಿ ಮುಖ್ಯ. ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವವರು ಕಡ್ಡಾಯವಾಗಿ ಸಂವಿಧಾನ ವ್ಯಾಸಂಗ ಮಾಡಬೇಕು. ಪ್ರತಿ ಗ್ರಂಥಾಲಯದಲ್ಲಿ ಸಂವಿಧಾನದ ಪ್ರತಿಯನ್ನು ಇಡಲಾಗಿದೆ. ಇದನ್ನು ಒಮ್ಮೆಯಾದರೂ ಗಮನಿಸಿ. ದೇಗುಲ, ದೇವರಿಗೆ ಸಿಗುವ ಗೌರವ ಸಂವಿಧಾನ ಹಾಗೂ ಅಂಬೇಡ್ಕರ್ ಅವರಿಗೂ ಸಿಗಬೇಕು' ಎಂದರು.

'ಸ್ವಾತಂತ್ರ್ಯ ಪೂರ್ವದಲ್ಲಿ ಬಿ.ಆರ್. ಅಂಬೇಡ್ಕರ್ ಅನುಭವಿಸಿದ ನೋವು, ಕಷ್ಟ ಅಪರಿಮಿತ. ಇಂತಹದೊಂದು ಶೋಷಣೆಗೆ ಮುಕ್ತಿ ಹಾಡಬೇಕು ಎಂಬ ಉದ್ದೇಶದಿಂದ ಸಂವಿಧಾನವನ್ನು ತುಂಬಾ ಜವಾಬ್ದಾರಿಯಿಂದ ರಚಿಸಲಾಗಿದೆ. ಪ್ರತಿಯೊಬ್ಬ ಭಾರತೀಯ ಪ್ರಜೆಯ ಬದುಕಿಗೆ ಸಂವಿಧಾನ ಬೆಳಕಾಗಿದೆ' ಎಂದು ಹೇಳಿದರು.

'ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ದೇಶ ಭಾರತ ಎಂಬ ಪರಿಕಲ್ಪನೆ ಇದೆ. ಈ ದೇಶವನ್ನು ಯಾರೊಬ್ಬರೂ ಏನೂ ಮಾಡಲು ಸಾಧ್ಯವಿಲ್ಲ ಎಂಬ ಭ್ರಮೆ ಮೂಡಿದೆ. ಇದೊಂದು ರೀತಿ ಕಣ್ಣಿನ ಪೊರೆಯಂತೆ ನಮ್ಮನ್ನು ಆವರಿಸಿಕೊಂಡಿದೆ. ಈ ಪೊರೆಯನ್ನು ಕಳಚುವ ಕಾರ್ಯ ಅತಿ ಜರೂರಾಗಿ ಆಗಬೇಕಿದೆ. ಸಂವಿಧಾನವನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಇಂತಹ ಪೊರೆ, ಭ್ರಮೆಗಳಿಂದ ಹೊರಬರಲು ಸಾಧ್ಯ' ಎಂದು ನುಡಿದರು.

'ಭಾರತ ರೂಪುಗೊಳ್ಳಲು ಸಾಕಷ್ಟು ಹೋರಾಟಗಳು ನಡೆದಿವೆ. ಬ್ರಿಟಿಷರ ವಿರುದ್ಧ ನಡೆದ ಚಳವಳಿಗಳಲ್ಲಿ ಸಾವಿರಾರು ಜನರು ಪ್ರಾಣತ್ಯಾಗ ಮಾಡಿದ್ದಾರೆ. ಅಜ್ಜ-ಅಜ್ಜಿ ಸೇರಿದಂತೆ ಪೂರ್ವಜರು ಕೂಡ ಈ ಹೋರಾಟದ ಭಾಗವಾಗಿದ್ದರು. ಅವರ ಪರಿಶ್ರಮದ ಫಲವಾಗಿ ಸ್ವಾತಂತ್ರ್ಯ ಸಿಕ್ಕಿದೆ. ಈ ಸಂಗತಿಯನ್ನು ಯಾರೊಬ್ಬರೂ ಮರೆಯಬಾರದು. ಸ್ವತಂತ್ರ ಭಾರತಕ್ಕೆ ಭದ್ರ ಬುನಾದಿಯಾಗಿರುವ ಸಂವಿಧಾನವನ್ನು ಸಮಗ್ರವಾಗಿ ಅರಿಯುವ ಪ್ರಯತ್ನ ಮಾಡಬೇಕು' ಎಂದು ಕಿವಿಮಾತು ಹೇಳಿದರು.

'ಸಂವಿಧಾನದ 370ನೇ ವಿಧಿಯ ಅಡಿ ಜಮ್ಮು ಮತ್ತು ಕಾಶ್ಮೀರಕ್ಕೆ ಕಲ್ಪಿಸಲಾಗಿದ್ದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಲಾಯಿತು. ದೇಶದಲ್ಲಿ ಸಮಾನತೆ ಜಾರಿಗೊಳಿಸುವ ಆಶಯದೊಂದಿಗೆ ನಡೆದ ಈ ಪ್ರಯತ್ನದ ಕುರಿತು ದೇಶದಲ್ಲಿ ದೊಡ್ಡ ಮಟ್ಟದ ಚರ್ಚೆಯಾಯಿತು. ಮಾಧ್ಯಮಗಳು ಕೂಡ ತಮ್ಮದೇ ಆಗಿರುವ ದೃಷ್ಟಿಕೋನದಲ್ಲಿ ಇದನ್ನು ವಿಶ್ಲೇಷಣೆ ಮಾಡಿವೆ. 'ಪ್ರಜಾವಾಣಿ' ಅತ್ಯುತ್ತಮ ಲೇಖನಗಳನ್ನು ಪ್ರಕಟಿಸಿದೆ. ಇಂತಹ ಬರಹಗಳ ಅಧ್ಯಯನ ಮಾಡಿದರೆ ಸಂವಿಧಾನವನ್ನು ಇನ್ನಷ್ಟು ಆಳವಾಗಿ ಅರಿಯಲು ಸಾಧ್ಯ' ಎಂದರು.

'ಸಂವಿಧಾನವು ಹಕ್ಕುಗಳನ್ನು ಮಾತ್ರ ನೀಡಿಲ್ಲ. ಕರ್ತವ್ಯ, ಹೊಣೆಗಾರಿಕೆಗಳನ್ನು ಕೂಡ ನಿಗದಿಪಡಿಸಿದೆ. ಹಕ್ಕು ಕೇಳುವ ಪ್ರತಿಯೊಬ್ಬರೂ ಕರ್ತವ್ಯಗಳನ್ನು ಮರೆಯಬಾರದು. ಸಂವಿಧಾನ ಬಿಟ್ಟು ಭಾರತವಿಲ್ಲ- ಭಾರತವನ್ನು ಬಿಟ್ಟು ಸಂವಿಧಾನವಿಲ್ಲ. ಸಂವಿಧಾನ ದೇಶದ ಎಲ್ಲ ಪ್ರಜೆಗಳ ಬದುಕಿನ ಅವಿಭಾಜ್ಯ ಅಂಗವಾಗಿದೆ. ಸಂವಿಧಾನವನ್ನು ಸರಿಯಾಗಿ ಅರಿತವರು ದೇಶ, ರಾಜ್ಯದ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಾರೆ' ಎಂದು ಹೇಳಿದರು.

'ಪ್ರಜಾವಾಣಿ' ಬ್ಯೂರೊ ಮುಖ್ಯಸ್ಥ ಸಿದ್ದಯ್ಯ ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಟಿಪಿಎಂಎಲ್ ಸಂಸ್ಥೆಯ ಜಾಹೀರಾತು ವಿಭಾಗದ ಸಹಾಯಕ ಪ್ರಧಾನ ವ್ಯವಸ್ಥಾಪಕ ಪ್ರಮೋದ್ ಭಾಗವತ್, ಪ್ರಸರಣ ವಿಭಾಗದ ವ್ಯವಸ್ಥಾಪಕ ನಂದಗೋಪಾಲ್, 'ಡೆಕ್ಕನ್ ಹೆರಾಲ್ಡ್' ಮುಖ್ಯ ವರದಿಗಾರ ಎಸ್.ಕೆ. ನೃಪತುಂಗ ಹಾಜರಿದ್ದರು.

'ನಾಗರಿಕ ಪ್ರಜ್ಞೆ ಜಾಗೃತಗೊಳಿಸಿದ ಕೈದೀವಿಗೆ'

'ಸಂವಿಧಾನದ ಆಶಯಗಳನ್ನು ತಿಳಿದುಕೊಂಡರೆ ಯಾರೂ ಅನಾಗರಿಕರಂತೆ ವರ್ತಿಸಲು ಸಾಧ್ಯವೇ ಇಲ್ಲ. ಸಂವಿಧಾನ ದೇಶದ ಜನರ ನಾಗರಿಕ ಪ್ರಜ್ಞೆಯನ್ನು ಜಾಗೃತಗೊಳಿಸಿದೆ. ಅಸಮಾನತೆಯನ್ನು ತೊಡೆದುಹಾಕಲು ಮೀಸಲಾತಿಯಂತಹ ಸೌಲಭ್ಯಗಳನ್ನು ಕಲ್ಪಿಸಿದೆ' ಎಂದು ಸಮಾಜ ಕಲ್ಯಾಣ ಇಲಾಖೆಯ ಹರಿಹರದ ಸಹಾಯಕ ನಿರ್ದೇಶಕ ಹನುಮಂತಪ್ಪ ಲಮಾಣಿ ಅಭಿಪ್ರಾಯಪಟ್ಟರು.

'ಭಾರತೀಯ ಸಂವಿಧಾನ ಸಶಕ್ತವಾಗಿದೆ. ಪ್ರತಿಯೊಬ್ಬರಿಗೂ ಬದುಕುವ ಹಕ್ಕು ಕಲ್ಪಿಸಿ, ಸಮಾನತೆ ನೀಡಿದೆ. ನೈಸರ್ಗಿಕ ಸಂಪತ್ತು ರಕ್ಷಣೆ ಹಾಗೂ ಅಭದ್ರತೆಯನ್ನು ತೊಡೆದುಹಾಕುವ ಸಾಮರ್ಥ್ಯ ಇರುವುದು ಸಂವಿಧಾನಕ್ಕೆ ಮಾತ್ರ. ಸರ್ವರಿಗೂ ಸಮಪಾಲು, ಸಮಬಾಳು ತಂದುಕೊಟ್ಟಿದ್ದು ಸಂವಿಧಾನ. ಪರಿಸರ, ಸಂಪನ್ಮೂಲಗಳನ್ನು ಕಾಪಾಡಿಕೊಂಡು ಇನ್ನಷ್ಟು ಶಕ್ತಿಶಾಲಿಯಾಗಿ ಬೆಳೆಯಬೇಕು' ಎಂದು ಪ್ರತಿಪಾದಿಸಿದರು.

'ಸಮಾಜ ಕಲ್ಯಾಣ ಇಲಾಖೆ ಉಚಿತ ವಸತಿ ಸೌಲಭ್ಯ, ಶಿಕ್ಷಣ ವ್ಯವಸ್ಥೆ ರೂಪಿಸಿದೆ. ಸ್ನಾತಕೋತ್ತರ ಪದವಿವರೆಗೂ ವಿದ್ಯಾರ್ಥಿನಿಲಯಗಳನ್ನು ಆರಂಭಿಸಲಾಗಿದೆ. ಉತ್ತಮ ವ್ಯಾಸಂಗ ಮಾಡಿದವರಿಗೆ ಪ್ರೋತ್ಸಾಹಧನ, ಬಹುಮಾನ, ವಿದ್ಯಾರ್ಥಿ ವೇತನಗಳಿವೆ. ವಿದೇಶದಲ್ಲಿ ವ್ಯಾಸಗಂಕ್ಕೆ ಪ್ರೋತ್ಸಾಹ, ಸಂಶೋಧನೆಗೆ ಅವಕಾಶಗಳಿವೆ. ಸ್ಪರ್ಧಾತ್ಮಕ ಪರೀಕ್ಷೆಗೆ ಉತ್ತೇಜನ ನೀಡಲಾಗುತ್ತಿದೆ' ಎಂದರು.

ದಾವಣಗೆರೆಯ ವಿಶ್ವವಿದ್ಯಾಲಯದ ಆವರಣದಲ್ಲಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಬಳಗ ಏರ್ಪಡಿಸಿದ್ದ ಸಂವಿಧಾನವೇ ಬೆಳಕು ವಾಕಥಾನ್‌ನಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರು

'ಅರಾಜಕತೆ ತಡೆದ ಸಂವಿಧಾನ'

'ಜೆನ್-ಝೀ ಹೋರಾಟಕ್ಕೆ ಕೆಲ ರಾಷ್ಟ್ರಗಳ ರಾಜಕೀಯ ವ್ಯವಸ್ಥೆಯೇ ಬುಡಮೇಲಾಗಿದೆ. ಮಿಲಿಟರಿ ವ್ಯವಸ್ಥೆ, ಸರ್ವಾಧಿಕಾರವನ್ನು ಬೇರೆ ದೇಶಗಳು ಕಂಡಿವೆ. ಅಧಿಕಾರ ಹಸ್ತಾಂತರಿಸುವಾಗ ಬಿಕ್ಕಟ್ಟುಗಳು ಸೃಷ್ಟಿಯಾಗಿ ರಾಜಕೀಯ ವ್ಯವಸ್ಥೆ ಅಸ್ತವ್ಯಸ್ತಗೊಂಡ ನಿದರ್ಶನಗಳಿವೆ. ಇಂತಹ ವಿಪ್ಲವ, ಅರಾಜಕತೆ ಭಾರತದಲ್ಲಿ ನಡೆದಿಲ್ಲ. ಇದಕ್ಕೆ ಸುಭದ್ರವಾದ 'ಭಾರತೀಯ ಸಂವಿಧಾನ'ವೇ ಕಾರಣ' ಎಂದು ದಾವಣಗೆರೆ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಅಶೋಕಕುಮಾರ ಪಾಳೇದ ಅಭಿಪ್ರಾಯಪಟ್ಟರು.

'ರಾಜ್ಯವನ್ನು ಆಳುವ ಮೂಲಭೂತ ಕಾನೂನು ಸಂವಿಧಾನ. ದೇಶದಲ್ಲಿ ರೂಪುಗೊಳ್ಳುವ ಎಲ್ಲ ಕಾನೂನುಗಳ ತಾಯಿ ಸಂವಿಧಾನ. ಸಾಮಾಜಿಕ ನ್ಯಾಯದ ಪರಿಕಲ್ಪನೆಯೇ ಸಂವಿಧಾನದ ಮೂಲ ಧ್ಯೇಯ. 12ನೇ ಶತಮಾನದ ವಚನ ಚಳವಳಿಯ ಆಶಯಗಳು ಭಾರತೀಯ ಸಂವಿಧಾನದಲ್ಲಿವೆ. ಬಹುತ್ವ, ವೈವಿಧ್ಯತೆಯಿಂದ ಕೂಡಿದ ದೇಶಕ್ಕೆ ಬೃಹತ್ ಸಂವಿಧಾನ ರೂಪಿಸಲಾಗಿದೆ. ಇಂತಹ ಸಂವಿಧಾನದ ಬದಲಾವಣೆ ಅಸಾಧ್ಯ' ಎಂದು ಒತ್ತಿ ಹೇಳಿದರು.

'ಹೆಜ್ಜೆಗುರುತು ಮೂಡಿಸಿದ ವಾಕಥಾನ್'

ವರ್ಷದ ಮೊದಲ ಮಳೆಗೆ ಪುಳಕಗೊಂಡಿದ್ದ ದಾವಣಗೆರೆ ವಿಶ್ವವಿದ್ಯಾಲಯದ 'ಶಿವಗಂಗೋತ್ರಿ' ಆವರಣ 'ಸಂವಿಧಾನಕ್ಕಾಗಿ ನಡೆಯೋಣ– ಹೆಜ್ಜೆಯಿಡು ದಾವಣಗೆರೆ' ವಾಕಥಾನ್ ಹೊಸ ಹೆಜ್ಜೆ ಗುರುತುಗಳನ್ನು ಮೂಡಿಸಿತು. ವಿಶ್ವವಿದ್ಯಾಲಯದ ಹಲವು ವಿಭಾಗ ಹಾಗೂ ವಿವಿಧ ಪದವಿ ಕಾಲೇಜುಗಳಿಂದ ಆಗಮಿಸಿದ್ದ ಸಾವಿರಾರು ವಿದ್ಯಾರ್ಥಿಗಳು 'ಭಾರತೀಯ ಸಂವಿಧಾನ'ದ ಅರಿವು ಮೂಡಿಸುವುದಕ್ಕಾಗಿ ಉತ್ಸಾಹದಿಂದ ಹೆಜ್ಜೆಹಾಕಿದರು.

ಉತ್ಸಾಹಿ ಯುವಪಡೆ ಮೊದಲೇ ಹೆಸರು ನೋಂದಣಿ ಮಾಡಿಕೊಂಡಿತ್ತು. ಇವರಿಗೆ ಟೀ–ಶರ್ಟ್ ಹಾಗೂ ಕ್ಯಾಪ್ ವಿತರಿಸಲಾಗಿತ್ತು. 'ಸಂವಿಧಾನವೇ ಬೆಳಕು' ಎಂಬ ಶ್ವೇತ ವರ್ಣದ ಧ್ವಜಗಳನ್ನು ಹಿಡಿದು ಹೆಮ್ಮೆಯಿಂದ ಸಾಗಿದರು. ಸಂವಿಧಾನ, ಡಾ.ಅಂಬೇಡ್ಕರ್ ಪರವಾಗಿ ಘೋಷಣೆಗಳನ್ನು ಮೊಳಗಿಸುತ್ತ ವಿಶ್ವವಿದ್ಯಾಲಯದಲ್ಲಿ ಸಂಚಲನ ಮೂಡಿಸಿದರು.

ಒಕ್ಕೂಟ ವ್ಯವಸ್ಥೆಗೆ ಶ್ರೀರಕ್ಷೆ

'ಸಂವಿಧಾನ ಸ್ಥಾವರವಲ್ಲ, ಚಲನಶೀಲ; ಜಂಗಮ ತತ್ವವೇ ಇದರ ಅಂತಃಶಕ್ತಿ. ಒಕ್ಕೂಟ ವ್ಯವಸ್ಥೆಯು ಎಲ್ಲ ಸವಾಲುಗಳನ್ನು ಸಮರ್ಥವಾಗಿ ಎದುರಿಸುತ್ತಿದೆ. ರಾಜಕೀಯ, ಆರ್ಥಿಕ, ಆಡಳಿತಾತ್ಮಕ ವಿವಾದಗಳ ಪರಿಹಾರಕ್ಕೆ ಅವಿರತವಾಗಿ ಶ್ರಮಿಸಿದೆ. ರಾಜ್ಯಗಳ ನಡುವಿನ ಅಸಮಾಧಾನ ಸ್ಫೋಟಗೊಂಡು ಪ್ರಜಾಪ್ರಭುತ್ವಕ್ಕೆ ಧಕ್ಕೆ ಆಗುವುದನ್ನು ತಡೆದಿದೆ'.

'ಸಂವಿಧಾನವೇ ಬೆಳಕು' ಅಭಿಯಾನದ ಭಾಗವಾಗಿ ದಾವಣಗೆರೆಯಲ್ಲಿ ಏರ್ಪಡಿಸಿದ್ದ ಚರ್ಚೆಯಲ್ಲಿ ಗಣ್ಯರು ಹಂಚಿಕೊಂಡ ಒಳನೋಟಗಳಿವು.

'ಒಕ್ಕೂಟ ವ್ಯವಸ್ಥೆ ಮತ್ತು ಸಂಪನ್ಮೂಲ (ಹಣಕಾಸು, ಜಲ, ಗಣಿ) ಹಂಚಿಕೆ-ಆಗುತ್ತಿರುವುದೇನು?' ವಿಷಯದ ಕುರಿತು ನಡೆದ ಚರ್ಚೆಯಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶ ಮಹಾವೀರ ಕರೆಣ್ಣವರ, ಪೂರ್ವ ವಲಯದ ಐಜಿಪಿ ಬಿ.ಆರ್. ರವಿಕಾಂತೇಗೌಡ, ದಾವಣಗೆರೆ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಅಶೋಕ್ ಕುಮಾರ್ ಪಾಳೇದ ಹಾಗೂ ಸಾಮಾಜಿಕ ಕಾರ್ಯಕರ್ತ ಬಿ.ಎಂ. ನಿರಂಜನ ಪಾಲ್ಗೊಂಡಿದ್ದರು. 'ಪ್ರಜಾವಾಣಿ'ಯ ದಾವಣಗೆರೆ ಬ್ಯೂರೊ ಮುಖ್ಯಸ್ಥ ಸಿದ್ದಯ್ಯ ಹಿರೇಮಠ ಈ ಚರ್ಚೆಯನ್ನು ನಿರ್ವಹಿಸಿದರು.

ಸಂವಿಧಾನ ರಚನಾ ಸಮಿತಿ 1949ರ ನವೆಂಬರ್ 26ರಂದು ಒಕ್ಕೂಟ ವ್ಯವಸ್ಥೆಗೆ ಸಮ್ಮತಿ ಸೂಚಿಸಿತು. 1950 ಜನವರಿ 26ರಂದು ಸಂವಿಧಾನದ ಜೊತೆಗೆ ಒಕ್ಕೂಟ ವ್ಯವಸ್ಥೆ ಕೂಡ ಜಾರಿಗೆ ಬಂತು. ಒಕ್ಕೂಟ ವ್ಯವಸ್ಥೆಯ ಅನುಕೂಲಗಳು ಏನು? ಹೊಸ ರಾಜ್ಯಗಳು ಅಸ್ತಿತ್ವಕ್ಕೆ ಬಂದಾಗಿನಿಂದ ನದಿ ನೀರು ಹಂಚಿಕೆ ಹೇಗೆ ಆಗಿದೆ? ನ್ಯಾಯ ಮಂಡಳಿ ರಚನೆ, ಹಂಚಿಕೆಯ ಸೂತ್ರಗಳು ಯಾವವು? ಖನಿಜ ಸಂಪತ್ತು ಕೇಂದ್ರೀಕೃತ ವ್ಯವಸ್ಥೆಯ ನಿಯಂತ್ರಣದಲ್ಲಿದೆ. ಪರಿಸರ ಕಾಪಾಡಿಕೊಂಡು ಸಂಪತ್ತು ಅನುಭವಿಸುವುದು ಹೇಗೆ? ಎಂಬ ಕುರಿತು ಗಹನ ಚರ್ಚೆ ನಡೆಯಿತು.

ಖನಿಜವು ರಾಷ್ಟ್ರೀಯ ಸಂಪತ್ತಾಗಿದ್ದರೂ, ರಾಜ್ಯ ಸರ್ಕಾರಗಳಿಗೂ ಸಂಪನ್ಮೂಲದಲ್ಲಿ ಪಾಲಿದೆ. ರಾಷ್ಟ್ರದ ಹಿತಾಸಕ್ತಿ ಗಮನಿಸಿ ಸಂಪನ್ಮೂಲ ಬಳಕೆ ಆಗಬೇಕು ಎಂಬುದು ಸಂವಿಧಾನದ ಆಶಯ. ರಾಷ್ಟ್ರದ ಅಭಿವೃದ್ಧಿ ಹಾಗೂ ಸ್ಥಳೀಯ ಸುಸ್ಥಿರತೆ ಎರಡೂ ಮುಖ್ಯ ಎಂಬ ಅಭಿಪ್ರಾಯ ಚರ್ಚೆಯಲ್ಲಿ ವ್ಯಕ್ತವಾಯಿತು.

'ಸ್ವಾತಂತ್ರ್ಯ ಪೂರ್ವದಲ್ಲಿ ಸೈಮನ್ ಆಯೋಗವು ಭಾರತದಲ್ಲಿ ಸಂವಿಧಾನ ರಚನೆಗೆ ಬುನಾದಿ ಹಾಕಿತು. 1935ರ ಭಾರತ ಸರ್ಕಾರದ ಕಾಯ್ದೆಯು ಒಕ್ಕೂಟ ವ್ಯವಸ್ಥೆಯ ಕುರಿತ ಚರ್ಚೆಯನ್ನು ಮುನ್ನೆಲೆಗೆ ತಂದಿತು. ಆಗ ಭಾರತದಲ್ಲಿ ಪ್ರಾಂತೀಯ ಮತ್ತು ಕೇಂದ್ರೀಯ ವ್ಯವಸ್ಥೆ ಇತ್ತು. ಕೇಂದ್ರೀಯ ವ್ಯವಸ್ಥೆಯೇ ಪರಮಾಧಿಕಾರ ಹೊಂದಿತ್ತು' ಎಂದು ಪೂರ್ವ ವಲಯದ ಐಜಿಪಿ ಬಿ.ಆರ್. ರವಿಕಾಂತೇಗೌಡ ಅಭಿಪ್ರಾಯ ಮುಂದಿಟ್ಟರು.

'1946ರಲ್ಲಿ ಮೀರತ್‌ನಲ್ಲಿ ನಡೆದ ಭಾರತೀಯ ಕಾಂಗ್ರೆಸ್ ಅಧಿವೇಶನದಲ್ಲಿ ಜವಾಹರಲಾಲ್ ನೆಹರೂ ಒಕ್ಕೂಟ ವ್ಯವಸ್ಥೆಗೆ ಸಂಬಂಧಿಸಿದಂತೆ ನಿರ್ಣಯವೊಂದನ್ನು ಮಂಡಿಸಿದರು. ಆ ನಿರ್ಣಯದ ಪ್ರಕಾರ ರಾಜ್ಯಗಳಿಗೆ ಹೆಚ್ಚು ಅಧಿಕಾರ ನೀಡಿ ಕೇಂದ್ರವನ್ನು ಸಾಂಕೇತಿಕವಾಗಿ ಇಡಲಾಗಿತ್ತು. ದುರದೃಷ್ಟವಶಾತ್ ಭಾರತದ ವಿಭಜನೆಯ ಸಂದರ್ಭದಲ್ಲಿ ನಡೆದ ಘಟನಾವಳಿಗಳು ಈ ಪರಿಕಲ್ಪನೆಯನ್ನು ತಿರುವುಮುರುವು ಮಾಡಿದವು. ಕೇಂದ್ರ ಸರ್ಕಾರ ಬಲಿಷ್ಠವಾಯಿತು. ರಾಜ್ಯಗಳಿಗೆ ಅಧಿಕಾರಗಳಿದ್ದರೂ ಪರಮಾಧಿಕಾರ ಮಾತ್ರ ಕೇಂದ್ರಕ್ಕೆ ಸಿಕ್ಕಿತು' ಎಂದು ವಿವರಿಸಿದರು.

'ಸಂವಿಧಾನವು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಎಂಬ ವ್ಯವಸ್ಥೆ ರೂಪಿಸಿದೆ. ಸಂವಿಧಾನ ರಚನಕಾರರು ನ್ಯಾಯಾಂಗ ವ್ಯವಸ್ಥೆಯನ್ನು ಅತ್ಯುತ್ತಮವಾಗಿ ರಚಿಸಿದ್ದಾರೆ. ನ್ಯಾಯಾಂಗ ಸ್ವತಂತ್ರ ಅಂಗವಾಗಿದ್ದು, ಕಾರ್ಯಾಂಗ ಮತ್ತು ಶಾಸಕಾಂಗಕ್ಕಿಂತ ಭಿನ್ನವಾಗಿದೆ. ನ್ಯಾಯಾಂಗ ವ್ಯವಸ್ಥೆ ಹಲವು ಹಂತಗಳನ್ನು ಹೊಂದಿದೆ. ಸುಪ್ರೀಂ ಕೋರ್ಟ್, ಹೈಕೋರ್ಟ್ ಹಾಗೂ ವಿಚಾರಣಾ ನ್ಯಾಯಾಲಯ ಎಂಬ ಮೂರು ಸ್ತರಗಳಲ್ಲಿ ನ್ಯಾಯಾಂಗ ರೂಪು ತಳೆದಿದೆ' ಎಂದು ಮಹಾವೀರ ಕರೆಣ್ಣವರ ಪ್ರತಿಪಾದಿಸಿದರು.

'ಶಾಸಕಾಂಗ ರೂಪಿಸಿದ ಕಾನೂನು ಸಂವಿಧಾನದ ಮಾರ್ಗದರ್ಶನದಲ್ಲಿದೆಯೇ ಎಂಬುದನ್ನು ಪರಿಶೀಲಿಸುವುದು ನ್ಯಾಯಾಂಗದ ಕರ್ತವ್ಯ. ಸಂವಿಧಾನದ ಮಾರ್ಗೋಪಾಯಗಳನ್ನು ಶಾಸಕಾಂಗ ಮತ್ತು ಕಾರ್ಯಾಂಗ ಪಾಲನೆ ಮಾಡುತ್ತಿದೆಯೇ ಎಂಬುದರ ಮೇಲೆ ನಿಗಾ ಇಡುವ ಜವಾಬ್ದಾರಿ ಕೂಡ ನ್ಯಾಯಾಂಗದ ಮೇಲಿದೆ. ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಸಂರಕ್ಷಿಸುವ, ಕೇಂದ್ರ ಮತ್ತು ರಾಜ್ಯಗಳ ನಡುವೆ ಮೂಡುವ ಗೊಂದಲ, ವ್ಯಾಜ್ಯಗಳನ್ನು ಬಗೆಹರಿಸುವುದು ನ್ಯಾಯಾಂಗದ ಹೊಣೆ' ಎಂದು ಹೇಳಿದರು.

'1935ರ ಭಾರತ ಸರ್ಕಾರದ ಕಾಯ್ದೆಯಲ್ಲಿರುವಂತಹ ಒಕ್ಕೂಟ ವ್ಯವಸ್ಥೆ ದೇಶದಲ್ಲಿದ್ದರೆ ಉತ್ತಮ ಎಂಬುದು ಬ್ರಿಟಿಷರ ಅಭಿಪ್ರಾಯ ಆಗಿತ್ತು. ಕೇಂದ್ರ ಮತ್ತು ರಾಜ್ಯಗಳ ಆಡಳಿತ ವ್ಯವಸ್ಥೆಯನ್ನು ಸಾಮಾನ್ಯವಾಗಿ 'ಡಬಲ್ ಎಂಜಿನ್' ಸರ್ಕಾರವೆಂದು ಹೇಳುವ ರೂಢಿ ಇತ್ತೀಚೆಗೆ ಬೆಳೆದಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ಎರಡು ಸರ್ಕಾರಗಳು ಒಂದೇ ಪಕ್ಷದ ಕೈಯಲ್ಲಿ ಇರಬೇಕೆಂಬ ನಿಯಮವೇನೂ ಇಲ್ಲ. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಇದು ತುಸು ಕಷ್ಟವೂ ಹೌದು' ಎಂದು ದಾವಣಗೆರೆ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಅಶೋಕ್ ಕುಮಾರ್ ಪಾಳೇದ ಅಭಿಪ್ರಾಯಪಟ್ಟರು.

ಭಾರತ ರಾಜ್ಯಗಳ ಒಕ್ಕೂಟ

'ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ನೇತೃತ್ವದಲ್ಲಿ ರಚನೆಯಾದ ಸಂವಿಧಾನದ ಕರಡು ಪ್ರತಿಯಲ್ಲಿ ಒಕ್ಕೂಟ ವ್ಯವಸ್ಥೆಯನ್ನು ಮುಂದಿಡಲಾಯಿತು. ದೇಶದ ಸಮಗ್ರತೆ ಕಾಪಾಡಿಕೊಳ್ಳುವ ಉದ್ದೇಶದಿಂದ 'ರಾಜ್ಯಗಳ ಒಕ್ಕೂಟ' ವ್ಯವಸ್ಥೆ ರೂಪಿತವಾಯಿತು. ಇದೊಂದು ನೈಸರ್ಗಿಕ ಒಕ್ಕೂಟವಾಗಿದ್ದು, ಯಾವುದೇ ರಾಜ್ಯ ದೇಶದಿಂದ ಪ್ರತ್ಯೇಕವಾಗಲು ಅವಕಾಶ ಇರದಂತೆ ರೂಪಿಸಿ ಮಂಡಿಸಲಾಯಿತು. ಈ ಬಗ್ಗೆ ದೀರ್ಘ ಚರ್ಚೆಯೂ ನಡೆಯಿತು. ದೇಶದ ಸಮಗ್ರತೆ, ಪ್ರಾದೇಶಿಕ ಅಸ್ಮಿತೆ ಮತ್ತು ಅನನ್ಯತೆ ಕಾಪಾಡಿಕೊಳ್ಳುವ ಉದ್ದೇಶದಿಂದ ರಾಜ್ಯಗಳ ಒಕ್ಕೂಟ ವ್ಯವಸ್ಥೆ ಅನುಷ್ಠಾನಕ್ಕೆ ಬಂದಿತು' ಎನ್ನುತ್ತಾರೆ ಬಿ.ಆರ್. ರವಿಕಾಂತೇಗೌಡ.

'ರಾಜ್ಯಗಳ ಒಕ್ಕೂಟದಲ್ಲಿ ಪ್ರತಿ ರಾಜ್ಯ ತನ್ನದೇ ಆಗಿರುವ ಅಸ್ಮಿತೆ, ಅನನ್ಯತೆ ಹಾಗೂ ಸಂಪನ್ಮೂಲ ಕಾಪಾಡಿಕೊಳ್ಳುವ ಅವಕಾಶವನ್ನು ಸಂವಿಧಾನ ನೀಡಿದೆ. ದೇಶವೊಂದರ ಇತಿಹಾಸದಲ್ಲಿ 7 ದಶಕಗಳು ಕಡಿಮೆ ಕಾಲಾವಧಿ. ಆದರೆ, ಸಂವಿಧಾನದ ದೃಷ್ಟಿಯಿಂದ ಇದೊಂದು ಅತ್ಯಂತ ಮಹತ್ವದ ಕಾಲಘಟ್ಟ. ಎಲ್ಲರನ್ನೂ ಒಗ್ಗೂಡಿಸಿ ಇಟ್ಟಿರುವ ಶಕ್ತಿ ಸಂವಿಧಾನ. ಒಕ್ಕೂಟ ವ್ಯವಸ್ಥೆಯನ್ನು ಸಂವಿಧಾನ ಗಟ್ಟಿಯಾಗಿ ಹಿಡಿದಿಟ್ಟಿದೆ. ಭಾರತ, ಪ್ರಜಾಪ್ರಭುತ್ವ ರಾಷ್ಟ್ರವಾಗಿ ಗೆಲ್ಲುವುದಕ್ಕೆ ಸಂವಿಧಾನದ ಕೊಡುಗೆ ಅನನ್ಯ' ಎಂದರು.

ಅಶೋಕ್ ಕುಮಾರ್ ಪಾಳೇದ, 'ಒಕ್ಕೂಟ ವ್ಯವಸ್ಥೆಗಿಂತ ಕೇಂದ್ರೀಕೃತ ವ್ಯವಸ್ಥೆ ಸೂಕ್ತ ಎಂಬ ಅಭಿಪ್ರಾಯ ಸ್ವಾತಂತ್ರ್ಯ ಪೂರ್ವದಲ್ಲಿ ಕೇಳಿಬಂದಿತ್ತು. ಸ್ವಾತಂತ್ರ್ಯ ಪಡೆಯುವ ಸಂದರ್ಭದಲ್ಲಿ ನಡೆದ ಬೆಳವಣಿಗೆಗಳು ಒಕ್ಕೂಟ ವ್ಯವಸ್ಥೆಯತ್ತ ಒಲವು ಮೂಡುವಂತೆ ಮಾಡಿದವು. ಭಾರತ–ಪಾಕಿಸ್ತಾನ ವಿಭಜನೆಯ ಬಳಿಕ ಏಕತೆ, ಸಮಗ್ರತೆ ಹಾಗೂ ಸೌಹಾರ್ದಕ್ಕೆ ಧಕ್ಕೆ ಆಗದಂತೆ ದೇಶವನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ಒಕ್ಕೂಟ ವ್ಯವಸ್ಥೆಯನ್ನು ಅಂಬೇಡ್ಕರ್ ಕೂಡ ಪ್ರತಿಪಾದಿಸಿದರು. ರಾಷ್ಟ್ರದ ವೈವಿಧ್ಯ ಕಾಪಾಡಿಕೊಳ್ಳಲು ಒಕ್ಕೂಟ ವ್ಯವಸ್ಥೆ ಸೂಕ್ತವೂ ಹೌದು' ಎಂದರು.

'ಒಕ್ಕೂಟ ವ್ಯವಸ್ಥೆಗೆ ಅಪಾಯಗಳು ಎದುರಾಗುವ ಸಂದರ್ಭ ತೀರಾ ವಿರಳ. ಲಿಖಿತ ಸಂವಿಧಾನದಲ್ಲಿ ಈ ಬಗ್ಗೆ ಸ್ಪಷ್ಟತೆ ಇದೆ. ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಕೇಂದ್ರ, ರಾಜ್ಯ ಮತ್ತು ಸಮವರ್ತಿ ಪಟ್ಟಿ ಇವೆ. ದೇಶದ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಸಂವಿಧಾನವನ್ನು ರೂಪಿಸಲಾಗಿದೆ. ಸಂವಿಧಾನದ ಬೆಳಕಿನಲ್ಲಿ ಅಂಬೇಡ್ಕರ್, ಮಹಾತ್ಮ ಗಾಂಧಿ ಅವರ ಚಿಂತನೆಗಳಿವೆ. ಬಸವಣ್ಣನ ಚಿಂತನೆ ಕೂಡ ಅಡಕವಾಗಿದೆ. ದೇಶದ ಜನರಿಗೆ ಸಂವಿಧಾನವನ್ನು ಸಮರ್ಪಕವಾಗಿ ಮನವರಿಕೆ ಮಾಡಿಕೊಟ್ಟಾಗ ಒಕ್ಕೂಟ ವ್ಯವಸ್ಥೆ ಇನ್ನಷ್ಟು ಸಬಲವಾಗಲಿದೆ' ಎಂಬ ಸಲಹೆ ನೀಡಿದರು.

ಜಲಸಂಪನ್ಮೂಲ: ಮಧ್ಯಸ್ಥಿಕೆಗೆ ಒತ್ತು

'ಸಂವಿಧಾನವು ಭೌಗೋಳಿಕ, ಸಾರ್ವಜನಿಕ ಹಿತಾಸಕ್ತಿ ಕಾಪಾಡುತ್ತದೆ. ಪ್ರಾಣಿ, ಪಕ್ಷಿ ಸೇರಿದಂತೆ ನೈಸರ್ಗಿಕ ಸಂಪನ್ಮೂಲ ಸಂರಕ್ಷಣೆಗೂ ಒತ್ತು ನೀಡಿದೆ. ನದಿ ನೀರು ಹಂಚಿಕೆಯ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ಗಮನಿಸಲಾಗುತ್ತದೆ. ಪರಿಸರ, ಜನ ಹಾಗೂ ಕೃಷಿ ಸೇರಿದಂತೆ ಹಲವು ಅಂಶಗಳನ್ನು ಆಧರಿಸಿ ನೀರು ಹಂಚಿಕೆ ಮಾಡಲಾಗುತ್ತದೆ' ಎಂದು ನ್ಯಾಯಾಧೀಶ ಮಹಾವೀರ ಕರೆಣ್ಣವರ ವಿವರಿಸಿದರು.

'ಜನಸಂಖ್ಯೆ, ಕೃಷಿ ಭೂಮಿ, ನೀರಿನ ಅವಶ್ಯಕತೆ, ಉದ್ದೇಶ ಕೂಡ ನೀರು ಹಂಚಿಕೆಗೆ ಪರಿಗಣಿಸಲಾಗುತ್ತದೆ. ನೀರು ಜೀವಜಲವಾಗಿದ್ದು, ಎಲ್ಲ ಜೀವಸಂಕುಲಕ್ಕೂ ಅಗತ್ಯ. ಕಾವೇರಿ ನದಿ ಕರ್ನಾಟಕದಲ್ಲಿ ಹುಟ್ಟಿದ ಮಾತ್ರಕ್ಕೆ ಕಟ್ಟೆಕಟ್ಟಿ ಸಂಗ್ರಹಿಸಿಟ್ಟುಕೊಳ್ಳಲಾಗದು. ಇದಕ್ಕೆ ಸವಾಲುಗಳಿವೆ' ಎಂದರು.

'ರಾಜ್ಯ ಮತ್ತು ಕೇಂದ್ರಗಳ ನಡುವಿನ ವಿವಾದಕ್ಕೆ ಸಂಬಂಧಿಸಿದಂತೆ ಸಂವಿಧಾನದ 11 ಮತ್ತು 12ನೇ ಪರಿಚ್ಛೇದಗಳಲ್ಲಿ ವಿವರಿಸಲಾಗಿದೆ. ಜಲಸಂಪನ್ಮೂಲ, ಖನಿಜ ಸಂಪನ್ಮೂಲ ಸೇರಿ ಹಲವು ವಿಷಯಗಳ ಕುರಿತು ಸೃಷ್ಟಿಯಾಗುವ ವಿವಾದಗಳನ್ನು ಬಗೆಹರಿಸಿಕೊಳ್ಳುವ ಅವಕಾಶ ಪ್ರತಿ ರಾಜ್ಯಕ್ಕೂ ಇದೆ. ಸಂವಿಧಾನದ ಕೆಲ ವಿಧಿಗಳು ಕೇಂದ್ರಕ್ಕೆ ಹೆಚ್ಚು ಅಧಿಕಾರವನ್ನು ನೀಡಿವೆ' ಎಂದು ಅಶೋಕ್ ಕುಮಾರ್ ಪಾಳೇದ ಮಾಹಿತಿ ನೀಡಿದರು.

'ಅಂತರರಾಜ್ಯ ಗಡಿ, ಜಲ ವಿವಾದ ಬಗೆಹರಿಸಿಕೊಳ್ಳಲು ಸಂವಿಧಾನವು ಸಮರ್ಪಕ ಮಾರ್ಗಸೂಚಿಯನ್ನು ನೀಡಿದೆ. ಜಲವಿವಾದಗಳನ್ನು ಬಗೆಹರಿಸಲು ರಾಷ್ಟ್ರೀಯ ಜಲನೀತಿ ರೂಪಿಸಿದರೆ ಅನುಕೂಲವಾಗಲಿದೆ. ಇದನ್ನು ಅನುಸರಿಸಿ ನಿರ್ಣಯ ಕೈಗೊಳ್ಳಲು ಸಾಧ್ಯವಾಗಲಿದೆ. ನ್ಯಾಯಮಂಡಳಿಗಳ ನಡುವಿನ ಭಿನ್ನ ತೀರ್ಪುಗಳಿಗೂ ಪರಿಹಾರ ಸಿಗಲಿದೆ. ನ್ಯಾಯಮಂಡಳಿಗೆ ಒಂದು ಚೌಕಟ್ಟು ಸಿಗುತ್ತದೆ. ಇದರ ಆಧಾರದ ಮೇರೆಗೆ ಜಲ ವಿವಾದ ಬಗೆಹರಿಸಿಕೊಳ್ಳಲು ಸುಲಭವಾಗಲಿದೆ' ಎಂದು ಬಿ.ಆರ್. ರವಿಕಾಂತೇಗೌಡ ಸಲಹೆ ನೀಡಿದರು.

'ಸಂಪನ್ಮೂಲ ಹಂಚಿಕೆಗೆ ಸಂವಿಧಾನದಲ್ಲಿದೆ ಸ್ಪಷ್ಟತೆ'

'ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರು ದೇಶದ ಸಂಪತ್ತನ್ನು ಇಂಗ್ಲೆಂಡ್‌ಗೆ ತೆಗೆದುಕೊಂಡು ಹೋದರು. ರಾಜ್ಯಗಳು ದಷ್ಟಪುಷ್ಟವಾಗಿದ್ದರೆ ದೇಶ ಸಶಕ್ತವಾಗಲು ಸಾಧ್ಯ ಎಂಬುದು ಅಂಬೇಡ್ಕರ್ ಮಾತು. ಸಂಪನ್ಮೂಲ ಹಂಚಿಕೆಗೆ ಸಂಬಂಧಿಸಿದಂತೆ ಸಂವಿಧಾನದಲ್ಲಿ ಸ್ಥೂಲವಾದ ಮಾರ್ಗದರ್ಶನವಿದೆ. ಅಧಿಕಾರ ಹಂಚಿಕೆಯಲ್ಲಿ ಮಾತ್ರವಲ್ಲ, ಸಂಪನ್ಮೂಲ ಹಂಚಿಕೆಯಲ್ಲೂ ಸಂವಿಧಾನ ಬೆಳಕು ತೋರಿದೆ' ಎಂದು ಬಿ.ಆರ್. ರವಿಕಾಂತೇಗೌಡ ಹೇಳಿದರು.

'ನೇರ ತೆರಿಗೆ, ಪರೋಕ್ಷ ತೆರಿಗೆ, ಖನಿಜ ಸಂಪನ್ಮೂಲಗಳ ಹಂಚಿಕೆಗೆ ಸಂಬಂಧಿಸಿದಂತೆ ಸರಿಯಾದ ಮಾರ್ಗದರ್ಶನವನ್ನು ಸಂವಿಧಾನ ನೀಡಿದೆ. ಪ್ರಾದೇಶಿಕ ಅಸಮತೋಲನ ನಿವಾರಣೆಗೂ ಸಲಹೆಗಳನ್ನು ಮುಂದಿಟ್ಟಿದೆ. ಇದಕ್ಕಾಗಿ ನೀತಿ ಆಯೋಗ ಕೂಡ ರಚನೆಯಾಗಿದೆ. ಆಯೋಗದ ಸಭೆಗಳಲ್ಲಿ ಆಯಾ ರಾಜ್ಯಗಳಿಗೆ ಮಾತನಾಡುವ ಅವಕಾಶವಿದೆ. ಇದೊಂದು ಅರೆ ಒಕ್ಕೂಟ ವ್ಯವಸ್ಥೆ, ಸಹಕಾರಿ ತತ್ವದ ಮೇಲೆ ದೇಶ ರೂಪುಗೊಂಡಿದೆ' ಎಂದರು.

'ರಾಷ್ಟ್ರದ ಹಣಕಾಸು ನಿರ್ವಹಣೆ ಹೇಗೆ ಇರಬೇಕು ಎಂಬುದನ್ನು ಯೋಜನಾ ಆಯೋಗ ಮತ್ತು ಹಣಕಾಸು ಆಯೋಗ ನಿರ್ಧರಿಸುತ್ತವೆ. ಜನಸಂಖ್ಯೆ, ಭೌಗೋಳಿಕ ಪ್ರದೇಶ, ತಲಾ ಆದಾಯ, ಆರ್ಥಿಕ ಸುಸ್ಥಿರತೆ, ದೌರ್ಬಲ್ಯ, ಆರೋಗ್ಯ ಸ್ಥಿತಿ–ಗತಿಗಳನ್ನು ಪರಿಗಣಿಸಲಾಗುತ್ತದೆ. ಇವುಗಳನ್ನು ಆಧರಿಸಿ ಸೌಲಭ್ಯಗಳನ್ನು ನೀಡಲಾಗುತ್ತದೆ. ಹೀಗಾಗಿ, ಹಣಕಾಸು ಹಂಚಿಕೆಯಲ್ಲಿ ಯಾವುದೇ ತೊಂದರೆ ಎದುರಾಗಲು ಸಾಧ್ಯವಿಲ್ಲ. ಹಕ್ಕು ಪಡೆಯಲು ಸಂವಿಧಾನದಲ್ಲಿ ಎಲ್ಲರಿಗೂ ಸಮಾನ ಅವಕಾಶಗಳಿವೆ' ಎಂದು ಮಹಾವೀರ ಕರೆಣ್ಣವರ ವಿವರಿಸಿದರು.

'ನೈಸರ್ಗಿಕ ವಿಕೋಪ ಸೇರಿದಂತೆ ಹಲವು ಸಂದರ್ಭಗಳಲ್ಲಿ ಅನುದಾನ ಹಂಚಿಕೆಯಲ್ಲಿ ವ್ಯತ್ಯಾಸವಾಗಿದ್ದು ವಿರಳ. ಸಂವಿಧಾನದ ಬುನಾದಿಯ ಮೇಲೆ ಒಕ್ಕೂಟ ವ್ಯವಸ್ಥೆ ಸುಭದ್ರವಾಗಿದೆ. ಅಮೆರಿಕ ಮತ್ತು ಕೆನಡಾ ಮಾದರಿಯ ಸಂವಿಧಾನ ರೂಪಿಸಿಕೊಂಡಿದ್ದರೂ ಕೇಂದ್ರಕ್ಕೆ ಹೆಚ್ಚು ಅಧಿಕಾರ ಸಿಕ್ಕಿದೆ. ಸ್ಥಳೀಯ ಅಗತ್ಯಗಳನ್ನು ಸಂವಿಧಾನ ಪರಿಗಣಿಸುತ್ತದೆ' ಎಂದು ದಾವಣಗೆರೆ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಅಶೋಕ್ ಕುಮಾರ್ ಪಾಳೇದ ಧ್ವನಿಗೂಡಿಸಿದರು.

ಅಭಿಪ್ರಾಯಗಳು

ಸಾವಿರಾರು ಸಂಸ್ಕೃತಿಗಳನ್ನು ಹೊಂದಿರುವ ಭಾರತದಲ್ಲಿ ಏಕತೆ ರೂಪುಗೊಳ್ಳಲು ಸಂವಿಧಾನವೇ ಕಾರಣ. ಸಂವಿಧಾನದ ಬೆಳಕು ಇನ್ನೂ ಪ್ರಖರವಾಗಬೇಕಿದೆ. ಎಲ್ಲ ಕಾನೂನುಗಳ ತಾಯಿ ಆಗಿರುವ ಸಂವಿಧಾನದಲ್ಲಿ ಎಲ್ಲದಕ್ಕೂ ಪರಿಹಾರವಿದೆ. ಸಂವಿಧಾನ ಔಷಧದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಭಾರತೀಯ ಧರ್ಮಕ್ಕೆ ಸಂವಿಧಾನವೇ ಧರ್ಮಗ್ರಂಥ

ಅಶೋಕ್ ಕುಮಾರ್ ಪಾಳೇದ, ಮುಖ್ಯಸ್ಥರು, ರಾಜ್ಯಶಾಸ್ತ್ರ ವಿಭಾಗ, ದಾವಣಗೆರೆ ವಿಶ್ವವಿದ್ಯಾಲಯ

ಅಭಿವೃದ್ಧಿಯನ್ನು ಆಯಾ ಪ್ರದೇಶಕ್ಕೆ ಸೀಮಿತವಾಗಿ ವ್ಯಾಖ್ಯಾನಿಸಬೇಕು. ಅದನ್ನು ಮತ್ತೊಂದು ಪ್ರದೇಶದ ಜೊತೆಗೆ ಹೋಲಿಕೆ ಮಾಡುವುದು ತಪ್ಪು. ಶಿಕ್ಷಣ ಸೇರಿದಂತೆ ಮೂಲಸೌಲಭ್ಯ ರೂಪಿಸುವುದು ಎಲ್ಲ ಸರ್ಕಾರಗಳ ಜವಾಬ್ದಾರಿ ಕೂಡ ಹೌದು. ಬದುಕುವ ಹಕ್ಕನ್ನು ಕಿತ್ತುಕೊಳ್ಳುವ ಅಧಿಕಾರ ಯಾರಿಗೂ ಇಲ್ಲ. ಅಭಿವೃದ್ಧಿಯಲ್ಲಿ ಪ್ರಾದೇಶಿಕ ಸಮತೋಲನ ಇರಬೇಕು

ಬಿ.ಆರ್.ರವಿಕಾಂತೇಗೌಡ, ಐಜಿಪಿ, ಪೂರ್ವ ವಲಯ

ಸಂವಿಧಾನ ತಿದ್ದುಪಡಿ ಮಾಡುವುದು ಅಷ್ಟು ಸುಲಭವಲ್ಲ. ತಿದ್ದುಪಡಿ ಕಠಿಣವಾಗಿದ್ದರೂ ಅವಕಾಶಗಳಿವೆ. ಆದರೆ, ಸಂವಿಧಾನದ ಬುನಾದಿಗೆ ಧಕ್ಕೆ ತರಲು ಯಾರೊಬ್ಬರಿಗೂ ಅವಕಾಶವಿಲ್ಲ. ಮನಸಿಗೆ ತೋಚಿದಂತೆ ಜಲ, ಖನಿಜ, ಹಣಕಾಸು ಹಂಚಿಕೆ ಮಾಡಿಕೊಳ್ಳಲು ಸಾಧ್ಯವಿಲ್ಲ. ಸಂವಿಧಾನ ಇರುವ ಕಾರಣಕ್ಕೆ ಉತ್ತಮ ಬೆಳಕು, ಗಾಳಿ, ನೀರು ಲಭ್ಯವಾಗುತ್ತಿದೆ. ಸಂವಿಧಾನವೇ ಶಕ್ತಿ, ಸಂವಿಧಾನವೇ ಶ್ರೇಷ್ಠ

ಮಹಾವೀರ ಕರೆಣ್ಣವರ, ಹಿರಿಯ ಸಿವಿಲ್ ನ್ಯಾಯಾಧೀಶ

ತೆರಿಗೆ, ಹಣಕಾಸು ಹಂಚಿಕೆಗೆ ಸಂಬಂಧಿಸಿದಂತೆ ಕೊಂಚ ಅಸಮಾಧಾನಗಳು ಇರುವಂತೆ ಗೋಚರವಾಗುತ್ತಿದೆ. ಅಗತ್ಯ ಇರುವವರಿಗೆ ಅನುದಾನ ನೀಡುವುದಾಗಿ ಕೇಂದ್ರ ಸರ್ಕಾರ ಹೇಳುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಾದಕ್ಕೆ ಸಮರ್ಥನೀಯ ಅಂಶಗಳೂ ಇವೆ. ಒಕ್ಕೂಟ ವ್ಯವಸ್ಥೆಯಲ್ಲಿ ಇವೆಲ್ಲವೂ ಸಾಮಾನ್ಯ

ಬಿ.ಎಂ. ನಿರಂಜನ, ಸಾಮಾಜಿಕ ಕಾರ್ಯಕರ್ತ

ಖನಿಜ: ರಾಜ್ಯಗಳಿಗೂ ಪಾಲಿದೆ

'ಖನಿಜ ಸಂಪತ್ತು ಸಮವರ್ತಿ ಪಟ್ಟಿಯಲ್ಲಿದೆ. ಗಣಿಗಾರಿಕೆಯ ರಾಜಧನ, ಖನಿಜ ನಿಧಿ, ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಹಲವು ರಾಜ್ಯಗಳಲ್ಲಿ ಬಳಕೆ ಆಗಿದೆ. ಈ ನಿಧಿಯನ್ನು ಗಣಿಬಾಧಿತ ಪ್ರದೇಶದ ಅಭಿವೃದ್ಧಿಗೆ ಬಳಸಲಾಗಿದೆ. ಕರ್ನಾಟಕದಲ್ಲಿ ಇಂತಹ ಪ್ರಯತ್ನಗಳು ಸಮರ್ಥವಾಗಿ ನಡೆಯಬೇಕಿದೆ' ಎಂಬ ಸಲಹೆಯನ್ನು ಅಶೋಕ್ ಕುಮಾರ್ ಪಾಳೇದ ಮುಂದಿಟ್ಟರು.

'ಚಿನ್ನ ಸೇರಿದಂತೆ ಪ್ರಧಾನ ಖನಿಜ ಸಂಪತ್ತು ಕೇಂದ್ರ ಸರ್ಕಾರದ ಅಧೀನದಲ್ಲಿದೆ. ಜಲ್ಲಿಕಲ್ಲು, ಮರಳು ಮಾತ್ರವೇ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಖನಿಜ ಸಂಪತ್ತಿನ ಮೇಲೆ ಕೇಂದ್ರಕ್ಕೆ ಹೆಚ್ಚು ಹಿಡಿತ ಇದೆ' ಎಂದು ಸಾಮಾಜಿಕ ಕಾರ್ಯಕರ್ತ ಬಿ.ಎಂ. ನಿರಂಜನ ಅಭಿಪ್ರಾಯಪಟ್ಟರು.

'ಖನಿಜ ಸಂಪತ್ತನ್ನು ಚಿನ್ನದ ಮೊಟ್ಟೆ ಇಡುವ ಕೋಳಿ ಎಂಬಂತೆ ಭಾವಿಸಿದರೆ ಕಷ್ಟ. ಇದನ್ನು ತೆಗೆಯುವುದರಲ್ಲೇ ಮುಳುಗಿದರೆ ಮುಂದಿನ ತಲೆಮಾರಿಗೆ ನೈಸರ್ಗಿಕ ಸಂಪತ್ತೇ ಇಲ್ಲವಾಗುತ್ತದೆ' ಎಂದು ಮಹಾವೀರ ಕರೆಣ್ಣವರ ಪ್ರತಿಪಾದಿಸಿದರು.

'ಖನಿಜ ರಾಷ್ಟ್ರೀಯ ಸಂಪತ್ತು. ರಾಜ್ಯ ಸರ್ಕಾರಗಳಿಗೂ ಸಂಪನ್ಮೂಲದಲ್ಲಿ ಪಾಲಿದೆ. ಖನಿಜ ತೆಗೆಯುವಾಗ ಉಂಟಾಗುವ ಪರಿಸರ ನಾಶಕ್ಕೆ ಗಣಿಬಾಧಿತ ಪ್ರದೇಶದ ಜನರಿಗೆ ಸಂಪತ್ತಿನಲ್ಲಿ ಪಾಲು ಸಿಗಬೇಕು ಎಂದು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ ಆದೇಶ ಇದೆ. ಹೀಗಾಗಿ, ಹಲವು ರೀತಿಯ ನಿಧಿಗಳನ್ನು ರೂಪಿಸಲಾಗಿದೆ ಎಂದು ಬಿ.ಆರ್.ರವಿಕಾಂತೇಗೌಡ ಹೇಳಿದರು.

An Initiative by:

SOCIAL WELFARE DEPARTMENT
For the Educational, Social & Economic Upliftment of Scheduled Castes

In Association with:

KSSKDC · LIDKAR · ಕರ್ನಾಟಕ ತಾಂಡಾ · KARNATAKA BHOVI DEVELOPMENT CORPORATION · ಕರ್ನಾಟಕ ಆದಿಜಾಂಬವ

ಸಂವಿಧಾನವೇ ಬೆಳಕು

Curated by DH DECCAN HERALD ಪ್ರಜಾವಾಣಿ

ಮಹಿಳಾ ಹಕ್ಕಿಗೆ ಮೂಡಿದ ರೆಕ್ಕೆ

ಹುಬ್ಬಳ್ಳಿಯಲ್ಲಿ ನಡೆದ 'ಸಂವಿಧಾನವೇ ಬೆಳಕು' ಕಾರ್ಯಕ್ರಮದಲ್ಲಿ ಸುನಂದಾ ಕಡಮೆ, ವಿಶ್ವನಾಥ ಬಿಚಗತ್ತಿ, ಇಸಾಬೆಲ್ಲಾ ಕ್ಸೇವಿಯರ್, ವಿನಯಾ ಒಕ್ಕುಂದ ಮತ್ತು ಜಿ.ಬಿ.ಗೌಡಪ್ಪಗೋಳ ಪಾಲ್ಗೊಂಡಿದ್ದರು

ಸಂವಿಧಾನ ಮಹಿಳೆಯರಿಗೆ ನೀಡಿರುವ ಹಕ್ಕುಗಳು, ಅವುಗಳಿಗೆ ಧಕ್ಕೆಯಾದಾಗ ಕಾನೂನಿನ ಮೂಲಕ ರಕ್ಷಣೆ, ಲಿಂಗ ಸಂವೇದನೆ ಸೇರಿದಂತೆ ವಿವಿಧ ವಿಷಯಗಳ ಚರ್ಚೆಗೆ 'ಸಂವಿಧಾನವೇ ಬೆಳಕು' ಕಾರ್ಯಕ್ರಮ ವೇದಿಕೆ ಆಯಿತು.

'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್', ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಹುಬ್ಬಳ್ಳಿಯ ಡೆನಿಸನ್ಸ್ ಹೋಟೆಲ್‌ನಲ್ಲಿ ನಡೆಸಿದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ ಸಂವಿಧಾನ ನೀಡಿರುವ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಿದರು. ಮಹಿಳಾ ಹಕ್ಕು, ಶಿಕ್ಷಣ ಮತ್ತು ಉದ್ಯೋಗದ ಹಕ್ಕುಗಳ ಕುರಿತು ಅತಿಥಿಗಳು ಅಭಿಪ್ರಾಯ ಮಂಡಿಸಿದರು.

ಲೇಖಕಿ ಸುನಂದಾ ಕಡಮೆ, 'ಯಾವುದೇ ದೇಶದ ಅಭಿವೃದ್ಧಿ ಪರಿಗಣಿಸಬೇಕಿದ್ದರೆ, ಆ ದೇಶದಲ್ಲಿ ಮಹಿಳೆಯರ ಸ್ಥಿತಿಗತಿ ನೋಡಬೇಕು ಎಂದು ಅಂಬೇಡ್ಕರ್ ಹೇಳಿದ್ದರು. ಮಹಿಳೆಯರು ಘನತೆಯಿಂದ ಬದುಕಬೇಕು ಎಂಬ ದೂರದೃಷ್ಟಿಯಿಂದ ಸಂವಿಧಾನ ರಚಿಸಿದರು. ಅದಕ್ಕೆ ಬೇಕಾದ ಕಾನೂನುಗಳನ್ನು ಜಾರಿಗೆ ತಂದರು' ಎಂದರು.

'ಸಂವಿಧಾನ ರಚನಾ ಸಮಿತಿಯಲ್ಲಿದ್ದ 299 ಸದಸ್ಯರ ಪೈಕಿ 15 ಮಂದಿ ಮಹಿಳೆಯರು ಇದ್ದರು. ಸಂವಿಧಾನ ರಚನೆಯ ಹಿಂದೆ ನಾರಿಶಕ್ತಿಯ ಸಹಕಾರ ಇತ್ತು ಎಂಬುದನ್ನು ಮರೆಯಬಾರದು. 2 ವರ್ಷ 11 ತಿಂಗಳ ಪರಿಶ್ರಮದಿಂದ ಸಂವಿಧಾನ ರಚನೆ ಆಯಿತು. ಯಾವ ಅವಕಾಶಗಳೂ ಇಲ್ಲದ ಸಮಯದಲ್ಲಿ ಸಾಧನೆ ಮಾಡಿದ್ದ, ದಲಿತರು, ಮುಸ್ಲಿಮರು, ಕ್ರೈಸ್ತರು, ಬ್ರಾಹ್ಮಣರು ಸೇರಿ ಎಲ್ಲ ಸಮಾಜ ಮಹಿಳೆಯರಿಗೆ ಸಂವಿಧಾನ ರಚನಾ ಸಮಿತಿಯಲ್ಲಿ ಸ್ಥಾನ ಕಲ್ಪಿಸಲಾಗಿತ್ತು' ಎಂದು ಹೇಳಿದರು.

ಕೇರಳದ ಅಮ್ಮುಕುಟ್ಟಿ ಸ್ವಾಮಿನಾಥನ್, ಕೊಚ್ಚಿಯ ದಾಕ್ಷಾಯಣಿ ವೇಲಾಯುಧನ್, ಉತ್ತರ ಪ್ರದೇಶದ ಬೇಗಂ ರಸೂಲ್, ಮದ್ರಾಸ್‌ನ ದುರ್ಗಾಬಾಯಿ ದೇಶಮುಖ, ಬರೋಡಾದ ಹಂಸಜೀವರಾಜ ಮೆಹತಾ, ಲಖನೌದ ಕಮಲಾ ಚೌಧರಿ, ಅಸ್ಸಾಂನ ಲೀಲಾ ರಾವ್, ಪಶ್ಚಿಮ ಬಂಗಾಳ ಮಾಲತಿ ಚೌಧರಿ, ಉತ್ತರ ಪ್ರದೇಶ ಪೂರ್ಣಿಮಾ ಬ್ಯಾನರ್ಜಿ, ಉತ್ತರ ಪ್ರದೇಶ ರಾಜಕುಮಾರಿ ಅಮೃತಕೌರ್, ಪಶ್ಚಿಮ ಬಂಗಾಳದ ರೇಣುಕಾ ರೇ, ಹೈದರಾಬಾದ್‌ನ ಸರೋಜಿನಿ ನಾಯ್ಡು, ಹರಿಯಾಣದ ಸುಚೇತಾ ಕೃಪಲಾನಿ, ಅಲಹಾಬಾದ್‌ನ ವಿಜಯಲಕ್ಷ್ಮಿ ಪಂಡಿತ, ಕೇರಳದ ಅನಿಲಾ ಮಸ್ಕರನ್ ಸಂವಿಧಾನ ರಚನಾ ಸಮಿತಿಯಲ್ಲಿದ್ದರು ಎಂದರು.

ಮೂಢನಂಬಿಕೆ, ಧಾರ್ಮಿಕ ಸಂಪ್ರದಾಯಗಳು ಮಹಿಳೆಯರ ದೈನಿಕವನ್ನು ರೂಪಿಸುತ್ತಿದ್ದವು. ಸಂವಿಧಾನ ರಚನೆಯಾದ ನಂತರ ಮಹಿಳೆಯರು, ದಲಿತರಿಗೆ ಶಿಕ್ಷಣ ಇನ್ನಷ್ಟು ಹತ್ತಿರವಾಯಿತು. ಮಹಿಳೆಯರಿಗೂ ಸಮಾನ ಹಕ್ಕುಗಳನ್ನು ಸಂವಿಧಾನದಲ್ಲಿ ನೀಡಲಾಗಿದೆ ಎಂದು ಅಭಿಪ್ರಾಯಪಟ್ಟರು.

ಲೇಖಕಿ ವಿನಯಾ ಒಕ್ಕುಂದ, ದೇಶದ ಬಹುತ್ವದ ಬೇರುಗಳು ಸಡಿಲವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಸಂವಿಧಾನ ಎಂಬ ತಾಯಿ ಬೇರು ಅದನ್ನು ರಕ್ಷಣೆ ಮಾಡುತ್ತಿದೆ. ಸಂವಿಧಾನವನ್ನು ಅರ್ಥ ಮಾಡಿಕೊಳ್ಳುವುದು ಎಂದರೆ ತಾಯಿ ಬೇರು ಉಳಿಸುವುದು ಎಂದರ್ಥ. ರಾಜ್ಯದಲ್ಲಿ ದೊಡ್ಡ ಹುದ್ದೆಯಲ್ಲಿರುವವರು ಸಂವಿಧಾನದ ಬಗ್ಗೆ ಸುಳ್ಳು ಸುದ್ದಿ ಹರಡುತ್ತಿದ್ದಾರೆ. ಸಂವಿಧಾನಲ್ಲೇನಿದೆ, ಅದು ನಮಗೆ ಏನು ಕೊಟ್ಟಿದೆ ಎಂಬುದನ್ನು ತಿಳಿಯುವುದು ಎಲ್ಲರ ಜವಾಬ್ದಾರಿ ಎಂದರು.

'ಜಗತ್ತಿನ ಅನೇಕ ರಾಷ್ಟ್ರಗಳು ಮಹಿಳೆಯರಿಗೆ ಮತದಾನದ ಹಕ್ಕು ನೀಡಿಲ್ಲ. ಆದರೆ, ಭಾರತದಲ್ಲಿ ಮಹಿಳೆಯರನ್ನು ಬೇರೆಯಾಗಿ ನೋಡದೆ ಮತದಾನದ ಹಕ್ಕು ನೀಡಿದ್ದು ಬಹುದೊಡ್ಡ ಕಾಣಿಕೆ. ವಿಶ್ವಸಂಸ್ಥೆಯ ಮಾನವ ಹಕ್ಕು ಘೋಷಣಾ ಸಮಿತಿಯ ಉಪಾಧ್ಯಕ್ಷರಾಗಿದ್ದ ಹಂಸಜೀವರಾಜ ಮೆಹತಾ ವರು 1948ರಲ್ಲಿ ಎಲ್ಲ ಮಾನವರೂ ಸಮಾನರು ಎಂದು ಸಾರಿದರು ಎಂದರು.

'ಕಲ್ಯಾಣ ರಾಜ್ಯದ ಮಾರ್ಗದರ್ಶಕ ಸೂತ್ರಗಳಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನ ಎಂಬುದು ಉಲ್ಲೇಖವಾಗಿರುವುದು ಮಹಿಳೆಯರ ಘನತೆಯನ್ನು ಎತ್ತಿ ಹಿಡಿದಿರುವುದಕ್ಕೆ ಬಹುದೊಡ್ಡ ಉದಾಹರಣೆ. ಮಹಿಳಾ ಚಳವಳಿಯ ಹಕ್ಕೊತ್ತಾಯಗಳು ಸಂವಿಧಾನದಲ್ಲಿ ಸೇರ್ಪಡೆ ಆಗಿವೆ' ಎಂದು ಹೇಳಿದರು.

'ರಾಜ್ಯ ಸರ್ಕಾರ ಮಹಿಳಾ ಪರ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿರುವುದರ ಹಿಂದೆ ಇರುವುದು ಸಹ ಸಂವಿಧಾನ. ಅದು ಇಲ್ಲದಿದ್ದರೆ ಗೃಹಲಕ್ಷ್ಮಿ ಯೋಜನೆ ಸೇರಿ ಯಾವ ಯೋಜನೆಯನ್ನೂ ಜಾರಿಗೆ ತರಲು ಆಗುತ್ತಿರಲಿಲ್ಲ. ಲೇಖಕಿ ಬಾನು ಮುಸ್ತಾಕ್ ಅವರು ದಸರಾ ಉದ್ಘಾಟನೆ ಮಾಡಲು ಸಾಧ್ಯವಾಗಿದ್ದಕ್ಕೆ ರಕ್ಷಾ ಕವಚವಾಗಿದ್ದು ಸಹ ಸಂವಿಧಾನ' ಎಂದರು.

'ಸಂವಿಧಾನ ಇಷ್ಟೆಲ್ಲ ನೀಡಿದರೂ ಹೆಣ್ಣಿನ ಬದುಕಿನಲ್ಲಿ ಭೀತಿ, ಆತಂಕದ ವರ್ತಮಾನ ಇದೆ. ಹಿಂದಿನ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರು ದೇಶದ ಹೆಣ್ಣುಮಕ್ಕಳಿಗೆ ತಾಯಿ ಗರ್ಭವೂ ಸುರಕ್ಷಿತವಲ್ಲ ಎಂದಿದ್ದರು. ಹೆಣ್ಣುಮಕ್ಕಳ ಅನುಪಾತ ಕುಸಿಯುತ್ತಿದೆ. ಮಾನವ ಹಕ್ಕುಗಳ ಆಯೋಗದ ಅಂಕಿ ಅಂಶಗಳ ಪ್ರಕಾರ ಪ್ರತಿ 3 ನಿಮಿಷಕ್ಕೆ ಒಂದು ದೌರ್ಜನ್ಯ, 27 ನಿಮಿಷಕ್ಕೆ ಒಂದು ಅತ್ಯಾಚಾರ, 77 ನಿಮಿಷಕ್ಕೆ ಒಂದು ಅತ್ಯಾಚಾರ, ಕೊಲೆ ಪ್ರಕರಣ ದಾಖಲಾಗುತ್ತಿವೆ' ಎಂದು ಕಳವಳ ವ್ಯಕ್ತಪಡಿಸಿದರು.

'ವರ್ಷಕ್ಕೆ ನಲವತ್ತು ಸಾವಿರ ಮಹಿಳೆಯರು ನಾಪತ್ತೆ ಆಗುತ್ತಿದ್ದಾರೆ. ದಿನಕ್ಕೆ ಮೂರು ದಲಿತ ಮಹಿಳೆಯರು ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾರೆ. ದೌರ್ಜನ್ಯ ಎಸಗುವ ಪುರುಷ ನಮ್ಮ ಮನೆಯಿಂದಲೇ ಬಂದಿರುತ್ತಾನೆ. ಇದಕ್ಕೆ ಕಾರಣ ಮತ್ತು ಪರಿಹಾರ ಕಂಡುಕೊಳ್ಳಬೇಕಿದೆ' ಎಂದರು.

'ಸಂವಿಧಾನ ಎಷ್ಟೇ ಅದ್ಭುತವಾಗಿದ್ದರೂ ಅದನ್ನು ಅನುಷ್ಠಾನ ಮಾಡುವ ಸಂದರ್ಭದಲ್ಲಿ ರಾಜಕೀಯ ಹಿತಾಸಕ್ತಿ, ಆಡಳಿತಾತ್ಮಕ ಭ್ರಷ್ಟತೆ ಕೆಲಸ ಮಾಡಿದರೆ ಸಂವಿಧಾನದ ಫಲ ಸಿಗುವುದಿಲ್ಲ. ಸಂವಿಧಾನ ಜಾರಿಯಾದ ನಂತರವೂ ವಿಚ್ಛಿದ್ರಕಾರಿ ಶಕ್ತಿಗಳು ಉಳಿದಿರುತ್ತವೆ. ಇದು ಅಪಾಯಕಾರಿ ಎಂದು ಅಂಬೇಡ್ಕರ್ ಹೇಳಿದ್ದರು. ಈಗ ನಾವು ಅಂತಹ ಅಪಾಯಕಾರಿ ಸ್ಥಿತಿಯಲ್ಲಿದ್ದೇವೆ. ಹೆಣ್ಣು ದೇಹದ ಒಳಗೆ ಗಂಡು ಆಲೋಚನೆ ಬೆಳೆಯುತ್ತಿರುವುದು ಅಪಾಯಕಾರಿ. ಬಂಡವಾಳವಾದ, ಕೋಮುವಾದವು ಹೆಣ್ಣಿನ ಆಲೋಚನಾ ಶಕ್ತಿಯ ಮೇಲೆ ದಾಳಿ ಮಾಡುತ್ತಿದೆ' ಎಂದು ಹೇಳಿದರು.

'ಅನೇಕ ವರ್ಷಗಳ ನಂತರವಾದರೂ ನ್ಯಾಯ ಸಿಕ್ಕಿತಲ್ಲ ಎಂದು ಸಮಾಧಾನ ಪಟ್ಟುಕೊಳ್ಳುವ ಸ್ಥಿತಿಯಲ್ಲಿ ನಾವಿದ್ದೇವೆ. ಆರೋಪಿ ಸ್ಥಾನದಲ್ಲಿರುವ ವ್ಯಕ್ತಿ ಹುದ್ದೆ, ಧರ್ಮ, ರಾಜಕಾರಣ, ಹಣದಿಂದ ದೊಡ್ಡ ಸ್ಥಾನದಲ್ಲಿ ಇದ್ದರೆ ನ್ಯಾಯ ಸಿಗುವುದಿಲ್ಲ ಎಂಬ ಸ್ಥಿತಿಯಲ್ಲಿದ್ದೇವೆ. ಖಾಸಗೀಕರಣ ಹೆಚ್ಚುತ್ತಿದೆ. ಸರ್ಕಾರಿ ವಲಯದಲ್ಲಿ ಸಿಗುವ ಸೌಲಭ್ಯಗಳು ಖಾಸಗಿ ವಲಯದಲ್ಲಿ ಸಿಗುತ್ತಿಲ್ಲ. 14 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣ ನೀಡಬೇಕು. ಆದರೆ, ಮಾಧ್ಯಮ, ಪಠ್ಯಕ್ರಮದ ಆಧಾರದಲ್ಲಿ ತಾರತಮ್ಯ ನಡೆಯುತ್ತಿದೆ. ಶಿಕ್ಷಣ ಎಂಬ ಹುಲಿಯ ಹಾಲನ್ನು ಎಲ್ಲರಿಗೂ ಸಮಾನವಾಗಿ ಹಂಚಲು ಆಗುತ್ತಿಲ್ಲ. ಸಂವಿಧಾನಕ್ಕೆ ವಿರುದ್ಧವಾದ ಬೆಳವಣಿಗೆಗಳು ನಡೆಯುತ್ತಿವೆ' ಎಂದರು.

'ಆಗಬೇಕಿದೆ ಮಹಿಳಾ ಜಾಗೃತಿ ಕೆಲಸ'

ಸಂವಿಧಾನ ನೀಡಿರುವ ಹಕ್ಕುಗಳನ್ನು ಮಹಿಳೆಯರಿಗೆ ತಿಳಿಸಿ, ಅವರಲ್ಲಿ ಜಾಗೃತಿ ಮೂಡಿಸುವುದು ಇಂದು ಹೆಚ್ಚು ಅಗತ್ಯವಿದೆ. ಈ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳು ಮಹತ್ವ ಪಡೆದಿವೆ ಎಂದು ವಾಣಿಜ್ಯ ತೆರಿಗೆ ಇಲಾಖೆಯ ನಿವೃತ್ತ ಉಪ ಆಯುಕ್ತ ಜಿ.ಬಿ. ಗೌಡಪ್ಪಗೋಳ ಹೇಳಿದರು.

ಕುಟುಂಬದಲ್ಲಿ ಸ್ತ್ರೀಗೆ ಅಗೌರವ, ತುಚ್ಛ ಭಾವನೆ ಇದ್ದರೆ ಅದು ಆದರ್ಶ ಕುಟುಂಬವಾಗಲು ಸಾಧ್ಯವಿಲ್ಲ. ಪ್ರಾಚೀನ ಕಾಲದಿಂದಲೂ ಮಹಿಳೆಗೆ ಪೂಜನೀಯ ಸ್ಥಾನ ನೀಡಲಾಗಿದೆ. ಆದರೆ, ಕಾಲದ ಪ್ರವಾಹದಲ್ಲಿ ಅನೇಕ ವಿಕೃತಿಗಳು, ಕುನುಡಿಗಳು, ಕೆಟ್ಟ ಪದ್ಧತಿಗಳು ಬಂದಿದ್ದರಿಂದ ಮಾನವೀಯ ಮೌಲ್ಯಗಳು ಕುಸಿದಿವೆ. ಲಿಂಗಭೇದ, ಜಾತಿ ಭೇದ, ಮೇಲು ಕೀಳು, ಅಸ್ಪೃಶ್ಯತೆಯಿಂದ ಸಮಾಜ ಬಳಲುತ್ತಿದೆ. ಇದನ್ನು ಅರಿತು ಸರ್ವಸಮಾನತೆಗೆ ಸಂವಿಧಾನ ಜಾರಿಗೆ ತರಲಾಗಿದೆ ಎಂದು ಹೇಳಿದರು.

ಸಂವಿಧಾನ ದೇಶದ ಪಾಲಿಗೆ ಪವಿತ್ರ ಗ್ರಂಥ. ಇದರ ಮೂಲಕ ಪ್ರಜಾಪ್ರಭುತ್ವಕ್ಕೆ ಅರ್ಥ ಬಂದಿದೆ. ಬಿ.ಆರ್. ಅಂಬೇಡ್ಕರ್ ಮತ್ತು ಸಂವಿಧಾನ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಸಂವಿಧಾನದ ಚಿತ್ರಛಾಯೆಯಲ್ಲಿ ಅಂಬೇಡ್ಕರ್ ಕಾಣುತ್ತಾರೆ. ಹೆಣ್ಣುಮಕ್ಕಳ ಪರಿಸ್ಥಿತಿ ಅರಿತು, ಅವರ ಸಬಲೀಕರಣಕ್ಕೆ ಬೇಕಾದ ಅಂಶಗಳನ್ನು ಅವರು ಸಂವಿಧಾನದಲ್ಲಿ ಅಳವಡಿಸಿದ್ದಾರೆ ಎಂದರು. ಸಂವಿಧಾನವನ್ನು ಜಾರಿಗೆ ತರುವ ಸಂದರ್ಭದಲ್ಲಿ ದೇಶದ ಜನಸಂಖ್ಯೆ 36 ಕೋಟಿ ಇತ್ತು. ಅದರಲ್ಲಿ 17.5 ಕೋಟಿ ಮಹಿಳೆಯರು, 18.5 ಕೋಟಿ ಪುರುಷರಿದ್ದರು. ಇಷ್ಟು ಸಂಖ್ಯೆಯಲ್ಲಿರುವ ಮಹಿಳೆಯರು ಸಬಲರಾಗದೆ, ಶಿಕ್ಷಣವಂತರಾಗಿ ರಾಷ್ಟ್ರಕ್ಕೆ ಕೊಡುಗೆ ನೀಡದಿದ್ದರೆ ದೇಶದ ಅಭಿವೃದ್ಧಿ ಸಾಧ್ಯವಿಲ್ಲ ಎಂದು ಅರಿತು ಸಂವಿಧಾನದಲ್ಲಿ ಮಹಿಳೆಯರಿಗೆ ಹಕ್ಕು ನೀಡಲಾಯಿತು ಎಂದರು.

'ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಮಹಿಳೆಯರ ಸಾಕ್ಷರತೆ ಪ್ರಮಾಣ ಶೇ 8.86 ಮತ್ತು ಪುರುಷರ ಸಾಕ್ಷರತೆ ಶೇ 27ರಷ್ಟಿತ್ತು. ಈಗ ಮಹಿಳೆಯರ ಸಾಕ್ಷರತೆ ಶೇ 70ಕ್ಕೆ ಏರಿಕೆಯಾಗಿದೆ. ಇದು ಸಂವಿಧಾನದಿಂದ ಸಾಧ್ಯವಾಗಿದೆ. ಶಿಕ್ಷಣದಿಂದಾಗಿ ಉದ್ಯೋಗ, ವ್ಯಾಪಾರ, ನ್ಯಾಯಾಂಗ, ವಿಜ್ಞಾನ ಕ್ಷೇತ್ರದಲ್ಲಿಯೂ ಮಹಿಳೆಯರು ಸಾಧನೆ ಮಾಡುತ್ತಿದ್ದಾರೆ. 1970ರಲ್ಲಿ ಒಟ್ಟು ಐಎಎಸ್ ಅಧಿಕಾರಿಗಳ ಪೈಕಿ ಮಹಿಳಾ ಐಎಎಸ್ ಅಧಿಕಾರಿಗಳ ಸಂಖ್ಯೆ 1.5ರಷ್ಟಿತ್ತು. ಈಗ ಶೇ 41ರಷ್ಟು ಮಹಿಳೆಯರು ಐಎಎಸ್ ಅಧಿಕಾರಿಗಳಾಗಿದ್ದಾರೆ. ಈ ಎಲ್ಲ ಬದಲಾವಣೆಗೆ ಸಂವಿಧಾನ ಕಾರಣ' ಎಂದರು.

ದೇಶದ ಅಭಿವೃದ್ಧಿಯನ್ನು ಪರಿಗಣಿಸಬೇಕಿದ್ದರೆ, ಆ ದೇಶದಲ್ಲಿ ಮಹಿಳೆಯರ ಸ್ಥಿತಿಗತಿ ನೋಡಬೇಕೆಂದು ಡಾ. ಬಿ.ಆರ್.ಅಂಬೇಡ್ಕರ್ ಹೇಳಿದ್ದರು. ಮಹಿಳೆ ಘನತೆಯಿಂದ ಬದುಕಬೇಕು ಎಂಬ ದೂರದೃಷ್ಟಿಯಿಂದ ಸಂವಿಧಾನ ರಚಿಸಿದರು

ಸುನಂದಾ ಕಡಮೆ, ಲೇಖಕಿ

ಪ್ರಾಚೀನ ಕಾಲದಲ್ಲಿ ಹೆಣ್ಣಿನ ಸ್ಥಾನಮಾನ ಚೆನ್ನಾಗಿತ್ತು ಎನ್ನುವುದು ಭ್ರಮೆ. ಮನು ಧರ್ಮಶಾಸ್ತ್ರ ಸುಟ್ಟ ಅಂಬೇಡ್ಕರ್ ಅವರು ಸಂವಿಧಾನ ಜಾರಿಗೆ ತಂದರು. ಈಗ ಮತ್ತೆ ಮೂಲ ಧಾರ್ಮಿಕ ಆಚರಣೆ ಬರುತ್ತಿವೆ. ಇದು ಸಂವಿಧಾನಕ್ಕೆ ಆಪತ್ತು

ವಿನಯಾ ಒಕ್ಕುಂದ, ಲೇಖಕಿ

ದೇಶದ ಸಂವಿಧಾನವು ಹಕ್ಕುಗಳನ್ನು ಚಲಾಯಿಸಲು ಮತ್ತು ಸದ್ಬಳಕೆ ಮಾಡಲು ಪ್ರತಿಯೊಬ್ಬರಿಗೂ ಅವಕಾಶ ಮಾಡಿಕೊಟ್ಟಿದೆ. ಈ ನಿಟ್ಟಿನಲ್ಲಿ ಸಂವಿಧಾನದ ಮಹತ್ವದ ಅರಿಯುವ ಪ್ರಯತ್ನ ಪ್ರತಿಯೊಬ್ಬರೂ ಮಾಡಬೇಕು

ಇಸಾಬೆಲ್ಲಾ ಕ್ಸೇವಿಯರ್, ಸಾಮಾಜಿಕ ಕಾರ್ಯಕರ್ತೆ

ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸುವುದು ಸದ್ಯದ ಅವಶ್ಯ ಮತ್ತು ಅನಿವಾರ್ಯ. ಯಾವುದೇ ಕಾನೂನು, ಕಾಯ್ದೆಯನ್ನು ಅರ್ಥ ಮಾಡಿಕೊಳ್ಳಲು ಸಂವಿಧಾನವೇ ಅಳತೆಗೋಲು. ಕಾನೂನು ಸೂರ್ಯ ಇದ್ದಂತೆ

ವಿಶ್ವನಾಥ ಬಿಚಗತ್ತಿ, ವಕೀಲ, ಹೈಕೋರ್ಟ್ ಪೀಠ, ಧಾರವಾಡ

ವರದಕ್ಷಿಣೆ ನಿಷೇಧ ಮಾಡಿದರೂ ಅದು ಬೇರೆ ರೂಪದಲ್ಲಿ ಜಾರಿಯಲ್ಲಿದೆ. ಎಲ್ಲ ಹಕ್ಕುಗಳು ಹೆಣ್ಣುಮಕ್ಕಳಿಗೆ ಸಂಪೂರ್ಣವಾಗಿ ಸಿಕ್ಕಿವೆಯೇ ಎಂದು ಆತ್ಮಾವಲೋಕನ ಮಾಡಿಕೊಂಡಾಗ ಇಲ್ಲ ಎಂಬ ನಕಾರಾತ್ಮಕ ಭಾವನೆ ಮೂಡುತ್ತದೆ

ಜಿ.ಬಿ.ಗೌಡಪ್ಪಗೋಳ, ನಿವೃತ್ತ ಉಪ ಆಯುಕ್ತ, ವಾಣಿಜ್ಯ ತೆರಿಗೆ ಇಲಾಖೆ

'ಮಹಿಳಾ ಶೋಷಣೆ ತಡೆಯಲು ರಾಮಬಾಣ'

'ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ. ಕಾನೂನು, ಕಾಯ್ದೆಯನ್ನು ಅರ್ಥ ಮಾಡಿಕೊಳ್ಳಲು ಸಂವಿಧಾನವೇ ಅಳತೆಗೋಲು. ಅದರಂತೆ ನಾವು ಬದುಕಬೇಕು' ಎಂದು ಹೈಕೋರ್ಟ್ ಧಾರವಾಡ ಪೀಠದ ವಕೀಲ ವಿಶ್ವನಾಥ ಬಿಚಗತ್ತಿ ಅಭಿಪ್ರಾಯಪಟ್ಟರು.

ಮನುವಿನ ಕಾಲದಿಂದ ಮೊಬೈಲ್ ಕಾಲದವರೆಗೆ, ಜಮೀನಿಗೆ ಹೋಗುವ ಮಹಿಳೆಯಿಂದ ಹಿಡಿದು ಜಿಮ್‌ಗೆ ಹೋಗುವ ಎಲ್ಲ ಮಹಿಳೆಯರೂ ಶೋಷಣೆಗೆ ಒಳಗಾಗುತ್ತಿದ್ದಾರೆ. ಆರೋಗ್ಯಯುತ ವಾತಾವರಣ, ಸಮಾನತೆಯ ಕಲ್ಪನೆಗೆ ಬುನಾದಿ ಸಿಕ್ಕಿದ್ದು ಬ್ರಿಟಿಷರ ಆಳ್ವಿಕೆಯಲ್ಲಿ. ರಾಜಾರಾಮ್ ಮೋಹನ್ ರಾಯ್ ಅವರನ್ನು ದೇಶದಲ್ಲಿ ಸ್ತ್ರೀವಾದದ ಪಿತಾಮಹ ಎಂದು ಕರೆಯಲಾಗುತ್ತದೆ. ಸಾವಿತ್ರಾಬಾಯಿ ಫುಲೆ ಮಹಿಳಾ ಶಿಕ್ಷಣಕ್ಕೆ ಹೋರಾಡಿದ್ದು ಸಹ ಸಂವಿಧಾನಕ್ಕೆ ಬುನಾದಿಯಾಯಿತು ಎಂದು ಹೇಳಿದರು.

2005ರಲ್ಲಿ ಪಿತ್ರಾರ್ಜಿತ ಆಸ್ತಿಯಲ್ಲಿ ಮಹಿಳೆಯರಿಗೆ ಸಮಾನ ಹಕ್ಕು ಎಂಬ ಕಾನೂನು ಜಾರಿಗೆ ಬಂದಿತು. ಆದರೆ, 1950ರಲ್ಲೇ ಅಂಬೇಡ್ಕರ್ ಅವರು ಹಿಂದೂ ಕೋಡ್ ಬಿಲ್ ಜಾರಿಗೆ ತಂದು, ವಿಧವಾ ವಿವಾಹ, ಮಹಿಳೆಯರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಸಮಾನ ಹಕ್ಕು ಇದೆ ಎಂಬ ಪರಿಕಲ್ಪನೆಯನ್ನು ಮುಂದಿಟ್ಟಿದ್ದರು. ಹಿಂದೂ ಕೋಡ್ ಬಿಲ್ ಯಶಸ್ವಿಯಾಗಿ ಅನುಷ್ಠಾನವಾಗಿದ್ದರೆ, ದೇಶ ಇನ್ನೂ ಉನ್ನತ ಸ್ಥಾನದಲ್ಲಿ ಇರುತ್ತಿತ್ತು ಎಂದರು.

ಮಹಿಳೆಯರ ಸಮಾನತೆ, ಸುರಕ್ಷತೆ, ಸ್ವಾವಲಂಬಿ, ಶಿಕ್ಷಣ, ಶುಚಿತ್ವದ ಬಗ್ಗೆ ಸರ್ಕಾರ ಗಮನ ಕೊಡುತ್ತಿರುವುದಕ್ಕೆ ಸಂವಿಧಾನ ಕಾರಣ. ಲಿಂಗ ಸಂವೇದನೆ ತುಂಬಾ ಮುಖ್ಯ. ಸವಿಂಧಾನದ 14, 15, 16, 39, 42ನೇ ವಿಧಿಗಳು ಮಹಿಳೆಯರ ಹಕ್ಕುಗಳನ್ನು ಹೇಳುತ್ತವೆ. ಸಂವಿಧಾನದ 16ನೇ ವಿಧಿಯಲ್ಲಿ ಧರ್ಮ, ಜಾತಿಯ ಆಧಾರದಲ್ಲಿ ಯಾವುದೇ ತಾರತಮ್ಯ ಮಾಡುವಂತಿಲ್ಲ. ಮಹಿಳಾ ಸಬಲೀಕರಣಕ್ಕೆ ಪೂರಕ ಕಾನೂನು ಜಾರಿಗೆ ತರಲು ಸಂವಿಧಾನದಲ್ಲಿ ಅವಕಾಶ ಇದೆ. ರಾಷ್ಟ್ರೀಯ ಕಾನೂನು ಪ್ರಾಧಿಕಾರ ಅಧಿನಿಯಮದಲ್ಲಿ, ಮಹಿಳೆಯರು ನೊಂದಿದ್ದರೆ ಕಾನೂನು ಹೋರಾಟ ಮಾಡಲು ಉಚಿತ ಕಾನೂನು ನೆರವು ನೀಡಲಾಗುತ್ತದೆ. ತಾಲ್ಲೂಕು, ಜಿಲ್ಲೆ, ರಾಜ್ಯಮಟ್ಟದಲ್ಲಿ ನೊಂದ ಮಹಿಳೆಯರ ಪರ ವಾದ ಮಂಡಿಸಲು ವಕೀಲರನ್ನು ನೇಮಿಸಲಾಗುತ್ತದೆ ಎಂದು ಹೇಳಿದರು.

ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯನ್ನು ರಕ್ಷಣೆ ಮಾಡಲು ಸಹ ಕಾಯ್ದೆ ಇದೆ. ಕಾನೂನಿಗೆ ಕಣ್ಣಿದ್ದರೆ ಸಾಲದು, ಹೆಂಗರುಳು ಸಹ ಬೇಕು. ಆದರೆ, 100ರಲ್ಲಿ 35 ಸುಳ್ಳು ಪ್ರಕರಣಗಳು ದಾಖಲಾಗುತ್ತಿರುವುದರಿಂದ ನಿಜವಾಗಿ ನೊಂದವರಿಗೆ ನ್ಯಾಯ ಸಿಗುತ್ತಿಲ್ಲ. ಇದನ್ನರಿತ ನ್ಯಾಯಾಲಯ, ಮಹಿಳೆ ದೂರು ಕೊಟ್ಟ ನಂತರ ತಕ್ಷಣ ಬಂಧಿಸಬಾರದು. ಆ ಬಗ್ಗೆ ತನಿಖೆ ನಡೆಸಬೇಕು ಎಂದು ಸಹ ಹೇಳಿದೆ ಎಂದರು.

ಮಹಿಳೆ ದೌರ್ಜನ್ಯಕ್ಕೆ ಒಳಗಾದಾಗ, ಮಹಿಳಾ ನ್ಯಾಯಮೂರ್ತಿ ಬಳಿ 164 ನಿಯಮದ ಅಡಿಯಲ್ಲಿ ಹೇಳಿಕೆ ಪಡೆಯಲಾಗುತ್ತದೆ. ಇದರಿಂದ ಮಹಿಳಾ ಸಂವೇದನೆ ಬರುತ್ತದೆ. ಆದರೆ, ಸುಪ್ರೀಂ ಕೋರ್ಟ್‌ನಲ್ಲಿ ಒಬ್ಬರು ಮಾತ್ರ ಮಹಿಳಾ ನ್ಯಾಯಮೂರ್ತಿಗಳಿದ್ದಾರೆ. ತ್ರಿಪುರ, ಮೇಘಾಲಯ, ಮಿಜೋರಾಂ, ಉತ್ತರಾಖಂಡ ರಾಜ್ಯಗಳ ಹೈಕೋರ್ಟ್‌ಗಳಲ್ಲಿ ಮಹಿಳಾ ನ್ಯಾಯಮೂರ್ತಿಗಳಿಲ್ಲ. ತ್ವರಿತವಾಗಿ ನ್ಯಾಯ ಪಡೆಯುವುದು ಸಹ ಮೂಲಭೂತ ಹಕ್ಕು. ಆರೋಗ್ಯ ಮತ್ತು ಶಿಕ್ಷಣ ರಾಷ್ಟ್ರೀಕರಣದಾಗ ಮಾತ್ರ ಸಂವಿಧಾನಕ್ಕೆ ಅರ್ಥ ಬರುತ್ತದೆ ಎಂದು ಅಭಿಪ್ರಾಯಪಟ್ಟರು.

ಸರ್ವೋದಯ ಮಾರ್ಗ ಸಾರುವ ಸಂವಿಧಾನ

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ಶುಕ್ರವಾರ 'ಸಂವಿಧಾನವೇ ಬೆಳಕು–ಹೆಜ್ಜೆಯಿಡು ಹುಬ್ಬಳ್ಳಿ, ಧಾರವಾಡ' ಅಭಿಯಾನದಡಿ ಸಂವಿಧಾನ ನಡಿಗೆ (ವಾಕಥಾನ್) ಜರುಗಿತು. ಬೋಧಕರು, ವಿದ್ಯಾರ್ಥಿಗಳು, ಅಧಿಕಾರಿಗಳು, ವಕೀಲರು ಸೇರಿ ಹಲವರು ಧ್ವಜಗಳನ್ನು ಹಿಡಿದು ಉತ್ಸಾಹದಿಂದ ಹೆಜ್ಜೆ ಹಾಕಿದರು.

'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಬಳಗ ಹಾಗೂ ರಾಜ್ಯ ಸರ್ಕಾರದ ಸಮಾಜಕಲ್ಯಾಣ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಈ ಕಾರ್ಯಕ್ರಮಕ್ಕೂ ಮುನ್ನ ಗಾಂಧಿ ಭವನದಲ್ಲಿ ವಿಚಾರ ಸಂಕಿರಣ ನಡೆಯಿತು. ಅಲ್ಲಿ ಸಂವಿಧಾನದ ತಿರುಳನ್ನು ವಿವರಿಸಲಾಯಿತು. ಮಹತ್ವ ಮತ್ತು ಅಗತ್ಯ ತಿಳಿಯಪಡಿಸಲಾಯಿತು.

ಬೆಳಿಗ್ಗೆ 7ರಿಂದ 10ರವರೆಗೆ ನಡೆದ ಈ ಕಾರ್ಯಕ್ರಮದಲ್ಲಿ ಎಲ್ಲರೂ ಉತ್ಸಾಹದಿಂದ ಪಾಲ್ಗೊಂಡರು. ಕುಲಪತಿ ಪ್ರೊ.ಎ.ಎಂ.ಖಾನ್ ಅವರು ಚಾಲನೆ ನೀಡಿದರು. ವಿಶ್ವವಿದ್ಯಾಲಯದ ಆವರಣದಲ್ಲಿ ಮೂರು ಕಿಲೋ ಮೀಟರ್ ವಾಕಥಾನ್ ನಡೆಯಿತು. ಹಸಿರು ಪರಿಸರ, ಬೆಳಗಿನ ಎಳೆ ಬಿಸಿಲಿನಲ್ಲಿ ಎಲ್ಲರೂ ಹುರುಪಿನಿಂದ ಸಾಗಿದರು. ಗಾಂಧಿ ಭವನದಿಂದ ಆರಂಭಗೊಂಡು ಆಡಳಿತ ಕಚೇರಿ ಮುಂಭಾಗದ ರಸ್ತೆಯಲ್ಲಿ ಸಾಗಿ, ಕ್ರೀಡಾಂಗಣ ತಲುಪಿ, ಅಲ್ಲಿಂದ ಪುನಃ ಗಾಂಧಿ ಭವನಕ್ಕೆ ಮರಳಿದರು.

ಪ್ರೊ.ಎ.ಎಂ.ಖಾನ್ ಮಾತನಾಡಿ, 'ಸಂವಿಧಾನದ ಪ್ರಸ್ತಾವನೆಯನ್ನಷ್ಟೇ ಓದಿದರೆ ಸಾಲದು, ಸಂವಿಧಾನವನ್ನು ಪೂರ್ತಿ ಓದಬೇಕು. ಅಧ್ಯಯನ ಮಾಡಬೇಕು. ಹಕ್ಕುಗಳು, ಕರ್ತವ್ಯಗಳನ್ನು ಅರಿಯಬೇಕು. ಪ್ರಜೆಗಳು ಹೇಗೆ ಬದುಕಬೇಕು ಎಂಬುದನ್ನು ಮನಗಾಣಬೇಕು. ಸಂವಿಧಾನ ಪುಸ್ತಕ ದೊಡ್ಡದಿದೆ, ವಾರಕ್ಕೆ ಒಂದು ಪುಟವನ್ನಾದರೂ ಓದಿ, ಅರ್ಥೈಸಿಕೊಳ್ಳಬೇಕು. ಅದನ್ನು ಪಾಲಿಸಬೇಕು' ಎಂದು ಸಲಹೆ ನೀಡಿದರು.

ಪರೀಕ್ಷಾಂಗ ಕುಲಸಚಿವ ಪ್ರೊ. ಎನ್.ವೈ. ಮಟ್ಟಿಹಾಳ ಮಾತನಾಡಿ, 'ಸಂವಿಧಾನದೆಡೆ ನಡಿಗೆ ಎಂದರೆ ಸತ್ಯ, ಮಾನವೀಯತೆ, ಸಮಾನತೆ, ಭ್ರಾತೃತ್ವ, ನ್ಯಾಯದ ಕಡೆಗಿನ ನಡಿಗೆ. ಶೋಷಿತರು, ಬಡವರು, ಮಹಿಳೆಯರು ಎಲ್ಲರೂ ಸಮಾನತೆಯ ನೆಲಗಟ್ಟಿನಲ್ಲಿ ಬದುಕು ರೂಪಿಸಿಕೊಳ್ಳಲು ಸಾಧ್ಯ ಆಗಿಸುತ್ತಿರುವುದು ಸಂವಿಧಾನದ ಸಾಧನೆ' ಎಂದು ಹೇಳಿದರು.

'ಅಂಬೇಡ್ಕರ್ ಅವರು ಅಖಂಡ ಭಾರತಕ್ಕೆ ಸಂವಿಧಾನವನ್ನು ರಚಿಸಿಕೊಟ್ಟಿದ್ದಾರೆ. ದೇಶವನ್ನು ಭೌಗೋಳಿಕವಾಗಿ ಅಖಂಡವಾಗಿ ನೋಡಿದರೆ ಸಾಲದು, ಇಡೀ ಭಾರತದ ಬದುಕನ್ನು ಅಖಂಡವಾಗಿ ನೋಡಬೇಕು. ಸಂವಿಧಾನದ ಆಶಯಗಳು ಶೇ 100ರಷ್ಟು ಅನುಷ್ಠಾನವಾದರೆ, ಅದು ಸಾಧ್ಯವಾಗುತ್ತದೆ' ಎಂದು ವಿಶ್ಲೇಷಿಸಿದರು.

ಸಮಾಜಕಲ್ಯಾಣ ಇಲಾಖೆ ಜಂಟಿ ನಿರ್ದೇಶಕಿ ಶುಭಾ ಪಿ. ಮಾತನಾಡಿ, 'ಪ್ರತಿದಿನ ಸೂರ್ಯನ ಬೆಳಕು ಚೈತನ್ಯ ನೀಡುವಂತೆ ಸಂವಿಧಾನವು ಚೈತನ್ಯ ನೀಡುತ್ತಿದೆ. ಸಂವಿಧಾನದಿಂದ ನಾವೇನು ಪಡೆದಿದ್ದೇವೆ ಎಂಬುದನ್ನು ತಿಳಿದುಕೊಳ್ಳಬೇಕು. ಅದರ ಶಕ್ತಿಯನ್ನು ಅರ್ಥ ಮಾಡಿಕೊಂಡು ಇತರರಿಗೂ ತಿಳಿಸಬೇಕು' ಎಂದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡವರಿಗೆ ಪ್ರಮಾಣಪತ್ರ ವಿತರಿಸಲಾಯಿತು. 'ಪ್ರಜಾವಾಣಿ' ಹುಬ್ಬಳ್ಳಿ ಬ್ಯುರೊ ಮುಖ್ಯಸ್ಥ ರಾಹುಲ ಬೆಳಗಲಿ ಪ್ರಾಸ್ತಾವಿಕವಾಗಿ ಮಾತನಾಡಿದರು.

'ಸಂವಿಧಾನಕ್ಕೆ ಸವಾಲು, ಹಿಮ್ಮೆಟ್ಟಿಸಲು ಸನ್ನದ್ಧರಾಗಿ'

'ಹಲವು ಸಾಧನೆಗಳು ಮತ್ತು ಅಭಿವೃದ್ಧಿಯ ನಂತರ ಸಂವಿಧಾನವೇ ಹಲವು ಸವಾಲುಗಳನ್ನು ಎದುರಿಸುತ್ತಿದೆ. ಅವುಗಳನ್ನು ಹಿಮ್ಮೆಟ್ಟಿಸದಿದ್ದರೆ, ಪ್ರಜಾಪ್ರಭುತ್ವವಾದಿ ಆಡಳಿತ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದೇ ಕಷ್ಟವಾಗಬಹುದು' ಎಂದು ಗಾಂಧಿ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ಶಿವಾನಂದ ವಿ.ಶೆಟ್ಟರ ಆತಂಕ ವ್ಯಕ್ತಪಡಿಸಿದರು.

ಸಂವಿಧಾನದ ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, 'ಸಂವಿಧಾನ ಉಳಿಸಿಕೊಂಡಲ್ಲಿ ಮಾತ್ರವೇ ದೇಶದಲ್ಲಿ ಸೌಹಾರ್ದ ಮತ್ತು ಸಹಬಾಳ್ವೆ ಪರಂಪರೆ ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಜೊತೆಗೂಡಿ, ಸಂವಿಧಾನ ರಕ್ಷಣೆಗೆ ಪಣತೊಡಬೇಕು' ಎಂದರು.

'ಹಕ್ಕುಗಳ ದಮನ, ಮಾನವ ಹಕ್ಕುಗಳ ಉಲ್ಲಂಘನೆ, ಕ್ಷೀಣಿಸುತ್ತಿರುವ ಪ್ರಜಾಪ್ರಭುತ್ವ, ಮೂಲಭೂತವಾದ, ಕೋಮುವಾದ, ಪ್ರಜಾತಂತ್ರದ ಸಂಸ್ಥೆಗಳ ಸ್ವಾಯತ್ತೆಗೆ ಧಕ್ಕೆಯಂಥ ಸವಾಲುಗಳಿವೆ. ಅವುಗಳನ್ನು ಹಿಮ್ಮೆಟಿಸಲು ಸನ್ನದ್ಧರಾಗಬೇಕು' ಎಂದರು.

'ಧರ್ಮ, ಜಾತಿ, ಭಾಷೆ, ಸಂಸ್ಕೃತಿ, ರಾಜಕೀಯ ಪಕ್ಷ, ಸಿದ್ಧಾಂತ ಸೇರಿ ಎಲ್ಲವೂ ವಿಭಿನ್ನವಾಗಿದ್ದರೂ ಎಲ್ಲದಕ್ಕೂ ಸಂವಿಧಾನ ಅವಕಾಶ ಕಲ್ಪಿಸುತ್ತದೆ. ಎಲ್ಲರನ್ನೂ, ಎಲ್ಲವನ್ನೂ ಒಳಗೊಳ್ಳುವ ಪ್ರಯತ್ನ ಮಾಡುತ್ತದೆ. ನಿಯಮಿತವಾಗಿ ಚುನಾವಣೆ ನಡೆದು, ಪ್ರಜಾಪ್ರಭುತ್ವ ವ್ಯವಸ್ಥೆಯು ಗಟ್ಟಿಯಾಗಿ ಉಳಿಯುವಲ್ಲಿ ಸಂವಿಧಾನ ಪ್ರಮುಖ ಪಾತ್ರ ವಹಿಸಿದೆ. ಸಂವಿಧಾನದ ಮೂಲತತ್ವಗಳನ್ನು ಎಲ್ಲರೂ ಅರಿತು, ಪಾಲಿಸಬೇಕು' ಎಂದರು.

ಅಬ್ಬಬ್ಬಾ ಎಂತಹ ಗಹನವಾದ ಚರ್ಚೆ...



ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ನೇತೃತ್ವದಲ್ಲಿ ನಡೆದ ಸಂವಿಧಾನ ಕರುಡು ರಚನಾ ಸಮಿತಿ ಸಭೆಯ ಒಂದು ಅಪರೂಪದ ನೋಟ. ಇಂತಹ ಸಭೆಗಳಲ್ಲಿ ಒಂದೊಂದು ವಿಷಯವೂ ಸುದೀರ್ಘ ನಿಕಷೆಗೆ ಒಳಪಟ್ಟು ಸಂವಿಧಾನ ರೂಪುಗೊಂಡಿದೆ

ಚಿತ್ರಕೃಪೆ: ಅಂಬೇಡ್ಕರ್ ವಿಶ್ವವಿದ್ಯಾಲಯ, ನವದೆಹಲಿ

'ಜೀವನವೇ ಮುಡಿಪಾಗಲಿ'

'ಇಂದು ಸಂವಿಧಾನದ ನಡಿಗೆ ಎಂದು ಹೆಜ್ಜೆ ಹಾಕಿದ್ದೇವೆ. ಇದು ಇಲ್ಲಿಗೆ ನಿಲ್ಲಬಾರದು. ನಮ್ಮ ಜೀವನವೇ ಸಂವಿಧಾನದ ಕಡೆಗೆ ಸಾಗಬೇಕು. ಸಂವಿಧಾನಕ್ಕೆ ಬದ್ಧವಾಗಿ ಬದುಕಬೇಕು' ಎಂದು ಕುಲಪತಿ ಎಸ್.ಎಂ. ಜಯಕರ ಪ್ರತಿಪಾದಿಸಿದರು.

ಪತ್ರಿಕಾರಂಗದಲ್ಲಿ ಮೌಲ್ಯಗಳೊಂದಿಗೆ ವಿಶಿಷ್ಟ ಹೆಸರು ಮಾಡಿರುವ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳು ಸಂವಿಧಾನದ ಅರಿವು ಮೂಡಿಸಲು ಈ ರೀತಿಯ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಯಾವ ಪುಸ್ತಕ ಓದದೇ ಇದ್ದರೂ ಸಂವಿಧಾನವನ್ನು ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಹಕ್ಕುಗಳು, ಕರ್ತವ್ಯ, ಬದ್ಧತೆಗಳೇನು? ಯಾವ ತರಹ ಇರಬೇಕು? ನಮ್ಮ ನೈತಿಕತೆ ಏನು? ನಮ್ಮ ಸಾಮಾಜಿಕ ಹೊಣೆಗಾರಿಕೆ ಏನು ಎಂಬುದನ್ನು ಅಂಬೇಡ್ಕರ್ ಅವರು ವಿವರವಾಗಿ ಕೊಟ್ಟಿದ್ದಾರೆ. ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ ಮತ್ತು ಸಾಮಾಜಿಕ ನ್ಯಾಯವನ್ನು ಸಂವಿಧಾನ ಕೊಟ್ಟಿದೆ ಎಂದು ವಿವರಿಸಿದರು.

'ಎಲ್ಲ ಕಸವನ್ನು ಹೊರಗೆ ಹಾಕಿದ್ದ ಅಂಬೇಡ್ಕರ್'

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಂದು ಕಾರ್ಯಕ್ರಮದಲ್ಲಿ ಅವರ ಜೀವನದಲ್ಲಿ ನಡೆದ ಘಟನೆಯನ್ನು ಹೇಳಿದ್ದರು. ಅವರು ಕಾಲೇಜಿಗೆ ಹೋಗುತ್ತಿದ್ದ ಸಂದರ್ಭದಲ್ಲಿ ಸಂಜೆ ದನಕರುಗಳಿಗೆ ನೀರುಣಿಸುವ ಜವಾಬ್ದಾರಿ ಸಿದ್ದರಾಮಯ್ಯ ಅವರದ್ದಾಗಿತ್ತು. ಬಾವಿಯಿಂದ ನೀರು ಸೇದಬೇಕಿತ್ತು. ಬಾವಿಯಲ್ಲಿ ಕಸತುಂಬಿತ್ತು. ಬಿಂದಿಗೆಯನ್ನು ಮೇಲೆ ಕೆಳಗೆ ಮೇಲೆ ಕೆಳಗೆ ಮಾಡಿದಾಗ ಕಸ ಬದಿಗೆ ಸರಿಯುತ್ತಿತ್ತು. ಸಿದ್ದರಾಮಯ್ಯ ನೀರು ಸೇದಿ ತರುತ್ತಿದ್ದರಂತೆ. ಅವರು ಅತ್ತ ಹೋದ ಕೂಡಲೇ ಕಸ ಮತ್ತೆ ಸೇರುತ್ತಿತ್ತು. ಅಂದರೆ ಎಲ್ಲರೂ ಕಸವನ್ನು ಬದಿಗೆ ಸರಿಸುವ ಕೆಲಸ ಮಾಡುತ್ತಿದ್ದರು. ಆದರೆ, ಕಸವನ್ನು ತೆಗೆದು ಹೊರಗೆಸೆಯುವ ಕೆಲಸ ಯಾರೂ ಮಾಡಿರಲಿಲ್ಲ. ಅಂಥ ಕೆಲಸವನ್ನು ಅಂಬೇಡ್ಕರ್ ಸಂವಿಧಾನದ ಮೂಲಕ ಮಾಡಿದ್ದಾರೆ' ಎಂದು ರವೀಂದ್ರ ಭಟ್ಟ ಹೇಳಿದರು.

ಸಂವಿಧಾನವನ್ನು ಎಲ್ಲ ಸಾರ್ವಜನಿಕರಿಗೆ ಮುಖ್ಯವಾಗಿ ವಿದ್ಯಾರ್ಥಿಗಳಿಗೆ ತಲುಪಿಸಬೇಕು ಎಂಬ ಕಾರಣಕ್ಕೆ 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಎಂದು ತಿಳಿಸಿದರು.

'12ನೇ ಶತಮಾನದಲ್ಲೇ ಸ್ತ್ರೀ ಸಮಾನತೆ'

'12ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಸ್ತ್ರೀ ಸಮಾನತೆಯ ಅಧ್ಯಾಯ ಆರಂಭವಾಯಿತು. ಹೆಣ್ಣು ಹೆಣ್ಣಲ್ಲ, ಹೆಣ್ಣು ಮಾಯೆಯಲ್ಲ, ಹೆಣ್ಣು ರಕ್ಕಸಿಯಲ್ಲ, ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ಎಂಬ ವಚನದಲ್ಲಿ ಸ್ತ್ರೀ ಸಮಾನತೆಯನ್ನು ಶರಣರು ಸಾರಿದ್ದಾರೆ' ಎಂದು ಸಾಮಾಜಿಕ ಕಾರ್ಯಕರ್ತೆ ಇಸಾಬೆಲ್ಲಾ ಕ್ಸೇವಿಯರ್ ಹೇಳಿದರು.

'900 ವರ್ಷಗಳಿಂದ ಹೆಣ್ಣುಮಕ್ಕಳ ಬದುಕಿನ ಹೋರಾಟಗಳು ನಡೆಯುತ್ತಿವೆ. ದೇಶಕ್ಕೆ ಸ್ವಾತಂತ್ರ್ಯ ಬಂದು ಏಳು ದಶಕಗಳಾಗಿವೆ. ಸಂವಿಧಾನದತ್ತ ಸೌಲಭ್ಯಗಳು ಜನರಿಗೆ ತಲುಪುತ್ತಿವೆಯೇ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ' ಎಂದರು.

'ದೇಶದಲ್ಲಿ ಶೇ 50ಕ್ಕಿಂತ ಹೆಚ್ಚು ಮಹಿಳೆಯರು ಇದ್ದಾರೆ. ಮಹಿಳೆಯರು ಅಭಿವೃದ್ಧಿಯಾದರೆ ದೇಶದ ಪ್ರಗತಿ ಸಾಧ್ಯ. ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ಕ್ಷೇತ್ರದಲ್ಲಿ ಮಹಿಳೆಯರಿಗೆ ಸಂವಿಧಾನ ಆಧಾರವಾಗಿದೆ. ಮಹಿಳೆಯರು ಹಕ್ಕುಗಳ ಬಗ್ಗೆ ತಿಳಿದುಕೊಳ್ಳಬೇಕು. ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನದಿಂದ, ಐಎಎಸ್ ಅಧಿಕಾರಿ ಹುದ್ದೆಗೇರುವ ಅವಕಾಶ ಸಿಕ್ಕಿರುವುದು ಸಂವಿಧಾನದಿಂದ. ಸಂವಿಧಾನ ದೇಶದ ಪರಮ ಗ್ರಂಥ. ದಮನಿತರು, ತಳಸ್ಥರದವರಿಗೆ ಸಂವಿಧಾನ ಧ್ವನಿ ನೀಡಿದೆ' ಎಂದರು.

An Initiative by:
SOCIAL WELFARE DEPARTMENT
For the Educational, Social & Economic Upliftment of Scheduled Castes

In Association with:
KSSKDC
LIDKAR
ಕರ್ನಾಟಕ
KARNATAKA BHOVI DEVELOPMENT CORPORATION

ಸಂವಿಧಾನವೇ ಬೆಳಕು
Curated by
DH DECCAN HERALD ಪ್ರಜಾವಾಣಿ

ಭಾರತ ಮುನ್ನಡೆಗೆ ದಾರಿದೀವಿಗೆ...

ಪ್ರಜಾವಾಣಿ ವಾರ್ತೆ

ಗುಲಬರ್ಗಾ ವಿಶ್ವವಿದ್ಯಾಲಯದ ಆವರಣದಲ್ಲಿ 'ಸಂವಿಧಾನವೇ ಬೆಳಕು' ಅಭಿಯಾನದಡಿ ಹಮ್ಮಿಕೊಂಡಿದ್ದ ವಿಚಾರ ಸಂಕಿರಣವು ಹತ್ತಾರು ಗಣ್ಯರು, ನೂರಾರು ವಿದ್ಯಾರ್ಥಿಗಳಲ್ಲಿ 'ಭಾರತೀಯರಿಗೆ ಸಂವಿಧಾನವೇ ಧರ್ಮ ಗ್ರಂಥ' ಎಂಬ ಅರಿವಿನ ಕಿಡಿ ಹೊತ್ತಿಸುವಲ್ಲಿ ಯಶಸ್ವಿಯಾಯಿತು.

'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಬಳಗವು ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಡಾ.ಅಂಬೇಡ್ಕರ್ ಸಭಾಂಗಣದಲ್ಲಿ ನಡೆಸಿದ ವಿಚಾರ ಸಂಕಿರಣದಲ್ಲಿ ಮಾತನಾಡಿದ ಗಣ್ಯರು, ಸಂಪನ್ಮೂಲ ವ್ಯಕ್ತಿಗಳು 'ಸಂವಿಧಾನದ ಬೆಳಕಲ್ಲಿ ಯುವ ಭಾರತ ಮುನ್ನಡೆಯಲಿ' ಎಂದು ಆಶಿಸಿದರು.

ಮೂಡಣದಲ್ಲಿ ಆಗಷ್ಟೇ ಕತ್ತಲೆ ಸರಿದು ಬೆಳಕು ಮೂಡಿತ್ತು. ಸೂರ್ಯರಶ್ಮಿಗಳು ಭುವಿಯತ್ತ ನುಗ್ಗಿದಂತೆ ನೂರಾರು ಯುವಜನರು ವಿವಿಧೆಡೆಯಿಂದ ಗುಲಬರ್ಗಾ ವಿಶ್ವವಿದ್ಯಾಲಯ ಡಾ.ಬಿ.ಆರ್.ಅಂಬೇಡ್ಕರ್ ಭವನದತ್ತ ಧಾವಿಸಿ ಬಂದರು. ಅತಿಥಿಗಳ 'ಸಂವಿಧಾನ'ದ ತಿಳಿವಳಿಕೆಯ ನುಡಿಗಳಿಗೆ ಕಿವಿಯಾದರು. ಸಂವಿಧಾನದ ಪ್ರಾಮುಖ್ಯ ಅರಿಯುವ ಯತ್ನ ಮಾಡಿದರು.

ಸಂವಿಧಾನದ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿದ ಗುಲಬರ್ಗಾ ವಿವಿ ಕುಲಪತಿ ಪ್ರೊ. ಶಶಿಕಾಂತ ಉಡಿಕೇರಿ, 'ಬ್ರಿಟಿಷರು–ಅರಸೊತ್ತಿಗೆ ವ್ಯವಸ್ಥೆಯಿಂದ ಸ್ವತಂತ್ರಗೊಂಡ ಭಾರತದ ಆಡಳಿತಕ್ಕಾಗಿ ಡಾ.ಬಿ.ಆರ್.ಅಂಬೇಡ್ಕರ್ ರೂಪಿಸಿದ ಭವಿಷ್ಯದ ದಿಕ್ಸೂಚಿಯೇ ಸಂವಿಧಾನ. ಭಾರತೀಯರ ಬದುಕಿಗೆ ಸಂವಿಧಾನವೇ ಬೆಳಕು; ಅದನ್ನು ಬಿಟ್ಟರೆ ಪ್ರಗತಿಯೇ ಸಾಧ್ಯವಿಲ್ಲ' ಎಂದರು.

'1947ರಲ್ಲಿ ಬ್ರಿಟಿಷರು ಹಾಗೂ ಅಲ್ಲಲ್ಲಿ ಆಳುತ್ತಿದ್ದ ರಾಜ ಮನೆತನಗಳಿಂದ ಕಪಿಮುಷ್ಟಿಯಿಂದ ಭಾರತ ಸ್ವತಂತ್ರಗೊಂಡಿತು. ಆಗ ಈ ದೇಶದಲ್ಲಿ ಅಸಂಖ್ಯ ಭಿನ್ನತೆಗಳು, ಹಲವು ಧರ್ಮಗಳು, ಹತ್ತಾರು ಜಾತಿಗಳು, ಹಲವಾರು ತಾರತಮ್ಯಗಳಿದ್ದವು. ಜೊತೆಗೆ ಬಡತನ, ಅನಕ್ಷರತೆ ದೇಶವನ್ನು ಕಾಡುತ್ತಿದ್ದವು. ಇಂಥ ದೇಶವನ್ನು ಸುಗಮವಾಗಿ ಮುನ್ನಡೆಸಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಛಾಪು ಮೂಡಿಸಲು ಮಾರ್ಗದರ್ಶಿ ಗ್ರಂಥ ಬೇಕಿತ್ತು. ಡಾ.ಬಿ.ಆರ್.ಅಂಬೇಡ್ಕರ್ ರಚಿಸಿದ 'ಸಂವಿಧಾನ'ದಿಂದ ಅದು ಸಾಕಾರವಾಗಿಯಿತು' ಎಂದರು.

'ಅಂದಿನಿಂದ ಇಂದಿನ ತನಕ ಸಂವಿಧಾನದ ಫಲವಾಗಿ ದೇಶ ಅಭಿವೃದ್ಧಿ ಕಂಡಿದೆ. ಮಗು ಅಳದೇ ತಾಯಿಯೂ ಎದೆಹಾಲು ಕುಡಿಸಲ್ಲ. ನಾವೆಲ್ಲ ಆಗಾಗ ಹೋರಾಟದ ಧ್ವನಿ ಎತ್ತಿ ಭಾರತ ಮಾತೆಯ ಎದೆಹಾಲು ಕುಡಿದು ಇಂದು ಬೆಳೆದು ನಿಲ್ಲಲು ಶಕ್ತಿ ಕೊಟ್ಟಿದ್ದು ಸಂವಿಧಾನ. ಸಮಾನತೆ, ಶಿಕ್ಷಣ, ಆಡಳಿತ ವ್ಯವಸ್ಥೆ ಹಾಗೂ ಪ್ರಜಾಸತ್ತಾತ್ಮಕವಾಗಿ ಧ್ವನಿ ಎತ್ತುವ ಬಲವನ್ನೂ ಅದು ನೀಡಿದೆ. ಅಂಥ ಸಂವಿಧಾನ ಬಿಟ್ಟು ನೋಡುವ, ಯೋಚಿಸುವ ಯಾವುದೇ ಚಿಂತನೆ ಭವ್ಯ ಭಾರತದ ಹಿತಾಸಕ್ತಿಗೆ ಮಾರಕ. ಅಂಥ ವಿಚಾರಗಳು ದೇಶಕ್ಕೆ ರಚನಾತ್ಮಕ, ಸಾಮಾಜಿಕ ಹಾಗೂ ಭೌಗೋಳಿಕವಾಗಿಯೂ ಅಪಾಯಕಾರಿ' ಎಂದು ಎಚ್ಚರಿಸಿದರು.

'ಯುವಪೀಳಿಗೆಗೆ ಹಿಂದೆಯೂ, ಇಂದೂ, ಎಂದೂ ಸಂವಿಧಾನವೇ ಆಶಯ ಹಾಗೂ ಆಶ್ರಯ. ಸಂವಿಧಾನವನ್ನು ಸಂಪೂರ್ಣವಾಗಿ ಅಳವಡಿಸಿಕೊಂಡು ಮುನ್ನಡೆದರೆ ನಿಸ್ಸಂಶಯವಾಗಿ ಜಗತ್ತಿನಲ್ಲೇ ಭಾರತ ಅತ್ಯುತ್ತಮ ರಾಷ್ಟ್ರವಾಗಿ ಹೊರಹೊಮ್ಮುತ್ತದೆ' ಎಂದು ಪ್ರತಿಪಾದಿಸಿದರು.

'ಭಾರತವು ವಿಶ್ವಗುರು ಎನಿಸಿಕೊಳ್ಳಲು ಹೊರಟಿರುವುದಕ್ಕೆ ಪ್ರೇರಣೆಯೇ ಸಂವಿಧಾನ' ಎಂದು ಗುಲಬರ್ಗಾ ವಿವಿ ಕುಲಸಚಿವ ಪ್ರೊ.ರಮೇಶ ಲಂಡನಕರ ಪ್ರತಿಪಾದಿಸಿದರು.

'ಸ್ವಾತಂತ್ರ್ಯ ಸಿಕ್ಕಾಗ ದೇಶದಲ್ಲಿ ಊಹಿಸಲು ಅಸಾಧ್ಯವಾದ ರೋಗಗ್ರಸ್ತ ಸಮಾಜವಿತ್ತು. ಅದಕ್ಕೆ ಸಂವಿಧಾನ ಮದ್ದಾಗಿ ಬಂತು. ಸಮಾಜದಲ್ಲಿನ ಶೋಷಣೆ, ಗುಲಾಮಗಿರಿಗೆ ಅಂತ್ಯ ಹಾಡಲು ಸಂವಿಧಾನ ಅಸ್ತ್ರವಾಯಿತು. ಒಂದೆಡೆ ಬುದ್ಧನ ಶಾಂತಿಯ ವಿಚಾರ, ಬಸವಣ್ಣವರ ಸಮಾನತೆಯ ವಿಚಾರದ ಆದಿಯಾಗಿ ಎಲ್ಲ ಉತ್ತಮ ಆಶಯ–ಅಂಶಗಳನ್ನು ಒಗ್ಗೂಡಿಸಿ ಸಂವಿಧಾನದ ಮೂಲಕ ದೇಶದಲ್ಲಿ ಸರ್ವರಿಗೂ ಸಮಪಾಲು–ಸಮಬಾಳು ಸಾಧ್ಯವಾಗಿಸಿದ ಕೀರ್ತಿ ಡಾ.ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ' ಎಂದರು.

'ಸಂವಿಧಾನ ಜಾರಿಯಾಗಿ ಏಳೂವರೆ ದಶಕಗಳಾಗಿವೆ. ಆದರೆ, ಇಂದಿಗೂ ಅದು ಸಂಪೂರ್ಣವಾಗಿ ಅನುಷ್ಠಾನಗೊಂಡಿಲ್ಲ. ಇದರ ನಡುವೆಯೇ ಸಂವಿಧಾನ ತಿರುಚುವ ಪ್ರಯತ್ನಗಳು ನಡೆಯುತ್ತಿವೆ. ಇಂಥ ಸಂದಿಗ್ಧ ಕಾಲಘಟ್ಟದಲ್ಲಿ ಸಂವಿಧಾನದ ಅರಿವು ವಿಶ್ವವಿದ್ಯಾಲಯಗಳು, ವಿದ್ಯಾರ್ಥಿಗಳ ಸಮೂಹ ದಾಟಿ ಜನಮಾನಸವನ್ನು ಮುಟ್ಟಬೇಕಿದೆ' ಎಂದು ಅಭಿಪ್ರಾಯಪಟ್ಟರು.

'ದೇಶದ ಪ್ರಜೆಗಳಿಗೆ ಡಾ.ಅಂಬೇಡ್ಕರ್ ಸಂವಿಧಾನದ ಬೆಳಕು ಕೊಟ್ಟಿದ್ದಾರೆ. ಈ ಬೆಳಕು ಬಳಸಿ ನಾವೆಲ್ಲ ಭಾರತವನ್ನು ಮುನ್ನಡೆಸೋಣ' ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಪ್ರೀತಿ ದೊಡ್ಡಮನಿ ಆಶಿಸಿದರು.

'ಪ್ರಜಾವಾಣಿ' ಕಲಬುರಗಿ ಬ್ಯುರೊ ಮುಖ್ಯಸ್ಥ ವಿನಾಯಕ ಭಟ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ಮರಿಲಿಂಗಪ್ಪ ಇದ್ದರು. ವಿಚಾರ ಸಂಕಿರಣದಲ್ಲಿ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

> ದೇಶವನ್ನು ಸುಗಮವಾಗಿ ಮುನ್ನಡೆಸಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಛಾಪು ಮೂಡಿಸಲು ಮಾರ್ಗದರ್ಶಿ ಗ್ರಂಥ ಬೇಕಿತ್ತು. ಡಾ.ಬಿ.ಆರ್.ಅಂಬೇಡ್ಕರ್ ರಚಿಸಿದ 'ಸಂವಿಧಾನ'ದಿಂದ ಅದು ಸಾಕಾರವಾಗಿಯಿತು

ಪ್ರೊ. ಎಚ್.ಟಿ. ಪೋತೆ

'ರಕ್ತದಷ್ಟೇ ಸಂವಿಧಾನವೂ ಮುಖ್ಯ'

'ಸಂವಿಧಾನ ಬರೀ ಹಾಳೆಗಳ ಕಟ್ಟಲ್ಲ; ಭಾರತೀಯರ ಬದುಕಿನ ಭಾಗ. ಜೀವಕ್ಕೆ ರಕ್ತ ಎಷ್ಟು ಮುಖ್ಯವೋ ಬದುಕಿಗೆ ಸಂವಿಧಾನವೂ ಅಷ್ಟೇ ಮುಖ್ಯ' ಎಂದು ವಿಚಾರ ಸಂಕಿರಣದ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡಿದ್ದ ಗುಲಬರ್ಗಾ ವಿವಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ಎಚ್.ಟಿ. ಪೋತೆ ಪ್ರತಿಪಾದಿಸಿದರು.

ನೂರಾರು ವಿದ್ಯಾರ್ಥಿಗಳಿಗೆ ಸಂವಿಧಾನದ ಪ್ರತಿ ಪ್ರದರ್ಶಿಸಿದ ಅವರು, ತಮ್ಮ ಉಪನ್ಯಾಸದಲ್ಲಿ 'ಸಂವಿಧಾನ'ದ ಪ್ರಾಮುಖ್ಯವನ್ನು ಅರುಹಿದರು.

'ಭಾರತದ ಪ್ರಜೆಗಳಾದ ನಾವು...' ಎಂದೇ ನಮ್ಮ ಸಂವಿಧಾನದ ಪೀಠಿಕೆ ಶುರುವಾಗುತ್ತದೆ. ಆ ಮೂಲಕ ದೇಶದ ಸಮಸ್ತ ನಾಗರಿಕರನ್ನೂ ಒಳಗೊಳ್ಳುತ್ತದೆ. ಸಂವಿಧಾನವು ಪ್ರತಿಯೊಬ್ಬ ಭಾರತೀಯನ ಮನೆಯಲ್ಲಿ ಇರಬೇಕಾದ ಗ್ರಂಥ. ದೇಶದಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್, ಪಾರ್ಸಿ, ಬೌದ್ಧ ಹೀಗೆ ಎಲ್ಲ ಧರ್ಮಗಳಿಗೂ ಧರ್ಮಗ್ರಂಥಗಳಿವೆ. ಆ ಎಲ್ಲ ಗ್ರಂಥಗಳಿಗೆ ರಕ್ಷಣೆ ಕೊಡುವ ಗ್ರಂಥವೇ ಸಂವಿಧಾನ. ದೇಶದ ಸರ್ವ ಜನಾಂಗವನ್ನೂ ಮುಷ್ಟಿಯಂತೆ ಒಗ್ಗಟ್ಟಿನಿಂದ ಹಿಡಿದಿಟ್ಟ ಬಲ ಸಂವಿಧಾನ' ಎಂದರು.

'ಸಂವಿಧಾನವು ಮಹಿಳೆಯರು, ಹಿಂದುಳಿದ ವರ್ಗಗಳು, ನಿಮ್ನ ವರ್ಗಗಳಿಗೆ ಅವಕಾಶ, ಹಕ್ಕುಗಳನ್ನು ಒದಗಿಸಿದೆ. ಸಂವಿಧಾನವೇ ಇಲ್ಲದಿದ್ದರೆ ಇವರ್‍ಯಾರೂ ಉಳಿಯಲ್ಲ. ಆದರೆ, ಸಂವಿಧಾನದ ಆಶಯಕ್ಕೆ ಧಕ್ಕೆ ಬಂದಾಗ, ಅದನ್ನು ರಚಿಸಿದ ಅಂಬೇಡ್ಕರ್‌ಗೆ ಅಪಮಾನವಾದಾಗ ಬರೀ ದಲಿತ ಧ್ವನಿಗಳಷ್ಟೇ ಮೊಳಗುವುದು ವಿಪರ್ಯಾಸ. ಸಂವಿಧಾನದ ಸಂರಕ್ಷಣೆ ಬರೀ ದಲಿತರ ಹೊಣೆಯಲ್ಲ; ಅದು ಸಮಸ್ತರ ಕರ್ತವ್ಯ' ಎಂದು ಅರುಹಿದರು

ಕಲಬುರಗಿಯ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಬಳಗವು ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ 'ಸಂವಿಧಾನವೇ ಬೆಳಕು' ಅಭಿಯಾನದಡಿ ಗುಲಬರ್ಗಾ ವಿಶ್ವವಿದ್ಯಾಲಯದ ಆವರಣದಲ್ಲಿ ಹಮ್ಮಿಕೊಂಡಿದ್ದ 'ಹೆಜ್ಜೆಯಿಡು ಕಲಬುರಗಿ –ಸಂವಿಧಾನಕ್ಕಾಗಿ ನಡೆಯೋಣ' ವಾಕಥಾನ್‌ನಲ್ಲಿ ಕುಲಪತಿ ಪ್ರೊ. ಶಶಿಕಾಂತ ಎಸ್. ಉಡಿಕೇರಿ, ಕುಲಸಚಿವ ಪ್ರೊ.ರಮೇಶ ಲಂಡನಕರ್, ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ಎಚ್.ಟಿ. ಪೋತೆ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಪ್ರೀತಿ ದೊಡ್ಡಮನಿ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು

'ಸಂವಿಧಾನ'ಕ್ಕಾಗಿ ಹೆಜ್ಜೆಯಿಟ್ಟ ಕಲಬುರಗಿ

'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಬಳಗವು ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಕಲಬುರಗಿಯ ಗುಲಬರ್ಗಾ ವಿಶ್ವವಿದ್ಯಾಲಯದ ಆವರಣದಲ್ಲಿ 'ಸಂವಿಧಾನವೇ ಬೆಳಕು' ಅಭಿಯಾನದಡಿ ಹಮ್ಮಿಕೊಂಡಿದ್ದ 'ಹೆಜ್ಜೆಯಿಡು ಕಲಬುರಗಿ–ಸಂವಿಧಾನಕ್ಕಾಗಿ ನಡೆಯೋಣ' ವಾಕಥಾನ್‌ನಲ್ಲಿ ಹತ್ತಾರು ಗಣ್ಯರು, ನೂರಾರು ವಿದ್ಯಾರ್ಥಿಗಳು ಹುಮ್ಮಸ್ಸಿನಿಂದ ಹೆಜ್ಜೆಹಾಕಿದರು. ವಿಶ್ವವಿದ್ಯಾಲಯದ ಹಸಿರು ಹೊನ್ನಿನ ಪರಿಸರದಲ್ಲಿ ಸಂವಿಧಾನಕ್ಕಾಗಿ ಹುಮ್ಮಸ್ಸಿನಿಂದ ಮೂರು ಕಿ.ಮೀ ನಡೆದರು.

ಮೂಡಣದಿಂದ ಧರೆಗಿಳಿದ ಸೂರ್ಯರಶ್ಮಿಗಳು ಭುವಿಗೆ ಆಗಷ್ಟೇ ಬಿಸಿಯಪ್ಪುಗೆ ನೀಡಿದ್ದವು. ಮನದಲ್ಲಿ 'ಸಂವಿಧಾನ'ದ ಅರಿವಿನ ಕಿಡಿಹೊತ್ತು ಹುಮ್ಮಸ್ಸಿನಲ್ಲಿದ್ದ ನೂರಾರು ಮನಸುಗಳು ವಿಶ್ವವಿದ್ಯಾಲಯ ಆವರಣದ ಡಾ.ಅಂಬೇಡ್ಕರ್ ಭವನದಿಂದ ಬಿರುಸಿನ 'ವಾಕಥಾನ್' ಆರಂಭಿಸಿದವು.

ವಿಶ್ವವಿದ್ಯಾಲದ ಕುಲಪತಿ ಪ್ರೊ.ಶಶಿಕಾಂತ ಉಡಿಕೇರಿ, ಕುಲಸಚಿವ ಪ್ರೊ. ರಮೇಶ ಲಂಡನಕರ್, ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ. ಎಚ್.ಟಿ.ಪೋತೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಪ್ರೀತಿ ದೊಡ್ಡಮನಿ ಸೇರಿದಂತೆ ಅತಿಥಿ ಗಣ್ಯರು 'ಸಂವಿಧಾನವೇ ಬೆಳಕು' ಎಂಬ ಧ್ವಜಗಳನ್ನು ಹಿಡಿದು ವಾಕಥಾನ್ ಮುಂಚೂಣಿಯಲ್ಲಿ ಸಾಗಿ 'ಸಂವಿಧಾನ' ಪ್ರೇಮ ಮೆರೆದರು.

ಡಾ.ಅಂಬೇಡ್ಕರ್ ಭವನದಿಂದ ಆರಂಭವಾದ ವಾಕಥಾನ್ ವಿಶ್ವವಿದ್ಯಾಲಯದ ರಾಷ್ಟ್ರಕೂಟರ ಮಹಾದ್ವಾರ, ಚಾಲುಕ್ಯ ಮಹಾದ್ವಾರದ ಮೂಲಕ ಕಾರ್ಯಸೌಧ ತಲುಪಿತು. ಅಲ್ಲಿಂದ ಮತ್ತೆ ವಿವಿಧ ಹಾಸ್ಟೆಲ್‌ಗಳ ಎದುರಿನಿಂದ ಡಾ.ಅಂಬೇಡ್ಕರ್ ಭವನದವರೆಗೆ ಸಾಗಿ ಬಂತು.

ವಾಕಥಾನ್ ಉದ್ದಕ್ಕೂ 'ಸಂವಿಧಾನವೇ ಶಕ್ತಿ ಸಂವಿಧಾನವೇ ಬೆಳಕು', 'ಸಂವಿಧಾನ ಗೌರವಿಸಿ, ರಾಷ್ಟ್ರ ಬಲಪಡಿಸಿ', 'ಎಲ್ಲರಿಗೂ ಹಕ್ಕು, ಎಲ್ಲರಿಗೂ ಕರ್ತವ್ಯ–ಸಂವಿಧಾನದ ಕೊಡುಗೆ' ಘೋಷಣೆಗಳು ವಿಶ್ವವಿದ್ಯಾಲಯದ ಹಸಿರಿನ ಪರಿಸರದಲ್ಲಿ ಹಕ್ಕಿಗಳ ಚಿಲಿಪಿಲಿಯಂತೆ ಅನುರಣಿಸಿದವು.

ಕಲಬುರಗಿಯ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಬಳಗವು ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ 'ಸಂವಿಧಾನವೇ ಬೆಳಕು' ಅಭಿಯಾನದಡಿ ಗುಲಬರ್ಗಾ ವಿಶ್ವವಿದ್ಯಾಲಯದ ಆವರಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸಂವಿಧಾನ ಕುರಿತ ವಿಚಾರ ಸಂಕಿರಣದಲ್ಲಿ ಸೇರಿದ್ದ ವಿದ್ಯಾರ್ಥಿಗಳು.

ಮೀಸಲಾತಿ, ಸಾಮಾಜಿಕ ನ್ಯಾಯ ಹಾಗೂ ಶೋಷಿತರ ಹಕ್ಕು ಕುರಿತ ಸಂವಾದ

'ಬದುಕಿನ ಸರ್ವೋಚ್ಚ ಕಾನೂನು'

'ಸಾಮಾಜಿಕ ರೋಗಕ್ಕೆ ಪರಿಹಾರ'

'ಭಾರತದ ಸಂವಿಧಾನ ಬರೀ ಕಾನೂನು ಗ್ರಂಥವಲ್ಲ. ಅದು ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದ ಕಾರ್ಯ–ವ್ಯಾಪ್ತಿಗಳನ್ನಷ್ಟೇ ಹೇಳಲ್ಲ. ಸಂವಿಧಾನವು ನಿತ್ಯದ ಕ್ರಮಕ್ಕಾಗಿ ಶ್ರೀಸಾಮಾನ್ಯರಿಗಾಗಿ ಮಾಡಿದ ಸರ್ವೋಚ್ಚ ಕಾನೂನು. ಇದು ದೇಶದ ಆಡಳಿತದ ಬೆನ್ನೆಲುಬು. ಶರೀರಕ್ಕೆ ತಟ್ಟಿದ ರೋಗವನ್ನು ವೈದ್ಯ ಗುಣಪಡಿಸುವಂತೆ ಸಮಾಜಕ್ಕೆ ಅಂಟಿದ ರೋಗಗಳಿಗೆ ಪರಿಹಾರ ಹುಡುಕುವುದು ಸಂವಿಧಾನದ ಸದಾಶಯ...'

'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಸಮೂಹವು ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಕಲಬುರಗಿಯಲ್ಲಿ ಆಯೋಜಿಸಿದ್ದ 'ಸಂವಿಧಾನವೇ ಬೆಳಕು' ದುಂಡು ಮೇಜಿನ ಸಂವಾದದಲ್ಲಿ 'ಭಾರತ ಸಂವಿಧಾನ'ದ ಕುರಿತು ತಜ್ಞರು ಹಂಚಿಕೊಂಡ ಹೊಳಹುಗಳಿವು.

ಕಾರ್ಯಕ್ರಮದಲ್ಲಿ ಕಲಬುರಗಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀನಿವಾಸ ನವಲೆ, ಕಲಬುರಗಿ ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ, ನಿವೃತ್ತ ಪ್ರಾಚಾರ್ಯ ನರೇಂದ್ರ ಬಡಶೇಷಿ ಹಾಗೂ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಅಪ್ಪಗೆರೆ ಸೋಮಶೇಖರ ಅವರು ಸಂವಿಧಾನದಡಿ ದೇಶದ ಜನರಿಗೆ ಸಂದಿರುವ 'ಮೀಸಲಾತಿ', 'ಸಾಮಾಜಿಕ ನ್ಯಾಯ' ಹಾಗೂ 'ಶೋಷಿತರ ಹಕ್ಕು'ಗಳ ಬಗೆಗೆ ಅರ್ಥಪೂರ್ಣ ಅಭಿಪ್ರಾಯಗಳನ್ನು ಹಂಚಿಕೊಂಡರು.

ಶ್ರೀನಿವಾಸ ನವಲೆ

'ಭಾರತ ಸಂವಿಧಾನ 1950ರಲ್ಲಿ ಜಾರಿಗೆ ಬಂತು. 2025ರ ಹೊತ್ತಿಗೆ ಸಾಕಷ್ಟು ಬದಲಾವಣೆಗೆ ಒಳಪಟ್ಟಿದೆ. ಸಂವಿಧಾನ ಶಾಸಕಾಂಗ ಕಾರ್ಯಾಂಗ, ನ್ಯಾಯಾಂಗದ ಕಾರ್ಯವೈಖರಿ ಮತ್ತು ಅದರ ಅಧಿಕಾರದ ವ್ಯಾಪ್ತಿಯನ್ನಷ್ಟೇ ಹೇಳುವುದಿಲ್ಲ. ಅದು ಹಲವು ವಿಷಯಗಳನ್ನು ತಿಳಿಸುತ್ತದೆ. ಸಂವಿಧಾನವು ನಿತ್ಯದ ಕ್ರಮಕ್ಕಾಗಿ ಜನರಿಗಾಗಿ ಮಾಡಿದ ಸರ್ವೋಚ್ಚ ಕಾನೂನು. ಇದರಲ್ಲಿ ಮೂಲಭೂತ ಹಕ್ಕುಗಳು, ಕರ್ತವ್ಯಗಳೂ ಇವೆ' ಎಂದು ಶ್ರೀನಿವಾಸ ನವಲೆ ಬಣ್ಣಿಸಿದರು.

'ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ, ಮೂಲಭೂತ ಹಕ್ಕು, ಮೂಲಭೂತ ಕರ್ತವ್ಯಗಳು, ಜನಸಾಮಾನ್ಯರಿಗೆ ಸರ್ಕಾರಗಳು ಹೇಗೆಲ್ಲ ಸಾಮಾಜಿಕ ನ್ಯಾಯ ಒದಗಿಸಬೇಕು ಎಂದೆಲ್ಲ ಸಂವಿಧಾನದಲ್ಲಿ ವಿಸ್ತೃತವಾಗಿ ತಿಳಿಸಲಾಗಿದೆ. ನಾವೆಲ್ಲ ಬದುಕನ್ನು ಹೇಗೆ ಕಟ್ಟಿಕೊಳ್ಳಬೇಕು. ಪ್ರಪಂಚದಲ್ಲಿ ನಮ್ಮ ದೇಶವನ್ನು ಹೇಗೆಲ್ಲ ಸದೃಢ ಮಾಡಬೇಕು ಎಂಬುದೆಲ್ಲವನ್ನೂ ಸಂವಿಧಾನ ಒಳಗೊಂಡಿದೆ. ಒಟ್ಟಾರೆ, ಸ್ವಾತಂತ್ರ್ಯದ ನಂತರ ದೇಶವನ್ನು ನಡೆಸುವ ಆಶಯ, ಕನಸು ನೀಡುವುದೇ ಈ ಸಂವಿಧಾನ' ಎಂದು ಶರಣಪ್ಪ ಎಸ್.ಡಿ ಅಭಿಪ್ರಾಯಪಟ್ಟರು.

'ಸಂವಿಧಾನ ಅಂದರೆ ಭಾರತದ ಅರಿವು, ಭಾರತದ ಒಟ್ಟು ವ್ಯಕ್ತಿತ್ವ, ಒಟ್ಟು ಭಾರತದ ಚಿಂತನೆ ಒಳಗೊಂಡ ಗ್ರಂಥ. ಕೇವಲ ಕಾನೂನು ಒಳಗೊಂಡ ಗ್ರಂಥವಲ್ಲ. ಮಾನವೀಯ ಮೌಲ್ಯಗಳು, ಸಾಮರಸ್ಯದ ಬದುಕು– ಮೌಲ್ಯಗಳ ಅರಿವನ್ನೂ ಮೂಡಿಸುವ ಆದರ್ಶ ಗ್ರಂಥ' ಎಂಬುದು ಅಪ್ಪಗೆರೆ ಸೋಮಶೇಖರ ಅವರ ಅಭಿಮತ.

'ಭಾರತದ ಸಾಮಾಜಿಕ ವ್ಯವಸ್ಥೆಯ ಒಟ್ಟು ಸಂರಚನೆಯ ಸ್ಪಷ್ಟ ತಿಳಿವಳಿಕೆ ಅಂಬೇಡ್ಕರ್ ಅವರಿಗಿತ್ತು. ಒಂದೇ ಜಾತಿ–ಒಂದೇ ಧರ್ಮದ ರಾಷ್ಟ್ರಕ್ಕೆ ಸಂವಿಧಾನ ಬರೆಯುವುದು ಸುಲಭ. ಅನೇಕ ಜಾತಿ, ಧರ್ಮ, ಸಂಸ್ಕೃತಿ, ಭಾಷೆಗಳನ್ನು ಹೊಂದಿರುವ ಬಹುತ್ವದ ಭಾರತಕ್ಕೆ ಸಂವಿಧಾನ ಬರೆಯುವುದು ಬಹಳ ಸವಾಲಾಗಿತ್ತು. ಅದನ್ನು ಅಂಬೇಡ್ಕರ್ ಯಶ್ವಸಿಯಾಗಿ ನಿರ್ವಹಿಸಿದರು' ಎಂದರು.

'ಶರೀರಕ್ಕೆ ತಟ್ಟಿದ ರೋಗವನ್ನು ವೈದ್ಯ ಗುಣಪಡಿಸುವಂತೆ, ಸಮಾಜಕ್ಕೆ ಅಂಟಿದ ರೋಗಗಳಿಗೆ ಪರಿಹಾರ ಹುಡುಕುವುದೇ ಸಂವಿಧಾನದ ಮೂಲ ಉದ್ದೇಶ. ಅದೇ ಆಶಯದಿಂದ ಪ್ರತಿಯೊಬ್ಬರಿಗೂ ಮೂಲಭೂತ ಹಕ್ಕು, ಕರ್ತವ್ಯಗಳ ಜೊತೆಗೆ ಅವರ ಅಸ್ತಿತ್ವ, ಧ್ವನಿ ನೀಡುವ ಕೆಲಸವನ್ನೂ ಮಾಡಿದರು' ಎನ್ನುತ್ತಾರೆ ನರೇಂದ್ರ ಬಡಶೇಷಿ.

'ಶೋಷಿತರ ಹಕ್ಕುಗಳಿಗೆ ರಕ್ಷಣೆ'

'ಸಮಾಜವನ್ನು ಒಂದು ಸಹಕಾರ ಸಂಸ್ಥೆಯಾಗಿ ನೋಡಿದಾಗ ಕೆಲವೊಮ್ಮೆ ಸಮಾಜದಲ್ಲಿ ಜನ, ಕೆಲವೊಮ್ಮೆ ಸರ್ಕಾರ, ಸರ್ಕಾರದ ಅಂಗಗಳು ಶೋಷಣೆ ಮಾಡುತ್ತವೆ. ಸಿಗಬೇಕಾದ ಅವಕಾಶಗಳನ್ನು ಸಿಗದಂತೆ ಮಾಡುವುದೂ ಶೋಷಣೆಯೇ. ಶೋಷಣೆಯ ಸ್ವರೂಪಗಳು ಬದಲಾಗಿವೆ. ಮಾನಸಿಕ, ದೈಹಿಕ, ಸಾಮಾಜಿಕ, ಸಾಂಸ್ಕೃತಿಕ ಶೋಷಣೆಯೂ ಇದೆ. ಮಹಿಳೆಯರು, ಮಕ್ಕಳು, ಅಸ್ಪೃಶ್ಯರು ಮೊದಲು ಶೋಷಣೆಗೆ ಒಳಗಾಗುತ್ತಾರೆ. ಸಮಾಜವನ್ನೇ ಒಂದು ಸಂಸ್ಥೆಯಾಗಿ ನೋಡಿದಾಗ ಅಲ್ಲಿ ಕೆಲವೊಮ್ಮೆ ಜನ, ಕೆಲವೊಮ್ಮೆ ಸರ್ಕಾರ, ಇನ್ನು ಕೆಲವೊಮ್ಮೆ ಸರ್ಕಾರದ ಅಂಗಗಳು ಶೋಷಣೆ ಮಾಡುತ್ತವೆ. ಸಿಗಬೇಕಾದ ಅವಕಾಶಗಳನ್ನು ಸಿಗದಂತೆ ಮಾಡುವುದೂ ಶೋಷಣೆಯೇ ಆಗಿದೆ' ಎನ್ನುತ್ತಾರೆ ಶ್ರೀನಿವಾಸ ನವಲೆ.

'ಇಂದು ಸರ್ಕಾರಿ ಸಂಸ್ಥೆಗಳೇ ಶೋಷಿತರ ಬಳಿಗೆ ಹೋಗುತ್ತಿವೆ. ಅವರು ಧೈರ್ಯವಾಗಿ ತಮ್ಮ ನೋವು ಹೇಳಿಕೊಂಡರೂ ಸಾಕು, ಅವರಿಗೆಲ್ಲ ಕಾನೂನಿನ ರಕ್ಷಣೆ ನೀಡಿ, ಅವರ ಹಕ್ಕುಗಳನ್ನು ಕೊಡಿಸಲು ಸಾಧ್ಯವಾಗುತ್ತದೆ' ಎಂದರು.

ನರೇಂದ್ರ ಬಡಶೇಷಿ ಅವರು, 'ಜನಸಂಖ್ಯೆ, ಜಾತಿ ವ್ಯವಸ್ಥೆಯ ದೃಷ್ಟಿಯಿಂದ ಪ್ರಬಲವಾಗಿ ಇರುವವರು, ಪ್ರಬಲವಾಗಿ ಇಲ್ಲದಿರುವವರ ಅವಕಾಶಗಳ ಕಸಿಯುವಿಕೆಯೂ ಶೋಷಣೆ ಆಗಿದೆ. ಶೋಷಿತರ ಹಕ್ಕುಗಳು ಸಂವಿಧಾನವು ಶೋಷಿತರಿಗೆ ನೀಡಿದ ಧ್ವನಿ. ಅನ್ಯಾಯವನ್ನು ಪ್ರಶ್ನಿಸಲು ಕೊಟ್ಟ ಹಕ್ಕು. ಇದರಿಂದ ಜರ್ಜರಿತರಾದವರ ವಿಚಾರ, ಧ್ವನಿಗೂ ಮಾನ್ಯತೆ ಸಿಗುತ್ತಿದೆ. ಅದುವೇ ಸಂವಿಧಾನದ ಶ್ರೇಷ್ಠ ಕೊಡುಗೆ' ಎಂದು ಬಣ್ಣಿಸುತ್ತಾರೆ.



ನರೇಂದ್ರ ಬಡಶೇಷಿ

'ಶೋಷಣೆಯ ಸ್ವರೂಪವನ್ನು ಸಾರ್ವತ್ರಿಕಗೊಳಿಸುವುದು ಕಷ್ಟ. ಜಾತಿ ವ್ಯವಸ್ಥೆಯಲ್ಲಿ ತುಂಬಾ ಕೆಳಸ್ತರದಲ್ಲಿ ಗುರುತಿಸಿಕೊಂಡವರು ಅನುಭವಿಸುವ ಶೋಷಣೆಗೂ, ಮೇಲಿನ ಸ್ತರದಲ್ಲಿ ಇರುವವರು ಎದುರಿಸುವ ಶೋಷಣೆಗೂ ವ್ಯತ್ಯಾಸವಿದೆ. ಜಾತಿ ವ್ಯವಸ್ಥೆ ವಿಕಾರ ಸ್ವರೂಪ ತಳೆದಿವೆ. ಶೋಷಿತರ ಹಕ್ಕುಗಳು ಸಂಪೂರ್ಣ ಕಾರ್ಯಗತಗೊಳ್ಳುತ್ತಿಲ್ಲ' ಎಂಬುದು ಅಪ್ಪಗೆರೆ ಸೋಮಶೇಖರ ಅವರ ಮನದ ಇಂಗಿತ.

'ಒಂದೆಡೆ ಶೋಷಿತರಿಗೆ ಸಂವಿಧಾನವು ಅವರ ಹಕ್ಕುಗಳನ್ನು ಅರ್ಥ ಮಾಡಿಸುತ್ತದೆ. ಮತ್ತೊಂದೆಡೆ ಜೈಲು ಸೇರಿದ ಕೈದಿಗಳಿಗೂ ಸಂವಿಧಾನ ಕೆಲ ಹಕ್ಕುಗಳ ರಕ್ಷಣೆ ನೀಡುತ್ತದೆ. ಕಾನೂನು ಸೇವಾ ಪ್ರಾಧಿಕಾರದ ಮೂಲಕ ಶೋಷಿತರಿಗೆ ಹಕ್ಕುಗಳನ್ನು ಒದಗಿಸಲಾಗುತ್ತಿದೆ. ಅವುಗಳನ್ನು ಖಾತ್ರಿಪಡಿಸಲು ರಾಷ್ಟ್ರೀಯ, ರಾಜ್ಯ, ಜಿಲ್ಲೆ, ತಾಲ್ಲೂಕು ಘಟಕಗಳು ಕೆಲಸ ಮಾಡುತ್ತಿವೆ. ಜೈಲುವಾಸಿಗಳ ಹಕ್ಕುಗಳನ್ನೂ ರಕ್ಷಿಸುವ ಕೆಲಸ ಮಾನವ ಹಕ್ಕುಗಳ ಮೂಲಕ ಸಂವಿಧಾನದಡಿ ಆಗುತ್ತಿದೆ' ಎನ್ನುತ್ತಾರೆ ಕಮಿಷನರ್ ಶರಣಪ್ಪ ಎಸ್.ಡಿ.

'ಸಾಮಾಜಿಕ ನ್ಯಾಯಕ್ಕೆ ಅಸ್ತ್ರ'

'ಸಂವಿಧಾನದಿಂದ ಭಾರತವು ಅಗಾಧ ಪ್ರಗತಿ ಕಂಡಿದೆ. ಕ್ರಾಂತಿಕಾರಿ ಬದಲಾವಣೆಗಳು, ಸುಧಾರಣೆಗಳಿಗೆ ಸಾಕ್ಷಿಯಾಗಿದೆ' ಎಂದು ಶ್ರೀನಿವಾಸ ನವಲೆ ಪ್ರತಿಪಾದಿಸಿದರು.

'ಭೂಸುಧಾರಣೆ ಕಾಯ್ದೆ, ಕಾರ್ಮಿಕರಿಗೆ ಬೋನಸ್, ಮಹಿಳೆಯರಿಗೆ ಮಾತೃತ್ವ ರಜೆಯಂಥ ಕಾನೂನುಗಳು ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಫಲಗಳು. ಆದರಿಂದ ದೇಶವು ಗಣನೀಯ ಅಭಿವೃದ್ಧಿ ಸಾಧಿಸಿದೆ. ಇನ್ನೂ ಹಲವು ಕ್ಷೇತ್ರಗಳಲ್ಲಿ ಈ ಪರಿಕಲ್ಪನೆ ಅನುಷ್ಠಾನ ಆಗಬೇಕಿದೆ' ಎನ್ನುತ್ತಾರೆ ಅವರು.

'ಸಂವಿಧಾನದ ಪ್ರಸ್ತಾವನೆಯೇ ಹೇಳುವಂತೆ ಕಾನೂನಿನ ಮುಂದೆ ಎಲ್ಲರೂ ಸಮಾನರು. ಸಮಾನತೆಯ ಕಾಯ್ದೆಗಳು ಸಂವಿಧಾನದಡಿ ಜನರಿಗೆ ಸಿಕ್ಕ ಅಸ್ತ್ರಗಳು. ಇವುಗಳ ಬಗೆಗೆ ಜನರಿಗೆ ಅರಿವೇ ಇಲ್ಲದಿದ್ದರೆ ಕಷ್ಟ. ದೇಶದ ಪ್ರತಿಯೊಬ್ಬ ಪ್ರಜೆಗೂ ಸಂವಿಧಾನದ ಬಗೆಗೆ ಅರಿವಿನ ಅಗತ್ಯವಿದೆ' ಎಂದು ಶರಣಪ್ಪ ಎಸ್.ಡಿ ಆಶಿಸಿದರು.

'ಸಾಮಾಜಿಕ ನ್ಯಾಯವು ಬಡತನ ನಿರ್ಮೂಲನೆ ಕಾನೂನಲ್ಲ. ಅದು ಪ್ರಾತಿನಿಧ್ಯ ಹೇಳುವಂಥದ್ದು' ಎಂಬುದು ಅಪ್ಪಗೆರೆ ಸೋಮಶೇಖರ ಅವರ ಅಭಿಪ್ರಾಯ.

'ಸಂವಿಧಾನ ಜಾರಿಗೂ ಮುನ್ನ ಬಹುಸಂಖ್ಯಾತರಿಗೆ ಅಕ್ಷರ ಕಲಿಕೆ, ಅಧಿಕಾರದ ಅವಕಾಶಗಳೇ ಇರಲಿಲ್ಲ. ಆಸ್ತಿ ಹಕ್ಕು ನಿರಾಕರಿಸಲಾಗಿತ್ತು. ಶಿಕ್ಷಣ ಒಂದು ಸಮುದಾಯಕ್ಕೆ ಸೀಮಿತವಾಗಿತ್ತು. ತಳ ಸಮುದಾಯಗಳು ಅಕ್ಷರ ಕಲಿತರೆ ನಾಲಿಗೆ ಕತ್ತರಿಸಬೇಕು. ಕೇಳಿಸಿಕೊಂಡರೆ ಕಿವಿಗೆ ಕಾದಸೀಸ ಹೊಯ್ಯಬೇಕು ಎಂಬಂಥ ಸಾಮಾಜಿಕ ಸ್ಥಿತಿ ದೇಶದಲ್ಲಿತ್ತು. ಸಂವಿಧಾನ ಜಾರಿಗೂ ಪೂರ್ವ ಭಾರತದ ಚರಿತ್ರೆ ನಾವೆಲ್ಲ ಓದಿದ್ದೇವೆ. ಸಂವಿಧಾನ ಜಾರಿಯಾದ ಭಾರತದಲ್ಲಿ ನಾವೀಗ ಇದ್ದೇವೆ. ಸಂವಿಧಾನವನ್ನು ಈ ಎರಡೂ ನೆಲೆಗಳಲ್ಲಿ ಗ್ರಹಿಸಬೇಕಿದೆ. ಆಗ ಸಾಮಾಜಿಕ ನ್ಯಾಯದ ಮಹತ್ವ ಗೊತ್ತಾಗುತ್ತದೆ. ಮೀಸಲಾತಿಯನ್ನು ಸಂವಿಧಾನದಲ್ಲಿ ಅಳವಡಿಸಿದ್ದೇಕೆ ಎಂಬುದೂ ವೇದ್ಯವಾಗುತ್ತದೆ. ಡಾ.ಅಂಬೇಡ್ಕರ್ ಈ ಚರಿತ್ರೆಯ ಅರಿವು ಇಟ್ಟುಕೊಂಡೇ ಸಾಮಾಜಿಕ ನ್ಯಾಯವನ್ನು ಸಂವಿಧಾನದಲ್ಲಿ ಅಡಕಗೊಳಿಸಿದ್ದಾರೆ' ಎಂದು ಬೆಳಕು ಚೆಲ್ಲಿದರು.

ಶರಣಪ್ಪ ಎಸ್.ಡಿ.

ನರೇಂದ್ರ ಬಡಶೇಷಿ ಅವರು, 'ನಮ್ಮ ಸ್ವಾತಂತ್ರ್ಯ ಹೋರಾಟಗಾರರು ಬರೀ ದೇಶದ ಸ್ವಾತಂತ್ರ್ಯದ ಕನಸು ಕಾಣಲಿಲ್ಲ. ಅವರು ಪ್ರತಿಯೊಬ್ಬ ಭಾರತೀಯ ಪ್ರಜೆಯ ಅಸ್ತಿತ್ವವನ್ನು ಗುರುತಿಸುವ ಕನಸು ಕಂಡರು. ಸಂವಿಧಾನದ ಕರಡು ಬರೆದ ಡಾ.ಬಿ. ಆರ್.ಅಂಬೇಡ್ಕರ್ ದೇಶದ ಭವಿಷ್ಯದ ಬಗೆಗೆ ಒಂದು ಕಲ್ಪನೆ ಹೊಂದಿದ್ದರು. ಆ ಕಲ್ಪನೆಯ ದೂರದೃಷ್ಟಿಯನ್ನು ನನಸಾಗಿ ಪರಿವರ್ತಿಸಲು ಈ ಸಂವಿಧಾನದಲ್ಲಿ ಪ್ರತಿಯೊಬ್ಬರಿಗೂ ಹಕ್ಕು, ಕರ್ತವ್ಯಗಳ ಜೊತೆಗೆ ಅವರ ಅಸ್ತಿತ್ವ, ಧ್ವನಿ ನೀಡುವ ಕೆಲಸ ಮಾಡಿದರು' ಎಂದರು.

'ಸಮಾನತೆಗೆ ಮೀಸಲಾತಿ ಅಗತ್ಯ'

'ದೇಶದಲ್ಲಿ ಆರಂಭದಲ್ಲಿ ಮೀಸಲಾತಿಯನ್ನು ಪ್ರತಿಪಾದಿಸಿದ್ದು ಜ್ಯೋತಿಬಾ ಫುಲೆ ಹಾಗೂ ವಿಲಿಯಂ ಹಂಟರ್. ಅದನ್ನು ಅಧಿಕೃತವಾಗಿ ಹಾಗೂ ಪ್ರಖರವಾಗಿ ಪ್ರತಿಪಾದಿಸಿದ್ದು ಕೊಲ್ಹಾಪುರದ ಶಾಹು ಮಹಾರಾಜ. ಸಾಮಾಜಿಕ ಹಿಂದುಳಿಯುವಿಕೆ ಹಿನ್ನೆಲೆಯಲ್ಲಿ ಸಂವಿಧಾನದಲ್ಲಿ ಮೀಸಲಾತಿ ಕಲ್ಪಿಸಲಾಗಿದೆ. ಆದರೆ, ಇತ್ತೀಚೆಗೆ ಆರ್ಥಿಕ ಹಿಂದುಳಿಯುವಿಕೆ ಆಧಾರದಲ್ಲೂ ಇಡಬ್ಲ್ಯುಎಸ್ ಮೀಸಲಾತಿ ಕೊಡಲಾಗಿದೆ' ಎಂದು ಶ್ರೀನಿವಾಸ ನವಲೆ ಪ್ರತಿಪಾದಿಸಿದರು.

'ಯುವ ತಲೆಮಾರು ಮೀಸಲಾತಿ ಜಾರಿಯಾದ ಹಿನ್ನೆಲೆಯನ್ನು ಗ್ರಹಿಸುತ್ತಿಲ್ಲ. ಹೀಗಾಗಿ ಮೀಸಲಾತಿ ವ್ಯವಸ್ಥೆಯನ್ನು ಟೀಕಿಸುತ್ತಿದೆ. ದೇಶವು ಸಂವಿಧಾನ ಜಾರಿಗೂ ಪೂರ್ವದಲ್ಲಿ ಈಗ ಇದ್ದಂತೆ ಇರಲಿಲ್ಲ. ಮನೆಯಲ್ಲಿ ಪರಿಸ್ಥಿತಿಗಳೇ ಬೇರೆ ಇರುತ್ತಿತ್ತು. ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಿತ್ತು. ಅಣ್ಣ–ತಂಗಿಗೆ ಸಮಾನ ಅವಕಾಶ ಸಿಗುತ್ತಿರಲಿಲ್ಲ. ಹೆಣ್ಣು–ಗಂಡಿನ ತಾರತಮ್ಯ ಇತ್ತು. ಸಮಾಜದಲ್ಲಿನ ಜಾತಿ ವ್ಯವಸ್ಥೆಯ ಕ್ರೌರ್ಯ ಇತ್ತು. ಗ್ರಾಮೀಣ ಭಾಗದ ಜನ ಇಂದಿಗೂ ಒಂದಿಷ್ಟು ಇಂಥ ನೋವು ಅನುಭವಿಸುತ್ತಿದ್ದಾರೆ. ನಗರದಲ್ಲಿ ಅದರ ನೋವಿನ ಕಲ್ಪನೆಯೂ ಇಲ್ಲ. ಏನೋ ಸ್ವಲ್ಪ ತೊಂದರೆ ಆಗುತ್ತಿತ್ತಂತೆ. ಅದಕ್ಕೆ ಮೀಸಲಾತಿ ಕೊಟ್ಟರಂತೆ ಎಂದು ಯುವಜನರು ಮಾತನಾಡಿ ಸುಮ್ಮನಾಗುತ್ತಾರೆ. ಅವರಿಗೆ ಇತಿಹಾಸದ ಕೆಲವು ಘಟನೆಗಳನ್ನು ಮನಮುಟ್ಟುವಂತೆ ತಿಳಿಸಬೇಕಿದೆ' ಎಂದರು.

ನರೇಂದ್ರ ಬಡಶೇಷಿ ಅವರು, 'ಮೀಸಲಾತಿ ಫಲವಾಗಿ ಶೇ 98ರಷ್ಟು ಅಂಕ ಪಡೆದ ಯುವಕರೊಬ್ಬರಿಗೆ ಸಿಗದ ಅವಕಾಶವೊಂದು ಶೇ60ರಷ್ಟು ಅಂಕ ಪಡೆದ ಯುವಕನಿಗೆ ದಕ್ಕುತ್ತದೆ. ಆಗ ಶೇ98ರಷ್ಟು ಅಂಕ ಪಡೆದ ಯುವಕನಿಗೆ ಅಸಮಾಧಾನ ಸಹಜ. ಅದು ನೀಗಬೇಕಾದರೆ ತಿಳಿವಳಿಕೆ ಮುಖ್ಯವಾಗುತ್ತದೆ' ಎನ್ನುತ್ತಾರೆ.

ಅಪ್ಪಗೆರೆ ಸೋಮಶೇಖರ

'ಸಮಾನತೆ ಸಾಧಿಸಲು ಮೀಸಲಾತಿಯೇ ಮೆಟ್ಟಿಲು. ದೇಶದಲ್ಲಿ ಇಂದಿಗೂ ಪುರುಷ ಪ್ರಧಾನ ಸಮಾಜ ಕಾಣುತ್ತೇವೆ. ದೇಶದ ಜನಸಂಖ್ಯೆಯ ಶೇ 49ರಷ್ಟು ಪ್ರಮಾಣದಲ್ಲಿರುವ ಮಹಿಳೆಯರಿಗೂ ಮೀಸಲಾತಿ ಅತ್ಯಗತ್ಯ. ಆದರೆ, ಶಿಕ್ಷಣವಾಗಲಿ, ಉದ್ಯೋಗವಾಗಲಿ, ರಾಜಕೀಯ ಕ್ಷೇತ್ರದಲ್ಲಿ ಅವರ ಪ್ರಾತಿನಿಧ್ಯ ನಿರೀಕ್ಷಿತ ಮಟ್ಟದಲ್ಲಿ ಇಲ್ಲ' ಎನ್ನುತ್ತಾರೆ ಶರಣಪ್ಪ ಎಸ್.ಡಿ.

'ಸ್ವಾತಂತ್ರ್ಯಪೂರ್ವದಲ್ಲಿ ಮೊಟ್ಟಮೊದಲಿಗೆ ಮೀಸಲಾತಿ ಜಾರಿಗೊಳಿಸಿದವರು ಕೊಲ್ಹಾಪುರದ ಶಾಹು ಮಹಾರಾಜರು. ಅದನ್ನು ಗಣಪತಿರಾವ ಎಂಬ ವಕೀಲರೊಬ್ಬರು ವಿರೋಧಿಸುತ್ತಾರೆ. ಆಗ ಶಾಹು ಮಹಾರಾಜರು ಗಣಪತಿರಾವ ಅವರನ್ನು ಅರಮನೆಗೆ ಕರೆಯಿಸಿ ಮನವರಿಕೆ ಘಟನೆಯೇ ರೋಚಕ' ಎನ್ನುತ್ತಾರೆ ಅಪ್ಪಗೆರೆ ಸೋಮಶೇಖರ.

'ಶತಮಾನಗಳ ಹಿಂದೆ ಇದ್ದ ಚಾತುರ್ವಣ್ಯದಲ್ಲೂ ಮೀಸಲಾತಿಯಿತ್ತು. ಅದು ಅಸಮಾನತೆಯನ್ನು ಅಸಮಾನತೆಯನ್ನಾಗಿ ಉಳಿಸಿಕೊಳ್ಳಲು ಇದ್ದ ಮೀಸಲಾತಿ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ವರ್ಗಗಳಿಗೆ ಶೇ100ರಷ್ಟು ಮೀಸಲಾತಿ ಇತ್ತು. ಸಂವಿಧಾನದಡಿ ಸಿಕ್ಕಿರುವ ಮೀಸಲಾತಿ ಸಾಮಾಜಿಕ ನ್ಯಾಯದಡಿ ದೊರೆತ ಮೀಸಲಾತಿ. ದೇಶದಲ್ಲಿ ಎಲ್ಲಿಯ ತನಕ ಜಾತಿ ವ್ಯವಸ್ಥೆ, ಅಸಮಾನತೆ, ಅಸ್ಪೃಶ್ಯತೆ ಜೀವಂತವಾಗಿ ಇರುತ್ತವೆಯೋ ಅಲ್ಲಿಯ ತನಕ ಮೀಸಲಾತಿ ಇರಲೇಬೇಕು' ಎಂದು ಪ್ರತಿಪಾದಿಸಿದರು.

'ಸಂವಿಧಾನ ಜಾರಿಯಾಗಿ 75 ವರ್ಷಗಳಾದರೂ ಇಂದಿಗೂ ಮೀಸಲಾತಿ ದಲಿತರಿಗಷ್ಟೇ ಮಾತ್ರ ಎಂಬ ಮೂಢನಂಬಿಕೆ ದೇಶದಲ್ಲಿದೆ. ಭಾರತ ಹಿಂದೆಲ್ಲ ಅನಕ್ಷರತೆಯಿಂದ ಶತಮಾನಗಳ ಕಾಲ ಬಳಲಿತ್ತು. ಇದೀಗ ಸ್ವಾತಂತ್ರ್ಯ ನಂತರ ಸಂವಿಧಾನದ ಅನಕ್ಷರತೆಯಿಂದ ಬಳಲುತ್ತಿದೆ. ಹೀಗಾಗಿ ಎಲ್ಲ ಶೈಕ್ಷಣಿಕ ರಂಗದಲ್ಲೂ ಸಂವಿಧಾನವನ್ನು ಕಡ್ಡಾಯವಾಗಿ ಪಠ್ಯ ಮಾಡಬೇಕಿತ್ತು. ಆಗ ಸಂವಿಧಾನದ ಬಗೆಗೆ, ಅಂಬೇಡ್ಕರ್ ಬಗೆಗೆ ಕಪೋಲಕಲ್ಪಿತ ಭಾವನೆಗಳು ನಿವಾರಣೆ ಆಗುತ್ತಿದ್ದವು' ಎಂದು ಅವರು ಪ್ರತಿಪಾದಿಸಿದರು.

An Initiative by:
SOCIAL WELFARE DEPARTMENT
For the Educational, Social & Economic Upliftment of Scheduled Castes
In Association with:
DR. B.R. AMBEDKAR DEVELOPMENT CORPORATION
KSSKDC
LIDKAR
KARNATAKA BHOVI DEVELOPMENT CORPORATION